ಹುಬ್ಬಳ್ಳಿ
ಗುರುವಾರ, 28 ಮೇ 2026
ಸಂಪುಟ 16, ಸಂಚಿಕೆ 64, ಪುಟಗಳು 12
■ ಹುಬ್ಬಳ್ಳಿ ■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ
₹5
RNI No.KARKAN/2011/64413
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ



ಕೇರಳ: ಮುಂಗಾರು ಪ್ರವೇಶ ವಿಳಂಬ | 02
ಎಸ್‌ಐಆರ್‌ಗೆ ಸಹಕರಿಸಿ: ಇಸಿ | 03
ಹೈಡ್ರೋಜನ್ ರೈಲು ಸಂಚಾರಕ್ಕೆ ಕೇಂದ್ರ ಅಸ್ತು | 02

ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಅಧಿಕ ಜ್ಯೇಷ್ಠ ಮಾಸ, ಶುಕ್ಲ ಪಕ್ಷ, ತಿಥಿ: ದ್ವಾದಶಿ, ನಕ್ಷತ್ರ: ಚಿತ್ರೆ

ದಿನದ ಮಾತು

ಸಜ್ಜನರು ಒಳ್ಳೆಯದಕ್ಕೆ ಒಳ್ಳೆಯದು ಮಾಡುತ್ತಾರೆ, ದುಃಖ ಪಡಿಸಿದರೂ ಒಳ್ಳೆಯದು ಮಾಡುತ್ತಾರೆ.
▲ ಕಾವ್ಯ ಸಾರಾಂಶ

ಈ ಪರಿಸ್ಥಿತಿಗಳಲ್ಲಿ ನಗುವುದೂ ಅಪರಾಧವೇ!
ಗುರುತರ
◆ ಸೋಮಶೇಖರ ಸಿ.ಜಿ.
◆ ಪುಟ ೬

ಕಿರುಸುದ್ದಿ

ಮೋದಿ ಭೇಟಿಯಾದ ತ.ನಾಡು ಸಿಎಂ ವಿಜಯ್

ಮೇಕೆದಾಟು ವಿಚಾರದಲ್ಲಿ ಮಧ್ಯಪ್ರವೇಶಕ್ಕೆ ಮನವಿ

◆ **ಚೆನ್ನೈ:** ತಮಿಳುನಾಡು ಮುಖ್ಯಮಂತ್ರಿ ಸಿ. ಜೋಸೆಫ್ ವಿಜಯ್ ಬುಧವಾರ ದಿಲ್ಲಿಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರನ್ನು ಭೇಟಿಯಾಗಿ ರಾಜ್ಯಕ್ಕೆ ಸಂಬಂಧಿತ ಹಲವು ವಿಚಾರಗಳ ಕುರಿತು ಚರ್ಚಿಸಿದರು. ಮೇಕೆದಾಟು ಜಲ ವಿವಾದದಲ್ಲಿ ಮಧ್ಯ ಪ್ರವೇಶಿಸುವಂತೆ ಪ್ರಧಾನಿ ಮೋದಿ ಅವರನ್ನು ಸಿಎಂ ವಿಜಯ್ ವಿನಂತಿಸಿದ್ದಾರೆ. ➡ಪುಟ ೪

ಗಡಿಗಳ ಸಮೀಪದ ಅಕ್ರಮ ನಿರ್ಮಾಣ ತೆರವಿಗೆ ಸೂಚನೆ

◆ **ಹೊಸದಿಲ್ಲಿ:** ನೆರೆಯ ದೇಶಗಳೊಂದಿಗಿನ ಭಾರತದ ಅಂತಾರಾಷ್ಟ್ರೀಯ ಗಡಿಗಳ 15 ಕಿಮೀ ವ್ಯಾಪ್ತಿಯಲ್ಲಿರುವ ಎಲ್ಲಾ ಕಾನೂನುಬಾಹಿರ ನಿರ್ಮಾಣಗಳನ್ನು ಧ್ವಂಸಗೊಳಿಸಲು ಕೇಂದ್ರ ಗೃಹ ಸಚಿವ ಅಮಿತ್ ಶಾ ಅಧಿಕಾರಿಗಳಿಗೆ ನಿರ್ದೇಶನ ನೀಡಿದ್ದಾರೆ.

◆ ಪುಟ ೭

ತ್ರಿಭಾಷಾ ನೀತಿ: ಕೇಂದ್ರ ಸರ್ಕಾರಕ್ಕೆ ನೋಟಿಸ್

◆ ಪುಟ ೭

ಜೂ.1-4ರವರೆಗೆ ಭಾರತ ಅಮೆರಿಕ ವ್ಯಾಪಾರ ಚರ್ಚೆ

◆ ಪುಟ ೭

ಪದ್ಮನಾಭ ದೇಗುಲ ಚಿನ್ನ ನಾಪತ್ತೆ; ಆರೋಪ

◆ ಪುಟ ೭

ಸಾರ್ಥಕ್ ಪಿಡಿಎಸ್ ಪ್ಯಾಕೇಜ್‌ಗೆ ಅಸ್ತು

◆ ಪುಟ ೭



ಅಕ್ರಮ ವಲಸಿಗರ ಸಕ್ರಮ ಗಡಿಪಾರಿಗೆ ಉನ್ನತ ಸಿದ್ಧತೆ
◆ ಪುಟ ೭
ಸುದ್ದಿ ಸಮಗ್ರ

ಸಿಎಂ ರಾಜೀನಾಮೆ ನೀಡ್ತಾರೆ: ದೇಶಪಾಂಡೆ, ಜಾರಕಿಹೊಳಿ ಎಲ್ಲವೂ ಊಹಾಪೋಹ ಎಂದ ಉಸ್ತುವಾರಿ ಸುರ್ಜೇವಾಲ

ರಾಜ್ಯದ ರಾಜಕಾರಣ ಮೋಡದ ವಾತಾವರಣ

◆ **ಬೆಂಗಳೂರು:** ಮುಖ್ಯಮಂತ್ರಿ ಸಿದ್ದರಾಮಯ್ಯ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡುತ್ತಾರೆ ಎನ್ನುವ ಸುದ್ದಿ ಹಿನ್ನೆಲೆಯಲ್ಲಿ ಬುಧವಾರ ಇಡೀ ದಿನ ರಾಜಕೀಯ ಚಟುವಟಿಕೆಗಳು, ಹಲವು ರಾಜಕೀಯ ಬೆಳವಣಿಗೆಗಳು ನಡೆದವು. ಈ ನಡುವೆ ಕಾಂಗ್ರೆಸ್‌ನ ಇಬ್ಬರು ಹಿರಿಯ ನಾಯಕರು ಸಿಎಂ ರಾಜೀನಾಮೆ ನೀಡುವುದನ್ನು ಖಚಿತಪಡಿಸಿದ್ದಾರೆ.

ಕಾಂಗ್ರೆಸ್ ಹೈಕಮಾಂಡ್‌ನ ಪರಿಹಾರ ಸೂತ್ರದನ್ವಯ ಅಧಿಕಾರ ಬಿಟ್ಟುಕೊಡಲು ಮುಂದಾಗಿರುವ ಸಿದ್ದರಾಮಯ್ಯ ಅವರು, ಗುರುವಾರ (ಮೇ 28) ಲೋಕಭವನಕ್ಕೆ ತೆರಳಿ



ರಾಜ್ಯಪಾಲರನ್ನು ಭೇಟಿ ಮಾಡಲು ನಿರ್ಧರಿಸಿದ್ದಾರೆ. ಈ ನಡುವೆ ಸಿಎಂ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಲಿದ್ದಾರೆ ಎನ್ನುವ ಸುಳಿವನ್ನು ಸಚಿವ ಸತೀಶ್ ಜಾರಕಿಹೊಳಿ ಹಾಗೂ ಶಾಸಕ ಆರ್.ವಿ.ದೇಶಪಾಂಡೆ ಅವರು ನೀಡಿದ್ದಾರೆ. ಸಿದ್ದರಾಮಯ್ಯ ರಾಜೀನಾಮೆ ನೀಡುವ ಕುರಿತು ಹೊಸದಿಲ್ಲಿಯಲ್ಲಿ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಅವರು, ಮೇಲ್ನೋಟಕ್ಕೆ ಸಿಎಂ ಸಿದ್ದರಾಮಯ್ಯ ರಾಜೀನಾಮೆ ಕೊಡುವ ಸ್ಥಿತಿ ಕಾಣುತ್ತಿದೆ. ಗುರುವಾರ ಬೆಳಗ್ಗೆ ಮುಖ್ಯಮಂತ್ರಿಗಳು ಉಪಾಹಾರಕ್ಕೆ ಆಹ್ವಾನಿಸಿದ್ದಾರೆ. ಏನು ಎಂಬುದು ಗೊತ್ತಾಗಲಿದೆ. ಅಧಿಕೃತವಾಗಿ ಸಿಎಂ ಸಿದ್ದರಾಮಯ್ಯ ಇನ್ನೂ ಏನೂ ಹೇಳಿಲ್ಲ, ಗುರುವಾರ ಬೆಳಗ್ಗೆ ನಾನು ಉಪಾಹಾರ ಕೂಟದಲ್ಲಿ ಭಾಗಿಯಾಗುತ್ತೇನೆ. ನಾನು ಇನ್ನೂ ಸಿಎಂ ಜತೆಗೆ ವೈಯಕ್ತಿಕವಾಗಿ ಮಾತನಾಡಿಲ್ಲ ಎಂದರು. ➡ಪುಟ ೪

> **ಕಾಂಗ್ರೆಸ್ ಹೈಕಮಾಂಡ್ ಸದ್ಯಕ್ಕೆ ಯಾವುದೇ ನಿರ್ಧಾರ ಕೈಗೊಂಡಿಲ್ಲ. ಯಾವುದೇ ಊಹಾಪೋಹಗಳಿಗೆ ಕಿವಿಗೊಡಬೇಡಿ. ಅಲ್ಲದೆ ನಾಯಕತ್ವ ಬದಲಾವಣೆ ಮಾಡಲು ಶಾಸಕಾಂಗ ಪಕ್ಷದ ಸಭೆಯನ್ನೇ ಕರೆದಿಲ್ಲ.**
> ■ **ರಣದೀಪ್ ಸಿಂಗ್ ಸುರ್ಜೆವಾಲ,** ರಾಜ್ಯ ಕಾಂಗ್ರೆಸ್ ಉಸ್ತುವಾರಿ



ಇಂದು ಶಾಸಕರಿಗೆ ಉಪಾಹಾರ

ಸಿಎಂ ಸಿದ್ದರಾಮಯ್ಯ ಅವರು ಗುರುವಾರ ಬೆಳಗ್ಗೆ 9 ಗಂಟೆಗೆ ಕಾವೇರಿ ನಿವಾಸದಲ್ಲಿ ಸಚಿವರು ಹಾಗೂ ಶಾಸಕರಿಗೆ ಉಪಾಹಾರ ಕೂಟ ಏರ್ಪಡಿಸಿದ್ದಾರೆ. ಈ ಉಪಾಹಾರ ಕೂಟದಲ್ಲಿ ಸಿಎಂ ಅವರು ತಮ್ಮ ಅಭಿಪ್ರಾಯವನ್ನು ಶಾಸಕರೊಂದಿಗೆ ಹಂಚಿಕೊಳ್ಳಲಿದ್ದಾರೆ.

ರಾಜ್ಯಪಾಲರ ಸಮಯಾವಕಾಶ ಕೇಳಿದ ಸಿಎಂ ಸಿದ್ದರಾಮಯ್ಯ

ಗುರುವಾರ ಶಾಸಕರೊಂದಿಗಿನ ಉಪಾಹಾರ ಕೂಟದ ಬಳಿಕ ಲೋಕಭವನಕ್ಕೆ ತೆರಳಲಿದ್ದಾರೆ ಎನ್ನಲಾಗಿದೆ. ಈಗಾಗಲೇ ರಾಜ್ಯಪಾಲರಿಗೆ ಭೇಟಿಯಾಗಲು ಸಮಯಾವಕಾಶ ಕೇಳಿದ್ದು, ಅವರು ಕೊಟ್ಟ ಸಮಯಕ್ಕೆ ರಾಜ್ಯಪಾಲರನ್ನು ಭೇಟಿ ಮಾಡಲಿದ್ದಾರೆ ಎನ್ನಲಾಗಿದೆ.

ಒಂದೇ ಪದದ ಉತ್ತರ: ಸಿಎಂ


ಮಾಜಿ ಪ್ರಧಾನಿ ಜವಾಹರಲಾಲ್ ನೆಹರು ಅವರ ಪುಣ್ಯ ಸ್ಮರಣೆ ಅಂಗವಾಗಿ ವಿಧಾನಸೌಧದ ಪೂರ್ವ ದಿಕ್ಕಿನಲ್ಲಿರುವ ಪ್ರತಿಮೆಗೆ ಮಾಲಾರ್ಪಣೆ ಮಾಡಿದ ನಂತರ ಮಾಧ್ಯಮಗಳ ಪ್ರಶ್ನೆಗೆ ಒಂದೇ ಪದ ನುಡಿದ ಸಿದ್ದರಾಮಯ್ಯ ಅವರು, ನಾಳೆ ಹೇಳುತ್ತೇನೆ ಎಂದು ಹೇಳಿದರು.

ಮುಕ್ತ ಚುನಾವಣೆಗೆ ಎಸ್‌ಐಆರ್ ಅಗತ್ಯ: ಸುಪ್ರೀಂ

ಇಸಿಗೆ ಯೆಸ್ ಸರ್

ಸುಪ್ರೀಂ ಕೋರ್ಟ್ ಹೇಳಿದ್ದೇನು?

- ಎಸ್‌ಐಆರ್ ಕ್ರಮ ಸಂವಿಧಾನಬದ್ಧ
- ಇಸಿಗೆ ವಿಶೇಷ ಪರಿಷ್ಕರಣೆ ನಡೆಸುವ ಅಧಿಕಾರ ಇದೆ
- ಮತದಾರರ ಪಟ್ಟಿಯ ಶುದ್ಧತೆ ಪ್ರಜಾಪ್ರಭುತ್ವದ ಮೂಲ
- ನಾಗರಿಕತ್ವ ಪರಿಶೀಲನೆಗೆ ಸೀಮಿತ ವಿಚಾರಣೆ ನಡೆಸಬಹುದು
- ಆದರೆ ನಾಗರಿಕತ್ವದ ಅಂತಿಮ ತೀರ್ಮಾನ ಕೇಂದ್ರ ಪ್ರಾಧಿಕಾರದ್ದು
- ಹೆಸರು ತೆಗೆದವರ ಪ್ರಕರಣವನ್ನು 4 ವಾರದಲ್ಲಿ ಪ್ರಾಧಿಕಾರಕ್ಕೆ ಕಳುಹಿಸಬೇಕು
- ಸಂಬಂಧಿತ ವ್ಯಕ್ತಿಗೆ ವಿಚಾರಣೆ ಅವಕಾಶ ನೀಡಬೇಕು
- ನಾಗರಿಕರೆಂದು ದೃಢಪಟ್ಟರೆ ಮರು ಸೇರ್ಪಡೆ ಮಾಡಬೇಕು
- ಎಸ್‌ಐಆರ್ ಕ್ರಮ ಅತಿರೇಕ ಅಥವಾ ದುರುದ್ದೇಶಿತವಲ್ಲ
- ಸಮರ್ಪಕ ಸುರಕ್ಷತಾ ಕ್ರಮಗಳಿವೆ ಎಂದು ಕೋರ್ಟ್ ಅಭಿಪ್ರಾಯ



◆ **ಹೊಸದಿಲ್ಲಿ:** ದೇಶದ ಚುನಾವಣಾ ವ್ಯವಸ್ಥೆ, ಮತದಾರರ ಹಕ್ಕು ಹಾಗೂ ನಾಗರಿಕತ್ವ ಚರ್ಚೆಗೆ ಭಾರೀ ರಾಜಕೀಯ-ಸಾಂವಿಧಾನಿಕ ತಿರುವು ನೀಡುವ ಮಹತ್ವದ ತೀರ್ಪಿನಲ್ಲಿ ಸುಪ್ರೀಂ ಕೋರ್ಟ್ ಬುಧವಾರ ಚುನಾವಣಾ ಆಯೋಗದ (ಇಸಿ) ವಿಶೇಷ ತೀವ್ರ ಪರಿಷ್ಕರಣೆ(ಎಸ್‌ಐಆರ್) ಕ್ರಮವನ್ನು ಸಂವಿಧಾನಬದ್ಧವೆಂದು ಘೋಷಿಸಿದೆ.

ಬಿಹಾರದಲ್ಲಿ ಕೈಗೊಂಡಿದ್ದ ಮತದಾರರ ಪಟ್ಟಿಯ ಎಸ್‌ಐಆರ್



ವಿರುದ್ಧ ಸಲ್ಲಿಕೆಯಾಗಿದ್ದ ಅರ್ಜಿಗಳನ್ನು ತಳ್ಳಿ ಹಾಕಿದ ಮುಖ್ಯ ನ್ಯಾ.ಸೂರ್ಯಕಾಂತ್ ನೇತೃತ್ವದ ಪೀಠ, ನಿಖರ ಮತ್ತು ಶುದ್ಧ ಮತದಾರರ ಪಟ್ಟಿಯೇ ಪ್ರಜಾಪ್ರಭುತ್ವದ ಅಡಿಪಾಯ. ಎಸ್‌ಐಆರ್ ಕ್ರಮವು ಮುಕ್ತ ಹಾಗೂ ನ್ಯಾಯಸಮ್ಮತ ಚುನಾವಣೆಯ ಸಂವಿಧಾನಾತ್ಮಕ ಗುರಿಗೆ ಜೀವ ತುಂಬುತ್ತದೆ ಎಂದು ಹೇಳಿದೆ. ನ್ಯಾ. ಜಾಯಮಾಲ್ಯ ಬಾಗ್ಚಿ ಕೂಡ ಇದ್ದ ಪೀಠ, ಸಂವಿಧಾನದ 324ನೇ ವಿಧಿ ಹಾಗೂ ಜನಪ್ರತಿನಿಧಿಗಳ ಕಾಯ್ದೆ (ಆರ್ ಪಿ ಎ) ಸೆಕ್ಷನ್ 21(3) ಅಡಿಯಲ್ಲಿ ಚುನಾವಣಾ ಆಯೋಗಕ್ಕೆ ಇಂತಹ ವಿಶೇಷ ಪರಿಷ್ಕರಣೆ ನಡೆಸುವ ಅಧಿಕಾರವಿದೆ ಎಂದು ಸ್ಪಷ್ಟಪಡಿಸಿದೆ.

ಇದೇ ವೇಳೆ, ಮತದಾರರ ಪಟ್ಟಿಯಿಂದ ಹೆಸರು ತೆಗೆದು ಹಾಕುವುದು ಎಂದರೆ ವ್ಯಕ್ತಿಯ ಭಾರತೀಯ ನಾಗರಿಕತ್ವವನ್ನು ಅಂತಿಮವಾಗಿ ರದ್ದುಗೊಳಿಸಿದಂತಲ್ಲ ಎಂದು ಕೋರ್ಟ್ ಮಹತ್ವದ ಸ್ಪಷ್ಟನೆ ನೀಡಿದೆ. ➡ಪುಟ ೪

» ಎಸ್‌ಐಆರ್ ಮಾನ್ಯ: ಇಸಿಗೆ ಸುಪ್ರೀಂ ಬಲ
» ಇಸಿಗೆ ಹಸಿರು ನಿಶಾನೆ, ವಿರೋಧ ಪಕ್ಷಗಳಿಗೆ ಹಿನ್ನಡೆ

ಎಸ್‌ಐಆರ್ ಎನ್‌ಆರ್‌ಸಿ ಅಲ್ಲ

ಅರ್ಜಿದಾರರು ಎಸ್‌ಐಆರ್ ಅನ್ನು ಪರೋಕ್ಷ ಎನ್‌ಆರ್‌ಸಿ ಎಂದು ವಾದಿಸಿದ್ದರು. ಆದರೆ ಸುಪ್ರೀಂ ಕೋರ್ಟ್, ಇಸಿ ನಡೆಸುವ ಪರಿಶೀಲನೆ ಕೇವಲ ಮತದಾರರ ಅರ್ಹತೆಗಾಗಿ ಮಾತ್ರ. ಅದು ನಾಗರಿಕತ್ವದ ಅಂತಿಮ ನಿರ್ಧಾರವಲ್ಲ ಎಂದು ಸ್ಪಷ್ಟಪಡಿಸಿದೆ.

ಈ ತೀರ್ಪು ಮಹತ್ವ ಏಕೆ?

ಈ ತೀರ್ಪು ಮುಂದಿನ ದಿನಗಳಲ್ಲಿ ದೇಶದಾದ್ಯಂತ ಮತದಾರರ ಪಟ್ಟಿಗಳ ಸಮಗ್ರ ಪರಿಶೀಲನೆಗೆ ದಾರಿ ತೆರೆದು ಕೊಡುವ ಸಾಧ್ಯತೆ ಇದೆ. ಹಾಗೆಯೇ, ಕರ್ನಾಟಕ ಸೇರಿದಂತೆ



ಕೆಲವು ರಾಜ್ಯಗಳು ಸುಪ್ರೀಂಕೋರ್ಟ್ ಮೆಟ್ಟಿಲೇರಲು ಸಿದ್ಧತೆ ನಡೆಸಿವೆ. ಹೀಗಾಗಿ ಈ ತೀರ್ಪು ಕಾನೂನಾತ್ಮಕವಾಗಿ ಆಯೋಗಕ್ಕೆ ಶಕ್ತಿ ನೀಡಬಹುದು. ಹಾಗೆಯೇ ಅಕ್ರಮ ವಲಸೆ, ನಕಲಿ ಮತದಾರರು, ಪುನರಾವರ್ತಿತ ಹೆಸರುಗಳು ಮತ್ತು ಮತದಾರರ ಪಟ್ಟಿಯ ಶುದ್ಧತೆ ಕುರಿತು ನಡೆಯುತ್ತಿರುವ ರಾಜಕೀಯ ಚರ್ಚೆಗೆ ಸುಪ್ರೀಂ ಕೋರ್ಟ್ ಸ್ಪಷ್ಟ ಕಾನೂನುಬದ್ಧ ಬೆಂಬಲ ನೀಡಿದಂತಾಗಿದೆ. ➡ಪುಟ ೪

ಮಾಜಿ ಸಿಎಂ ಪಿಣರಾಯಿ ಬೆಂಬಲಿಗರಿಂದ ಗೂಂಡಾವರ್ತನೆ

ಕೇರಳದಲ್ಲಿ ಇಡಿ ವಾಹನ ಧ್ವಂಸ

◆ **ತಿರುವನಂತಪುರಂ:** ಕೊಚ್ಚಿನ್ ಮಿನರಲ್ಸ್ ಅಂಡ್ ರುಟೈಲ್ ಲಿಮಿಟೆಡ್ (ಸಿಎಂಆರ್‌ಎಲ್) ಹಗರಣಕ್ಕೆ ಸಂಬಂಧಿಸಿ ಕೇರಳ ಹೈಕೋರ್ಟ್ ಇಡಿ ತನಿಖೆಯನ್ನು ರದ್ದುಗೊಳಿಸಬೇಕೆಂಬ ಅರ್ಜಿಯನ್ನು ತಿರಸ್ಕರಿಸಿ ತನಿಖೆಗೆ ಅನುಮತಿ ನೀಡಿದ ಬಳಿಕ ಜಾರಿ ನಿರ್ದೇಶನಾಲಯ(ಇಡಿ)ವು, ಕೇರಳದ ಮಾಜಿ ಮುಖ್ಯಮಂತ್ರಿ ಹಾಗೂ ಸಿಪಿಎಂ



ನಾಯಕ ಪಿಣರಾಯಿ ವಿಜಯನ್ ಅವರ ನಿವಾಸ ಸೇರಿದಂತೆ 10 ಕಡೆಗಳಲ್ಲಿ ದಾಳಿ ನಡೆಸಿ ಶೋಧ ಕೈಗೊಂಡಿತು. ಇದೇ ವೇಳೆ ಪಿಣರಾಯಿ ನಿವಾಸದಲ್ಲಿ ಶೋಧ ನಡೆಸಿ ಹೊರಬರುತ್ತಿದ್ದಂತೆ ಇಡಿ ವಾಹನದ ಮೇಲೆ ಸಿಪಿಎಂ ಬೆಂಬಲಿಗರು ದಾಳಿ ನಡೆಸಿದ ಆಘಾತಕಾರಿ ಘಟನೆಯೂ ನಡೆದಿದೆ. ➡ಪುಟ ೪

» ಸಿಪಿಎಂ ನಾಯಕ ಪಿಣರಾಯಿ ವಿಜಯನ್ ನಿವಾಸ ಸೇರಿದಂತೆ 10 ಕಡೆಗಳಲ್ಲಿ ಇಡಿ ದಾಳಿ



ಮಧುಸೂದನ್ ನಾಯಕ್‌ರಿಂದ ವರದಿ ಬಗ್ಗೆ ವಿವರಣೆ

ಜಾತಿಗಣತಿ ವರದಿ ಸ್ವೀಕರಿಸಿದ ಸಿಎಂ

◆ **ಬೆಂಗಳೂರು:** ರಾಜ್ಯ ಹಿಂದುಳಿದ ವರ್ಗಗಳ ಆಯೋಗ ಸಿದ್ಧಪಡಿಸಿರುವ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯ ವರದಿಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ವಿಧಾನಸೌಧದ ತಮ್ಮ ಕಚೇರಿಯಲ್ಲಿ ಸ್ವೀಕರಿಸಿದರು.

ಬುಧವಾರ ವಿಧಾನಸೌಧಕ್ಕೆ ಆಗಮಿಸಿದ ಮುಖ್ಯಮಂತ್ರಿಗಳು, ಆಯೋಗದ ಅಧ್ಯಕ್ಷ ಮಧುಸೂದನ್ ಆರ್. ನಾಯಕ್ ಅವರಿಂದ ವರದಿ ಬಗ್ಗೆ ವಿವರಣೆ ಪಡೆದುಕೊಂಡರು. ಕಾಂತರಾಜು ಆಯೋಗವು ತಯಾರಿಸಿದ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ವರದಿಯನ್ನು ಕುಮಾರಸ್ವಾಮಿ ನೇತೃತ್ವದ ಮೈತ್ರಿ ಸರ್ಕಾರ ಹಾಗೂ ನಂತರದ ಬಿಜೆಪಿ ಸರ್ಕಾರ ಸ್ವೀಕರಿಸಿರಲಿಲ್ಲ. 2023ರಲ್ಲಿ ಸಿದ್ದರಾಮಯ್ಯ ಅವರು 2ನೇ ಬಾರಿ ಸಿಎಂ ಆಗಿದ್ದಾಗ ವರದಿ ಸ್ವೀಕರಿಸಲಾಯಿತು, ಇದಕ್ಕೆ ಪ್ರಬಲ ಸಮುದಾಯಗಳು ವಿರೋಧ ವ್ಯಕ್ತಪಡಿಸಿದ್ದರಿಂದ ಮಧುಸೂಧನ್ ಆರ್. ನಾಯಕ್ ಅಧ್ಯಕ್ಷತೆಯಲ್ಲಿ ಮರು ಸಮೀಕ್ಷೆಗೆ ನಿರ್ಧರಿಸಲಾಗಿತ್ತು. ➡ಪುಟ ೪



> **ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯ ಮರುಗಣತಿಯ ವರದಿಯನ್ನು ಅತ್ಯಂತ ಸಂತೋಷದಿಂದ ಸ್ವೀಕರಿಸಿದ್ದೇನೆ. ಮುಂದಿನ ದಿನಗಳಲ್ಲಿ ಸಾಮಾಜಿಕ ನ್ಯಾಯದ ಅನುಷ್ಠಾನಕ್ಕೆ ಈ ವರದಿಯು ಮಾರ್ಗದರ್ಶಿಯಾಗಲಿ ಎಂದು ಆಶಿಸುತ್ತೇನೆ.**
> ■ **ಸಿದ್ದರಾಮಯ್ಯ**, ಮುಖ್ಯಮಂತ್ರಿ

ಅಸ್ಸಾಂನಲ್ಲಿ ಏನಾಸಂ ಜಾರಿ

◆ **ದಿಸ್ಪುರ್:** ಅಸ್ಸಾಂ ವಿಧಾನಸಭೆ ಬುಧವಾರ ಏಕರೂಪ ನಾಗರಿಕ ಸಂಹಿತೆ ಮಸೂದೆ, 2026ನ್ನು ಅಂಗೀಕರಿಸಿದ್ದು, ಬುಡಕಟ್ಟು ನಿವಾಸಿಗಳನ್ನು ಹೊರತುಪಡಿಸಿ ಎಲ್ಲರ ವೈಯಕ್ತಿಕ ವಿಷಯಗಳನ್ನು ನಿಯಂತ್ರಿಸುವ ಏಕೀಕೃತ ಕಾನೂನು ಚೌಕಟ್ಟನ್ನು ಜಾರಿಗೆ ತಂದಿದೆ. ಇದರೊಂದಿಗೆ, ಉತ್ತರಾಖಂಡ ಮತ್ತು ಗುಜರಾತ್ ನಂತರ ಏಕರೂಪ ಸಂಹಿತೆ ಜಾರಿಗೆ ತಂದ ಮೂರನೇ ರಾಜ್ಯವಾಗಿ ಅಸ್ಸಾಂ ಹೊರಹೊಮ್ಮಿದೆ.


ಬುಡಕಟ್ಟು ನಿವಾಸಿಗಳಿಗಿಲ್ಲ ಅನ್ವಯ, ಯುಸಿಸಿ ಜಾರಿಗೊಳಿಸಿದ 3ನೇ ರಾಜ್ಯ

ಪ್ರಮುಖ ನಿಷೇಧಗಳು: ಹೊಸದಾಗಿ ಅಂಗೀಕರಿಸಲ್ಪಟ್ಟ ಶಾಸನ, ರಾಜ್ಯಾದ್ಯಂತ ದ್ವಿಪತ್ನಿತ್ವ ಮತ್ತು ಬಹುಪತ್ನಿತ್ವವನ್ನು ಸ್ಪಷ್ಟವಾಗಿ ನಿಷೇಧಿಸುತ್ತದೆ. ಈ ನಿಬಂಧನೆಗಳಲ್ಲಿ ಅಪರಾಧ ಸಾಬೀತಾದರೆ ಗರಿಷ್ಠ ಏಳು ವರ್ಷ ಜೈಲು ಶಿಕ್ಷೆ ಮತ್ತು ಆರ್ಥಿಕ ದಂಡವನ್ನು ವಿಧಿಸಲಾಗುತ್ತದೆ. ➡ಪುಟ ೪

ದೇಶದಲ್ಲಿ ಹೆಚ್ಚುತ್ತಿರುವ ತಾಪಮಾನ: ಮೋದಿ ಕಳಕಳಿ

ಹೆಚ್ಚೆಚ್ಚು ನೀರು ಕುಡಿಯಿರಿ

◆ **ಹೊಸದಿಲ್ಲಿ:** ದೇಹದಲ್ಲಿ ಆದಷ್ಟು ನೀರಿನಂಶ ಕಾಪಾಡಿಕೊಳ್ಳಿ, ಪ್ರಸಕ್ತ ಬೇಸಗೆಯ ತಾಪಮಾನ ಸಹಿಸಿಕೊಳ್ಳಲು ಸಾಕಷ್ಟು ಜಾಗ್ರತೆ ವಹಿಸಿ. ದೇಶದಲ್ಲಿ ತಾಪಮಾನ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಗರಿಷ್ಠ ಮುಂಜಾಗ್ರತೆ ವಹಿಸಿ ಎಂದು ಜನರಿಗೆ ಪ್ರಧಾನಿ ನರೇಂದ್ರ ಮೋದಿ ಕರೆ ನೀಡಿದ್ದಾರೆ.



ಮಿತಿಮೀರಿದ ತಾಪಮಾನ ಮತ್ತು ಇದು ಸೃಜಿಸುತ್ತಿರುವ ಸವಾಲುಗಳಿಗೆ ಭಾರತದ ವಿವಿಧ ಪ್ರದೇಶಗಳು ಸಾಕ್ಷಿಯಾಗಿವೆ. ಪ್ರಸ್ತುತ ತಾಪಮಾನವು ನಮ್ಮೆಲ್ಲರ ಪಾಲಿಗೆ ಕಡುವಾಗಿದ್ದು, ಎಲ್ಲರೂ ಆದಷ್ಟು ಮುಂಜಾಗರೂಕತೆ ವಹಿಸಿ. ಮನೆಯಿಂದ ಹೊರಗಿಳಿವಾಗ ನೀರಿನ ಬಾಟಲಿ ಜತೆಗಿರಲಿ, ಇತರರಿಗೂ ಕುಡಿಯಲು ನೀರು ಕೊಡಿ, ಇಂತಹ ಹವಾಮಾನ ಸನ್ನಿವೇಶದಲ್ಲಿ ಈ ತೆರ ದಯಾಳುತನ ಅವಿಸ್ಮರಣೀಯವಾಗಿರುವುದು ಎಂದು ಪ್ರಧಾನಿ ಮೋದಿ ಎಕ್ಸ್‌ಗೆ ಹಾಕಿರುವ ಸಂದೇಶದಲ್ಲಿ ದೇಶದ ಜನರನ್ನು ವಿನಂತಿಸಿದ್ದಾರೆ. ತಾಪಮಾನದಿಂದ ತಲೆಸುತ್ತುವಿಕೆ, ವಾಕರಿಕೆ, ಮಿತಿಮೀರಿ ಸುಸ್ತು ಇತ್ಯಾದಿ ಆರೋಗ್ಯ ಸಮಸ್ಯೆಗಳು ಕಾಡುತ್ತವೆ. ನಿಮ್ಮ ಸುತ್ತಮುತ್ತ ಯಾರಾದರೂ ಈ ರೀತಿ ಬಳಲುತ್ತಿದ್ದಲ್ಲಿ ತಕ್ಷಣ ಅವರನ್ನು ನೆರಳಿನ ಜಾಗಕ್ಕೆ ಕರೆದೊಯ್ಯಿರಿ ಮತ್ತು ಅವರಿಗೆ ಕುಡಿಯಲು ನೀರು, ಓಆರ್‌ಎಸ್ ಇತ್ಯಾದಿ ಕೊಡಿ. ➡ಪುಟ ೪




ಪಕ್ಷಿಗಳನ್ನೂ ಕಾಪಾಡಿ

ಬಿಸಿಗಾಳಿಯೊಡ್ಡುವ ಗಂಡಾಂತರಗಳಿಂದ ನಿಮ್ಮ ಕುಟುಂಬಗಳ ಹಿರಿಯ ಸದಸ್ಯರನ್ನು ದೂರವಿಡಿ. ಏಕಕಾಲಕ್ಕೆ ಪಕ್ಷಿಗಳು ಮತ್ತು ಪ್ರಾಣಿಗಳನ್ನೂ ಇದೇ ರೀತಿ ಕಾಪಾಡಿ. ಬಾಯಾರಿದ ಪಕ್ಷಿಗಳ ದಾಹ ತಣಿಸಲು ನಿಮ್ಮ ಮನೆಗಳ ಹೊರಗಡೆ, ಬಾಲ್ಕನಿಗಳು, ಟೆರೇಸ್‌ಗಳು, ಅಂಗಡಿಗಳು ಮತ್ತು ಕಚೇರಿಗಳ ಹೊರಗಡೆ ಸಣ್ಣ ಪಾತ್ರೆಗಳಲ್ಲಿ ನೀರಿಟ್ಟುಬಿಡಿ. ಪ್ರಸ್ತುತ ಸಂಕಷ್ಟದ ದಿನಗಳಲ್ಲಿ ದಯೆ, ಕರುಣೆಗಳು ನಮಗೆ ದಾರಿದೀಪವಾಗಲಿ ಎಂದು ಪ್ರಧಾನಿ ಮೋದಿ ಎಕ್ಸ್ ಸಂದೇಶದಲ್ಲಿ ಹಾರೈಸಿದ್ದಾರೆ.

ಜೂನ್ 4ರಿಂದ ಆಫ್ರಿಕಾ ಚೀತಾ ವೀಕ್ಷಣೆ ಅವಕಾಶ

◆ **ಬೆಂಗಳೂರು:** ಕಳೆದ ಏಪ್ರಿಲ್ 18ರಂದು ದಕ್ಷಿಣ ಆಫ್ರಿಕಾದಿಂದ ಬೆಂಗಳೂರಿಗೆ ಬಂದ 4 ಶಿವಂಗಿ(ಚೀತಾ)ಗಳ ಕ್ವಾರಂಟೈನ್ ಅವಧಿ ಮುಗಿದಿದ್ದು, ಜೂನ್ 4ರಿಂದ ಸಾರ್ವಜನಿಕ ವೀಕ್ಷಣೆಗೆ ಲಭ್ಯವಾಗಲಿವೆ



ಎಂದು ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಬಿ. ಖಂಡ್ರೆ ತಿಳಿಸಿದ್ದಾರೆ. ಈ ಸಂಬಂಧ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ಮುಖ್ಯ ವನ್ಯಜೀವಿ ಪರಿಪಾಲಕ ಕುಮಾರ್ ಪುಷ್ಕರ್ ಅವರೊಂದಿಗೆ ಸಭೆ ನಡೆಸಿದ ಸಚಿವರು, ಬನ್ನೇರುಘಟ್ಟ ಮೃಗಾಲಯದಲ್ಲಿ ಪ್ರತ್ಯೇಕವಾಗಿ ಸಿದ್ಧಪಡಿಸಿರುವ ಆವರಣದಲ್ಲಿ ಈ ಚೀತಾಗಳನ್ನು ಬಿಡಲಾಗುವುದು ಎಂದು ಹೇಳಿದರು. ➡ಪುಟ ೪

ಬೆಳ್ಳಿ ಬಂಗಾರ (ಬೆಂಗಳೂರು) ಬೆಳ್ಳಿ: 2,85,000 (2,84,900) ಅಪರಂಜಿ ಚಿನ್ನ: 1,58,290 (1,58,890) ಆಭರಣ ಚಿನ್ನ: 1,45,100 (1,45,650) ಚಿನ್ನ 10 ಗ್ರಾಂ.ಗೆ, ಬೆಳ್ಳಿ 1 ಕೆ.ಜಿಗೆ, ರೂ.ಗಳಲ್ಲಿ (ಆವರಣದಲ್ಲಿ ಹಿಂದಿನ ದಿನದ ದರ)

ಷೇರು ಸೂಚ್ಯಂಕ ಬಿಎಸ್‌ಇ 75,867 (141↓) ಎನ್‌ಎಸ್‌ಇ 23,907 (6↓)

$1 = ₹95.23

ಕಿರುಸುದ್ದಿ

ದಾಸವಾಣಿ ಕಾರ್ಯಕ್ರಮ ಇಂದು

ಹುಬ್ಬಳ್ಳಿ: ಇಲ್ಲಿಯ ಸಂತೋಷ ನಗರದ ರಾಘವೇಂದ್ರ ಸ್ವಾಮಿ ಮಠದಲ್ಲಿ ಮೇ 28 ರಂದು ಸಂಜೆ 6 ಗಂಟೆಗೆ ದಾಸವಾಣಿ ಕಾರ್ಯಕ್ರಮ ನಡೆಯಲಿದೆ. ಚಂದ್ರಕಾಂತ ಇನಾಮ್ದಾರ ನಡೆಸಿಕೊಡಲಿದ್ದು, ಹಾರ್ಮೋನಿಯಂ ಶ್ರೀನಿವಾಸ್ ಇನಾಮ್ದಾರ್ ಮತ್ತು ತಬಲಾದಲ್ಲಿ ಮನುಕುಮಾರ್ ಹಿರೇಮಠ್ ಆಗಮಿಸಲಿದ್ದಾರೆ ಎಂದು ರಾಘವೇಂದ್ರ ಸ್ವಾಮಿ ಮಠದ ಅಧ್ಯಕ್ಷ ಗೋವಿಂದಾಚಾರ್ಯರು ಪ್ರಕಟಿಸಿದ್ದಾರೆ.

ಮೇ 30ರಂದು ಘಟಿಕೋತ್ಸವ

ಧಾರವಾಡ: ಭಾರತೀಯ ಮಾಹಿತಿ ತಂತ್ರಜ್ಞಾನ (ಐಐಐಟಿ) 8ನೇ ಘಟಿಕೋತ್ಸವ ಮೇ 30ರಂದು ಬೆಳಗ್ಗೆ 11ಕ್ಕೆ ತಡಸಿನಕೊಪ್ಪದ ಸಂಸ್ಥೆಯ ಆವರಣದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಐಐಐಟಿ ನಿರ್ದೇಶಕ ಪ್ರೊ. ಎಸ್.ಆರ್.ಮಹಾದೇವ ಪ್ರಸನ್ ಹೇಳಿದರು. ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಐಐಟಿ ದೆಹಲಿ ನಿರ್ದೇಶಕ ಪ್ರೊ.ರಂಗನ ಬ್ಯಾನರ್ಜಿ ಘಟಿಕೋತ್ಸವ ಭಾಷಣ ಮಾಡಲಿದ್ದಾರೆ. ಐಐಐಟಿ ಆಡಳಿತ ಮಂಡಳಿ ಅಧ್ಯಕ್ಷ ಜಲಜ ದಾನಿ ಅಧ್ಯಕ್ಷತೆ ವಹಿಸುವರು ಎಂದರು. ಘಟಿಕೋತ್ಸವದಲ್ಲಿ ಒಟ್ಟು 253 ವಿದ್ಯಾರ್ಥಿಗಳು ಪದವಿ ಸ್ವೀಕರಿಸುವುದಾಗಿ ಹೇಳಿದರು. ಎಂಟೆಕ್‌ನಲ್ಲಿ ಇಬ್ಬರು ಸಂಶೋಧಕರು ಸಹ ಪದವಿ ಪಡೆಯಲಿದ್ದಾರೆ. ರಾಷ್ಟ್ರಪತಿಗಳ ಹೆಸರಿನ ಚಿನ್ನದ ಪದಕ, ಪ್ರತಿ ವಿಭಾಗದಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ನಿರ್ದೇಶಕರ ಹೆಸರಿನ ಒಟ್ಟು ಆರು ಪದಕಗಳನ್ನು ನೀಡಲಾಗುತ್ತಿದೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಐಐಐಟಿ ಕುಲಸಚಿವ ಪ್ರೊ.ಸತೀಶ ಅಣ್ಣಿಗೇರಿ, ವಿದ್ಯಾರ್ಥಿ ಕಲ್ಯಾಣಾಧಿಕಾರಿ ಪ್ರೊ.ಕೆ. ಗೋಪಿನಾಥ ಹಾಗೂ ಪಿಆರ್‌ಓ ವಾಸುದೇವ ಪರ್ವತಿ ಇದ್ದರು.

ಸಾಮಾನ್ಯ ಸಭೆ ನಾಳೆ

ಹುಬ್ಬಳ್ಳಿ: ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆಯ ಸಾಮಾನ್ಯ ಸಭೆಯನ್ನು ಮೇ 29 ರಂದು ಬೆಳಿಗ್ಗೆ 11 ಗಂಟೆಗೆ ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆಯ ಸಭಾಭವನದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯ ಪರಿಷತ್ ಕಾರ್ಯದರ್ಶಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೇ 30ರಿಂದ ಪ್ರವಚನ

ಹುಬ್ಬಳ್ಳಿ: ಅಧಿಕ ಮಾಸದ ನಿಮಿತ್ತ ಮೇ 30ರಿಂದ ಜೂ. 5ರ ವರೆಗೆ ಭಾಗವತ ಏಕಾದಶ ಸ್ಕಂದ ಪ್ರವಚನ ಹಮ್ಮಿಕೊಳ್ಳಲಾಗಿದೆ. ನವನಗರ, ಕೆಸಿಸಿ ಬ್ಯಾಂಕ್ ಕಾಲೋನಿಯ ರಾಘವೇಂದ್ರ ಬಟವಿ ಅವರ ನಿವಾಸದಲ್ಲಿ ಪ್ರತಿ ದಿನ ಸಂಜೆ 6.30ಕ್ಕೆ ಪ್ರವಚನ ಕಾರ್ಯಕ್ರಮ ನಡೆಯಲಿದ್ದು, ಪಂ. ವಾದಿರಾಜಾಚಾರ್ಯ ತಡಕೋಡ ಪ್ರವಚನ ನೀಡುವರು ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ. ಮಾಹಿತಿಗೆ 9964736445 ಸಂಪರ್ಕಿಸಬಹುದು.

ಮೇ 31ಕ್ಕೆ ಶಿಬಿರ

ಹುಬ್ಬಳ್ಳಿ: ಇಲ್ಲಿನ ಹಂಸ ಹೋಟೆಲ್ ಹಿಂಭಾಗದ ಕಲ್ಯಾಣ ನಗರದ ಲೇಸರ್ ವೇದಾ ಡೆಂಟಲ್ ಇನ್‌ಸ್ಟಿಟ್ಯೂಟ್‌ನಲ್ಲಿ ಬಾಯಿ ಕ್ಯಾನ್ಸರ್ ಉಚಿತ ಸ್ಕ್ರೀನಿಂಗ್ ಹಾಗೂ ಗುಟಕಾ, ತಂಬಾಕು ಚಟ ಬಿಡಿಸುವ ಒಂದು ದಿನದ ಶಿಬಿರವನ್ನು ಮೇ 31ರಂದು ಬೆಳಗ್ಗೆ 10 ರಿಂದ ಮಧ್ಯಾಹ್ನ 2 ಗಂಟೆಯವರೆಗೆ ಹಮ್ಮಿಕೊಳ್ಳಲಾಗಿದೆ ಎಂದು ಲೇಸರ್ ವೇದ ಯಾವಗಲ್ ಹೆಲ್ತ್ ಕೇರ್ ಫೌಂಡೇಷನ್ ನಿರ್ದೇಶಕರಾದ ಓರಲ್ ಲೇಸರ್ ಸರ್ಜನ್ ಡಾ. ಚಂದ್ರಶೇಖರ ಯಾವಗಲ್ ತಿಳಿಸಿದರು.

ನಗರದಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಓರಲ್‌ಬ್ಲೂ ಲೇಸರ್ ಮೂಲಕ ಒಂದು ದಿನದಲ್ಲಿ 500 ಜನರ ಬಾಯಿ ಕ್ಯಾನ್ಸರ್ ಪತ್ತೆ ಮಾಡಬಹುದಾಗಿದೆ. ಇದುವರೆಗೆ ಸಾವಿರಾರು ಜನರಿಗೆ ಚಿಕಿತ್ಸೆ ನೀಡುವ ಜತೆಗೆ ಗುಟಕಾ, ತಂಬಾಕು ಹಾಗೂ ಪಾನ್ ಚಟ ಬಿಡಿಸಿದ್ದಾಗಿ ಹೇಳಿದರು.

ಜೂನ್ 6ಕ್ಕೆ ಸಮ್ಮೇಳನ

ಹುಬ್ಬಳ್ಳಿ: ಧಾರವಾಡ ಬಂದ್ ಹಿನ್ನೆಲೆಯಲ್ಲಿ ಅಂದು ಜರುಗಬೇಕಿದ್ದ ಅವಳಿ ಮಹಾನಗರ ವ್ಯಾಪ್ತಿಯ ಕರ್ನಾಟಕ ಚುಟುಕು ಸಾಹಿತ್ಯ ಪರಿಷತ್ತಿನ 8ನೇ ಸಮ್ಮೇಳನ ಜೂನ್ 6ರಂದು ಮಧ್ಯಾಹ್ನ 3 ಗಂಟೆಗೆ ಜರುಗಲಿದೆ. ಸರ್ವಾಧ್ಯಕ್ಷರಾಗಿ ಹಿರಿಯ ಕವಿ ಪಂಪಾಪತಿ ಹಿರೇಮಠ ಅವರನ್ನು ಆಯ್ಕೆ ಮಾಡಲಾಗಿದೆ ಎಂದು ಸಂಚಾಲಕ ಕೃಷ್ಣಮೂರ್ತಿ ಕುಲಕರ್ಣಿ ತಿಳಿಸಿದ್ದಾರೆ. ಅಂದು ಮಧ್ಯಾಹ್ನ 3 ಗಂಟೆಗೆ ಧಾರವಾಡ ರಂಗಾಯಣ ಸಭಾಂಗಣದಲ್ಲಿ ಮಕ್ಕಳ ಸಾಹಿತ್ಯದ ಕವಿ ನಿಂಗಣ್ಣ ಕುಂಟಿ ಸಮ್ಮೇಳನ ಉದ್ಘಾಟಿಸಲಿದ್ದು, ಚುಟುಕು ವಾಚನ ಗೋಷ್ಠಿ ನಡೆಯಲಿದೆ. ಆಸಕ್ತರು 9482181305 ಗೆ ಮೇ.30 ರ ಒಳಗಾಗಿ ಕರೆಮಾಡಿ ಹೆಸರು ನೋಂದಾಯಿಸುವಂತೆ ಪ್ರಸಾರಾಂಗ ನಿರ್ದೇಶಕ ಚನ್ನಬಸಪ್ಪ ಧಾರವಾಡಶೆಟ್ರು ತಿಳಿಸಿದ್ದಾರೆ.

ಓರ್ವ ಸಾವು

ಧಾರವಾಡ: ದ್ವಿಚಕ್ರ ವಾಹನ ನಿಯಂತ್ರಣ ತಪ್ಪಿದ ಪರಿಣಾಮ ಹಿಂಬದಿ ಸವಾರ ಮೃತಪಟ್ಟ ಘಟನೆ ತಾಲೂಕಿನ ಮುರಕಟ್ಟಿ ಕ್ರಾಸ್ ಹತ್ತಿರದ ಭಾನುವಾರ ನಡೆದಿದೆ. ಹಳಿಯಾಳ ತಾಲೂಕಿನ ಗಡಿಯಾಳ ಗ್ರಾಮದ ಪ್ರಕಾಶ ಪತ್ತಾರ(45) ಮೃತ ವ್ಯಕ್ತಿ. ಹಳಿಯಾಳ ಕಡೆಯಿಂದ ಧಾರವಾಡ ಕಡೆಗೆ ವೇಗವಾಗಿ ಬರುತ್ತಿದ್ದ ಬೈಕ್ ನಿಯಂತ್ರಣ ತಪ್ಪಿದ ಪರಿಣಾಮ ಗಂಭೀರ ಗಾಯಗೊಂಡ ಪ್ರಕಾಶ ಚಿಕಿತ್ಸೆಗೆ ಹುಬ್ಬಳ್ಳಿ ಕಿಮ್ಸ್‌ಗೆ ದಾಖಲಿಸಿದ್ದು, ಚಿಕಿತ್ಸೆ ಫಲಸದೆ ಮೃತಪಟ್ಟಿದ್ದಾನೆ. ಹಳಿಯಾಳ ತಾಲೂಕಿನ ಅಮ್ಮನಕೊಪ್ಪ ಗ್ರಾಮದ ಬಸವರಾಜ ಕಮ್ಮಾರ(45) ಅವರಿಗೆ ಸಣ್ಣಪುಟ್ಟ ಗಾಯಗಳಾಗಿವೆ. ಈ ಕುರಿತು ಧಾರವಾಡ ಗ್ರಾಮೀಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಹುಬ್ಬಳ್ಳಿ: ಧಾರವಾಡದಲ್ಲಿ ಫೈರಿಂಗ್ ಸಂಸ್ಕೃತಿ ಆರಂಭವಾಗಿರುವುದನ್ನು ಖಂಡಿಸಿ ಹಾಗೂ ಜಿಲ್ಲೆಯಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟಿದೆ ಎಂದು ಆರೋಪಿಸಿ ಬಿಜೆಪಿ ಹು-ಧಾ ಮಹಾನಗರ ಜಿಲ್ಲಾ ಮುಖಂಡರು ಹಾಗೂ ಕಾರ್ಯಕರ್ತರು ನಗರದಲ್ಲಿ ಪ್ರತಿಭಟನೆ ನಡೆಸಿದರು.

ಕಾಂಗ್ರೆಸ್ ಮಹಿಳಾ ವಿರೋಧಿಯಲ್ಲ: ಜೆ.ಡಿ.ನಾಯಕ

ಹುಬ್ಬಳ್ಳಿ: ರಾಜಕೀಯ ದುರುದ್ದೇಶದಿಂದ ಕೇಂದ್ರ ಬಿಜೆಪಿ ಸರ್ಕಾರ ಮಹಿಳಾ ಮೀಸಲಾತಿ ಜಾರಿಗೆ ತರಲು ಮುಂದಾಗಿತ್ತು. 2014ರಲ್ಲಿ ಸಂಪೂರ್ಣ ಬಹುಮತವಿದ್ದರೂ ಏಕೆ ಈ ಪ್ರಯತ್ನ ಮಾಡಲಿಲ್ಲ ಎಂದು ಕರ್ನಾಟಕ ಪ್ರದೇಶ ಕಾಂಗ್ರೆಸ್ ಪ್ರಚಾರ ಸಮಿತಿ ಉಪಾಧ್ಯಕ್ಷ ಜೆ.ಡಿ.ನಾಯಕ ಪ್ರಶ್ನಿಸಿದರು. ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಇತ್ತೀಚೆಗೆ ಬಿಜೆಪಿ ಮಹಿಳಾ ಮೀಸಲಾತಿ ಹಾಗೂ ಕ್ಷೇತ್ರ ಪುನರ್ ವಿಂಗಡಣೆ ಬಿಲ್ ಲೋಕಸಭೆಯಲ್ಲಿ ಜಾರಿಗೆ ತರಲು ಮುಂದಾಗಿತ್ತು. ಆದರೆ,ಕೇಂದ್ರ ಸರ್ಕಾರಕ್ಕೆ ಸ್ಪಷ್ಟ ಬಹುಮತವಿಲ್ಲದಿದ್ದರೂ ಕಾಂಗ್ರೆಸ್ ಹಾಗೂ ವಿರೋಧ ಪಕ್ಷಗಳ ಮೇಲೆ ಆಪಾದನೆ ಮಾಡುವುದು ಇವರ ರಾಜಕೀಯ ಉದ್ದೇಶವಾಗಿತ್ತು. ಮಹಿಳಾ ಮೀಸಲಾತಿ ಬಗ್ಗೆ ಕಾಂಗ್ರೆಸ್ ವಿರೋಧ ಮಾಡಿಲ್ಲ. ಆದರೆ ಕ್ಷೇತ್ರದ ಮರುವಿಂಗಡಣೆಗೆ ನಮ್ಮ ವಿರೋಧವಿದೆ. ದಕ್ಷಿಣ ಭಾರತ ಕ್ಷೇತ್ರಗಳು ಕಡಿಮೆಯಾಗಲಿದ್ದು, ಇದು ಅನ್ಯಾಯವಾಗಲಿದೆ. ಇದೇ ವಿಚಾರ ಮುಂದಿಟ್ಟುಕೊಂಡು ಬಿಜೆಪಿ ಅವರು ಕಾಂಗ್ರೆಸ್ ಪಕ್ಷ ಮಹಿಳಾ ವಿರೋಧಿ ಎಂದು ಬಿಂಬಿಸಿದರು. ನಾವು ಮಹಿಳಾ ವಿರೋಧಿಗಳಲ್ಲ, ಅದಕ್ಕೆ ನಮ್ಮದು ಸಂಪೂರ್ಣ ಸಹಕಾರವಿದೆ ಎಂದು ಸ್ಪಷ್ಟಪಡಿಸಿದರು. ಕೇಂದ್ರ ಸರ್ಕಾರ ಪೆಟ್ರೋಲ್ ಹಾಗೂ ಡೀಸೆಲ್ ದರ ಹೆಚ್ಚಿಸಿರುವುದನ್ನು ವಿರೋಧಿ ಮೇ 30ರಂದು ಬೆಂಗಳೂರು ಸೇರಿದಂತೆ ಎಲ್ಲ ಜಿಲ್ಲಾ ಘಟಕದ ವತಿಯಿಂದ ಹೋರಾಟ ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು. ಸತೀಶ ಮೆಹರವಾಡೆ, ಚಂದ್ರಶೇಖರ ಜುಟ್ಟಲ, ನೆಹರು ಪಾಟೀಲ, ವಿಶ್ವನಾಥ ಕುಲಕರ್ಣಿ, ಮೋಹನ ಹಿರೇಮನಿ ಇದ್ದರು.



ಧಾರವಾಡ: ಪ್ರಮುಖ ಬೀದಿಗಳಲ್ಲಿ ಬಕ್ರೀದ್ ಹಬ್ಬದ ಹಿನ್ನೆಲೆಯಲ್ಲಿ ಪೊಲೀಸ್ ಪಥಸಂಚಲನ ನಡೆಯಿತು.

ಜಿಲ್ಲಾ ಮಟ್ಟದ ಬ್ಯಾಂಕರ್ಸ್ ಸಭೆ | ಜಿಲ್ಲಾಧಿಕಾರಿ ಸ್ನೇಹಲ್ ಸೂಚನೆ

ಉದ್ಯಮಗಳ ಸ್ಥಾಪನೆಗೆ ಸಹಕರಿಸಿ

ಧಾರವಾಡ: ಜಿಲ್ಲೆಯಲ್ಲಿ ಕೃಷಿ ಹಾಗೂ ಕೈಗಾರಿಕೆಗಳಿಗೆ ಪೂರಕವಾದ ಸಣ್ಣ-ಸಣ್ಣ ಉದ್ಯಮಗಳ ಸ್ಥಾಪನೆಗೆ ಜಿಲ್ಲೆಯ ಎಲ್ಲ ಬ್ಯಾಂಕ್‌ಗಳು ಸಹಕರಿಸಬೇಕು. ನಿಯಮ ಉಲ್ಲಂಘಿಸಿ ಸಾಲ ವಸೂಲಿ ಮಾಡದಂತೆ ಜಿಲ್ಲಾಧಿಕಾರಿ ಸ್ನೇಹಲ್ ಆರ್. ಸೂಚನೆ ನೀಡಿದರು.

ನಗರದ ಜಿಲ್ಲಾ ಪಂಚಾಯತಿ ಸಭಾಂಗಣದಲ್ಲಿ ಬುಧವಾರ ನಡೆದ ಜಿಲ್ಲಾ ಮಟ್ಟದ ಬ್ಯಾಂಕರ್ಸ್ ಸಭೆ ನಡೆಸಿದ ಅವರು, ಬ್ಯಾಂಕ್‌ಗಳು ಗ್ರಾಮ ಪಂಚಾಯತಿ ಹಾಗೂ ಗ್ರಾಮ ಮಟ್ಟದಲ್ಲಿ ಸಭೆ ಆಯೋಜಿಸಿ ರೈತರಿಗೆ ಸಾಲ ವಿತರಣೆ ಮತ್ತು ಮರುಪಾವತಿ ಕುರಿತು ಜಾಗೃತಿ ಮೂಡಿಸಬೇಕು. ಸಾಲಮನ್ನಾ ನಿರೀಕ್ಷಿಸುವ ರೈತರಿಗೆ ಸಾಲ ತೀರಿಸುವಂತೆ ಪ್ರೇರಣೆ ನೀಡುವಂತೆ ಆದೇಶಿಸಿದರು. ಜಿಪಂ ಸಿಇಒ ಭುವನೇಶ ಪಾಟೀಲ ಮಾತನಾಡಿ, ಸಾರ್ವಜನಿಕರು ಸಾಲ ಪಡೆಯಲು ಅರ್ಜಿ ಸಲ್ಲಿಸಿದಾಗ ಬ್ಯಾಂಕ್‌ಗಳು ಸರಿಯಾಗಿ ಸ್ಪಂದಿಸಿ ಕ್ಷಿಪ್ರಗತಿಯಲ್ಲಿ ಸಾಲವನ್ನು ಮಂಜೂರು ಮಾಡಲು ಕ್ರಮಕೈಗೊಂಡು ಜನರಿಗೆ ಅನುಕೂಲ ಕಲ್ಪಿಸುವಂತೆ ಆದೇಶಿಸಿದರು. ಕಳೆದ ಹಣಕಾಸು ವರ್ಷದಲ್ಲಿ ಜಿಲ್ಲೆಯಲ್ಲಿ ಒಟ್ಟು ರೂ.11,800 ಕೋಟಿಯಿಂದ 14000 ಕೋಟಿ ಸಾಲ ವಿತರಿಸಿದೆ. ಕೃಷಿಗೆ ರೂ.1000 ಸಾವಿರ ಕೋಟಿ ರೂ. ಸಾಲ ಹೆಚ್ಚಿಸಿರುವುದಾಗಿ ಜಿಲ್ಲಾ ನಬಾರ್ಡ್ ಬ್ಯಾಂಕ್ ವ್ಯವಸ್ಥಾಪಕ ಮಯೂರ್ ಕಾಂಬಳೆ ತಿಳಿಸಿದರು. ಜಿಲ್ಲಾ ಲೀಡ್ ಬ್ಯಾಂಕ್‌ನ 2026-27ನೇ ಸಾಲಿನ ಜಿಲ್ಲಾ ವಾರ್ಷಿಕ ಸಾಲ ಯೋಜನೆ ಬಿಡುಗಡೆ ಮಾಡಲಾಯಿತು. ಜಿಲ್ಲಾ ಅಗ್ರಣಿಯ ಬ್ಯಾಂಕಿನ ವ್ಯವಸ್ಥಾಪಕ ಬಸವರಾಜ ಗಡಾದವರ, ವಿವಿಧ ಬ್ಯಾಂಕ್‌ಗಳ ವ್ಯವಸ್ಥಾಪಕರು ಇದ್ದರು.



ಬ್ಯಾಂಕಿನಲ್ಲಿ 142 ಅರ್ಜಿಗಳು ಬಾಕಿ

ಪ್ರಧಾನಮಂತ್ರಿ ಉದ್ಯೋಗ ಸೃಜನ ಕಾರ್ಯಕ್ರಮದಡಿ 142 ಅರ್ಜಿಗಳು ನಮ್ಮ ಜಿಲ್ಲೆಯ ಬ್ಯಾಂಕಿನಲ್ಲಿ ಬಾಕಿ ಇವೆ. ಸಂಬಂಧಿಸಿದ ಬ್ಯಾಂಕ್‌ಗಳು ಆದ್ಯತೆ ಮೇರೆಗೆ ಅಂತಹ ಅರ್ಜಿಗಳನ್ನು ತತಕ್ಷಣವೇ ವಿಲೇವಾರಿ ಮಾಡಬೇಕು ಎಂದು ಸೂಚನೆ ನೀಡಿದರು.

ಆರೋಪಿಗಳ ವಿರುದ್ಧ ಕ್ರಮ ಕೈಗೊಳ್ಳಿ: ಟೆಂಗಿನಕಾಯಿ

ಹುಬ್ಬಳ್ಳಿ: ಧಾರವಾಡದಲ್ಲಿ ಫೈರಿಂಗ್ ಸಂಸ್ಕೃತಿ ಆರಂಭವಾಗಿರುವುದನ್ನು ಖಂಡಿಸಿ ಹಾಗೂ ಜಿಲ್ಲೆಯಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟಿದೆಎಂದುಆರೋಪಿಸಿಬಿಜೆಪಿಹು-ಧಾ ಮಹಾನಗರ ಜಿಲ್ಲಾ ಮುಖಂಡರು ಹಾಗೂ ಕಾರ್ಯಕರ್ತರು ನಗರದಲ್ಲಿ ಪ್ರತಿಭಟನೆ ನಡೆಸಿದರು. ಬುಧವಾರ ನಗರದ ಸಂಗೊಳ್ಳಿ ರಾಯಣ್ಣ ವೃತ್ತದಲ್ಲಿ ಸಮಾವೇಶಗೊಂಡ ಪ್ರತಿಭಟನಾಕಾರರು ರಾಜ್ಯ ಸರ್ಕಾರ, ಮುಖ್ಯಮಂತ್ರಿ ಸಿದ್ದರಾಮಯ್ಯ, ಗೃಹ ಸಚಿವ ಜಿ. ಪರಮೇಶ್ವರ ಹಾಗೂ ಪೊಲೀಸ್ ಆಯುಕ್ತ ಎನ್. ಶಶಿಕುಮಾರ ಅವರ ಭಾವಚಿತ್ರ ದಹಿಸಿದರು. ಎನ್.ಶಶಿಕುಮಾರ ಅವರನ್ನು ವರ್ಗಾವಣೆ ಮಾಡಬೇಕು ಎಂದು ಘೋಷಣೆ ಕೂಗಿದರು.

ಶಾಸಕ ಮಹೇಶ ಟೆಂಗಿನಕಾಯಿ ಮಾತನಾಡಿ, ಹುಬ್ಬಳ್ಳಿ-ಧಾರವಾಡದಲ್ಲಿ ಲ್ಯಾಂಡ್ ಮಾಫಿಯಾ ಸೇರಿದಂತೆ ಅನೇಕ ಅಕ್ರಮ ಚಟುವಟಿಕೆಗಳು ನಡೆಯುತ್ತಿವೆ. ಆರೋಪಿಗಳ ವಿರುದ್ಧ ಯಾವುದೇ ಕ್ರಮ ಕೈಗೊಳ್ಳದಿರುವು ನೋಡಿದರೆ ಪೊಲೀಸ್ ಆಯುಕ್ತರೇ ಕೃತ್ಯಗಳಲ್ಲಿ ಭಾಗವಹಿಸುತ್ತಿದ್ದಾರೇ ಎಂಬ ಅನುಮಾನ ಮೂಡುತ್ತಿವೆ ಎಂದರು. ಧಾರವಾಡದಲ್ಲಿ ನಡೆದ ಫೈರಿಂಗ್ ದೇಶಕ್ಕೆ ಗೊತ್ತಿದ್ದರೂ ಸಹ ಪೊಲೀಸ್ ಆಯುಕ್ತ ಎನ್. ಶಶಿಕುಮಾರ ಘಟನೆ ಬಗ್ಗೆ ತಿಳಿದುಕೊಳ್ಳುತ್ತೇವೆ ಹಾಗೂ ತನಿಖೆ ಮಾಡುತ್ತೇವೆ ಎಂದು ಹೇಳುತ್ತಿದ್ದಾರೆ. ಸಾಕ್ಷಿಗಳು ದೊರೆತರೂ ಆರೋಪಿಗಳ ವಿರುದ್ಧ ಕಠಿಣ ಕ್ರಮವಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು. ಬಿಜೆಪಿ ಮುಖಂಡ ಲಿಂಗರಾಜ ಪಾಟೀಲ ಮಾತನಾಡಿ, ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರದ ಬಂದ ಬಳಿಕ ಗೂಂಡಾ ಸಂಸ್ಕೃತಿ ಆರಂಭವಾಗಿದೆ. ಗೃಹಮಂತ್ರಿ ರಾಜ್ಯದಲ್ಲಿ ಇದ್ದಾರೆ ಇಲ್ಲಾ ಎಂಬುವುದು ಗೊತ್ತಾಗುತ್ತಿಲ್ಲ. ವಿವಿಧ ಜಿಲ್ಲೆಯಲ್ಲಿ ಗೂಂಡಾ ವರ್ತನೆ ನಡೆಯುತ್ತಿದ್ದು, ಸ್ವತಃ ಪೊಲೀಸ್ ಇಲಾಖೆ ಕುಮ್ಮಕ್ಕು ಕೊಡುತ್ತಿದೆ. ಹುಬ್ಬಳ್ಳಿ ಧಾರವಾಡ ಜನತೆ ಶಾಂತಿ, ಸುವ್ಯವಸ್ಥೆ ಕಾಪಾಡಿ, ಆರೋಪಿಗಳ ವಿರುದ್ಧ ನಿರ್ದಾಕ್ಷಿಣ್ಯವಾಗಿ ಕ್ರಮಕೈಗೊಳ್ಳಿ ಎಂದು ಆಗ್ರಹಿಸಿದರು.

ಮುಖಂಡ ನಾರಾಯಣ ಜರತಾರಘರ ಮಾತನಾಡಿ, ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಹಾಳಾಗಿದೆ ಎಂಬುವುದಕ್ಕೆ ಇದು ಉದಾಹರಣೆ. ಶಾಂತಿ ಪ್ರದೇಶವಾದ ಹುಬ್ಬಳ್ಳಿ ನಡೆದ ಘಟನೆ ಸಾರ್ವಜನಿಕರಲ್ಲಿ ಆತಂಕ ಮೂಡಿದ್ದು, ಸುರಕ್ಷತೆ ಇಲ್ಲ ಅನಿಸುತ್ತಿದೆ. ಅಮಾಯಕ ರೈತರ ಜಮೀನು ಹೊಡೆಯುವ ಕೆಲಸ ನಡೆಯುತ್ತಿದೆ. ಅಂತವರ ವಿರುದ್ಧ ಕ್ರಮಕೈಗೊಳ್ಳಬೇಕು ಎಂದು ಒತ್ತಾಯಿಸಿದರು. ಪ್ರಧಾನ ಕಾರ್ಯದರ್ಶಿ ವಸಂತ ನಾಡಜೋಶಿ, ಶಿವು ಮೆಣಸಿನಕಾಯಿ, ರೂಪಾ ಶೆಟ್ಟಿ, ಮೀನಾಕ್ಷಿ ವಂಟಮುರಿ, ವೀಣಾ ಭಾರದ್ವಾಡ, ನಾರಾಯಣ ಜರತಾರಘರ, ವೆಂಕಟೇಶ ಕಾಟವೆ, ಭೀರಪ್ಪ ಖಂಡೇಕರ, ದತ್ತಮೂರ್ತಿ ಕುಲಕರ್ಣಿ, ಪ್ರಭು ನವಲಗುಂದಮಠ, ಪ್ರವೀಣ ಹುರಳಿ, ಸಂತೋಷ ಅರಕೇರಿ, ಅನುಪ ಬಿಜವಾಡ, ರಾಜು ಕೋರ್ಯಾಣಮಠ, ಸೀಮಾ ಲದವಾ, ಪ್ರೀತಂ ಅರಕೇರಿ, ಪ್ರವೀಣ ಕುಬಸದ ಇದ್ದರು.



ದೈಹಿಕ ಕ್ಷಮತೆಗೆ ಸೈಕ್ಲಿಂಗ್ ಅಗತ್ಯ

ಧಾರವಾಡ: ಪ್ರಧಾನಿ ನರೇಂದ್ರ ಮೋದಿ ಕನಸಿನ ಫಿಟ್ ಇಂಡಿಯಾ ಅಭಿಯಾನದ ಭಾಗವಾಗಿ ಇಲ್ಲಿನ ಸಾಯಿ (ಭಾರತೀಯ ಕ್ರೀಡಾ ಪ್ರಾಧಿಕಾರ) ಸ್ಪೋರ್ಟ್ಸ್ ಹಾಸ್ಟೆಲ್ ಭಾನುವಾರ ಬೆಳಗ್ಗೆ ನಗರದಲ್ಲಿ ನಡೆಸಿದ ಸೈಕಲ್ ಜಾಥಾ ಸಾರ್ವಜನಿಕರ ಗಮನ ಸೆಳೆಯಿತು.

ಜಾಥಾಗೆ ಹಸಿರು ನಿಶಾನೆ ತೋರಿದ ಧಾರವಾಡ ರೈಲ್ವೆ ನಿಲ್ದಾಣದ ಆರ್‌ಪಿಎಫ್ ಉಪನಿರೀಕ್ಷಕ ಎಂ.ರವೀಂದ್ರ ಮಾತನಾಡಿ, ಆರೋಗ್ಯಕರ ಸಮಾಜಕ್ಕೆ ಕ್ರೀಡೆ ಮತ್ತು ವ್ಯಾಯಾಮ ಅಗತ್ಯ. ಇಂದಿನ ಯಾಂತ್ರಿಕ ಜೀವನ ಶೈಲಿಯಲ್ಲಿ ಪ್ರತಿಯೊಬ್ಬರೂ ತಮ್ಮ ಆರೋಗ್ಯದ ಕಡೆ ಗಮನ ಹರಿಸಬೇಕು. ನಿತ್ಯವೂ ಸೈಕ್ಲಿಂಗ್ ಮಾಡುವುದರಿಂದ ದೈಹಿಕ ಆರೋಗ್ಯ ಸುಧಾರಿಸಲಿದೆ. ಪರಿಸರ ಮಾಲಿನ್ಯ ತಡೆಗಟ್ಟಲು ಸಹಕಾರಿಯೂ ಆಗಲಿದೆ. ಎಂದರು.



ಸಾಯಿ ಸ್ಪೋರ್ಟ್ಸ್ ಹಾಸ್ಟೆಲ್‌ನ ನೂರಾರು ಯುವ ಕ್ರೀಡಾಪಟುಗಳು, ಸ್ಥಳೀಯ ಕ್ರೀಡಾಸಕ್ತರು ತಮ್ಮ ಸೈಕಲ್‌ಗಳೊಂದಿಗೆ ಜಾಥಾದಲ್ಲಿ ಅತ್ಯಂತ ಉತ್ಸಾಹದಿಂದ ಪಾಲ್ಗೊಂಡಿದ್ದರು. ನಗರದ ಪ್ರಮುಖ ರಸ್ತೆಗಳ ಮೂಲಕ ಸಾಗಿದ ಜಾಥಾವು, ಸಾರ್ವಜನಿಕರಲ್ಲಿ ಫಿಟ್‌ನೆಸ್ ಹಾಗೂ ಆರೋಗ್ಯದ ಕುರಿತು ಜಾಗೃತಿ ಮೂಡಿಸಿತು. ಜಾಥಾದುದ್ದಕ್ಕೂ ಕ್ರೀಡಾಪಟುಗಳು ಆರೋಗ್ಯ ರಕ್ಷಣೆಯ ಘೋಷಣೆಗಳನ್ನು ಕೂಗುತ್ತಾ ಸಾಗಿದರು. ಈ ಸಂದರ್ಭದಲ್ಲಿ ಸಾಯಿ ಸ್ಪೋರ್ಟ್ಸ್ ಹಾಸ್ಟೆಲ್ ತರಬೇತುದಾರ ರಂಗನಾಥ, ಅಧಿಕಾರಿಗಳು ಹಾಗೂ ಸಿಬ್ಬಂದಿ ಇದ್ದರು.

ಮಹಿಳೆಯರಿಗೆ ಕೈತೋಟ ನಿರ್ವಹಣಾ ತರಬೇತಿ

ಕಲಘಟಗಿ: ಮನುವಿಕಾಸ ಸಂಸ್ಥೆ ವತಿಯಿಂದ ಜಲ ಕೃಷಿ ಸಮೃದ್ಧಿ ಯೋಜನೆ ಅಡಿಯಲ್ಲಿ ತಾಲೂಕಿನ ದುಮ್ಮವಾಡ ಗ್ರಾಮದ ಸಿದ್ಧಾರೂಡ ಮಠದಲ್ಲಿ ಮಹಿಳೆಯರಿಗಾಗಿ ಒಂದು ದಿನದ ಕೈತೋಟ ನಿರ್ವಹಣಾ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಅತಿಥಿಗಳು ಗಿಡಕ್ಕೆ ನೀರು ಎರೆಯುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಸಂಸ್ಥೆಯ ಗಣಪತಿ ಹೆಗಡೆ ಅವರು ಸಂಸ್ಥೆಯ ಪರಿಚಯ ಹಾಗೂ ತರಬೇತಿಯ ಉದ್ದೇಶದ ಕುರಿತು ಪ್ರಾಸ್ತಾವಿಕವಾಗಿ ಮಾತನಾಡಿದರು. ಸುನೀಲ ಪೂಜಾರ ಅವರು ಜಲ ಕೃಷಿ ಸಮೃದ್ಧಿ ಯೋಜನೆ, ಸರ್ಕಾರಿ ಸೌಲಭ್ಯಗಳು ಹಾಗೂ ಸುಸ್ಥಿರ ಕೃಷಿ ಕುರಿತು ಮಾಹಿತಿ ನೀಡಿದರು.

ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ್ದ ವಿದ್ಯಾ ಸಣ್ಣನವರ್ ಕೃಷಿ ವಿಜ್ಞಾನ ಕೇಂದ್ರ ಧಾರವಾಡದ ಗೃಹ ವಿಜ್ಞಾನದ ವಿಷಯ ತಜ್ಞೆ ಅವರು ಅಪೌಷ್ಟಿಕತೆ ಕುರಿತು ಜಾಗೃತಿ, ಕೈತೋಟದ ಮಹತ್ವ, ಜಾಗದ ಆಯ್ಕೆ ಮತ್ತು ತಯಾರಿ, ಬೀಜ ಬಿತ್ತನೆ ವಿಧಾನ, ಸಾವಯವ ಗೊಬ್ಬರ ಬಳಕೆ, ನೀರಾವರಿ ಕ್ರಮ, ಕೀಟ ಮತ್ತು ರೋಗ ನಿರ್ವಹಣೆ ಸೇರಿದಂತೆ ವಿವಿಧ ತರಕಾರಿಗಳು ಹಾಗೂ ಅವುಗಳ ಉಪಯೋಗಗಳ ಬಗ್ಗೆ ಮಾಹಿತಿ ನೀಡಿದರು. ಕಾಲಕಾಲಕ್ಕೆ ಮಣ್ಣಿನ ಪರೀಕ್ಷೆ ಮಾಡಿಸುವ ಮೂಲಕ ರೈತರು ತಮ್ಮ ಮನೆಗೆ ಸೂಕ್ತವಾದ ಬೆಳೆಯನ್ನು ಆಯ್ದುಕೊಳ್ಳುವುದು ಉತ್ತಮ ಹಾಗೂ ಮಹಿಳೆಯರು ಕೈತೋಟ ಮಾಡುವ ಮೂಲಕ ತಮ್ಮ ಮನೆಗಳಿಗೆ ಪೌಷ್ಟಿಕಾಂಶದ ಜೊತೆಗೆ ಉಪ ಆದಾಯವನ್ನು ಸಹ ಕಂಡುಕೊಳ್ಳಬಹುದು ಎಂದರು.

ನಂತರ ರೈತರ ಜಮೀನಿನಲ್ಲಿ ಕೈತೋಟ ಬೆಳೆಸುವ ವಿಧಾನವನ್ನು ಪ್ರಾಯೋಗಿಕವಾಗಿ ತೋರಿಸಲಾಯಿತು. ಗೀತಾ ನಿಲೇಕಣಿ ನಿರೂಪಿಸಿದರು. ಗಳಗಿ ಹುಲಕೊಪ್ಪ, ದುಮ್ಮವಾಡ, ಬೋಗೇನಾಗರಕೊಪ್ಪ ಜಿ. ಬಸವನಕೊಪ್ಪ, ಬಿ. ಗುಡಿಹಾಳ ಹಾಗೂ ಹಿರೇಹೊನ್ನಳ್ಳಿ ಗ್ರಾಮಗಳ 75ಕ್ಕೂ ಹೆಚ್ಚು ಮಹಿಳೆಯರು ಭಾಗವಹಿಸಿದ್ದರು.



ಅನುದಾನದ ಕೊರತೆಯಿಲ್ಲ: ಅಬ್ಬಯ್ಯ



ಹುಬ್ಬಳ್ಳಿ: ಪೂರ್ವ ಕ್ಷೇತ್ರದಲ್ಲಿ ಶಿಕ್ಷಣ, ಆರೋಗ್ಯ, ಆಶ್ರಯಕ್ಕೆ ಹೆಚ್ಚಿನ ಒತ್ತು ನೀಡಲಾಗಿದ್ದು, ಇದರ ಜೊತೆಗೆ ಮೂಲಭೂತ ಸೌಕರ್ಯಗಳ ಒದಗಿಸಲು ಅನುದಾನದ ಕೊರತೆ ಇಲ್ಲ ಎಂದು ಸ್ಲಂ ಬೋರ್ಡ್ ಅಧ್ಯಕ್ಷ ಹಾಗೂ ಶಾಸಕ ಪ್ರಸಾದ ಅಬ್ಬಯ್ಯ ಹೇಳಿದರು.

ಇಲ್ಲಿಯ ಸೋನಿಯಾ ಗಾಂಧಿ ನಗರದಲ್ಲಿ ಮುಖ್ಯಮಂತ್ರಿ ವಿಶೇಷ ಅನುದಾನದಡಿಯಲ್ಲಿ 5 ಕೋಟಿ ರೂ ವೆಚ್ಚದ ಕಾಂಕ್ರೀಟ್ ರಸ್ತೆ ಕಾಮಗಾರಿ ಇತ್ತೀಚೆಗೆ ಭೂಮಿಪೂಜೆ ನೆರವೇರಿಸಿ ಮಾತನಾಡಿದರು. ಕ್ಷೇತ್ರದಲ್ಲಿ ಅಭಿವೃದ್ಧಿ ಕಾಣುತ್ತಿದೆ ಎಂದರೆ ಅದು ಕಾಂಗ್ರೆಸ್ ಸರ್ಕಾರವನ್ನು ಮತ್ತೆ ಅಧಿಕಾರದಲ್ಲಿ ತಂದಿದ್ದರ ಫಲ ಎಂಬುದು ಯಾರು ಮರೆಯಬಾರದು. ಬಿಜೆಪಿ ಆಡಳಿತದ ಸಂದರ್ಭದಲ್ಲಿ ಅನುದಾನ ಕೊರತೆಯಿತ್ತು. ಅಭಿವೃದ್ಧಿ ಕಾರ್ಯಗಳು ಕುಂಠಿತಗೊಂಡಿದ್ದವು. ಆದರೆ ಈ ಮೂರು ವರ್ಷದಲ್ಲಿ ನೂರಾರು ಕೋಟಿ ಅನುದಾನ ತಂದು ಮತ್ತಷ್ಟು ಕ್ಷೇತ್ರದ ಅಭಿವೃದ್ಧಿಗೆ ಪ್ರಾಮಾಣಿಕ ಪ್ರಯತ್ನ ಮಾಡುತ್ತಿದ್ದೇನೆ ಎಂದರು.

ಈಗಾಗಲೇ ಪೂರ್ವ ಕ್ಷೇತ್ರದಲ್ಲಿ ಸರ್ಕಾರಿ ಪದವಿಪೂರ್ವ ಕಾಲೇಜ್ ಇರಲಿಲ್ಲ. ಈಗ ನಮ್ಮ ಸರ್ಕಾರ 26-27ನೇ ಸಾಲಿಗೆ ಪದವಿ ಪೂರ್ವ ಕಾಲೇಜ್ ಮಂಜೂರು ಮಾಡಿ ಕೊಟ್ಟಿದೆ. ಕಾಮರ್ಸ್ ವಿಭಾಗವನ್ನು ಪ್ರಾರಂಭ ಮಾಡಲಾಗಿದೆ. ವಿಜ್ಞಾನ ವಿಭಾಗವನ್ನು ಕೂಡ ಪ್ರಾರಂಭಿಸಲು ಮಂಜೂರಾತಿ ಸಿಗಲಿದೆ ಎಂದು ತಿಳಿಸಿದರು.

ಐಎಎಸ್ ಹಾಗೂ ಕೆಎಎಸ್ ಕೋಚಿಂಗ್ ಸೆಂಟರ್ ಕೂಡ ಶೀಘ್ರವೇ ಪ್ರಾರಂಭವಾಗಲಿದೆ. ಈಗಾಗಲೇ ಪೂರ್ವ ಕ್ಷೇತ್ರದಲ್ಲಿ ಆರೋಗ್ಯಕ್ಕೂ ಕೂಡ ಹೆಚ್ಚಿನ ಒತ್ತು ಕೊಡಲಾಗಿದ್ದು, 6 ನಮ್ಮ ಕ್ಲಿನಿಕ್, 4 ನಗರ ಪ್ರಾಥಮಿಕ ಕೇಂದ್ರ, 2 ಪಾಲಿಕೆ ಆಸ್ಪತ್ರೆಗಳು ಕಾರ್ಯನಿರ್ವಹಿಸುತ್ತಿವೆ ಎಂದರು.

ಕಾಂಗ್ರೆಸ್ ಮುಖಂಡ ಮೋಹನ ಅಸುಂಡಿ, ಪಾಲಿಕೆ ಸದಸ್ಯೆ ಲಕ್ಷ್ಮೀಭಾಯಿ ಜಾದವ, ಮಾಜಿ ಪಾಲಿಕೆ ಸದಸ್ಯ ವಿಜನಗೌಡ ಪಾಟೀಲ,ಹಜರತ್ ಮುನಸಿ, ಭಾಸ್ಕರ್, ಅಲ್ತಾಫ್ ಮುಲ್ಲಾ ಧಾರವಾಡಕರ್, ಶರೀಫ್ ಇದ್ದರು.

ಕನಿಷ್ಠ ವೇತನ ಹೆಚ್ಚಳ ಹೊರೆ: ಆದಪ್ಪಗೌಡರ

ಹುಬ್ಬಳ್ಳಿ: ರಾಜ್ಯ ಸರ್ಕಾರ ಕಾರ್ಮಿಕರ ಹಿತಾಸಕ್ತಿಯನ್ನು ರಕ್ಷಿಸುವ ಸಲುವಾಗಿ ಏಕಾಏಕಿ ಹಾಗೂ ಅತಿಯಾದ ಪ್ರಮಾಣ ಕನಿಷ್ಠ ವೇತನ ಹೆಚ್ಚಳ ಮಾಡಿರುವುದು ಸೂಕ್ಷ್ಮ, ಸಣ್ಣ ಹಾಗೂ ಮಧ್ಯಮ ಕೈಗಾರಿಗಳ ಮೇಲೆ ಹೊರೆ ಆಗಲಿದೆ ಎಂದು ಕೆಸಿಸಿಐ ಅಧ್ಯಕ್ಷ ಜಿ.ಕೆ. ಆದಪ್ಪಗೌಡರ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ರಾಜ್ಯ ಸರ್ಕಾರವು ಕನಿಷ್ಠ ವೇತನವನ್ನು ಏರಿಕೆ ಮಾಡಿರುವ ಕ್ರಮದಿಂದ ಹೋಟೆಲ್ ಹಾಗೂ ಸಣ್ಣ ಉದ್ಯಮ ವಲಯಗಳಿಗೆ ಗಂಭೀರ ಸಮಸ್ಯೆಗಳು ಎದುರಾಗುತ್ತಿವೆ. ಈಗಾಗಲೇ ವಿದ್ಯುತ್ ದರ ಏರಿಕೆ, ಇಂಧನ ಬೆಲೆ ಏರಿಕೆ, ಜಿಎಸ್‌ಟಿ ಭಾರ, ಕಚ್ಚಾ ವಸ್ತುಗಳ ಬೆಲೆ ಏರಿಕೆ, ಕಾರ್ಮಿಕರ ಕೊರತೆ, ಬ್ಯಾಂಕ್ ಬಡ್ಡಿದರ, ಸಾರಿಗೆ ವೆಚ್ಚ ಹಾಗೂ ತೆರಿಗೆ ಭಾರದಿಂದ ಕೈಗಾರಿಕೆಗಳು ಸಂಕಷ್ಟ ಅನುಭವಿಸುತ್ತಿವೆ.

ಕನಿಷ್ಠ ವೇತನದಲ್ಲಿ ಭಾರೀ ಪ್ರಮಾಣದ ಹೆಚ್ಚಳ ಮಾಡಿದರೆ ಅನೇಕ ಸಣ್ಣ ಕೈಗಾರಿಕೆಗಳು ತಮ್ಮ ಉತ್ಪಾದನಾ ವೆಚ್ಚವನ್ನು ನಿಭಾಯಿಸಲು ಕಷ್ಟ ಪಡಬೇಕಾಗುತ್ತದೆ. ಹೋಟೆಲ್ ಮತ್ತು ಸಣ್ಣ ಕೈಗಾರಿಕೆಗಳ ಮೇಲೆ ಹೊಸ ಕನಿಷ್ಠ ವೇತನ ನಿಯಮ ಮತ್ತಷ್ಟು ಹೊರೆ ತಂದಿದೆ. ವಿಶೇಷವಾಗಿ ಸಣ್ಣ ಹೋಟೆಲ್‌ಗಳು, ಬೇಕರಿಗಳು, ಟೀ ಅಂಗಡಿಗಳು, ಉಪಹಾರ ಗೃಹಗಳು ಮತ್ತು ಕುಟುಂಬ ಆಧಾರಿತ ಉದ್ಯಮಗಳು ಹೆಚ್ಚುವರಿ ವೇತನ ಭಾರವನ್ನು ಭರಿಸುವ ಸ್ಥಿತಿಯಲ್ಲಿ ಇಲ್ಲ. ಇದರಿಂದ ಅನೇಕ ಉದ್ಯಮಿಗಳು ಸಿಬ್ಬಂದಿ ಕಡಿತ ಮಾಡುವ ಅಥವಾ ವ್ಯವಹಾರವನ್ನು ಮುಚ್ಚುವ ಪರಿಸ್ಥಿತಿ ಎದುರಾಗಬಹುದು.

ಕಾರ್ಮಿಕರ ಹಿತಾಸಕ್ತಿಯನ್ನು ನಾವು ಸಂಪೂರ್ಣವಾಗಿ ಬೆಂಬಲಿಸುತ್ತೇವೆ. ಆದರೆ, ಉದ್ಯಮಗಳ ಆರ್ಥಿಕ ಸಾಮರ್ಥ್ಯವನ್ನು ಪರಿಗಣಿಸದೆ ಏಕಾಏಕಿ ವೇತನ ಹೆಚ್ಚಳ ಜಾರಿಗೊಳಿಸುವುದು ಸೂಕ್ತವಲ್ಲ. ಸರ್ಕಾರವು ಹಂತ ಹಂತವಾಗಿ ಜಾರಿಗೊಳಿಸುವುದು, ಸಣ್ಣ ಉದ್ಯಮಗಳಿಗೆ ವಿಶೇಷ ವಿನಾಯಿತಿ ನೀಡುವುದು ಹಾಗೂ ತೆರಿಗೆ ಮತ್ತು ವಿದ್ಯುತ್ ದರಗಳಲ್ಲಿ ರಿಯಾಯಿತಿ ನೀಡುವ ಕುರಿತು ಚಿಂತನೆ ನಡೆಸಬೇಕು.

ಆದ್ದರಿಂದ ಸರ್ಕಾರವು ಕೈಗಾರಿಕಾ ಸಂಘಟನೆಗಳೊಂದಿಗೆ ಸಮಾಲೋಚನೆ ನಡೆಸಬೇಕು. ಎಂಎಸ್‌ಎಂಇ ವಲಯದ ವಾಸ್ತವ ಪರಿಸ್ಥಿತಿಯನ್ನು ಪರಿಗಣಿಸಬೇಕು. ಹಂತ ಹಂತವಾಗಿ ವೇತನ ಪರಿಷ್ಕರಣೆ ಜಾರಿಗೆ ತರಬೇಕು. ಸಣ್ಣ ಕೈಗಾರಿಕೆಗಳಿಗೆ ಪ್ರೋತ್ಸಾಹಕ ಹಾಗೂ ತೆರಿಗೆ ರಿಯಾಯಿತಿ ನೀಡಬೇಕು ಎಂದು ಮನವಿ ಮಾಡಿದ್ದಾರೆ.

ಅಭಿನಂದನಾ ಸಮಾರಂಭ ಇಂದು



ಧಾರವಾಡ: ನಾಡಿನ ವಿಮರ್ಶಕ ಡಾ.ರಾಘವೇಂದ್ರ ಪಾಟೀಲರ ಅಭಿನಂದನೆ ಮತ್ತು ಪಾಟೀಲರ ಬದುಕಿನ ಸುವರ್ಣ ಸಂಭ್ರಮ ಕಾರ್ಯಕ್ರಮ ಮೇ 28ರ ಬೆಳಗ್ಗೆ 10ಕ್ಕೆ ಆಲೂರು ವೆಂಕಟರಾವ್ ಭವನದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಸಮಿತಿಯ ಅಧ್ಯಕ್ಷ ಪ್ರೊ. ಮಲ್ಲಿಕಾರ್ಜುನ ಪಾಟೀಲ ಹೇಳಿದರು.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿ, ರಾಘವೇಂದ್ರ ಪಾಟೀಲ ಅಭಿನಂದನಾ ಸಮಿತಿ, ಸಾಹಿತ್ಯ ವೇದಿಕೆ, ಅಭಿಮಾನಿ ಬಳಗ ಹಮ್ಮಿಕೊಂಡ ಈ ಸಮಾರಂಭದ ಸಾನ್ನಿಧ್ಯ ಚಿತ್ರದುರ್ಗದ ಡಾ.ಬಸವಮೂರ್ತಿ ಮಾದರ ಚನ್ನಯ್ಯ ಶ್ರೀಗಳು ವಹಿಸಲಿದ್ದಾರೆ. ಸಾಹಿತಿ ಡಾ. ಸಿದ್ದಲಿಂಗ ಪಟ್ಟಣಶೆಟ್ಟಿ, ಪ್ರಾಚಾರ್ಯ ಡಾ.ಶಶಿಧರ ತೋಡ್ಕರ, ಡಾ. ಜಿ.ಎಂ.ಹೆಗಡೆ ಮಾತನಾಡಲಿದ್ದು, ರಾಘವೇಂದ್ರ ಪಾಟೀಲರ ಬೆಳಕಿ ಲೋಕದಲ್ಲಿ ಆಯ್ದ ಕಥೆಗಳು, ತೇರು ಕೃತಿಯ 14ನೇ ಆವೃತ್ತಿಯ ಜೀವ ಸ್ಪರ್ಶ ಕೃತಿಗಳು ಬಿಡುಗಡೆಗೊಳ್ಳಲಿವೆ ಎಂದರು. ವಿಮರ್ಶಕ ಟಿ.ಪಿ.ಅಶೋಕ ಅಧ್ಯಕ್ಷತೆಯಲ್ಲಿ ರಾಘವೇಂದ್ರ ಪಾಟೀಲರ ಸಾಹಿತ್ಯದ ವಿಚಾರ ಸಂಕಿರಣ ಜರುಗಲಿದ್ದು, ಡಾ.ವಿನಯಾ ವಕ್ಕುಂದ, ಡಾ. ನಾ.ದಾಮೋದರ ಶೆಟ್ಟಿ, ಡಾ. ಶ್ರೀಕಂಠಮೂರ್ತಿ ಮಾತನಾಡಲಿದ್ದು, ಹರ್ಷ ಡಂಬಳ, ಎಂ.ಸುಬ್ರಹ್ಮಣ್ಯ ಪಾಲ್ಗೊಳ್ಳಲಿದ್ದಾರೆ. ತೀರ್ಥಹಳ್ಳಿಯ ಅರಳಸುರಳಿ ಅವರಿಗೆ ವಿಶ್ರಾಂತ ಕುಲಪತಿ ಡಾ.ತೇಜಸ್ವಿ ವೆಂಕಪ್ಪ ಕಟ್ಟಿಮನಿ ಪ್ರಶಸ್ತಿ ಪ್ರದಾನ ಮಾಡಲಿದ್ದು, ವಿಕಾಸ ಹೊಸಮನಿ, ಡಾ.ಸಿ.ಕೆ. ನಾವಲಗಿ, ಡಾ.ಬಿ.ವಿ.ರಾಮಪ್ರಸಾದ, ಡಾ.ಶಶಿಧರ ನರೇಂದ್ರ, ಡಾ. ಶ್ರೀರಾಮ ಭಟ್ಟ, ಅನೇಕರು ಪಾಲ್ಗೊಳ್ಳಲಿದ್ದಾರೆ ಎಂದರು. ರಾಘವೇಂದ್ರ ಪಾಟೀಲ, ಶ್ರೀನಿವಾಸ ವಾಡಪ್ಪಿ, ಪರಮೇಶ್ವರ ಭಟ್, ಲಿಂಗರಾಜ ಅಂಗಡಿ ಇದ್ದರು.

ಹಿರಿಯಕ್ಕನ ಅಕ್ಷರ ಸಂಭ್ರಮ ನಾಳೆ

ಧಾರವಾಡ: ಉತ್ತರ ಕರ್ನಾಟಕದ ಲೇಖಕಿಯರ ಸಂಘದಿಂದ ಹಿರಿಯಕ್ಕನ ಅಕ್ಷರ ಸಂಭ್ರಮ ಎರಡನೇ ಕಾರ್ಯಕ್ರಮ ಮೇ 29ರಂದು ಸಂಜೆ 5ಕ್ಕೆ ವಿದ್ಯಾವರ್ಧಕ ಸಂಘದ ರಾ.ಹ.ದೇಶಪಾಂಡೆ ಭವನದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಅಧ್ಯಕ್ಷೆ ರೂಪಾ ಜೋಶಿ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿ, ಎರಡನೇ ಕಾರ್ಯಕ್ರಮ ಕಥೆಗಾರ್ತಿ ಮಾಲತಿ ಪಟ್ಟಣಶೆಟ್ಟಿ ಅವರ ಅಕ್ಷರ ಸಂಭ್ರಮ ಒಳಗೊಂಡಿದ್ದು, ಕವಿವಿ ಕನ್ನಡ ಅಧ್ಯಯನ ಪೀಠದ ಪ್ರಾಧ್ಯಾಪಕಿ ಡಾ.ಅನಿತಾ ಗುಡಿ ಆಶಯ ನುಡಿಯಲಿದ್ದಾರೆ ಎಂದರು.

ಕಾವ್ಯ ಸಾಹಿತ್ಯ ಹಾಗೂ ಯುವ ವಿಮರ್ಶಕ ಕಥಾ ಸಾಹಿತ್ಯದ ಬಗ್ಗೆ ವಿಮರ್ಶಕ ಡಾ.ಸುಭಾಷ ಕಟ್ಟಾಜೆ ಉಪನ್ಯಾಸ ನೀಡಲಿದ್ದು, ಎಂ.ಎಂ. ಕಲಬುರ್ಗಿ ಪ್ರತಿಷ್ಠಾನದ ಅಧ್ಯಕ್ಷ ಡಾ.ವೀರಣ್ಣ ರಾಜೂರ ಅಧ್ಯಕ್ಷತೆ ವಹಿಸಲಿದ್ದು, ಮಾಲತಿ ಪಟ್ಟಶೆಟ್ಟಿ ಇರಲಿದ್ದಾರೆ ಎಂದರು.

ನಂತರ ನಡೆಯುವ ಸಂವಾದದಲ್ಲಿ ಸಂಧ್ಯಾ ದೀಕ್ಷಿತ್, ಉಮಾ ಅಕ್ಕೂರ, ಶಾಲಿನಿ ರುದ್ರಮನಿ, ಶೈಲಜಾ ಹುಲಮನಿ, ಮಾಲತಿ ಮುದಕವಿ, ಕಸ್ತೂರಿ ಬೀರಪ್ಪನವರ, ಶ್ರದ್ಧಾ ನೀಲಗುಂದ, ವಿನುತಾ ಹಂಚಿಮನಿ ಅನೇಕರು ಭಾಗವಹಿಸಲಿದ್ದಾರೆ ಎಂದರು.

ಸುದ್ದಿಗೋಷ್ಠಿಯಲ್ಲಿ ವಿನುತಾ ಹಂಚಿನಮನಿ, ಮಾಲತಿ ಹೆಗಡೆ, ಸುಮಾ ಹಡಪದ, ಡಾ.ಪ್ರಜ್ಞಾ ಮತ್ತಿಹಳ್ಳಿ, ಮಾಲತಿ ಪಟ್ಟಣಶೆಟ್ಟಿ ಇದ್ದರು.



ಮೇ 31ಕ್ಕೆ ಜಾನಪದ ಜಾತ್ರೆ



ಧಾರವಾಡ: ನಾಟ್ಯ ಭೈರವಿ ಕಲಾ ಆಕ್ಯಾಡೆಮಿ ಮತ್ತು ಕನ್ನಡ-ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಜಾನಪದ ಜಾತ್ರೆ ಮೇ 31ರ ಮಧ್ಯಾಹ್ನ 12ಕ್ಕೆ ಚರಂತಿಮಠ ಗಾರ್ಡನ್ ಭವನದಲ್ಲಿ ಹಮ್ಮಿಕೊಂಡಿದ್ದಾಗಿ ಕಲಾ ಪೋಷಕ ಸತೀಶ ತುರಮರಿ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿ, ಮಾಜಿ ಶಾಸಕಿ ಸೀಮಾ ಮಸೂತಿ ಚಾಲನೆ ನೀಡಲಿದ್ದು, ಹು-ಧಾ ಪಾಲಿಕೆ ಸದಸ್ಯರಾದ ಶಂಕರ ಶೇಳಕೆ ಅಧ್ಯಕ್ಷತೆ ವಹಿಸುವರು. ಕುಮಾರ ಬೆಕ್ಕೇರಿ ಅತಿಥಿಗಳಾಗಿ ಆಗಮಿಸುವರು. ಪಾಲಿಕೆ ಸದಸ್ಯರಾದ ರತ್ನಾಬಾಯಿ ನಾಝರೆ, ಶಂಭು ಸಾಲಮನಿ, ಬಿಜೆಪಿ ನಗರ ಘಟಕ ಅಧ್ಯಕ್ಷ ಹೇಮಂತ ನೀಲಣ್ಣವರ, 71ರ ಬಿಜೆಪಿ ಮಹಿಳಾ ಅಧ್ಯಕ್ಷೆ ಪುಷ್ಪಾ ನವಲಗುಂದ, ಡಾ.ಪ್ರಕಾಶ ಮಲ್ಲಿಗವಾಡ, ಸೀಮಾ ಸಾಣಿಕೊಪ್ಪ ಪಾಲ್ಗೊಳ್ಳಲಿದ್ದಾರೆ ಎಂದರು. ಪ್ರಶಾಂತ ಸಿಕ್ಕಲಗಾರ, ಮಂಜುನಾಥ ಸಿಕ್ಕಲಗಾರ, ಹರೀಶ ಹೆಬ್ಬಳ್ಳಿ, ಗೌಸಖಾನ್, ವೈಭವ ಹುಲಗೂರ, ರಾಹುಲ್ ಗೊಲ್ಲರ, ಅಭಿಲಾಷ ಕಲಾಲ್, ಪ್ರಕಾಶ ಮಾದರ, ಹರಶೀ ಮಾದರ ಅವರಿಗೆ ಕಲಾಶ್ರೀ ಪ್ರಶಸ್ತಿ ನೀಡುವುದಾಗಿ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಡಾ.ಪ್ರಕಾಶ ಕ್ಷತ್ರಿಯ, ಉಮೇಶ ಬಾಬರ್, ರಘುವೀರ ಅರವೇಡ ಇದ್ದರು.

ನಾಲ್ಕು ಪುಸ್ತಕಗಳ ಬಿಡುಗಡೆ

ಧಾರವಾಡ: ವೈದ್ಯ ಹಾಗೂ ಲೇಖಕ ಡಾ.ರಾಜನ್ ದೇಶಪಾಂಡೆ ರಚಿಸಿದ 4 ಪುಸ್ತಕಗಳ ಬಿಡುಗಡೆ ಸಮಾರಂಭ ಮೇ 31ರ ಬೆಳಗ್ಗೆ 10.30ಕ್ಕೆ ನಗರದ ಆಲೂರು ವೆಂಕಟರಾವ್ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಪ್ರೊ. ಎಂ.ವೈ.ಸಾವಂತ ಹೇಳಿದರು.

ಬುಧವಾರ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿ, ಲೈಫ್ ಈಶ ಎ ಜರ್ನಿ; ಎಂಬ್ರೇಸ್ ಇಟ್, ಟೆನ್ ಕಮಾಂಡ್ಮೆಂಟ್ಸ್ ಫಾರ್ ವರ್ಥಿ ಲಿವಿಂಗ್, ಜೀವನ್ ಏಕ್ ಪಾಠಶಾಲಾ ಮತ್ತು ಶ್ರೇಷ್ಠ ಜೀವನಕ್ಕೆ ಹತ್ತು ಆದರ್ಶಗಳು ಕೃತಿ ಬಿಡುಗಡೆಗೊಳ್ಳಲಿವೆ ಎಂದರು.

ಮಕ್ಕಳ ತಜ್ಞ ಡಾ.ದೇಶಪಾಂಡೆ ಅವರ ಪುಸ್ತಕಗಳು ಜೀವನ, ಸಂಬಂಧಗಳು, ಶಿಸ್ತು, ಸಹಾನುಭೂತಿ ಹಾಗೂ ಉದ್ದೇಶಪೂರಕ ಜೀವನದ ಬಗ್ಗೆ ಅವರ ಆಳವಾತ ತಿಳುವಳಿಕೆ ಪ್ರತಿಬಿಂಬಿಸುತ್ತವೆ. ಪದ್ಮಶ್ರೀ, ಸಾಹಿತಿ ಡಾ.ಗಣೇಶ ದೇವಿ ಕೃತಿ ಬಿಡುಗಡೆ ಮಾಡುವುದಾಗಿ ಹೇಳಿದರು. ಸಾಹಿತಿಗಳಾದ ಡಾ.ಸಿದ್ಧಲಿಂಗ ಪಟ್ಟಣಶೆಟ್ಟಿ, ರಾಘವೇಂದ್ರ ಪಾಟೀಲ, ಪ್ರಮೋದ ಚೌಗುಳೆ, ಜಯ ಕುರ್ಹೇಕರ್ ಹಾಗೂ ಪ್ರಕಾಶಕ ಎಂ.ಎ.ಸುಬ್ರಹ್ಮಣ್ಯ ಪಾಲ್ಗೊಳ್ಳಲಿದ್ದು, ಬೆಳಗ್ಗೆ ಡಾ. ಶ್ರೀಧರ ಕುಲಕರ್ಣಿ ಅವರಿಂದ ಸಂಗೀತ ಕಾರ್ಯಕ್ರಮ ಜರುಗಲಿದೆ ಎಂದರು.

ಲೇಖಕ ಡಾ.ರಾಜನ್ ದೇಶಪಾಂಡೆ, ಸುದ್ದಿಗೋಷ್ಠಿಯಲ್ಲಿ ಕವಿತಾ ದೇಶಪಾಂಡೆ, ಸಿ.ಯು.ಬೆಳ್ಳಕ್ಕಿ, ಸತೀಶ ಪರ್ವತಿಕರ, ಶ್ರೀನಿವಾಸ ವಾಡಪ್ಪಿ, ಡಾ.ಕವನ ದೇಶಪಾಂಡೆ, ಪಲ್ಲವಿ ದೇಶಪಾಂಡೆ ಇದ್ದರು.



ರಾಜ್ಯಮಟ್ಟದ ಕಾರ್ಯಾಗಾರ | ಶಾಸಕ ಶಿವರಾಮ್ ಹೆಬ್ಬಾರ್ ಹೇಳಿಕೆ

ಪರಿಸರ ಮಾರಕ ಯೋಜನೆ ವಿರೋಧಿಸೋಣ



ಯಲ್ಲಾಪುರ: ಪಂಚ ನದಿಗಳಿಗೆ ಜನ್ಮಕೊಟ್ಟ, 6 ಡ್ಯಾಮ್‌ಗಳಿಗೆ ಶಕ್ತಿಕೊಟ್ಟ ರಾಜ್ಯದಲ್ಲಿಯೇ ಅತೀ ಹೆಚ್ಚು ವಿದ್ಯುತ್ ಉತ್ಪಾದಿಸುವ ಉತ್ತರ ಕನ್ನಡ ಜಿಲ್ಲೆ ತ್ಯಾಗದ ಪರಿಣಾಮ ಮಾತ್ರ ಯಕ್ಷ ಪ್ರಶ್ನೆಯಾಗಿದೆ ಎಂದು ಶಾಸಕ ಶಿವರಾಮ್ ಹೆಬ್ಬಾರ್ ಹೇಳಿದರು.

ಅವರು ಬುಧವಾರ ಪಟ್ಟಣದ ತಾಲೂಕು ಪಂಚಾಯತ್ ಸಭಾಭವನದಲ್ಲಿ ಜೀವ ವೈವಿಧ್ಯ ಮಂಡಳಿ ಬೆಂಗಳೂರು, ತಾಲೂಕು ಪಂಚಾಯತ ಜೀವವೈವಿಧ್ಯ ಸಮಿತಿ,ವೃಕ್ಷ ಲಕ್ಷ ಆಂದೋಲನ ಇವರ ಆಶ್ರಯದಲ್ಲಿ ಅಂತರಾಷ್ಟ್ರೀಯ ಜೀವವೈವಿಧ್ಯ ದಿನಾಚರಣೆ ನಿಮಿತ್ತ ಹಮ್ಮಿಕೊಂಡಿದ್ದ ಪಶ್ಚಿಮ ಘಟ್ಟದ ಜೀವವೈವಿಧ್ಯ ಪರಿಸರ ಅರಣ್ಯ,ಅಧ್ಯಯನಗಳು ಕುರಿತ ರಾಜ್ಯಮಟ್ಟದ ಒಂದು ದಿನದ ಕಾರ್ಯಾಗಾರವನ್ನು ಗಿಡಕ್ಕೆ ನೀರೆರೆಯುವ ಮೂಲಕ ಉದ್ಘಾಟಿಸಿ ಮಾತನಾಡಿ, ಬೇಡ್ತಿ ಆರಂಭದಿಂದ ಇಂದಿನವರೆಗೂ ಹತ್ತು ಹಲವು ಹೋರಾಟ ನಡೆದಿದೆ. ಆದರೆ, ಪಕ್ಷಾತೀತವಾಗಿ ಧರ್ಮಪೀಠದ ನೇತೃತ್ವದಲ್ಲಿ ನಡೆಸಿದ ಹೋರಾಟ ಯಶಸ್ವಿಯಾಗಿದ್ದು, ಅದರಂತೆ ಇದೀಗ ಬೇಡ್ತಿ ನದಿ ತಿರುವು ಹೋರಾಟ ಸ್ವಾಮೀಜಿಯವರ ನೇತೃತ್ವದಲ್ಲಿ ಗಟ್ಟಿ ಹೆಜ್ಜೆ ಇಟ್ಟಿದ್ದು ಅದು ಯಶಸ್ವಿಯಾಗುತ್ತದೆ ಎಂದರು.

ಜಿಲ್ಲೆಗೆ ದೊಡ್ಡದೊಡ್ಡ ಯೋಜನೆಗಳು ಬಂದಾಗ ಪಕ್ಷಾತೀತವಾಗಿ ಒಂದಾಗಿ ಅದನ್ನು ವಿರೋಧಿಸುವ ಮೂಲಕ ಇನ್ನಾದರೂ ಜಿಲ್ಲೆಯ ಪರಿಸರ ಮೇಲಿನ ಅತ್ಯಾಚಾರವನ್ನು ನಿಲ್ಲಿಸಬೇಕು ಎಂದರು.

ಪ್ರತಿ ಗ್ರಾ.ಪಂಗೆ ಜೀವ ವೈವಿಧ್ಯ ಪಾರ್ಕ್ ನಿರ್ಮಾಣ

ಅಪಾರವಾದ ಅರಣ್ಯ ಸಂಪತ್ತನ್ನು ಉಳಿಸಿಕೊಳ್ಳಬೇಕು ನಾವು ಹೇಗೆ ಉತ್ತಮ ವಾತಾವರಣದಲ್ಲಿ ಬೆಳೆದಿದ್ದೇವೆಯೋ ಅದೇ ರೀತಿ ಮುಂದಿನ ಪೀಳಿಗೆಗೆ ದೊರೆಯುವಂತೆ ಕಾಪಿಟ್ಟು ಕೊಳ್ಳಬೇಕು. ಮುಂದಿನ ದಿನಗಳಲ್ಲಿ ಗ್ರಾಪಂ ಗೊಂದರಂತೆ ಜೀವಿ ವೈವಿಧ್ಯ ಪಾರ್ಕ್ ನಿರ್ಮಿಸುವ ಉದ್ದೇಶವಿದೆ ಎಂದು ಕರ್ನಾಟಕ ಜೀವ ವೈವಿಧ್ಯ ಮಂಡಳಿ ಅಧ್ಯಕ್ಷ ವಡ್ನಾಳ ಜಗದೀಶ ಹೇಳಿದರು.

ಕೆನರಾ ವೃತ್ತ ಅರಣ್ಯ ಸಂರಕ್ಷಣಾಧಿಕಾರಿ ಹೀರಾಲಾಲ್ ಮಾತನಾಡಿ, ಜಗತ್ತಿನಲ್ಲಿ 36 ಜೀವವೈವಿಧ್ಯತೆಯ ಹಾಟ್ ಸ್ಪಾಟ್ ಗಳಿದ್ದು ಭಾರತದಲ್ಲಿಯೇ 4 ಇದ್ದು ದೇಶದ ಕೀರ್ತಿ ಹೆಚ್ಚಿಸಿದೆ.ನಮ್ಮ ಜಿಲ್ಲೆಯಲ್ಲಿಯೇ ಶೇ 20ರಷ್ಟು ಜೀವ ವೈವಿಧ್ಯತೆ ಇದೆ.ಇದನ್ನೆಲ್ಲಾ ಅರಿತು ಅದನ್ನು ಸಂರಕ್ಷಣೆ ಮಾಡಿಕೊಳ್ಳಬೇಕು ಎಂದರು.

ಡಿ ಎಫ್ ಓ ಅಜೀಜ್ ಶೇಖ, ತಾ ಪಂ ಆಡಳಿತಧಿಕಾರಿ ವೇದಿಕೆಯಲ್ಲಿ ಉಪಸ್ಥಿರಿದ್ದರು. ವೃಕ್ಷ ಲಕ್ಷ ಅಂದೋಲನದ ಮುಖ್ಯಸ್ಥ ಅನಂತ ಹೆಗಡೆ ಅಶೀಸರ ಪ್ರಾಸ್ತವಿಕ ಮಾತನಾಡಿದರು. ಪಶ್ಚಿಮ ಘಟ್ಟದ ಅಧ್ಯಯನ ಕುರಿತುಪರಿಸರ ವಿಜ್ಞಾನಿಗಳಾದ ಡಾ.ಕೇಶವ ಕುರ್ಸೆ, ಡಾ.ಟಿ.ವಿ. ರಾಮಚಂದ್ರ, ಡಾ. ವಿ.ಎನ್. ನಾಯ್ಕ, ಡಾ.ಪ್ರಕಾಶ ಮೇಸ್ತ, ಡಾ. ಬಾಲಚಂದ್ರ ಸಾಯಿಮನೆ. ಡಾ. ಪ್ರೀತಮ್ ಬೆಂಗಳೂರು , ಡಾ.ಶಿವಾನಂದ್ ಭಟ್ ಸಾಗರ್, ವಿಷಯ ಮಂಡನೆ ಮಾಡಿದರು. ಇದೇ ಸಂದರ್ಭದಲ್ಲಿ ಜೀವ ವೈವಿಧ್ಯ ರಕ್ಷಣೆಗೆ ಕೊಡುಗೆ ನೀಡಿರುವ ಸಾಧಕರಿಗೆ ಸನ್ಮಾನ ನಡೆಯಿತು.

ಕೆ.ಎಸ್. ಭಟ್ ಅನಗೋಡ್ ನಿರ್ವಹಿಸಿದರು. ಶ್ರೀಲತಾ ಹೆಗಡೆ ಹಾಗೂ ಸಂಗಡಿಗರು ಪ್ರಾರ್ಥಿಸಿದರು. ತಾಪಂ ಕಾರ್ಯ ನಿರ್ವಹಣಾಧಿಕಾರಿ ರಾಜೇಶ್ ಧನವಾಡಕರ್ ಸ್ವಾಗತಿಸಿದರು. ನರಸಿಂಹಸಾತೋಡ್ಡಿ ವಂದಿಸಿದರು. ಇದೆ ಸಂದರ್ಭದಲ್ಲಿ ವಿವಿಧ ಗಿಡಮೂಲಿಕೆ,ಭತ್ತದ ತಳಿ, ಅರಣ್ಯ ಉತ್ಪನ್ನ ಗಳ ವಸ್ತು ಪ್ರದರ್ಶನ ನಡೆಯಿತು.

ಪಾಲಿಕೆ ಹೋರಾಟಕ್ಕೆ ಮೊದಲ ಜಯ | ಜೂ.9ರವರೆಗೆ ಸರ್ಕಾರಕ್ಕೆ ಗಡುವು

ಧಾರವಾಡ ಬಂದ್‌ಗೆ ತಾತ್ಕಾಲಿಕ ತಡೆ

ಧಾರವಾಡ: ಪ್ರತ್ಯೇಕ ಪಾಲಿಕೆ ರಚನೆ ಹೋರಾಟಕ್ಕೆ ಕೊನೆಗೂ ಮಹತ್ವದ ತಿರುವು ಸಿಕ್ಕಿದೆ. ಪ್ರತ್ಯೇಕ ಪಾಲಿಕೆ ರಚನೆಗೆ ರಾಜ್ಯಪಾಲರಾದ ಥಾವರಚಂದ್ ಗೆಹ್ಲೋಟ್ ಅಂಕಿತ ಹಾಕಿದ್ದು, ಮೇ 30ಕ್ಕೆ ಕರೆ ನೀಡಿದ ಧಾರವಾಡ ಬಂದ್ ತಾತ್ಕಾಲಿಕವಾಗಿ ಹಿಂಪಡೆದಿದೆ.

ಇಲ್ಲಿನ ಕರ್ನಾಟಕ ವಿದ್ಯಾವರ್ಧಕ ಸಂಘದಲ್ಲಿ ರಾ.ಹ.ದೇಶಪಾಂಡೆ ಸಭಾಂಗಣದಲ್ಲಿ ಬುಧವಾರ ಹೋರಾಟಗಾರ ಬಿ.ಡಿ.ಹಿರೇಮಠ ನೇತೃತ್ವದಲ್ಲಿ ನಡೆದ ಸ್ವಾಭಿಮಾನಿ ಪಕ್ಷಾತೀತ ಪಾಲಿಕೆಯ ಹೋರಾಟ ಸಮಿತಿ ಸಭೆಯಲ್ಲಿ ಈ ಮಹತ್ವದ ನಿರ್ಧಾರ ಕೈಗೊಂಡಿದೆ.

ಸರ್ಕಾರಕ್ಕೆ ಗಡುವು: ರಾಜ್ಯಪಾಲರು ಅಂಕಿತ ಹಾಕಿದ್ದರಿಂದ ಧಾರವಾಡಿಗರ ಸ್ವಾಭಿಮಾನಿ ಹೋರಾಟಕ್ಕೆ ಮೊದಲ ಯಶಸ್ಸು ಸಿಕ್ಕಿದೆ. ಆದರೆ, ಪ್ರತ್ಯೇಕ ಪಾಲಿಕೆ ಅಧಿಕೃತವಾಗಿ ಅಸ್ತಿತ್ವಕ್ಕೆ ಬರುವಲ್ಲಿ ಸರ್ಕಾರದಿಂದ ಅಂತಿಮ ಗೆಜೆಟ್ ನೋಟಿಫಿಕೇಶನ್ (ಅಧಿಸೂಚನೆ) ಹೊರಬೀಳಬೇಕಿದೆ.

ಕಾಂಗ್ರೆಸ್ ಜವಾಬ್ದಾರಿ: ಸಭೆಯಲ್ಲಿ ಅಧಿಸೂಚನೆ ಹೊರಡಿಸುವ ಬಗ್ಗೆ ಸುದೀರ್ಘ ಚರ್ಚೆ ನಡೆಯುವ ಜೊತೆ ಸರ್ಕಾರಕ್ಕೆ ಜೂ.9ರವರೆಗೆ ಗಡುವು ನೀಡಿತು. ಅಂತಿಮ ಅಧಿಸೂಚನೆ ಕಾಂಗ್ರೆಸ್‌ನ ಪಾಲಿಕೆಯ ಸದಸ್ಯರೇ, ರಾಜ್ಯ ಸರ್ಕಾರದ ಮೇಲೆ ಒತ್ತಡ ಹೇರುವ ನಿರ್ಣಯವೂ ಅಂಗೀಕರಿಸಿತು.

ಒಂದು ವೇಳೆ ವಿಳಂಬ ಧೋರಣೆ ಅನುಸರಿಸಿದರೆ, ಪುನಃ ಉಗ್ರ ಹೋರಾಟ ಅನಿವಾರ್ಯದ ಎಚ್ಚರಿಸಿದ ಸಭೆ, ಮೇ 29ಕ್ಕೆ ಬೃಹತ್ ಬೈಕ್ ರ‍್ಯಾಲಿ ನಡೆಸುವ, ಮೇ 30ಕ್ಕೆ ಕರೆ ನೀಡಿದ ಧಾರವಾಡ ಬಂದ್ ತಾತ್ಕಾಲಿಕ ಹಿಂಪಡೆ ನಿರ್ಧಾರವನ್ನು ಪ್ರಕಟಿಸಿತು.

ಪಕ್ಷಾತೀತ ಸತ್ಯಾಗ್ರಹ: ಧಾರವಾಡ ಪ್ರತ್ಯೇಕ ಪಾಲಿಕೆ ರಚನೆಯಾಗವರೆಗೂ ನಡೆಯುವ ಅನಿರ್ದಿಷ್ಟಾವಧಿ ಸತ್ಯಾಗ್ರಹದಲ್ಲಿ ಬಿಜೆಪಿ, ಕಾಂಗ್ರೆಸ್ ಹಾಗೂ ಜೆಡಿಎಸ್ ಪಕ್ಷಗಳು ತಮ್ಮ ಸಿದ್ಧಾಂತ ಕೈಬಿಟ್ಟು, ಸರ್ವ ಸದಸ್ಯರು ಪಾಕ್ಷಾತೀತವಾಗಿ ನಿರಂತರ ಬೆಂಬಲಿಸಿವ ನಿರ್ಣಯ ಅಂಗೀಕರಿಸಿತು.



ಕೈ-ಕಮಲ ಕ್ರೆಡಿಟ್ ವಾರ್!

ಧಾರವಾಡ ಪ್ರತ್ಯೇಕ ಪಾಲಿಕೆ ರಚನೆ ಕ್ರೆಡಿಟ್ ತಮಗೆ ಸಿಗಬೇಕು ಎಂದು ಕಮಲ ಮತ್ತು ಕೈ ಪಾಳೆಯ ನಡುವೆ ವಾಗ್ವಾದ ಸೃಷ್ಟಿಯಾಗಿದ್ದು, ನಮ್ಮ ಸಚಿವ ಸಂಪುಟದ ನಿರ್ಧಾರದಿಂದ ಪಾಲಿಕೆ ರಚನೆ ಸಾಧ್ಯವಾಗಿದೆ ಎಂಬುದು ಕಾಂಗ್ರೆಸ್ ಮುಖಂಡರ ವಾದಕ್ಕೆ ಬಿಜೆಪಿ ಮುಖಂಡರು, ನಮ್ಮ ನಾಯಕರು ಒತ್ತಡದಿಂದಾಗಿ ರಾಜ್ಯಪಾಲರು ಅಂಕಿತ ಹಾಕಿದ್ದಾರೆ ಎಂದಾಗ ಮಾತಿನ ಚಕಮಕಿ ಜೋರಾಗಿ ಕೆಲಕಾಲ ಉದ್ವಿಗ್ನ ಪರಿಸ್ಥಿತಿ ನಿರ್ಮಾಣವಾಯಿತು. ಪರಿಸ್ಥಿತಿ ಕೈ ಮೀರುವುದು ಅರಿತ ಬಿ.ಡಿ.ಹಿರೇಮಠ, ಉಭಯ ಪಕ್ಷಗಳ ಮುಖಂಡರನ್ನು ತರಾಟೆ ತೆಗೆದುಕೊಂಡು ಶಾಂತಿಯುತವಾಗಿ ವರ್ತಿಸಲು ತಾಕೀತು ಮಾಡಿ, ಸಭೆ ನಡೆಸಿದರು.

> ಇದು ಯಾವುದೇ ರಾಜಕೀಯ ಹೋರಾಟವಲ್ಲ, ಇದು ಇಡೀ ಧಾರವಾಡ ಜನತೆ ಸ್ವಾಭಿಮಾನದ ಹೋರಾಟ. ಇಲ್ಲಿ ರಾಜಕಾರಣ ತರುವುದು ಬೇಡ. ರಾಜ್ಯಪಾಲರು ಅಂಕಿತ ಬಿದ್ದಿದ್ದು ಮೊದಲ ಹಂತ, ಇನ್ನು ಸರ್ಕಾರದ ಗೆಜೆಟ್ ನೋಟಿಫಿಕೇಶನ್ ಆಗಬೇಕಿದೆ. ಅಲ್ಲಿವರೆಗೆ ನಾವೆಲ್ಲರೂ ಸಹ ಪಕ್ಷಾತೀತವಾಗಿ ಒಂದಾಗಿ ನಿಲ್ಲಬೇಕು.
>
> ■ ಬಿ.ಡಿ.ಹಿರೇಮಠ, ಹೋರಾಟಗಾರ

ಮತದಾರರ ಪಟ್ಟಿ ಪರಿಷ್ಕರಣೆ ಆರಂಭ | ಶಾಸಕ ಮಹೇಶ ಟೆಂಗಿನಕಾಯಿ ಹೇಳಿಕೆ

ಬಿಎಲ್‌ಒಗಳು ಸಕ್ರಿಯವಾಗಿ ಪಾಲ್ಗೊಳ್ಳಲಿ



ಹುಬ್ಬಳ್ಳಿ: ಮತದಾರರ ಪಟ್ಟಿ ಪರಿಷ್ಕರಣೆ ರಾಜ್ಯದಲ್ಲಿ ಆರಂಭವಾಗಲಿದ್ದು, ಪಕ್ಷದ ಎಲ್ಲ ಬಿಎಲ್‌ಎಗಳು ತಮ್ಮ ವಾರ್ಡ್, ಬೂತ್ ಗಳಲ್ಲಿ ಸಕ್ರಿಯವಾಗಿ ಈ ಪ್ರಕ್ರಿಯೆಯಲ್ಲಿ ತೊಡಗಬೇಕು ಎಂದು ಶಾಸಕ ಮಹೇಶ ಟೆಂಗಿನಕಾಯಿ ತಿಳಿಸಿದರು.

ಬುಧವಾರ ಇಲ್ಲಿಯ ಕಾರವಾರ ರಸ್ತೆ ಬಿಜೆಪಿ ಕಚೇರಿಯಲ್ಲಿ ಹುಬ್ಬಳ್ಳಿ ಸೆಂಟ್ರಲ್ ಕ್ಷೇತ್ರದ ಸಂಘಟನಾತ್ಮಕ ಸಭೆಯಲ್ಲಿ ಕ್ಷೇತ್ರದ ವಾರ್ಡ್ ಅಧ್ಯಕ್ಷರು, ಬಿಎಲ್‌ಎ-2 ಗಳ ಸಭೆಯಲ್ಲಿ ಭಾಗವಹಿಸಿ ಮಾತನಾಡಿದರು.

ಈಗಾಗಲೇ ಪ್ರಶಿಕ್ಷಣ ವರ್ಗಗಳು ಮುಕ್ತಾಯಗೊಂಡಿವೆ. ಎಲ್ಲ ಅಪೇಕ್ಷಿತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಎರಡು ದಿನ ಶಿಬಿರದಲ್ಲಿ ಪಾಲ್ಗೊಂಡುಯಶಸ್ವಿಗೊಳಿಸಲಾಗಿದೆ ಎಂದರು.

ಪಕ್ಷದಲ್ಲಿ ಸಂಘಟನೆಯ ಕಾರ್ಯ ಮುಖ್ಯ. ನಾವೆಲ್ಲ ಪಕ್ಷ ಸಂಘಟನೆಯಿಂದ ಈ ಮಟ್ಟಕ್ಕೆ ಬೆಳೆದವರು. ತಾವು ಪ್ರತಿಯೊಬ್ಬರೂ ಪಕ್ಷ ನಿಷ್ಠೆಯಿಂದ ಕೆಲಸವನ್ನು ಮಾಡಬೇಕು. ಕೇಂದ್ರದಲ್ಲಿ ಪ್ರಧಾನಿ ಮೋದಿ ನೇತೃತ್ವದ ಎನ್‌ಡಿಎ ಸರ್ಕಾರದ ಸಾಧನೆಗಳನ್ನು ಜನರ ಮನೆಮನೆಗಳಿಗೆ ತಿಳಿಸುವ ಕಾರ್ಯ ಮಾಡಬೇಕು ಎಂದು ಹೇಳಿದರು.

ಅಧ್ಯಕ್ಷತೆಯನ್ನು ಸೆಂಟ್ರಲ್ ಕ್ಷೇತ್ರದ ಅಧ್ಯಕ್ಷ ರಾಜು ಕಾಳೆ ವಹಿಸಿದ್ದರು.ಉಪಮಹಾಪೌರರಾದ ಸಂತೋಷ್ ಚೌಹಾಣ್, ಕ್ಷೇತ್ರದ ಬಿ ಎಲ್ ಎ ಪ್ರಶಾಂತ ಜಾದವ, ರಾಮನಗೌಡ ಶೆಟ್ಟನ ಗೌಡರ್, ಪಾಲಿಕೆಯ ಸದಸ್ಯ ಮಲ್ಲಿಕಾರ್ಜುನ್ ಗುಂಡೂರ, ರಾಜಣ್ಣ ಕೊರವಿ, ಉಮೇಶ್ ಗೌಡ ಕೌಜಗೇರಿ, ಎಂ. ವೈ.ನರಗುಂದ, ಭೀರಪ್ಪ ಖಂಡೇಕರ, ಉಮಾ ಮುಕುಂದ, ರೂಪಾ ಶೆಟ್ಟಿ, ರವಿ ನಾಯಕ ಇದ್ದರು.

42 ಗ್ರಾಂ ಬಂಗಾರ ಕದ್ದಿದ್ದ ಕಳ್ಳನ ಬಂಧನ

ಬೆಳಗಾವಿ: ತಾಲೂಕಿನ ಶಿಂದೊಳ್ಳಿ ಗ್ರಾಮದ ಮಹಾಲಕ್ಷ್ಮೀಪುರಂ ನಗರದಲ್ಲಿರುವ ಮನೆ ಬಾಗಿಲು ಮುರಿದು 42 ಗ್ರಾಂ ಬಂಗಾರದ ಆಭರಣ ಕಳ್ಳತನ ಮಾಡಿದ್ದ ಆರೋಪಿಯನ್ನು ಪೊಲೀಸರು ಮಾರಿಹಾಳ ಪೊಲೀಸರು ಬಂಧಿಸಿದ್ದಾರೆ. ವಿಶ್ವನಾಥ ದುರ್ಗಪ್ಪ ಮುತ್ತೂರ (26) ಬಂಧಿತ ಆರೋಪಿ. ಆರೋಪಿ ವಿರುದ್ಧ ಮಾರಿಹಾಳ ಪೊಲೀಸ ಠಾಣೆಯ 3 ಪ್ರಕರಣಗಳು ಹಾಗೂ 1 ಕಾಕತಿ ಪೊಲೀಸ ಠಾಣೆ ಮನೆ ಕಳ್ಳತನ ಪ್ರಕರಣದಲ್ಲಿ ಭಾಗಿಯಾಗಿದ್ದು ತನಿಖೆಯಲ್ಲಿ ಬಯಲಾಗಿದೆ. ಆರೋಪಿಯಿಂದ ಸುಮಾರು 23,00,000 ರೂ ಬೆಲೆಯ 134 ಗ್ರಾಂ ಬಂಗಾರದ ಆಭರಣಗಳು ಮತ್ತು 510 ಗ್ರಾಂ ಬೆಳ್ಳಿಯ ಆಭರಣಗಳನ್ನು ಜಪ್ತ ಮಾಡಿ ನ್ಯಾಯಾಲಯಕ್ಕೆ ಹಾಜರಪಡಿಸಲಾಗಿದೆ.



ಪಾಲಿಕೆ ರಚನೆಗೆ ಕೈ ಬದ್ಧತೆ ತೋರಲಿ: ಜ್ಯೋತಿ

ಧಾರವಾಡ: ಪ್ರತ್ಯೇಕ ಪಾಲಿಕೆ ರಚನೆಗೆ ರಾಜ್ಯಪಾಲರು ಅನುಮೋದನೆ ನೀಡಿದ್ದು, ಕೂಡಲೇ ಸರ್ಕಾರದ ಮೇಲೆ ಒತ್ತಡ ತಂದು ಧಾರವಾಡ ಪ್ರತ್ಯೇಕ ಪಾಲಿಕೆ ರಚನೆಗೆ ಕಾಂಗ್ರೆಸ್ ಬದ್ಧತೆ ತೋರಲಿ ಎಂದು ಮೇಯರ್ ಜ್ಯೋತಿ ಪಾಟೀಲ್ ಆಗ್ರಹ ಮಾಡಿದರು.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಕಳೆದ 16 ತಿಂಗಳಿಂದ ಮೌನವಿದ್ದ ಕಾಂಗ್ರೆಸ್ ಇದ್ದಕ್ಕಿದ್ದಂತೆ ರಾಜಕೀಯ ಮಾಡುತ್ತಿದೆ. ತನ್ನ ತಪ್ಪು ಮುಚ್ಚಿಕೊಳ್ಳಲು ಬಿಜೆಪಿ ಕಡೆಗೆ ಬೊಟ್ಟು ಮಾಡುವುದು ಸಲ್ಲ. ಕಾಂಗ್ರೆಸ್ ಹೋರಾಟ ಬರೀ ನಾಟಕ ಎಂದರು.

ಕಳೆದ 12 ದಿನಗಳಿಂದ ಪ್ರತ್ಯೇಕ ಪಾಲಿಕೆಗೆ ಹೋರಾಟ ನಡೆಯುತ್ತಿದೆ. ಈ ವೇಳೆ ಕಾಂಗ್ರೆಸ್ ಮುಖಂಡರು ರಾಜ್ಯಪಾಲರ ಅಂಕಿತ ಹಾಕಿಸಿದರೆ, 48 ಗಂಟೆಯಲ್ಲಿ ಸರ್ಕಾರದಿಂದ ನೋಟಿಫಿಕೇಶನ್ ಹೊರಡಿಸುವ ಬಡಾಯಿ ಕೊಚ್ಚಿಕೊಂಡಿದ್ದಾಗಿ ದೂರಿದರು.

ಇದೀಗ ನಾವು ನಮ್ಮ ಕೆಲಸ ಮಾಡಿದ್ದೇವೆ. ರಾಜ್ಯಪಾಲರು ಕಡತಕ್ಕೆ ಸಹಿ ಹಾಕಿಸಿ ಕೊಟ್ಟಿದ್ದಾರೆ. ಕೂಡಲೇ ಧಾರವಾಡ ಪ್ರತ್ಯೇಕ ಪಾಲಿಕೆ ರಚಿಸಿ ಜನರ ಆಶಯಗಳಿಗೆ ಮನ್ನಣೆ ನೀಡುವ ಕೆಲಸ ಕಾಂಗ್ರೆಸ್ ಮಾಡಬೇಕು ಎಂದು ಪಾಟೀಲ್ ಒತ್ತಾಯ ಮಾಡಿದರು.

ಅನುದಾನ ಬರದ ಕಾರಣ ಬೃಹತ್ ಮಹಾನಗರ ಪಾಲಿಕೆಗೆ ಒಲವು ತೋರಿತ್ತು. ಆದರೆ ಜನರ ಆಶಯ ಪ್ರತ್ಯೇಕ ಪಾಲಿಕೆ ಬೇಕೆಂಬುದಿದೆ. ಆದ್ದರಿಂದಲೇ ಪ್ರತ್ಯೇಕ ಪಾಲಿಕೆಗೆ ಬೆಂಬಲ ನೀಡಿ ಹೋರಾಟದಲ್ಲಿ ಪಾಲ್ಗೊಂಡಿದ್ದೇವೆ ಎಂದು ಮೇಯರ್ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಪಾಲಿಕೆ ಸದಸ್ಯರಾದ ಸಂಜಯ ಕಪಟಕರ್, ಶಂಕರ ಶೆಳಕೆ, ವಿಜಯಾನಂದ ಶೆಟ್ಟಿ, ಸುರೇಶ ಬೇದರೆ ಇದ್ದರು.

> ಮೈಸೂರು ಬೃಹತ್ ಮಹಾನಗರ ಪಾಲಿಕೆ ಮಾಡುವ ಉದ್ದೇಶದಿಂದಾಗಿ ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯನ್ನು ಇಬ್ಭಾಗ ಮಾಡಲಾಗುತ್ತಿದೆ. ಇದರ ಹಿಂದೆ ಮುಖ್ಯಮಂತ್ರಿ ಸಿದ್ದರಾಮಯ್ಯರ ಕೈವಾಡವಿದೆ.
>
> ■ ಜ್ಯೋತಿ ಪಾಟೀಲ್, ಮೇಯರ್

> ಪ್ರತ್ಯೇಕ ಪಾಲಿಕೆ ರಚನೆ ಬಗ್ಗೆ ಈ ಹಿಂದಿನ ಜಿಲ್ಲಾಧಿಕಾರಿಗಳು ಸರಿಯಾಗಿ ಮಾಹಿತಿ ನೀಡಿಲ್ಲ. ಹೀಗಾಗಿ ರಾಜ್ಯಪಾಲರಿಗೆ ಕಾನೂನು ಸಲಹೆ ಆಗತ್ಯವಿತ್ತು. ಹೀಗಾಗಿ ಅಲ್ಲಿ ವಿಳಂಭವಾಗಿದೆ. ಕಾಂಗ್ರೆಸ್ ಸರ್ಕಾರ 11 ತಿಂಗಳು ಸುಮ್ಮನೆ ಕುಳಿತಿದ್ದು ಏಕೆ?
>
> ■ ಶಿವು ಹಿರೇಮಠ, ಪಾಲಿಕೆ ಸದಸ್ಯ

ಮಹಿಳಾ ಸ್ವಾವಲಂಬನೆಯ ಹಾದಿ, ಕರ್ನಾಟಕದ ಮಾದರಿ

ಕಲ್ಪವೃಕ್ಷವಾದ 'ಗೃಹಲಕ್ಷ್ಮಿ' | ಶೋಷಿತರ ಬದುಕಿಗೆ ಸ್ವಾಭಿಮಾನದ ಬೆಳಕು



ಗ್ಯಾರಂಟಿ ವಾರ್ತೆ

ಬೆಂಗಳೂರು: 'ನಾನು ತೃತೀಯಲಿಂಗಿಯಾಗಿರುವ ಕಾರಣ ಸಮಾಜ ನಮ್ಮನ್ನು ನೋಡುವ ದೃಷ್ಟಿಯೇ ಬೇರೆಯಾಗಿತ್ತು. ಇಷ್ಟು ವರ್ಷ ಕಷ್ಟ-ನೋವುಗಳನ್ನು ಸಹಿಸಿಕೊಂಡಿದ್ದ ನನಗೆ ಆಸರೆಯಾಗಿದ್ದೇ ಕರ್ನಾಟಕ ಸರ್ಕಾರದ 'ಗೃಹಲಕ್ಷ್ಮಿ' ಯೋಜನೆ. ಪ್ರತಿ ತಿಂಗಳು ಬರುತ್ತಿರುವ ಹಣದಿಂದಲೇ ನಾನೀಗ ಹಣ್ಣಿನ ಅಂಗಡಿ ಇಟ್ಟುಕೊಂಡು ಗೌರವದಿಂದ ಜೀವನ ನಡೆಸುತ್ತಿದ್ದೇನೆ. ಅಂದು ನಮ್ಮನ್ನು ಹೀಗಳೆಯುತ್ತಿದ್ದವರೆಲ್ಲಾ ಇಂದು ಪ್ರೀತಿಯಿಂದ 'ಅಕ್ಕಾ' ಎಂದು ಕರೆಯುತ್ತಿದ್ದಾರೆ...' ಇದು ಕಲಬುರಗಿಯ ಸಪ್ನಾ ಅವರ ಮನದಾಳದ ಮಾತುಗಳು.

ಸಪ್ನಾರಂತಹ ಲಕ್ಷಾಂತರ ಶೋಷಿತ ಹಾಗೂ ಕೋಟ್ಯಂತರ ಗೃಹಿಣಿಯರ ಬದುಕಿನಲ್ಲಿ ಸ್ವಾಭಿಮಾನದ ಬೆಳಕು ಚೆಲ್ಲಿರುವುದು ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರದ 'ಗೃಹಲಕ್ಷ್ಮಿ' ಯೋಜನೆ. ಮಹಿಳೆ ಆರ್ಥಿಕವಾಗಿ ಸಬಲಳಾದರೆ ಇಡೀ ಕುಟುಂಬವೇ ಪ್ರಗತಿಯ ಹಾದಿಯಲ್ಲಿ ಸಾಗುತ್ತದೆ ಎಂಬ ಉದಾತ್ತ ಚಿಂತನೆಯೊಂದಿಗೆ ಜಾರಿಗೆ ತಂದ ಈ ಮಹತ್ವಾಕಾಂಕ್ಷಿ ಯೋಜನೆಗೆ 2023ರ ಆಗಸ್ಟ್ 30ರಂದು ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ಐತಿಹಾಸಿಕ ಚಾಲನೆ ನೀಡಲಾಗಿತ್ತು. ಇಂದು ಈ ಯೋಜನೆ ಯಶಸ್ವಿಯಾಗಿ ಮೂರು ವರ್ಷ ಪೂರೈಸಿದ್ದು, ನಾಡಿನ ಮನೆ-ಮನಗಳ ಆರ್ಥಿಕ ಶಕ್ತಿಯಾಗಿ ಹೊರಹೊಮ್ಮಿದೆ.

ಮಾಸಿಕ ಗೌರವಧನ, ಮಹಿಳಾ ಸಬಲೀಕರಣದ ಹೊಸ ಆಯಾಮ

ಮನೆಯ ಯಜಮಾನಿ ತನಗೆ ಬೇಕಾದ ಸಣ್ಣಪುಟ್ಟ ಅಗತ್ಯಗಳಿಗೂ ಇತರರ ಮುಂದೆ ಕೈಚಾಚಬಾರದು ಎಂಬ ದೃಢ ಸಂಕಲ್ಪದೊಂದಿಗೆ ಈ ಯೋಜನೆಯನ್ನು ಆರಂಭಿಸಲಾಗಿದೆ. ಅರ್ಹ ಮಹಿಳೆಯರ ಖಾತೆಗೆ ಪ್ರತಿ ತಿಂಗಳು ₹2,000 ನಗದು ಹಣವನ್ನು ನೇರವಾಗಿ ಜಮೆ (DBT) ಮಾಡಲಾಗುತ್ತಿದೆ. ಇದು ಕೇವಲ ಉಚಿತ ಹಣವಲ್ಲ, ಬದಲಿಗೆ ದಿನವಿಡೀ ಸಂಸಾರಕ್ಕಾಗಿ ಶ್ರಮಿಸುವ ಗೃಹಿಣಿಯರ ತ್ಯಾಗಕ್ಕೆ ರಾಜ್ಯ ಸರ್ಕಾರ ನೀಡುತ್ತಿರುವ ಅತ್ಯುನ್ನತ 'ಗೌರವಧನ'ವಾಗಿದೆ. ಇದರಿಂದಾಗಿ ಗ್ರಾಮೀಣ ಹಾಗೂ ನಗರ ಪ್ರದೇಶದ ಕೆಳ ಮತ್ತು ಮಧ್ಯಮ ವರ್ಗದ ಮಹಿಳೆಯರು ತಮ್ಮದೇ ಆದ ಆರ್ಥಿಕ ಸ್ವಾತಂತ್ರ್ಯವನ್ನು ಪಡೆದುಕೊಂಡಿದ್ದಾರೆ.

ಮೂರು ವರ್ಷಗಳಲ್ಲಿ ತಂದ ಆರ್ಥಿಕ ಕ್ರಾಂತಿ

ಪ್ರತಿ ವರ್ಷ ಬರೋಬ್ಬರಿ ₹24,000 ಪಡೆಯುತ್ತಿರುವ ಮಹಿಳೆಯರು, ಕಳೆದ ಮೂರು ವರ್ಷಗಳ ಅವಧಿಯಲ್ಲಿ ₹70,000 ಕ್ಕೂ ಅಧಿಕ ಆರ್ಥಿಕ ಆಸರೆಯನ್ನು ತಮ್ಮದಾಗಿಸಿಕೊಂಡಿದ್ದಾರೆ. ಈ ಹಣ ಬಡ ಕುಟುಂಬಗಳ ಆರ್ಥಿಕ ಚಿತ್ರಣವನ್ನೇ ಬದಲಿಸಿದೆ. ನಾಡಿನ ತಾಯಂದಿರು ಈ ಹಣವನ್ನು ಅತ್ಯಂತ ಜವಾಬ್ದಾರಿಯುತವಾಗಿ ಬಳಸುತ್ತಿದ್ದಾರೆ. ಸಾವಿರಾರು ಮಹಿಳೆಯರು ಈ ನೆರವಲ್ಲಿ ಕುರಿ-ಕೋಳಿ ಸಾಕಾಣಿಕೆ, ಮಕ್ಕಳ ವಿದ್ಯಾಭ್ಯಾಸ, ಮನೆಗೆ ಎಲೆಕ್ಟ್ರಾನಿಕ್ ಉಪಕರಣ ಖರೀದಿ, ಗೃಹೋದ್ಯಮಗಳನ್ನು ಆರಂಭಿಸಿ ಸಬಲೀಕರಣದ ಜೊತೆಗೆ ಸ್ವಾವಲಂಬನೆಯ ಹಾದಿ ಹಿಡಿದಿದ್ದಾರೆ. ಗ್ರಾಮೀಣ ಭಾಗದ ಅನೇಕ ಮಹಿಳೆಯರು ಈ ಹಣವನ್ನು ಒಟ್ಟುಗೂಡಿಸಿ, ಸ್ವ-ಸಹಾಯ ಸಂಘಗಳಲ್ಲಿ ಸಣ್ಣಪುಟ್ಟ ಉಳಿತಾಯ ಮಾಡುತ್ತಿದ್ದಾರೆ.

ಮಹಿಳೆಯರ ಆರ್ಥಿಕ ಸ್ವಾತಂತ್ರ್ಯವೇ ಸಮೃದ್ಧ ಸಮಾಜದ ಬುನಾದಿ



'ಗೃಹಲಕ್ಷ್ಮಿ' ಯೋಜನೆ ಕೇವಲ ರಾಜಕೀಯ ಭರವಸೆಯಲ್ಲ; ಅದು ನಮ್ಮ ತಾಯಂದಿರ ಘನತೆ ಮತ್ತು ಗೌರವದ ಸಂಕೇತ. ಮಹಿಳೆಯರ ಕೈಯಲ್ಲಿ ಹಣ ಓಡಾಡಿದರೆ ಇಡೀ ಕುಟುಂಬ ಸುಖವಾಗಿರುತ್ತದೆ. ಕಳೆದ ಮೂರು ವರ್ಷಗಳಲ್ಲಿ 1.24 ಕೋಟಿಗೂ ಅಧಿಕ ತಾಯಂದಿರ ಖಾತೆಗೆ ನಿರಂತರವಾಗಿ ಹಣ ತಲುಪುತ್ತಿರುವುದು ನಮ್ಮ ಸರ್ಕಾರದ ಪ್ರಾಮಾಣಿಕತೆಗೆ ಸಾಕ್ಷಿ.

– ಸಿದ್ದರಾಮಯ್ಯ, ಮುಖ್ಯಮಂತ್ರಿಗಳು

ಅಂಕಿ-ಅಂಶಗಳಲ್ಲಿ ಜಾಗತಿಕ ದಾಖಲೆ

ಇಡೀ ದೇಶದಲ್ಲೇ ಇಷ್ಟೊಂದು ಬೃಹತ್ ಸಂಖ್ಯೆಯ ಮಹಿಳಾ ಫಲಾನುಭವಿಗಳನ್ನು ಹೊಂದಿರುವ ಹಾಗೂ ನೇರ ನಗದು ವರ್ಗಾವಣೆ ಮಾಡುವ ಮತ್ತೊಂದು ಯೋಜನೆ ಇಲ್ಲ. 1.24 ಕೋಟಿಗೂ ಅಧಿಕ ಗೃಹಿಣಿಯರು ಪ್ರತಿ ತಿಂಗಳು ನೇರ ನಗದು ವರ್ಗಾವಣೆ ಮೂಲಕ ₹2,000 ಪಡೆಯುತ್ತಿದ್ದು, ಈವರೆಗೆ ಸರ್ಕಾರ ಈ ಯೋಜನೆಗಾಗಿ ₹69,783 ಕೋಟಿ ಅನುದಾನ ನೀಡಿದೆ.

ಸಬಲ ಮಹಿಳೆ, ಸಶಕ್ತ ಸಮಾಜ



ಯಾವ ದೇಶದಲ್ಲಿ ಮಹಿಳೆಯರು ಆರ್ಥಿಕವಾಗಿ ಸಬಲರಾಗುತ್ತಾರೋ, ಆ ದೇಶ ಮಾತ್ರ ನಿಜವಾದ ಪ್ರಗತಿ ಸಾಧಿಸಲು ಸಾಧ್ಯ. 'ಗೃಹಲಕ್ಷ್ಮಿ' ಗ್ಯಾರಂಟಿ ಯೋಜನೆಯು ರಾಜ್ಯದ ಕೋಟ್ಯಂತರ ಕುಟುಂಬಗಳಿಗೆ ಬೆಲೆ ಏರಿಕೆಯ ಈ ದಿನಗಳಲ್ಲಿ ದೊಡ್ಡ ಆಸರೆಯಾಗಿ ನಿಂತಿದೆ. ಪ್ರತಿಯೊಂದು ಕುಟುಂಬವನ್ನು ಮುನ್ನಡೆಸುವ ಶಕ್ತಿ ಹೆಣ್ಣಿಗೆ ಇದೆ. ಆಕೆಯ ಕೈ ಬಲಪಡಿಸಿದರೆ ಇಡೀ ಕುಟುಂಬವೇ ಬಲವಾಗುತ್ತದೆ ಎಂಬ ನಂಬಿಕೆಯಿಂದ ನಮ್ಮ ಸರ್ಕಾರ ಈ ಯೋಜನೆಯನ್ನು ಜಾರಿಗೆ ತಂದಿದೆ.

– ಲಕ್ಷ್ಮಿ ಹೆಬ್ಬಾಳ್ಕರ್,
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು

ದೇಶದ ಇತಿಹಾಸದಲ್ಲೇ ಅತಿ ದೊಡ್ಡ ಕ್ರಾಂತಿ



'ಗೃಹಲಕ್ಷ್ಮಿ' ಯೋಜನೆಯು ಕೇವಲ ಕರ್ನಾಟಕದ ಹೆಮ್ಮೆಯಲ್ಲ, ಇಡೀ ದೇಶದ ಇತಿಹಾಸದಲ್ಲೇ ಮಹಿಳೆಯರಿಗಾಗಿ ಜಾರಿಯಾದ ಅತ್ಯಂತ ಬೃಹತ್ ನೇರ ನಗದು ವರ್ಗಾವಣೆ ಯೋಜನೆಯಾಗಿದೆ. ತಂತ್ರಜ್ಞಾನದ ಮೂಲಕ ಅತ್ಯಂತ ಪಾರದರ್ಶಕವಾಗಿ ಕೋಟ್ಯಂತರ ತಾಯಂದಿರನ್ನು ತಲುಪಿ, ಅವರ ಬದುಕಿಗೆ ಸ್ಥಿರವಾದ ಆರ್ಥಿಕ ಭದ್ರತೆ ನೀಡಲು ನಮ್ಮ ಸರ್ಕಾರ ಯಶಸ್ವಿಯಾಗಿದೆ.

– ಡಿ.ಕೆ. ಶಿವಕುಮಾರ್, ಉಪಮುಖ್ಯಮಂತ್ರಿಗಳು



> ನಾನು ಉಪ್ಪಿನಕಾಯಿ ವ್ಯಾಪಾರ ಮಾಡ್ತೇನೆ. ಆದರೆ, ವ್ಯಾಪಾರಕ್ಕಾಗಿ ಪ್ರತಿದಿನ ಕಿಲೋಮೀಟರ್‌ಗಟ್ಲೆ ನಡೆಯಬೇಕಿತ್ತು, ಕಾಲುಗಳು ದಣಿದು ಹೋಗುತ್ತಿದ್ದವು. ಇಂತಹ ಸಂದರ್ಭದಲ್ಲಿ ನನ್ನ ಕೈಹಿಡಿದಿದ್ದು 'ಗೃಹಲಕ್ಷ್ಮಿ' ಯೋಜನೆ. ಪ್ರತಿ ತಿಂಗಳು ಬರುತ್ತಿರುವ 2,000 ರೂಪಾಯಿಗಳನ್ನು ಕೂಡಿಟ್ಟು ನಾನು ಸ್ವಂತ ಸ್ಕೂಟರ್ ಖರೀದಿಸಿದ್ದೇನೆ. ಮನೆಮನೆಗೆ ಹೋಗಿ ಉಪ್ಪಿನಕಾಯಿ ಮಾರಲು ತುಂಬಾ ಸಹಾಯವಾಗಿದೆ.
>
> ಜೀನತ್, ಮಂಗಳೂರು



> ನನಗೆ ಅಪ್ಪ-ಅಮ್ಮ ಇಬ್ಬರೂ ಇಲ್ಲ... ತುತ್ತು ಅನ್ನಕ್ಕೂ ಪರದಾಡುವಂತ ಮೂವರು ಹೆಣ್ಣುಮಕ್ಕಳು ನಾವು. ಅದರಲ್ಲೂ ನಾನು ಅಂಗವಿಕಲೆ. ಬದುಕೇ ಮುಗಿದುಹೋಯಿತು ಅಂದುಕೊಂಡಾಗ ಕೈಹಿಡಿದಿದ್ದು ಇದೇ 'ಗೃಹಲಕ್ಷ್ಮಿ' ಹಣ. ಅದರಿಂದಲೇ ಬಟ್ಟೆ ವ್ಯಾಪಾರ ಶುರು ಮಾಡಿಕೊಂಡಿದ್ದೇನೆ. ಯಾರ ಮುಂದೆಯೂ ಕೈಚಾಚದೆ, ಸ್ವಾವಲಂಬಿಯಾಗಿ ದುಡಿದು ತಿನ್ನಬೇಕು ಅನ್ನೋ ನನ್ನ ಆಸೆಗೆ ಸಿದ್ದರಾಮಯ್ಯ ಸರ್ ಜೀವ ಕೊಟ್ಟಿದ್ದಾರೆ.
>
> ಜಯಮ್ಮ, ಬಳ್ಳಾರಿ




> ಹೊಟ್ಟೆಯಲ್ಲಿದ್ದ ಮಗ ಐದು ತಿಂಗಳ ಕೂಸಾಗಿದ್ದಾಗಲೇ ಗಂಡ ನನ್ನನ್ನು ಬಿಟ್ಟು ಇನ್ನೊಂದು ಮದುವೆಯಾಗಿ ಹೋದ. ಸಾಲದ ಹೊರೆ ಹೆದರಿಸುತ್ತಿತ್ತು, ಸತ್ತು ಹೋಗೋಣ ಅನ್ನಿಸಿತ್ತು. ತಿನ್ನಲು ಅನ್ನವಿರಲಿಲ್ಲ, ಕರೆಂಟ್ ಬಿಲ್ ಕಟ್ಟದ್ದಕ್ಕೆ ಕನೆಕ್ಷನ್ ಕಟ್ ಮಾಡಿಕೊಂಡು ಹೋಗಿದ್ದರು. ಕತ್ತಲಲ್ಲಿ ಅತ್ತ ದಿನಗಳು ಅಪಾರ. ಇಂದು 'ಗೃಹಲಕ್ಷ್ಮಿ'ಯ ಹಣ ನನ್ನ ಬದುಕಿನ ಕತ್ತಲನ್ನು ದೂರ ಮಾಡಿದೆ. ಅಜ್ಜಿಯೊಬ್ಬರು ಕೊಟ್ಟ ಪುಟ್ಟ ಪೆಟ್ಟಿಗೆ ಅಂಗಡಿ ಇಟ್ಟುಕೊಂಡು, ಅಂಗಡಿಗೆ ಸಾಮಾನು ತರಲು ಈ ಹಣ ನೆರವಾಗಿದೆ. ಸಿದ್ದರಾಮಯ್ಯ ಪುಣ್ಯದ ಕೆಲಸ ಮಾಡಿದ್ದಾರೆ.
>
> ರೇಣುಕಾ, ಕೊಪ್ಪಳ



> ಗಂಡ ತೀರಿಹೋಗಿ 8 ವರ್ಷವಾಯಿತು. ಮೂವರು ಹೆಣ್ಣುಮಕ್ಕಳನ್ನು ಕಟ್ಟಿಕೊಂಡು ಗಂಡು ದಿಕ್ಕಿಲ್ಲದ ಮನೆಯನ್ನು ನಿಭಾಯಿಸುವುದು ನರಕಯಾತನೆಯಾಗಿತ್ತು. ಕಾಫಿ ಸೀಸನ್‌ನಲ್ಲಿ ಕೂಲಿ ಸಿಕ್ಕರೆ ಮಾತ್ರ ಕೈಯಲ್ಲಿ ಹಣ. ಇಲ್ಲದಿದ್ದರೆ ವರ್ಷಪೂರ್ತಿ ಖಾಲಿಯೇ ಇರಬೇಕು. ಇಂದು 'ಗೃಹಲಕ್ಷ್ಮಿ'ಯ ಹಣವೇ ನಮ್ಮ ಉಸಿರಾಗಿದೆ. ಒಂದೊಮ್ಮೆ ಈ ಯೋಜನೆ ನಿಂತು ಹೋದರೆ ನಮ್ಮ ಬದುಕು ಏನಾಗಬಹುದು ಎಂದು ಊಹಿಸಿಕೊಳ್ಳಲೂ ಅಸಾಧ್ಯ, ಕಣ್ಣಲ್ಲಿ ನೀರು ಬರುತ್ತದೆ.
>
> ಲಕ್ಷ್ಮಿ, ಚಾಮರಾಜನಗರ



> ಮನೆಯಲ್ಲಿ ಕಡು ಬಡತನ. ಸಂಸಾರವನ್ನು ನಿಭಾಯಿಸೋದು ತುಂಬಾ ಕಷ್ಟ ಇತ್ತು. ಸರ್ಕಾರದ 'ಗೃಹಲಕ್ಷ್ಮಿ' ಯೋಜನೆ ನನ್ನ ಬದುಕಿಗೆ ಆರ್ಥಿಕ ಶಕ್ತಿ ತುಂಬಿತು. ಪ್ರತಿ ತಿಂಗಳು ಬರುತ್ತಿದ್ದ ಹಣವನ್ನು ಕೂಡಿಟ್ಟು, ಅದರಿಂದ ಎರಡು ಮೇಕೆಗಳನ್ನು ಖರೀದಿಸಿ ಸಾಕಲು ಆರಂಭಿಸಿದೆ. ಸದ್ಯ ಅವುಗಳ ಸಂಖ್ಯೆ ಹೆಚ್ಚಾಗಿದ್ದು, ನಮ್ಮ ಕುಟುಂಬಕ್ಕೆ ಆದಾಯದ ಮೂಲವಾಗಿದೆ.
>
> ದೇವಮ್ಮ, ಯಾದಗಿರಿ



> ನಂಗೆ ನಾಟಿ ಕೋಳಿ ಸಾಕಾಣಿಕೆ ಆರಂಭಿಸುವ ಆಸೆ ಇತ್ತು. ವ್ಯಾಪಾರಕ್ಕಾಗಿ ಓಡಾಟ ಹಾಗೂ ಬಂಡವಾಳದ ಕೊರತೆಯಿಂದ ಕಂಗಾಲಾಗಿದ್ದೆ. 'ಗೃಹಲಕ್ಷ್ಮಿ' ಯೋಜನೆಯ ಹಣವನ್ನು ಕೂಡಿಟ್ಟು ನಾಟಿ ಕೋಳಿ ಫಾರ್ಮ್ ಶುರು ಮಾಡಿದೆ. ನಾನು ಈಗ ಯಾರ ಮೇಲೂ ಅವಲಂಬಿತಳಾಗದೇ ಬದುಕುತ್ತಿದ್ದೇನೆ.
>
> ಲೀಲಾವತಿ, ಶಿವಮೊಗ್ಗ

ರಾಜ್ಯದ ರಾಜಕಾರಣ ಮೋಡದ ವಾತಾವರಣ

ಪುಟ ೧ ➜ ಇನ್ನೊಂದೆಡೆ ಕಾಂಗ್ರೆಸ್‌ನ ಹಿರಿಯ ಶಾಸಕ ಆರ್.ವಿ.ದೇಶಪಾಂಡೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ರಾಜೀನಾಮೆ ನೀಡಲಿದ್ದಾರೆ ಎನ್ನುವ ಮಹತ್ವದ ಸುಳಿವು ನೀಡಿದ್ದಾರೆ. ಕಾವೇರಿ ನಿವಾಸದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿಮಾಡಿದಬಳಿಕಮಾಧ್ಯಮಗಳಿಗೆ ಮಾಹಿತಿ ನೀಡಿದ ಅವರು, ಹೌದು, ಸಿದ್ದರಾಮಯ್ಯ ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಲಿದ್ದಾರೆ. ಆದರೆ, ರಾಜೀನಾಮೆ ನೀಡದಂತೆ ಮನವಿ ಮಾಡಿದ್ದೇನೆ ಎಂದು ಹೇಳಿದರು.

ಕಾವೇರಿ ನಿವಾಸದಲ್ಲಿ ಬೆಳಗ್ಗೆಯಿಂದಲೇ ಚಟುವಟಿಕೆ: ಇನ್ನು ಸಿಎಂ ಸಿದ್ದರಾಮಯ್ಯ ಅವರ ಅಧಿಕೃತ ನಿವಾಸ ಕಾವೇರಿಯಲ್ಲಿ ಬುಧವಾರ ಬೆಳಗ್ಗೆಯಿಂದಲೇ ರಾಜಕೀಯ ಚಟುವಟಿಕೆಗಳು ಬಿರುಸುಗೊಂಡಿದ್ದವು. ಬುಧವಾರ ವೇಳಾಪಟ್ಟಿಯಲ್ಲಿ ಅಧಿಕೃತವಾಗಿದ್ದ ಕಾರ್ಯಕ್ರಮಕ್ಕೆ ತೆರಳುವ ಮುಂಚೆ ಹಲವು ಹಿರಿಯ ಸಚಿವರು ಹಾಗೂ ಶಾಸಕರು ಸಿಎಂ ಅವರನ್ನು ಭೇಟಿ ಮಾಡಿ ಚರ್ಚೆ ನಡೆಸಿದರು. ಸಚಿವರಾದ ಡಾ. ಜಿ.ಪರಮೇಶ್ವರ್, ಎಂ.ಬಿ.ಪಾಟೀಲ್, ಶಿವರಾಜ್ ತಂಗಡಗಿ, ಚಲುವರಾಯಸ್ವಾಮಿ, ಜಮೀರ್ ಅಹ್ಮದ್ ಖಾನ್, ಶಾಸಕರಾದ ಆರ್.ವಿ.ದೇಶಪಾಂಡೆ, ಅಶೋಕ್ ಪಟ್ಟಣ್ ಸೇರಿದಂತೆ ಹಲವರು ಸಿಎಂ ಅವರನ್ನು ಭೇಟಿ ಮಾಡಿ ರಾಜಕೀಯ ಬೆಳವಣಿಗೆಗಳ ಕುರಿತು ಚರ್ಚೆ ನಡೆಸಿದರು.

ರಾಜೀನಾಮೆ ವಿಚಾರ ಅಪ್ರಸ್ತುತ- ಸಚಿವರ ಹೇಳಿಕೆ: ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡುತ್ತಾರೆ ಎನ್ನುವ ವಿಷಯಕ್ಕೆ ಪ್ರತಿಕ್ರಿಯಿಸಿದ ಸಚಿವರಾದ ಎಂ.ಬಿ.ಪಾಟೀಲ್ ಹಾಗೂ ಡಾ.ಜಿ.ಪರಮೇಶ್ವರ್ ಅವರು ಸಿಎಂ ಬದಲಾವಣೆ ವಿಚಾರ ಈಗ ಅಪ್ರಸ್ತುತ ಹಾಗೂ ಊಹಾಪೋಹ ಎಂದಿದ್ದಾರೆ.

ನಾಯಕತ್ವ ವಿಚಾರವಾಗಿ ಯಾವುದೇ ಮಾತುಕತೆ ಆಗಿಲ್ಲ. ಈ ವಿಚಾರವಾಗಿ ಕೆ.ಸಿ. ವೇಣುಗೋಪಾಲ್ ಹೇಳಿದ್ದೇ ಅಂತಿಮ. ಸಿಎಂ ಸಿದ್ದರಾಮಯ್ಯ ರಾಜೀನಾಮೆ ಅನ್ನೋದೆಲ್ಲಾ ಊಹಾಪೋಹ ಎಂದು ಸಚಿವ ಎಂ.ಬಿ.ಪಾಟೀಲ್ ಸ್ಪಷ್ಟಪಡಿಸಿದರು. ಸಿಎಂ ಭೇಟಿಗೂ ಮುನ್ನ ಬುಧವಾರ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಸಿದ್ದರಾಮಯ್ಯ ಅವರು ರಾಜೀನಾಮೆ ಪ್ರಶ್ನೆಯೇ ಉದ್ಭವಿಸಲ್ಲ. ಮಂಗಳವಾರ ರಾಜ್ಯಸಭೆ ಹಾಗೂ ವಿಧಾನಪರಿಷತ್ ಚುನಾವಣೆ ಬಗ್ಗೆ ಮಾತ್ರ ಚರ್ಚೆಯಾಗಿದೆ. ಬೇರೆಯದೆಲ್ಲಾ ಊಹಾಪೋಹ ಎಂದರು.

ಗೃಹಸಚಿವ ಡಾ. ಜಿ.ಪರಮೇಶ್ವರ್ ಮಾತನಾಡಿ, ಹೈಕಮಾಂಡ್ ನಿರ್ಧಾರ ತೆಗೆದುಕೊಳ್ಳುವವರೆಗೂ ಮುಖ್ಯಮಂತ್ರಿಯ ಹುದ್ದೆಯ ಬಗ್ಗೆ ಚರ್ಚೆ ನಡೆಸುವುದು ಅಪ್ರಸ್ತುತ. ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡುತ್ತಾರೆ ಎಂಬುದು ಕೇವಲ ವದಂತಿ ಎಂದರು. ಮುಖ್ಯಮಂತ್ರಿ ಸ್ಥಾನಕ್ಕೆ ನಾನೂ ಆಕಾಂಕ್ಷಿ ಎಂಬುದು ಕೂಡ ಅಪ್ರಸ್ತುತವಾಗಲಿದೆ. ನಾನು ದೆಹಲಿಯಲ್ಲಿ ಯಾರನ್ನೂ ಭೇಟಿ ಮಾಡಿಲ್ಲ, ಯಾವ ಹುದ್ದೆಯನ್ನೂ ಕೇಳಿಲ್ಲ ಎಂದು ಸ್ಪಷ್ಟಪಡಿಸಿದರು. ಹೈಕಮಾಂಡ್‌ನವರು ಸಿಎಂ ಸಿದ್ದರಾಮಯ್ಯ ಅವರ ಜತೆಗೆ ದೆಹಲಿಯ ಎಐಸಿಸಿ ಕೇಂದ್ರ ಕಚೇರಿಯಲ್ಲಿ ವರಿಷ್ಠ ನಾಯಕರಾದ ಮಲ್ಲಿಕಾರ್ಜುನ ಖರ್ಗೆ, ರಾಹುಲ್ ಗಾಂಧಿ, ಪ್ರಧಾನ ಕಾರ್ಯದರ್ಶಿಗಳನ್ನು ಭೇಟಿ ಮಾಡಿದರು.

ಬೆಂಗಳೂರಿಗೆ ಆಗಮಿಸಿದ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಅದ್ದೂರಿಯಾಗಿ ಸ್ವಾಗತಿಸಿದರು. ಬಳಿಕ ಖಾಸಗಿ ಕಾರಿನಲ್ಲಿ ಸದಾಶಿವನಗರದ ತಮ್ಮ ಮನೆಗೆ ಆಗಮಿಸಿದರು. ನಿವಾಸದ ಮುಂದೆ ಸಾವಿರಾರು ಕಾರ್ಯಕರ್ತರು ಜಮಾಯಿಸಿದರು.

ಡಿ.ಕೆ.ಸುರೇಶ್ ನಿವಾಸದಲ್ಲೂ ರಾಜಕೀಯ ಚಟುವಟಿಕೆ

ಇನ್ನು ಡಿ.ಕೆ.ಶಿವಕುಮಾರ್ ಸಿಎಂ ಆಗಲಿದ್ದಾರೆ ಎನ್ನುವ ಸುದ್ದಿಯ ಹಿನ್ನೆಲೆಯಲ್ಲಿ ಮಾಜಿ ಸಂಸದ ಹಾಗೂ ಡಿ.ಕೆ. ಶಿವಕುಮಾರ್ ಸಹೋದರ ಡಿ.ಕೆ.ಸುರೇಶ್ ಅವರ ಸದಾಶಿವನಗರ ನಿವಾಸದಲ್ಲಿ ಬುಧವಾರ ಇಡೀ ದಿನ ರಾಜಕೀಯ ಚುವಟಿಕೆಗಳು ನಡೆದವು. ಹೊಸದಿಲ್ಲಿಯಿಂದ ಡಿ.ಕೆ.ಸುರೇಶ್ ಆಗಮಿಸುತ್ತಿದ್ದಂತೆಯೆ ಅವರ ನಿವಾಸಕ್ಕೆ ಆಗಮಿಸಿದ ಶಾಸಕರಾದ ಇಕ್ಬಾಲ್ ಹುಸೇನ್, ರಂಗನಾಥ್, ವಿಧಾನ ಪರಿಷತ್ ಸದಸ್ಯ ರವಿ ಅವರು ಭೇಟಿ ನೀಡಿ ಚರ್ಚೆ ನಡೆಸಿದರು.

ಯುದ್ಧ ವಿಮಾನಗಳ ಹೆಚ್ಚಳಕ್ಕೆ ರಕ್ಷಣಾ ಸಚಿವಾಲಯ ಆದ್ಯತೆ
ಎಎಂಸಿಎ ಉತ್ಪಾದನೆಗೆ ಚಾಲನೆ

ಹೊಸದಿಲ್ಲಿ: ಭಾರತದ ರಕ್ಷಣಾ ಸಚಿವಾಲಯ, ದೇಶದಲ್ಲಿ ಎರಡನೇ ಯುದ್ಧ ವಿಮಾನ ಉತ್ಪಾದನಾ ಪರಿಸರ ವ್ಯವಸ್ಥೆಯನ್ನು ಸ್ಥಾಪಿಸಲು ಶಾರ್ಟ್‌ಲಿಸ್ಟ್ ಮಾಡಲಾದ ಮೂರು ಖಾಸಗಿ ಸಂಸ್ಥೆಗಳಿಗೆ ಸುಧಾರಿತ ಮಧ್ಯಮ ಯುದ್ಧ ವಿಮಾನ (ಎಎಂಸಿಎ) ಕಾರ್ಯಕ್ರಮದ ಪ್ರಸ್ತಾವನೆಗಾಗಿ ವಿನಂತಿ (ಆರ್‌ಎಫ್‌ಪಿ) ಕಳುಹಿಸಿದೆ.

ಪ್ರಸ್ತಾವನೆಗಾಗಿ ವಿನಂತಿಯನ್ನು ಟಾಟಾ ಅಡ್ವಾನ್ಸ್ಡ್ ಸಿಸ್ಟಮ್ಸ್ ಲಿಮಿಟೆಡ್, ಭಾರತ ಎಲೆಕ್ಟ್ರಾನಿಕ್ಸ್ ಲಿಮಿಟೆಡ್ ಜತೆಗಿನ ಲಾರ್ಸೆನ್ ಅಂಡ್ ಟೂಬ್ರೊ ಒಕ್ಕೂಟ ಮತ್ತು ಭಾರತ್ ಫೋರ್ಜ್ ಮತ್ತು ಬಿಇಎಂಎಲ್ ಒಳಗೊಂಡಿರುವ ಮತ್ತೊಂದು ಸಂಸ್ಥೆ ನೀಡಲಾಗಿದೆ. ಈ ಬೆಳವಣಿಗೆಯಿಂದ, ಸಾಂಪ್ರದಾಯಿಕವಾಗಿ ದೇಶೀಯ ಯುದ್ಧ ವಿಮಾನ ತಯಾರಿಕೆಯಲ್ಲಿ ಮುಂಚೂಣಿಯಲ್ಲಿರುವ ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್ ಹೊರತುಪಡಿಸಿ ಅದೇ ರೀತಿಯ ಮಿಲಿಟರಿ ವಿಮಾನಯಾನ ಉತ್ಪಾದನಾ ಘಟಕವನ್ನು ಸ್ಥಾಪಿಸಿದಂತಾಗುತ್ತದೆ. ಈ ಕ್ರಮ ದೀರ್ಘಾವಧಿಯ ಉತ್ಪಾದನಾ ಸಾಮರ್ಥ್ಯವನ್ನು ವಿಸ್ತರಿಸುತ್ತದೆ ಮತ್ತು ಯುದ್ಧ ವಿಮಾನಗಳ ಒಟ್ಟಾರೆ ಉತ್ಪಾದನೆಯನ್ನು ಹೆಚ್ಚಿಸುತ್ತದೆ ಎಂದು ಅಧಿಕಾರಿಗಳು ಹೇಳುತ್ತಾರೆ. ಸಮಾನಾಂತರ ಉತ್ಪಾದನಾ ಸಾಮರ್ಥ್ಯ, ವಿತರಣಾ ಸಮಯದ ಮಿತಿಯನ್ನು ಸುಧಾರಿಸುತ್ತವೆ ಮತ್ತು ಪೂರೈಕೆ- ಸರಪಳಿಯ ದೃಢತೆಯನ್ನು ಬಲಪಡಿಸುತ್ತವೆ. ಇದು ಭವಿಷ್ಯದ ಸೈನ್ಯದ ಸಿದ್ಧತೆ ಮತ್ತು ಸ್ಕ್ವಾಡ್ರನ್ ವಿಸ್ತರಣೆಗೆ ನಿರ್ಣಾಯಕ ಎನಿಸಿದೆ.

ಕೈಗಾರಿಕಾ ಪ್ರಭಾವ: ಈ ಖಾಸಗಿ ವಲಯದ ಘಟಕಗಳ ಸೇರ್ಪಡೆ, ಏರೋಸ್ಪೇಸ್ ಉತ್ಪಾದನಾ ವಲಯಕ್ಕೆ ವಿಸ್ತೃತ ಕೈಗಾರಿಕಾ ಭಾಗವಹಿಸುವಿಕೆ ಮತ್ತು ಸುಧಾರಿತ ಎಂಜಿನಿಯರಿಂಗ್ ಸಾಮರ್ಥ್ಯಗಳನ್ನು ತರುತ್ತದೆ. ಸುಧಾರಿತ ಮಧ್ಯಮ ಯುದ್ಧ ವಿಮಾನ ಯೋಜನೆಯ ಉದ್ದೇಶಿತ ಐದನೇ ತಲೆಮಾರಿನ ಸ್ಟೆಲ್ತ್ ಫೈಟರ್‌ಗೆ ಬಲ ಬಂದಂತಾಗುತ್ತದೆ. ಖಾಸಗಿ ವಲಯದ ಭಾಗವಹಿಸುವಿಕೆ, ಏವಿಯಾನಿಕ್ಸ್, ಸುಧಾರಿತ ವಸ್ತುಗಳು, ಸಂವೇದಕಗಳು, ನಿಖರ ಉತ್ಪಾದನೆ, ಏರೋಸ್ಪೇಸ್ ಸಿಸ್ಟಮ್ಸ್ ಏಕೀಕರಣದಲ್ಲಿ ದೇಶೀಯ ಸಾಮರ್ಥ್ಯದ ಅಭಿವೃದ್ಧಿಗೆ ಪೂರಕ.

ಆರ್ಥಿಕ ಪ್ರಯೋಜನಗಳು: ಈ ಯೋಜನೆ, ನಿರ್ಣಾಯಕ ಏರೋಸ್ಪೇಸ್ ತಂತ್ರಜ್ಞಾನಕ್ಕಾಗಿ ವಿದೇಶಿ ಪೂರೈಕೆದಾರರ ಮೇಲಿನ ದೀರ್ಘಾವಧಿಯ ಅವಲಂಬನೆಯನ್ನು ಕಡಿಮೆ ಮಾಡುತ್ತದೆ. ಜೊತೆಗೆ ಇದು ಉನ್ನತ-ಕೌಶಲ್ಯದ ಉದ್ಯೋಗಾವಕಾಶಗಳನ್ನು ಸೃಷ್ಟಿಸುತ್ತದೆ ಎಂದು ಹೇಳಲಾಗಿದೆ.

ಕಿಡಿ ನುಡಿ

• ವಾಸುದೇವರಾವ್ ಕಕ್ಕೇನೆಜಿ

ಮೋದಿ, ಷಾ ದೇಶ ದ್ರೋಹಿಗಳು- ರಾಹುಲ್ ಗಾಂಧಿ
- ಬ್ರಿಟಿಷರೂ ಈ ದೇಶವನ್ನು ಆಳುತ್ತಿದ್ದಾಗ ದೇಶಕ್ಕಾಗಿ ಹೋರಾಟ ಮಾಡುವವರನ್ನು ದೇಶ ದ್ರೋಹಿಗಳು ಅಂತಲೇ ಕರೆಯುತ್ತಿದ್ದರಂತೆ!

ದಿನ ಭವಿಷ್ಯ

ಮೇಷ
ಕಠಿಣ ದಿನ. ಆದರೂ ಮೌನವಾಗಿ ನಿಮ್ಮ ಕಾರ್ಯ ನಿರ್ವಹಿಸಿ. ಸಾಫಲ್ಯ ಸಿಗಲಿದೆ. ಆರ್ಥಿಕ ಬಿಕ್ಕಟ್ಟು ನಿವಾರಣೆ. ಕೌಟುಂಬಿಕ ಸಹಕಾರ.

ವೃಷಭ
ಭರವಸೆಯ ದಿನ. ಶುಭ ಸಂಕೇತಗಳು ಕಾಣುತ್ತಿವೆ. ವೈಯಕ್ತಿಕ ಸಮಸ್ಯೆ ಪರಿಹಾರದ ದಾರಿ ತೋರಲಿದೆ. ಚಿಂತಿತ ಮನಸ್ಸಿಗೆ ಶಮನ.

ಮಿಥುನ
ಎಲ್ಲರ ಜತೆ ಕೂಡಿ ಕಳೆಯುವ ಅವಕಾಶ. ಪುಟ್ಟ ಪ್ರವಾಸಕ್ಕೆ ಸಿದ್ಧರಾಗಿ. ದೈನಂದಿನ ರಗಳೆ ಮರೆತು ವ್ಯವಹರಿಸಿ. ಬಂಧು ಜತೆಗಿನ ವಿರಸ ಮಾಯ.

ಕಟಕ
ಹರ್ಷೋಲ್ಲಾಸ. ಕೌಟುಂಬಿಕ ಸಮಾಗಮ. ಹಣದ ಬಿಕ್ಕಟ್ಟು ಪರಿಹಾರ. ಖರ್ಚು ತುಸು ಹೆಚ್ಚಿದರೂ ಅದು ಕೌಟುಂಬಿಕ ಹರ್ಷ ಹೆಚ್ಚಿಸಲಿದೆ.

ಸಿಂಹ
ನಿಮ್ಮ ವ್ಯವಹಾರದಲ್ಲಿ ಒಳ್ಳೆ ಅವಕಾಶ ಸಿಕ್ಕರೆ ತಿರಸ್ಕರಿಸಬೇಡಿ. ಹಿಂಜರಿಕೆ ತ್ಯಜಿಸಿ. ಆತ್ಮೀಯರ ಸಂಗದಲ್ಲಿ ಸಂತೋಷ ಕಾಣುವಿರಿ. ಧನಪ್ರಾಪ್ತಿ.

ಕನ್ಯಾ
ನಿಮ್ಮ ಹಠಮಾರಿ ವರ್ತನೆ ಇತರರ ಟೀಕೆಗೆ ಗುರಿಯಾದೀತು. ವಿನಯ ಪ್ರದರ್ಶಿಸಿ. ಕೋಪದ ಕೈಗೆ ಬುದ್ಧಿ ಕೊಡಬೇಡಿ.

ತುಲಾ
ವ್ಯವಹಾರದಲ್ಲಿ ಮುತುವರ್ಜಿ ವಹಿಸಿ. ನಿರ್ಲಕ್ಷ್ಯಕ್ಕೆ ಬೆಲೆ ತೆರಬೇಕಾದೀತು. ಖಾಸಗಿ ಬದುಕಿಗೆ ಹೆಚ್ಚಿನ ಗಮನ ಕೊಡಬೇಕಾದ ಪ್ರಸಂಗ.

ವೃಶ್ಚಿಕ
ನಿಮ್ಮ ಕುರಿತಂತೆಯೆ ಸಿನಿಕತನ ಬೇಡ. ಎಲ್ಲವನ್ನು ಆಶಾವಾದದಿಂದ ಸ್ವೀಕರಿಸಿ. ಜಗದ ಜಂಜಡಕ್ಕೆ ಮನಸು ಹಾಳು ಮಾಡಿಕೊಳ್ಳದಿರಿ. ಒಳ್ಳೆ ಕಾಲ ಬರಲಿದೆ.

ಧನು
ಶಾಂತ ಮನಸ್ಸು. ದುಗುಡ ನಿವಾರಣೆ. ಇತರರ ಮೇಲ್ಪಂಕ್ತಿ ಅನುಸರಿಸಿ. ಮುಖ್ಯ ಬೇಡಿಕೆಯೊಂದು ಇಂದು ಈಡೇರುವುದು.

ಮಕರ
ಎಲ್ಲರ ನಡುವೆ ನಿಮ್ಮ ಕೆಲಸವೇನು ಎಂದು ಪರಾಮರ್ಶಿಸಿ. ಅದರಂತೆ ವರ್ತಿಸಿ. ಎಲ್ಲರಿಂದ ಬೇರೆಯಾಗಿ ನಿಲ್ಲಬೇಡಿ. ಹೊಂದಾಣಿಕೆ ಮುಖ್ಯ.

ಕುಂಭ
ಆರ್ಥಿಕ ಉನ್ನತಿ. ಆಕಾಂಕ್ಷೆ ಈಡೇರಿಕೆ. ಆಪ್ತರ ಜತೆ ಭಾವುಕ ಸನ್ನಿವೇಶ ಎದುರಿಸುವಿರಿ. ಮನೋದಾರ್ಢ್ಯ ಪ್ರದರ್ಶಿಸಿ.

ಮೀನ
ಒತ್ತಡಗಳಿಲ್ಲದ ವಿರಾಮ ದಿನ. ಬಂಧು ಬಳಗದ ಭೇಟಿ. ಮನೆಯಲ್ಲಿ ಹರ್ಷದ ವಾತಾವರಣ. ಖರೀದಿ ಹುಮ್ಮಸ್ಸು.

ರಾಹುಕಾಲ: 1.30-3.00
ಗುಳಿಕಕಾಲ: 9.00-10.30

ಅದೃಷ್ಟ ಸಂಖ್ಯೆ : 0,5,8,2

ಮುಖ್ಯ ಕಾರ್ಯದರ್ಶಿ ಡಾ. ಶಾಲಿನಿ ರಜನೀಶ್
ಮುಂಚೂಣಿಯಲ್ಲಿದೆಎಐ

ಬೆಂಗಳೂರು: ಹವಾಮಾನ ಬದಲಾವಣೆ, ನಗರೀಕರಣ, ಅಂತರ್ಜಲ ಕುಸಿತ ಹಾಗೂ ಮೂಲಸೌಕರ್ಯಗಳ ಮೇಲಿನ ಒತ್ತಡದಂತಹ ಭವಿಷ್ಯದ ಸವಾಲುಗಳನ್ನು ಸಮರ್ಥವಾಗಿ ಎದುರಿಸಲು ಕೃತಕ ಬುದ್ಧಿಮತ್ತೆ (ಎಐ) ಮತ್ತು ಡಿಜಿಟಲ್ ತಂತ್ರಜ್ಞಾನಗಳು ಪ್ರಮುಖ ಪಾತ್ರ ವಹಿಸುತ್ತಿದ್ದು, ಎಐ ಆಧಾರಿತ ನಗರ ಜಲ ಆಡಳಿತದಲ್ಲಿ ಕರ್ನಾಟಕವು ರಾಷ್ಟ್ರಮಟ್ಟದಲ್ಲಿ ಮುಂಚೂಣಿಯಲ್ಲಿದೆ ಎಂದು ಮುಖ್ಯ ಕಾರ್ಯದರ್ಶಿ ಡಾ. ಶಾಲಿನಿ ರಜನೀಶ್ ತಿಳಿಸಿದರು.

ಬುಧವಾರ ಖಾಸಗಿ ಹೋಟೆಲ್‌ನಲ್ಲಿ ಎಲೆಟ್ಸ್ ಮತ್ತು ಕೆಪಿಎಂಜಿ ಸಹಯೋಗದೊಂದಿಗೆ ಬೆಂಗಳೂರು ಜಲಮಂಡಳಿ ಆಯೋಜಿಸಿದ್ದ ರಾಷ್ಟ್ರೀಯ ಎಐ ಮತ್ತು 2026ರ ಡಿಜಿಟಲ್ ವಾಟರ್ ಶೃಂಗಸಭೆ ಉದ್ಘಾಟಿಸಿ ಮಾತನಾಡಿದರು. ಬೆಂಗಳೂರು, ಮೈಸೂರು, ಮಂಗಳೂರು, ಧಾರವಾಡ ಮತ್ತು ಬೆಳಗಾವಿಯಂತಹ ನಗರಗಳ ಮೇಲೆ ನೀರಿನ ಒತ್ತಡ ಹೆಚ್ಚಾಗುತ್ತಿದೆ. ದಕ್ಷ, ಪಾರದರ್ಶಕ ಮತ್ತು ಜವಾಬ್ದಾರಿಯುತ ಸಾರ್ವಜನಿಕ ಸೇವೆಗಳನ್ನು ಖಚಿತಪಡಿಸಿಕೊಳ್ಳಲು ತಂತ್ರಜ್ಞಾನ ಆಧಾರಿತ ಇಂಟಲಿಜೆಂಟ್ ಆಡಳಿತ ವ್ಯವಸ್ಥೆಗಳು ಅತ್ಯಗತ್ಯವಾಗಿವೆ ತಿಳಿಸಿದರು.

ನಗರದ ನೀರು ಸರಬರಾಜು ಮಂಡಳಿಗಳಿಗೆ ಎಐ ಮತ್ತು ಡಿಜಿಟಲ್ ಇಂಟೆಲಿಜೆನ್ಸ್ ಇನ್ನು ಮುಂದೆ ಕೇವಲ ಐಚ್ಛಿಕ ಸಾಧನಗಳಾಗಿ ಉಳಿದಿಲ್ಲ, ನೈಜ-ಸಮಯದ ಮೇಲ್ವಿಚಾರಣೆ, ಪ್ರಿಡಿಕ್ಟಿವ್ ಅನಾಲಿಟಿಕ್ಸ್, ನೀರಿನ ಬೇಡಿಕೆಯ ಮುನ್ಸೂಚನೆ ಹಾಗೂ ದತ್ತಾಂಶ ಆಧಾರಿತ ಆಡಳಿತವು ಭವಿಷ್ಯದ ಜಲ ನಿರ್ವಹಣೆಯನ್ನು ನಿರ್ಧರಿಸಲಿವೆ ಎಂದರು.

ಕರ್ನಾಟಕವು ಈಗಾಗಲೇ ಎಐ ಉತ್ಕೃಷ್ಟತಾ ಕೇಂದ್ರಗಳನ್ನು ಸ್ಥಾಪಿಸಿದೆ ಹಾಗೂ ಡಿಜಿಟಲ್ ಸಂಗ್ರಹಣೆ, ಡೇಟಾ ಹಂಚಿಕೆ ಮತ್ತು ಕಾರ್ಯಕ್ಷಮತೆ ಆಧಾರಿತ ಆಡಳಿತ ವ್ಯವಸ್ಥೆಗಳನ್ನು ಬೆಂಬಲಿಸುವ ನೀತಿ ಚೌಕಟ್ಟುಗಳನ್ನು ಪರಿಚಯಿಸಿದೆ ಎಂದು ಅವರು ಉಲ್ಲೇಖಿಸಿದರು. ಡಿಜಿಟಲ್ ರೂಪಾಂತರದ ಕೇಂದ್ರಬಿಂದುವಾಗಿ ಹೊಣೆಗಾರಿಕೆಗೂ ಆದ್ಯತೆ ನೀಡಬೇಕು ಕರೆ ನೀಡಿದರು.

ಎಫ್‌ಕೆಸಿಸಿಐ ಅಧ್ಯಕ್ಷೆ ಉಮಾರೆಡ್ಡಿ, ಎಲೆಟ್ಸ್ ಟೆಕ್ನೋ ಮೀಡಿಯಾ ಸಂಸ್ಥೆಯ ಸಂಸ್ಥಾಪಕ ಹಾಗೂ ಸಿಇಒ ರವಿಗುಪ್ತಾ, ಜಾಗತಿಕ ಜಲ ತಜ್ಞರು, ಎಐ ಪರಿಣತರು, ನೀತಿ ನಿರೂಪಕರು, ತಂತ್ರಜ್ಞಾನ ಕಂಪನಿಗಳು, ನವೋದ್ಯಮಗಳು ಹಾಗೂ ದೇಶ ವಿದೇಶಗಳ ನಗರ ಆಡಳಿತ ವೃತ್ತಿಪರರು ಭಾಗವಹಿಸಿದ್ದರು.



> ಡಿಜಿಟಲ್ ರೂಪಾಂತರದ ಭಾಗವಾಗಿ ಜಲಮಂಡಳಿಯು ಈಗಾಗಲೇ ಏಷ್ಯಾದ ಅತಿದೊಡ್ಡ ನಗರ-ಮಟ್ಟದ ಸ್ಕಾಡಾ ವ್ಯವಸ್ಥೆ, ಜಿಐಎಸ್ ಆಧಾರಿತ ಮ್ಯಾಪಿಂಗ್, ಐಒಟಿ ಮೇಲ್ವಿಚಾರಣೆ, ಸ್ವಯಂಚಾಲಿತ ಸೋರಿಕೆ ಪತ್ತೆ ವ್ಯವಸ್ಥೆಗಳು ಮತ್ತು ಸ್ಮಾರ್ಟ್ ಮೀಟರಿಂಗ್ ಪ್ರಾಯೋಗಿಕ ಯೋಜನೆಗಳನ್ನು ಅಳವಡಿಸಿಕೊಂಡಿದೆ.
> ■ ಡಾ. ರಾಮ್ ಪ್ರಸಾತ್ ಮನೋಹರ, ಜಲಮಂಡಳಿ ಅಧ್ಯಕ್ಷ

> ಕೇವಲ ತಂತ್ರಜ್ಞಾನವೊಂದೇ ಬದಲಾವಣೆ ತರಲು ಸಾಧ್ಯವಿಲ್ಲ, ತಂತ್ರಜ್ಞಾನದ ಜೊತೆಗೆ ಸಂಸ್ಥೆಗಳು, ಸರ್ಕಾರದ ವ್ಯವಸ್ಥೆ ಹಾಗೂ ಮಾನವನ ಸಹಕಾರ ಬೆರೆತಾಗ ಮಾತ್ರವೇ ಕೃತಕ ಬುದ್ಧಿಮತ್ತೆ (ಎಐ) ಆಧಾರಿತ ವ್ಯವಸ್ಥೆಗಳು ಸಂಪೂರ್ಣ ಯಶಸ್ಸು ಕಾಣಲು ಸಾಧ್ಯ.
> ■ ತುಷಾರ್ ಗಿರಿನಾಥ್, ಅಪರ ಮುಖ್ಯ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ

ಕೇರಳದಲ್ಲಿ ಇಡಿ ವಾಹನ ಧ್ವಂಸ

ಪುಟ ೧ ➜ ತಿರುವನಂತಪುರಂನ ಬೇಕರಿ ಜಂಕ್ಷನ್‌ನಲ್ಲಿರುವ ಪಿಣರಾಯಿ ವಿಜಯನ್ ನಿವಾಸ, ಕಣ್ಣೂರಿನ ಅವರ ನಿವಾಸ, ಅವರ ಅಳಿಯ ಮಾಜಿ ಸಚಿವ ಮೊಹಮ್ಮದ್ ರಿಯಾಸ್ (ಪಿಣರಾಯಿ ವಿಜಯನ್ ಅವರ ಅಳಿಯ) ಅವರ ಕೋಯಿಕ್ಕೋಡ್ ನಿವಾಸ, ಸಿಎಂಆರ್‌ಎಲ್‌ನ ಆಡಳಿತ ನಿರ್ದೇಶಕ ಸಸಿಧರನ್ ಕರ್ತ ಅವರ ನಿವಾಸ, ಹಗರಣಕ್ಕೆ ಸಂಬಂಧಿಸಿದ ಕಚೇರಿಗಳು ಸೇರಿದಂತೆ ಕೇರಳದ 10 ಕಡೆಗಳಲ್ಲಿ ಇಡಿ ದಾಳಿ ನಡೆದಿದೆ.

ಕಾಂಗ್ರೆಸ್-ಬಿಜೆಪಿ ನಂಟು ಎಂದ ಸಿಪಿಎಂ: ದೇಶದಲ್ಲಿನ ವಿಪಕ್ಷ ನಾಯಕರನ್ನು ಗುರಿಯಾಗಿರಿಸಿ ಇಡಿ ದಾಳಿ ನಡೆಸುತ್ತಿದೆ ಎಂದು ಪಿಣರಾಯಿ ವಿಜಯನ್ ಆರೋಪಿಸಿದ್ದಾರೆ. ಇದೇ ವೇಳೆ, ಕೇರಳ ಸಿಎಂ ವಿ.ಡಿ.ಸತೀಶನ್ ಅವರು ಪ್ರಧಾನಿ ನರೇಂದ್ರ ಮೋದಿ ಅವರನ್ನು ಭೇಟಿ ಮಾಡಿದ ಬೆನ್ನಿಗೇ ಈ ದಾಳಿ ನಡೆದಿದ್ದು, ಇದರ ಹಿಂದೆ ಕಾಂಗ್ರೆಸ್-ಬಿಜೆಪಿ ನಂಟಿದೆ ಎಂದು ಸಿಪಿಎಂ ಆರೋಪಿಸಿದೆ. ಇಡಿ ದಾಳಿ ಬಗ್ಗೆ ಆಪ್ ನಾಯಕ ಅರವಿಂದ್ ಕೇಜ್ರಿವಾಲ್ ಕಿಡಿಕಾರಿದ್ದು, ಇದು ಬಿಜೆಪಿಯಿಂದ ಕೇಂದ್ರೀಯ ಏಜೆನ್ಸಿಗಳ ದುರ್ಬಳಕೆಗೆ ಮತ್ತೊಂದು ನಿದರ್ಶನ ಎಂದು ಟೀಕಿಸಿದ್ದಾರೆ. ಕಾಂಗ್ರೆಸ್‌ನ 'ನಿಷ್ಕ್ರಿಯತೆ'' ಬಗ್ಗೆ ದೂರಿರುವ ಅವರು ಇದು ಕಾಂಗ್ರೆಸ್-ಬಿಜೆಪಿ ನಂಟೆಂದು ಆರೋಪಿಸಿ 'ಪ್ರಜಾತಂತ್ರ ಅಪಾಯದಲ್ಲಿದೆ 'ಎಂದೂ ಸೇರಿಸಿದ್ದಾರೆ.

ಇನ್ನೊಬ್ಬ ಸಿಪಿಎಂ ನಾಯಕ ಹಾಗೂ ಮಾಜಿ ಸಚಿವ ಕೆ.ಟಿ.ಜಲೀಲ್ ಇದು ಕೇಂದ್ರ ಮತ್ತು ಕೇರಳ ಸರಕಾರಗಳು ಪಿಣರಾಯಿ ವಿರುದ್ಧ ಪೂರ್ಣ ಬಲ ಪ್ರಯೋಗಿಸಿವೆ ಎಂದು ಆರೋಪಿಸಿದ್ದಾರೆ. ಪಿಣರಾಯಿ ವಿಜಯನ್ ಮೋದಿ ಅವರ ರಾಜಕೀಯ ಸಿದ್ಧಾಂತವನ್ನು ವಿರೋಧಿಸಿದ್ದೇ ಈ ದಾಳಿಗೆ ಕಾರಣ ಎಂದೂ ಆತ ಹೇಳಿಕೊಂಡಿದ್ದಾರೆ.

ರಾಹುಲ್ ಗಾಂಧಿಗೆ ಈಗ ತೃಪ್ತಿ ಆಗಿರಬಹುದು: ಪಿಣರಾಯಿ ವ್ಯಂಗ್ಯ

ತಿರುವನಂತಪುರಂ: ಸಿಎಂಆರ್‌ಎಲ್ ಹಗರಣಕ್ಕೆ ಸಂಬಂಧಿಸಿ ತನ್ನ ನಿವಾಸ ಸೇರಿದಂತೆ ವಿವಿಧೆಡೆ ಇಡಿ ಅಧಿಕಾರಿಗಳು ದಾಳಿ ಮಾಡಿರುವ ಬಗ್ಗೆ ಕೇರಳದ ಮಾಜಿ ಮುಖ್ಯಮಂತ್ರಿ ಹಾಗೂ ಸಿಪಿಎಂ ನಾಯಕ ಪಿಣರಾಯಿ ವಿಜಯನ್ ಅವರು ಕಾಂಗ್ರೆಸ್ ವಿರುದ್ಧ ತೀವ್ರ ಕಿಡಿಕಾರಿದ್ದಾರೆ. ನನ್ನ ಮನೆ ಮೇಲೆ ಏಕೆ ದಾಳಿ ನಡೆಸಿಲ್ಲ? ನನ್ನನ್ನು ಏಕೆ ಇನ್ನೂ ಬಂಧಿಸಿಲ್ಲ ಎಂದು ಪದೇಪದೆ ಪ್ರಶ್ನಿಸಿದ್ದ ರಾಹುಲ್ ಗಾಂಧಿಗೆ ಈಗ ತೃಪ್ತಿಯಾಗಿರಬಹುದು ಎಂದು ಅವರು ವ್ಯಂಗ್ಯವಾಡಿದ್ದಾರೆ. ಬುಧವಾರ ಜಾರಿ ನಿರ್ದೇಶನಾಲಯ (ಇಡಿ) ಕೇರಳದ ಮಾಜಿ ಸಿಎಂ ಪಿಣರಾಯಿ ವಿಜಯನ್ ಅವರ ನಿವಾಸ, ಮಾಜಿ ಲೋಕೋಪಯೋಗಿ ಸಚಿವ ಮೊಹಮ್ಮದ್ ರಿಯಾಸ್ ನಿವಾಸ, ಸಿಎಂಆರ್‌ಎಲ್ ಅಧಿಕಾರಿಗಳ ನಿವಾಸ ಸೇರಿದಂತೆ 10 ಕಡೆ ನಡೆಸಿದ ಶೋಧ ಕಾರ್ಯಾಚರಣೆ ಹಿನ್ನೆಲೆಯಲ್ಲಿ ಪಿಣರಾಯಿ ಈ ರೀತಿ ರಾಹುಲ್ ಗಾಂಧಿ ವಿರುದ್ಧ ಕಿಡಿಕಾರಿದ್ದಾರೆ.

ಇಸಿಗೆ ಯೆಸ್ ಸರ್

ಪುಟ ೧ ➜ ನಾಗರಿಕತ್ವ ಕುರಿತ ಅಂತಿಮ ನಿರ್ಧಾರ ಕೇಂದ್ರ ಸರ್ಕಾರದ ಪ್ರಾಧಿಕಾರವೇ ತೆಗೆದುಕೊಳ್ಳಬೇಕು ಎಂದೂ ಆದೇಶಿಸಿದೆ.

ಮತದಾರರ ಪಟ್ಟಿಯ ಶುದ್ಧತೆ ಪ್ರಜಾಪ್ರಭುತ್ವದ ಆತ್ಮ: 124 ಪುಟಗಳ ತೀರ್ಪಿನಲ್ಲಿ ಸುಪ್ರೀಂ ಕೋರ್ಟ್, ಕಳೆದ ಎರಡು ದಶಕಗಳಿಂದ ಸಮಗ್ರ ಪರಿಷ್ಕರಣೆ ಮಾಡದಿರುವುದು, ಭಾರೀ ಪ್ರಮಾಣದ ವಲಸೆ, ನಗರೀಕರಣ, ಪುನರಾವರ್ತಿತ ಹೆಸರುಗಳು ಹಾಗೂ ದೋಷಪೂರಿತ ದಾಖಲೆಗಳು ಎಸ್‌ಐಆರ್ ಅಗತ್ಯವನ್ನೇ ತೋರಿಸುತ್ತವೆ ಎಂದು ಅಭಿಪ್ರಾಯಪಟ್ಟಿದೆ. ಚುನಾವಣೆ ಎಂದರೆ ಕೇವಲ ಮತದಾನ ಯಂತ್ರದ ಪ್ರಕ್ರಿಯೆಯಲ್ಲ ಎಂದಿರುವ ಅದು, ಅದರ ವಿಶ್ವಾಸಾರ್ಹತೆ ಮತದಾರರ ಪಟ್ಟಿಯ ಶುದ್ಧತೆಯ ಮೇಲೆ ನಿಂತಿದೆ ಎಂಬ ಅಭಿಪ್ರಾಯ ನೀಡಿದೆ.

ರಾಜಕೀಯ ವಾಕ್ಸಮರ: ಬಿಜೆಪಿ ವಕ್ತಾರ ಪ್ರದೀಪ್ ಭಂಡಾರಿ, ಎಸ್‌ಐಆರ್ ಕಾನೂನುಬದ್ಧ ಹಾಗೂ ಸಂವಿಧಾನಬದ್ಧ ಎಂದು ಸುಪ್ರೀಂ ಕೋರ್ಟ್ ಹೇಳಿದೆ. ಕಾಂಗ್ರೆಸ್ ಮತ್ತು ರಾಹುಲ್ ಗಾಂಧಿ ಭಾರತೀಯ ಮತದಾರರಿಗಿಂತ ಅಕ್ರಮ ನುಸುಳುಕೋರರ ಪರ ನಿಂತಿದ್ದರು ಎಂದು ವಾಗ್ದಾಳಿ ನಡೆಸಿದರು. ಟಿಎಂಸಿ ಸಂಸದೆ ಮಹುವಾ ಮೊಯಿತ್ರಾ, ಈ ತೀರ್ಪು ಇಸಿಯ ತಾರತಮ್ಯಪೂರ್ಣ ಕ್ರಮಗಳಿಗೆ ಮುದ್ರೆ ಒತ್ತಿದಂತಾಗಿದೆ. ಲಕ್ಷಾಂತರ ಮಾನ್ಯ ಮತದಾರರು ಮತಹಕ್ಕು ಕಳೆದುಕೊಂಡಿದ್ದಾರೆ ಎಂದು ಆಕ್ಷೇಪಿಸಿದರು. ಅರ್ಜಿದಾರರಲ್ಲಿ ಒಬ್ಬರಾಗಿದ್ದ ಯೋಗೇಂದ್ರ ಯಾದವ್, ಇಂದಿನಿಂದ ಯಾರು ಮತ ಹಾಕಬೇಕು, ಯಾರು ಹಾಕಬಾರದು ಎಂಬುದನ್ನು ಬಿಜೆಪಿ ನಿರ್ಧರಿಸುವ ಪರಿಸ್ಥಿತಿ ಬಂದಿದೆ ಎಂದು ಕಿಡಿಕಾರಿದರು.

ಈ ತೀರ್ಪು ಮಹತ್ವ ಏಕೆ?

ಪುಟ ೧ ➜ ಇದರಿಂದ ಚುನಾವಣಾ ಆಯೋಗದ ಅಧಿಕಾರ ಮತ್ತಷ್ಟು ಬಲಗೊಂಡಿದ್ದು, 2027ರೊಳಗೆ ಹಲವು ರಾಜ್ಯಗಳಲ್ಲಿ ಇದೇ ಮಾದರಿಯ ಎಸ್‌ಐಆರ್ ಅಭಿಯಾನಗಳು ಆರಂಭವಾಗುವ ಸಾಧ್ಯತೆಗಳ ಬಗ್ಗೆ ರಾಜಕೀಯ ವಲಯದಲ್ಲಿ ಚರ್ಚೆ ಶುರುವಾಗಿದೆ.

ಟೈಮ್‌ಲೈನ್

ಜೂ. 26, 2025	ಬಿಹಾರದಲ್ಲಿ ಎಸ್‌ಐಆರ್ ಘೋಷಣೆ
ಜು. 5	ಎಡಿಆರ್‌ನಿಂದ ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ
ಜು. 28	ವಿಚಾರಣೆ ಆರಂಭ
ಆ.1	ಬಿಹಾರದಲ್ಲಿ 65 ಲಕ್ಷ ಹೆಸರುಗಳ ತೆಗೆದ ಬಗ್ಗೆ ಘೋಷಣೆ
ಸೆ.30	ಅಂತಿಮ ಮತದಾರರ ಪಟ್ಟಿ ಪ್ರಕಟ
ಅ. 7	ಹೊರಗುಳಿದ ಮತದಾರರ ವಿವರ ಕೇಳಿದ ಎಸ್‌ಸಿ
ಅ. 9	ಕಾನೂನು ನೆರವಿಗೆ ಸೂಚನೆ
ಜ. 29, 2026	ತೀರ್ಪು ಕಾಯ್ದಿರಿಸಿದ ಸುಪ್ರೀಂ
ಮೇ 27, 2026	ಎಸ್‌ಐಆರ್ ಮಾನ್ಯ ಎಂದು ಸುಪ್ರೀಂ ತೀರ್ಪು

ಆಯೋಗದ ವಾದ

ಚುನಾವಣಾ ಆಯೋಗವು ತನ್ನ ಕ್ರಮವನ್ನು ಬಲವಾಗಿ ಸಮರ್ಥಿಸಿಕೊಂಡಿತು. ಕಳೆದ ಎರಡು ದಶಕಗಳಿಂದ ಸಮಗ್ರ ಪರಿಶೀಲನೆ ನಡೆದಿರದ ಕಾರಣ, ಮತದಾರರ ಪಟ್ಟಿಯಲ್ಲಿ ಪುನರಾವರ್ತಿತ ಹೆಸರುಗಳು, ವಲಸೆಗೊಂಡವರ ದಾಖಲೆಗಳು ಮತ್ತು ದೋಷಪೂರಿತ ನಮೂದುಗಳು ಹೆಚ್ಚಾಗಿವೆ ಎಂದು ಆಯೋಗ ಹೇಳಿತು. ಸಂವಿಧಾನದ 324ನೇ ವಿಧಿ ಹಾಗೂ ಜನಪ್ರತಿನಿಧಿಗಳ ಕಾಯ್ದೆಯ ಅಡಿಯಲ್ಲಿ ಚುನಾವಣಾ ಆಯೋಗಕ್ಕೆ ವಿಶೇಷ ಪರಿಷ್ಕರಣೆ ನಡೆಸುವ ಅಧಿಕಾರ ಇದೆ ಎಂದು ಇಸಿ ವಾದಿಸಿತು. ಇದು ನಾಗರಿಕತ್ವ ತೀರ್ಮಾನಿಸುವ ಪ್ರಕ್ರಿಯೆಯಲ್ಲ, ಕೇವಲ ಮತದಾರರ ಅರ್ಹತೆ ಪರಿಶೀಲನೆಯಷ್ಟೇ ಎಂದು ಸ್ಪಷ್ಟಪಡಿಸಿತು. ಇದೇ ವೇಳೆ, ಯಾರನ್ನೂ ಏಕಪಕ್ಷೀಯವಾಗಿ ಪಟ್ಟಿಯಿಂದ ತೆಗೆದುಹಾಕಿಲ್ಲ, ಕರಡು ಪಟ್ಟಿ ಪ್ರಕಟಿಸಿ ಆಕ್ಷೇಪಣೆ ಸಲ್ಲಿಸಲು ಅವಕಾಶ ನೀಡಲಾಗಿದೆ. ಸಾಕಷ್ಟು ಪ್ರಕ್ರಿಯಾತ್ಮಕ ಸುರಕ್ಷತಾ ಕ್ರಮಗಳಿವೆ ಎಂದು ಚುನಾವಣಾ ಆಯೋಗ ಕೋರ್ಟ್‌ಗೆ ತಿಳಿಸಿತು.

ಅರ್ಜಿದಾರರ ವಾದ

ಬಿಹಾರದಲ್ಲಿ ಚುನಾವಣಾ ಆಯೋಗ ಕೈಗೊಂಡಿದ್ದ ವಿಶೇಷ ತೀವ್ರ ಪರಿಷ್ಕರಣೆ (ಎಸ್‌ಐಆರ್) ಕ್ರಮವನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದ ಅರ್ಜಿದಾರರು, ಇದು ಸಾಮಾನ್ಯ ಮತದಾರರ ಪರಿಶೀಲನೆ ಅಲ್ಲ, ಬದಲಿಗೆ ಪರೋಕ್ಷ ಎನ್‌ಆರ್‌ಸಿ ಪ್ರಕ್ರಿಯೆಯಾಗಿದೆ ಎಂದು ವಾದಿಸಿದರು. ಮತದಾರರ ಪಟ್ಟಿಗೆ ಹೆಸರು ಸೇರಿಸಲು ಅಥವಾ ಉಳಿಸಿಕೊಳ್ಳಲು ಜನರಿಂದ ದಾಖಲೆಗಳನ್ನು ಕೇಳುವ ಮೂಲಕ ಚುನಾವಣಾ ಆಯೋಗ ತನ್ನ ಅಧಿಕಾರ ಮೀರಿದೆ ಎಂದು ಅವರು ಆಕ್ಷೇಪಿಸಿದರು. ಅರ್ಜಿದಾರರ ಪರ ವಕೀಲರು, ನಾಗರಿಕತ್ವ ನಿರ್ಧಾರ ಮಾಡುವ ಅಧಿಕಾರ ಕೇವಲ ಕೇಂದ್ರ ಸರ್ಕಾರದ ಪ್ರಾಧಿಕಾರಕ್ಕಷ್ಟೇ ಇದೆ. ಚುನಾವಣಾ ಆಯೋಗವು ಮತದಾರರ ಪಟ್ಟಿಯ ನಿರ್ವಹಣೆ ಮಾಡಬಹುದೇ ಹೊರತು ವ್ಯಕ್ತಿಯ ನಾಗರಿಕತ್ವ ಪ್ರಶ್ನಿಸಲು ಸಾಧ್ಯವಿಲ್ಲ ಎಂದು ವಾದಿಸಿದರು. ಅದರ ಜತೆಗೆ, ಬಡವರು, ವಲಸೆ ಕಾರ್ಮಿಕರು, ಗ್ರಾಮೀಣ ಪ್ರದೇಶದ ಜನರು ಮತ್ತು ದಾಖಲೆಗಳ ಕೊರತೆಯಿರುವವರು ಅನ್ಯಾಯವಾಗಿ ಮತದಾರರ ಪಟ್ಟಿಯಿಂದ ಹೊರಗುಳಿಯುವ ಅಪಾಯ ಎದುರಿಸಿದ್ದಾರೆ ಎಂದೂ ಅರ್ಜಿದಾರರು ಹೇಳಿದರು. ಲಕ್ಷಾಂತರ ಹೆಸರುಗಳನ್ನು ಕೈಬಿಟ್ಟಿರುವುದು ಮತಹಕ್ಕಿನ ಮೇಲೆ ದೊಡ್ಡ ಹೊಡೆತ ಎಂದು ಅವರು ಕೋರ್ಟ್ ಗಮನಕ್ಕೆ ತಂದರು.

ಜೂನ್ 4ರಿಂದ ಆಫ್ರಿಕಾ ಚೀತಾ ವೀಕ್ಷಣೆ ಅವಕಾಶ

ಪುಟ ೧ ➜ ವನ್ಯಜೀವಿ ವಿನಿಮಯ ಕಾರ್ಯಕ್ರಮದ ಭಾಗವಾಗಿ ಏ.18ರ ಮಧ್ಯರಾತ್ರಿ ದಕ್ಷಿಣ ಆಫ್ರಿಕಾದಿಂದ ಬೆಂಗಳೂರಿಗೆ ಬಂದ ಈ ಹೊಸ ಅತಿಥಿಗಳನ್ನು ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಅರಣ್ಯ ಸಚಿವ ಈಶ್ವರ ಖಂಡ್ರೆ ಬರಮಾಡಿಕೊಂಡಿದ್ದರು. ಈ ಚೀತಾಗಳು ಬನ್ನೇರುಘಟ್ಟ ಪರಿಸರ, ವಾತಾವರಣ, ಹವಾಮಾನಕ್ಕೆ ಹೊಂದಿಕೊಳ್ಳಲು ಪ್ರತ್ಯೇಕವಾಗಿ ಇಡಲಾಗಿತ್ತು. ಅಲ್ಲದೆ ಇವುಗಳ ಆರೋಗ್ಯದ ಬಗ್ಗೆ ಸತತ ನಿಗಾ ಇಡಲಾಗಿತ್ತು. ಪ್ರಸ್ತುತ ಚೀತಾಗಳು ಸಂಪೂರ್ಣ ಆರೋಗ್ಯವಾಗಿವೆ ಎಂಬ ಮಾಹಿತಿ ಪಡೆದ ಸಚಿವರು, ಜೂನ್ ಮೊದಲ ವಾರದಲ್ಲಿ ಪ್ರವಾಸಿಗರಿಗೆ ಚೀತಾ ನೋಡಲು ಅವಕಾಶ ಕಲ್ಪಿಸುವಂತೆ ನಿರ್ದೇಶಿಸಿದರು.

ಜಾತಿಗಣತಿ ವರದಿ ಸ್ವೀಕರಿಸಿದ ಸಿಎಂ

ಪುಟ ೧ ➜ ಅದರಂತೆ ಈ ವರದಿಯನ್ನು ಬುಧವಾರ ಮುಖ್ಯಮಂತ್ರಿಗಳು ಸ್ವೀಕರಿಸಿದರು. ಈ ಸಂದರ್ಭದಲ್ಲಿ ಸಚಿವರಾದ ಶಿವರಾಜ್ ತಂಗಡಗಿ, ಎಚ್.ಸಿ. ಮಹದೇವಪ್ಪ, ಎಂ.ಸಿ. ಸುಧಾಕರ್, ಸತೀಶ್ ಜಾರಕಿಹೊಳಿ, ಚಲುವರಾಯಸ್ವಾಮಿ ಸೇರಿದಂತೆ ಆಯೋಗದ ಸದಸ್ಯರು, ವಿಶೇಷ ಸಲಹೆಗಾರರು ಮತ್ತು ಇತರೆ ತಜ್ಞರು ಉಪಸ್ಥಿತರಿದ್ದರು.



> ಎಲ್ಲ ವರದಿ ಸಂಪೂರ್ಣ ಆಗಿದ್ದು, ವಿವರ ಹೇಳಲು ಆಗಲ್ಲ. ಒಬಿಸಿ ಸಂಬಂಧ ವರದಿ ಸಂಪೂರ್ಣ ಆಗಿದೆ. ವರದಿ ಭಾಷಾಂತರ ಆಗಲು ಸಮಯ ಬೇಕಿತ್ತು. ಮೇ 30ಕ್ಕೆ ವರದಿ ನೀಡಲು ನಿರ್ಧರಿಸಲಾಗಿತ್ತು. 29ಕ್ಕೆ ರಜೆ ಇರುವುದರಿಂದ ಇವತ್ತು ಸಲ್ಲಿಕೆ ಮಾಡಲಾಯಿತು. 300 ಪುಟಗಳಷ್ಟಿದೆ ವರದಿ.
> ■ ಮಧುಸೂದನ್ ಆರ್. ನಾಯಕ್, ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷ

ಹೆಚ್ಚೆಚ್ಚು ನೀರು ಕುಡಿಯಿರಿ

ಪುಟ ೧ ➜ ಇದು ಅವರು ಚೇತರಿಸಲು ನೆರವಾಗುತ್ತೆ. ಮಿತಿಮೀರಿದ ತಾಪಮಾನವು ವಿಶೇಷವಾಗಿ ಮಕ್ಕಳು, ಹಿರಿಯ ನಾಗರಿಕರು ಮತ್ತು ಹೊರಾಂಗಣಗಳಲ್ಲಿ ದುಡಿಯುವವರ ಮೇಲೆ ಬೇಗ ಪ್ರತಿಕೂಲ ಪರಿಣಾಮ ಬೀರುತ್ತೆ. ಈ ಎಚ್ಚರಿಕೆಗಳನ್ನು ಕಡೆಗಣಿಸುವುದು ಅಪಾಯಕಾರಿ. ಕಡೆಗಣನೆಯಿಂದ ಹೀಟ್‌ಸ್ಟ್ರೋಕ್‌ನಂತಹ ಸಮಸ್ಯೆಗಳಾಗುವುದು. ಇಂತಹ ಹವಾಮಾನದಲ್ಲಿ ಸಕಾಲಿಕ ಕಾಳಜಿ ಮತ್ತು ಜಾಗ್ರತೆ ತೀರಾ ಅಗತ್ಯವೆಂದು ಪ್ರಧಾನಿ ಮೋದಿ ಪೋಸ್ಟ್‌ನಲ್ಲಿ ಸಲಹೆಯಿತ್ತಿದ್ದಾರೆ.

ಅಸ್ಸಾಂನಲ್ಲಿ ಏನಾಸಂ ಜಾರಿ

ಪುಟ ೧ ➜ **ಕಡ್ಡಾಯ ನೋಂದಣಿ, ರಕ್ಷಣೆ:** ಕರಡು ಕಾನೂನಿನ ಪ್ರಕಾರ, ದಂಪತಿಗಳು ವಿವಾಹ ಅಥವಾ ವಿಚ್ಛೇದನ ನಡೆದ 60 ದಿನಗಳ ಕಡ್ಡಾಯ ಅವಧಿಯೊಳಗೆ ಅದನ್ನು ಅಧಿಕೃತವಾಗಿ ನೋಂದಾಯಿಸಬೇಕು. ಅಲ್ಲದೆ, ಲಿವ್-ಇನ್ ಸಂಬಂಧಗಳನ್ನು ಆರಂಭಿಸಿದ 30 ದಿನಗಳ ಒಳಗೆ ಕಡ್ಡಾಯವಾಗಿ ನೋಂದಾಯಿಸಬೇಕೆಂದು ಮಸೂದೆ ಒತ್ತಾಯಿಸುತ್ತದೆ. ಇದನ್ನು ಪಾಲಿಸಲು ವಿಫಲವಾದರೆ 3 ತಿಂಗಳವರೆಗೆ ಜೈಲು ಶಿಕ್ಷೆ ಅಥವಾ 10 ಸಾವಿರ ರೂ. ದಂಡ ವಿಧಿಸಲಾಗುತ್ತದೆ. ನೋಂದಾಯಿತ ಲಿವ್-ಇನ್ ಸಂಬಂಧದಿಂದ ಜನಿಸಿದ ಮಕ್ಕಳಿಗೆ ಈ ಕಾನೂನಿನ ಚೌಕಟ್ಟು ಸಂಪೂರ್ಣ ಕಾನೂನುಬದ್ಧ ಸ್ಥಾನಮಾನ ನೀಡುತ್ತದೆ. ಇದು ಕೈಬಿಡಲ್ಪಟ್ಟ ಲಿವ್-ಇನ್ ಪಾಲುದಾರರಿಗೂ ಶಾಸನಬದ್ಧ ಹಕ್ಕುಗಳನ್ನು ವಿಸ್ತರಿಸುತ್ತದೆ. ಅವರು ನ್ಯಾಯಾಲಯಗಳ ಮೂಲಕ ಕಾನೂನುಬದ್ಧವಾಗಿ ಆರ್ಥಿಕ ಜೀವನಾಂಶ ಪಡೆಯಲು ಅನುಮತಿಸುತ್ತದೆ.

ಸಂಸ್ಕೃತಿ ರಕ್ಷಣೆ: ಪ್ರಾದೇಶಿಕ ವೈವಿಧ್ಯತೆ ಕಾಪಾಡಲು, ನಿಖಾ, ಸಪ್ತಪದಿ ಮತ್ತು ಆನಂದ್ ಕಾರಜ್ ಸೇರಿದಂತೆ ಯಾವುದೇ ಧಾರ್ಮಿಕ ಪದ್ಧತಿಗಳ ಪ್ರಕಾರ ವಿವಾಹವಾಗಲು ಕಾನೂನು ಅನುಮತಿಸುತ್ತದೆ.

ಮೋದಿ ಭೇಟಿಯಾದ ತ.ನಾಡು ಸಿಎಂ ವಿಜಯ್

ಪುಟ ೧ ➜ ರಾಜ್ಯದ ಕಲ್ಯಾಣ ಕಾರ್ಯಕ್ರಮಗಳು ಮತ್ತು ಮೂಲಸೌಕರ್ಯಗಳಿಗೆ ಕೇಂದ್ರದ ಹಣಕಾಸು ಬೆಂಬಲ, ಪ್ರಮುಖ ಅಭಿವೃದ್ಧಿ ಯೋಜನೆಗಳಿಗೆ ಮಂಜೂರಾತಿಗೆ ಆಗ್ರಹಿಸುವ ಮನವಿಪತ್ರವನ್ನು ಪ್ರಧಾನಿಗೆ ಸಲ್ಲಿಸಿದ್ದಾರೆ. ಸಿ. ಜೋಸೆಫ್ ವಿಜಯ್ ಈ ತಿಂಗಳಾರಂಭದಲ್ಲಿ ತಮಿಳುನಾಡಿನ ಮುಖ್ಯಮಂತ್ರಿಯಾದ ನಂತರದಲ್ಲಿ ದಿಲ್ಲಿಗೆ ನೀಡಿದ ಚೊಚ್ಚಲ ಭೇಟಿ ಇದಾಗಿದೆ.



ಮೇಕೆದಾಟಿನಿಂದ ತಮಿಳ್ನಾಡಿಗೆ ತೊಂದರೆ: ಕರ್ನಾಟಕದ ಪ್ರಸ್ತಾವಿತ ಮೇಕೆದಾಟು ಅಣೆಕಟ್ಟು ಯೋಜನೆಗೆ ಬಲವಾದ ವಿರೋಧ ವ್ಯಕ್ತಪಡಿಸಿದ ಸಿಎಂ ವಿಜಯ್, ಯೋಜನೆಯಿಂದ ರಾಜ್ಯದ ಕುಡಿಯುವ ನೀರು ಮತ್ತು ನೀರಾವರಿ ಅಗತ್ಯಗಳಿಗೆ ತೊಂದರೆಯಾಗಲಿದೆ. ಈ ಹಿನ್ನೆಲೆಯಲ್ಲಿ, ಕಾವೇರಿ ನೀರಿಗೆ ಸಂಬಂಧಿಸಿ ತಮಿಳುನಾಡಿನ ಹಕ್ಕುಗಳನ್ನು ಕಾಪಾಡಬೇಕು. ತಮಿಳುನಾಡಿನ ಸಮ್ಮತಿ ವಿನಾ ಮೇಕೆದಾಟು ಯೋಜನೆಗೆ ಮಂಜೂರಾತಿ ಕೊಡಕೂಡದೆಂದು ಪ್ರಧಾನಿ ಮೋದಿ ಅವರನ್ನು ವಿನಂತಿಸಿದರು.

ರಾಜ್ಯದಲ್ಲಿ ಈಗಾಗಲೆ ಪ್ರಗತಿಯಲ್ಲಿರುವ ಅಭಿವೃದ್ಧಿ ಕಾರ್ಯಗಳಿಗೆ ಕೇಂದ್ರದ ವಿಸ್ತೃತ ನೆರವು ಕೋರಿದ ಸಿಎಂ ವಿಜಯ್, ನಗರ ಮೂಲಸೌಕರ್ಯ, ಸಾರಿಗೆ ಮತ್ತು ಕೈಗಾರಿಕಾ ವಿಸ್ತರಣೆಗೆ ಸಂಬಂಧಪಟ್ಟ ಯೋಜನೆಗಳಿಗೆ ತುರ್ತು ಮಂಜೂರಾತಿ ನೀಡುವಂತೆ ಪ್ರಧಾನಿ ಅವರಲ್ಲಿ ಮನವಿ ಮಾಡಿದರು.

ಮೇಕೆದಾಟು ಚರ್ಚೆಯ ಪ್ರಧಾನ ವಿಚಾರ: ಮೇಕೆದಾಟು ವಿವಾದವನ್ನು ಕೇಂದ್ರೀಕರಿಸಿ ಸಿಎಂ ವಿಜಯ್ ಪ್ರಧಾನಿ ಜತೆ ಚರ್ಚಿಸಿದರು. ಮೇಕೆದಾಟಿನಲ್ಲಿ ಕಾವೇರಿ ನದಿಗೆ ಸಮತೋಲಿತ ಜಲಾಶಯ ನಿರ್ಮಿಸುವ ಕರ್ನಾಟಕದ ಪ್ರಸ್ತಾವವನ್ನು ತಮಿಳುನಾಡು ಖಡಾಖಂಡಿತ ನೆಲೆಯಲ್ಲಿ ವಿರೋಧಿಸಿದೆ. ಇದರಿಂದ ಕಾವೇರಿ ನದಿ ನೀರಲ್ಲಿ ತಮಿಳ್ನಾಡಿನ ಪಾಲಿಗೆ ತೊಂದರೆಯಾಗಲಿದೆ ಎಂಬುದು ತಮಿಳ್ನಾಡಿನ ಆರೋಪ. ಈ ವಿಚಾರವು ಹಲವು ವರ್ಷಗಳಿಂದ ಉಭಯ ರಾಜ್ಯಗಳ ನಡುವೆ ರಾಜಕೀಯವಾಗಿ ಸೂಕ್ಷ್ಮ ಸಂಗತಿಯಾಗಿ ಬಾಕಿಯುಳಿದಿದೆ.

ಮೇಕೆದಾಟು ಯೋಜನೆಗೆ ಮಂಜೂರಾತಿ ನೀಡಕೂಡದು ಮತ್ತು ಕಾವೇರಿ ನ್ಯಾಯಮಂಡಳಿಯಲ್ಲಿ ತಮಿಳ್ನಾಡಿನ ಜಲ ಹಕ್ಕುಗಳನ್ನು ರಕ್ಷಿಸಬೇಕೆಂದು ಸಿಎಂ ವಿಜಯ್ ಈ ಹಿಂದೆಯೇ ಪ್ರಧಾನಿ ಮೋದಿ ಅವರನ್ನು ಪತ್ರಮುಖೇನ ವಿನಂತಿಸಿದ್ದರು.

ಪ್ರಧಾನಿ ಮೋದಿ ಜತೆ ಮಾತುಕತೆ ಬಳಿಕ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರನ್ನು ಭೇಟಿಯಾಗಿ, ರಾಜ್ಯದ ವಿವಿಧ ಯೋಜನೆಗಳಿಗೆ ಹಣಕಾಸು ಬೆಂಬಲವನ್ನು ಸಿಎಂ ವಿಜಯ್ ಕೋರಲಿದ್ದಾರೆ. ತಮಿಳ್ನಾಡಿಗೆ ಕೇಂದ್ರದಿಂದ ಆತ್ಯಧಿಕ ಅನುದಾನ ಮಂಜೂರು ಮಾಡುವಂತೆಯೂ ಸಚಿವರನ್ನು ಆಗ್ರಹಿಸಲಿದ್ದಾರೆ.

ದತ್ತಿ ಮಸೂದೆಗೆ ರಾಜ್ಯಪಾಲರ ಅಂಕಿತ

ಬೆಂಗಳೂರು: ವಿಧಾನಸಭೆ ಮತ್ತು ವಿಧಾನ ಪರಿಷತ್‌ನಲ್ಲಿ ಅನುಮೋದನೆಗೊಂಡಿದ್ದ ಹಿಂದು ಧಾರ್ಮಿಕ ದತ್ತಿ ಇಲಾಖೆಯ ಮಸೂದೆಗಳಿಗೆ ರಾಜ್ಯಪಾಲ ಥಾವರ್ ಚಂದ್ ಗೆಹಲೋತ್ ಅವರು ಅನುಮೋದನೆ ನೀಡಿದ್ದಾರೆ.

ಸರ್ಕಾರದ ನಿಯಂತ್ರಣದಲ್ಲಿರುವ ಹಿಂದು ಧಾರ್ಮಿಕ ದತ್ತಿ ಇಲಾಖೆಯ ಪ್ರಮುಖ ದೇವಾಲಯಗಳಲ್ಲಿ ಭಕ್ತಾದಿಗಳ ಅನುಕೂಲಕ್ಕಾಗಿ ಅಗತ್ಯವಿರುವ ಮೂಲಭೂತ ಸೌಕರ್ಯಗಳನ್ನು ಒಳಗೊಂಡಂತೆ ದೇವಾಲಯಗಳ ಸಮಗ್ರ ಅಭಿವೃದ್ಧಿಯ ದೃಷ್ಟಿಯಿಂದ ಸರ್ಕಾರವು ದೇವಾಲಯಗಳ ಅಭಿವೃದ್ಧಿ ಪ್ರಾಧಿಕಾರಗಳನ್ನು ರಚಿಸಲಾಗಿದೆ.

ನಂತರ ಆಯಾ ದೇವಾಲಯಗಳಲ್ಲಿ ದಿನನಿತ್ಯ ಮತ್ತು ಹಬ್ಬ ಹರಿದಿನ, ರಥೋತ್ಸವಗಳಂತಹ ವಿಶೇಷ ದಿನಗಳಲ್ಲಿ ಹಿಂದಿನಿಂದಲೂ ನಡೆದುಕೊಂಡು ಬಂದಿರುವ ಪೂಜಾ ವಿಧಿ ವಿಧಾನಗಳು, ರೂಢಿ ಸಂಪ್ರದಾಯಗಳು, ಪದ್ಧತಿಗಳ ಆಚರಣೆಯಲ್ಲಿ ಯಾವುದೇ ಲೋಪವಾಗದಂತೆ ನಿರ್ವಹಿಸಲು ಪರಿಣಾಮಕಾರಿಯಾಗಿ ಆಡಳಿತ ನಿರ್ವಹಿಸುವ ದೃಷ್ಟಿಯಿಂದ ಸರ್ಕಾರವು ಈ ಪ್ರಾಧಿಕಾರಗಳಲ್ಲಿ ಮುಜರಾಯಿ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿರುವ ಅನುಭವವುಳ್ಳ ಗ್ರೂಪ್ ಎ ಹಿರಿಯ ಶ್ರೇಣಿಯ ಅಧಿಕಾರಿಗಳನ್ನು ಕಾರ್ಯದರ್ಶಿಗಳ ಹುದ್ದೆಗೆ ನಿಯುಕ್ತಿಗೊಳಿಸುವುದು ಸೂಕ್ತವೆಂದು ತೀರ್ಮಾನಿಸಲಾಗಿದೆ.

ಅದರಂತೆ ಪ್ರಸ್ತುತ ರಚಿಸಲಾಗಿರುವ ಪ್ರಾಧಿಕಾರಗಳಾದ ಶ್ರೀ ಚಾಮುಂಡೇಶ್ವರಿ ದೇವಾಲಯದ ಅಭಿವೃದ್ಧಿ ಪ್ರಾಧಿಕಾರ, ಸವದತ್ತಿ ಶ್ರೀ ರೇಣುಕಾ ಯಲ್ಲಮ್ಮ ದೇವಾಲಯದ ಪ್ರಾಧಿಕಾರ, ಶ್ರೀ ಘಾಟಿ ಸುಬ್ರಹ್ಮಣ್ಯಸ್ವಾಮಿ ದೇವಾಲಯದ ಅಭಿವೃದ್ಧಿ ಪ್ರಾಧಿಕಾರ, ಕೊಪ್ಪಳ ಹುಲಿಗಿ ಶ್ರೀ ಹುಲಿಗಮ್ಮ ದೇವಾಲಯದ ಅಭಿವೃದ್ಧಿ ಪ್ರಾಧಿಕಾರ, ಮಹದೇಶ್ವರ ಬೆಟ್ಟ ಶ್ರೀ ಮಲೆ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ರಚಿಸಲಾಗಿದೆ.

ಈ ದೇವಾಲಯಗಳ ಅಭಿವೃದ್ಧಿ ಪ್ರಾಧಿಕಾರಗಳ ಕಾನೂನು (ತಿದ್ದುಪಡಿ) ವಿಧೇಯಕ 2025ರ ತಿದ್ದುಪಡಿ ವಿಧೇಯಕಗಳನ್ನು ವಿಧಾನಸಭೆ ಮತ್ತು ವಿಧಾನ ಪರಿಷತ್ ಎರಡು ಸದನಗಳಲ್ಲಿ ಮಂಡನೆ ಮಾಡಿ ಅಂಗೀಕರಿಸಲ್ಪಟ್ಟ ಈ ವಿಧೇಯಕಗಳಿಗೆ ರಾಜ್ಯಪಾಲರು ಅಂಕಿತ ಹಾಕಿದ್ದಾರೆ.

ಸಾಧನೆ ಕನ್ನಡಿಗರಿಗೆ ಅರ್ಪಣೆ: ಸಿಎಂ

ಬೆಂಗಳೂರು: ರಾಜ್ಯದ ಜನರ ಆಶೀರ್ವಾದದೊಂದಿಗೆ ನಾವು ಅಧಿಕಾರಕ್ಕೆ ಬಂದು ಮೂರು ವರ್ಷಗಳು ಪೂರೈಸಿರುವ ಈ ಸಾರ್ಥಕ ಸಂದರ್ಭದಲ್ಲಿ ನಮ್ಮ ಸರ್ಕಾರದ ಎಲ್ಲಾ ಸಾಧನೆಗಳ ಶ್ರೇಯವನ್ನು ಪ್ರತಿಯೊಬ್ಬ ಕನ್ನಡಿಗನಿಗೂ ಅರ್ಪಿಸುತ್ತಿದ್ದೇವೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಮಾಹಿತಿ ಹಂಚಿಕೊಂಡಿದ್ದಾರೆ.

ಈ ಕುರಿತು ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಬರೆದುಕೊಂಡಿರುವ ಅವರು, ಚುನಾವಣಾ ಪೂರ್ವದಲ್ಲಿ ರಾಜ್ಯದ ಜನತೆಗೆ ನೀಡಿದ ಪ್ರತಿ ಮಾತಿಗೂ ಬದ್ಧರಾಗಿ ನಡೆಯುವ ಮೂಲಕ ನುಡಿದಂತೆ ನಡೆದ ಹೆಮ್ಮೆ ನಮಗಿದೆ. 5 ಗ್ಯಾರಂಟಿ ಯೋಜನೆಗಳನ್ನು ಜಾರಿಗೊಳಿಸಿ, ಪ್ರತಿ ಮನೆಗೂ ತಲುಪಿಸುವಲ್ಲಿ ಯಶಸ್ವಿಯಾಗಿದ್ದೇವೆ ಎಂದಿದ್ದಾರೆ. ಯಾರೂ ಹಸಿವಿನಿಂದ ಮಲಗಬಾರದು ಎಂಬ ಸಂಕಲ್ಪದೊಂದಿಗೆ ಜಾರಿಗೊಂಡ ಅನ್ನಭಾಗ್ಯ ಯೋಜನೆಯು ಕೋಟ್ಯಂತರ ಕುಟುಂಬಗಳಿಗೆ ಪೌಷ್ಟಿಕ ಆಹಾರದ ಭದ್ರತೆ ನೀಡುವ ಮೂಲಕ ಆರೋಗ್ಯವಂತ ಸಮಾಜಕ್ಕೆ ಆಧಾರವಾಗಿದೆ. ಅನ್ನಭಾಗ್ಯ ಯೋಜನೆಯಡಿ ಉಚಿತ ಆಹಾರಧಾನ್ಯ ವಿತರಿಸಲು ಈವರೆಗೆ 18,897 ಕೋಟಿ ರೂ. ವ್ಯಯಿಸಲಾಗಿದ್ದು, 4.26 ಕೋಟಿ ಪಡಿತರದಾರರು ಮೂರು ಹೊತ್ತು ನೆಮ್ಮದಿಯಿಂದ ಊಟ ಮಾಡುತ್ತಿದ್ದಾರೆ ಎಂದಿದ್ದಾರೆ.

ವಿದ್ಯುತ್ ಬಿಲ್ ಹೊರೆಯಿಂದ ಕಂಗೆಟ್ಟಿದ್ದ ಜನರಿಗೆ ಉಚಿತ ವಿದ್ಯುತ್ ಸೌಲಭ್ಯ ನೀಡಿ, ನೆಮ್ಮದಿಯ ಬದುಕು ಕಲ್ಪಿಸುವ ಬದ್ಧತೆಯೊಂದಿಗೆ ನಾವು ಜಾರಿಗೆ ತಂದ ಗೃಹಜ್ಯೋತಿ ಯೋಜನೆ ಇಂದು ನಾಡಿನ ಪ್ರತಿ ಮನೆಯನ್ನು ಬೆಳಗುತ್ತಿದೆ. ಈ ಯೋಜನೆಯಡಿ ರಾಜ್ಯದ ಒಟ್ಟು 1.64 ಕೋಟಿ ಕುಟುಂಬಗಳಿಗೆ ಮಾಸಿಕ ಗರಿಷ್ಠ 200 ಯುನಿಟ್‌ವರೆಗೆ ಉಚಿತ ವಿದ್ಯುತ್ ನೀಡಲಾಗುತ್ತಿದೆ. ಈವರೆಗೆ ಯೋಜನೆಗಾಗಿ 26,115 ಕೋಟಿ ರೂ. ಅನುದಾನವನ್ನು ವ್ಯಯಿಸಲಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಬರೆದುಕೊಂಡಿದ್ದಾರೆ. ನಾಡಿನ ಪ್ರತಿಯೊಬ್ಬ ಮಹಿಳೆಯೂ ಕೂಡ ಆರ್ಥಿಕ ಸಂಕಷ್ಟಗಳಿಂದ ಹೊರಬಂದು ಸುಖ ಸಂತೋಷದಿಂದ ಜೀವನ ಸಾಗಿಸುವಂತಾಗಬೇಕು ಎಂಬ ಉದ್ದೇಶವನ್ನು ಗೃಹಲಕ್ಷ್ಮಿ ಯೋಜನೆಯು ಈಡೇರಿಸುತ್ತಿದೆ. ಸುಮಾರು 1.24 ಕೋಟಿ ಫಲಾನುಭವಿಗಳ ಖಾತೆಗೆ ಪ್ರತಿ ತಿಂಗಳು 2,000 ರೂ. ಧನಸಹಾಯ ವರ್ಗಾವಣೆ ಮಾಡಲಾಗುತ್ತಿದ್ದು, ಈ ಯೋಜನೆಗಾಗಿ ಈವರೆಗೆ 74,216 ಕೋಟಿ ರೂ. ವ್ಯಯಿಸಲಾಗಿದೆ ಎಂದು ಎಕ್ಸ್‌ನಲ್ಲಿ ಸಿದ್ದರಾಮಯ್ಯ ಮಾಹಿತಿ ನೀಡಿದ್ದಾರೆ.



ಮಾಜಿ ಪ್ರಧಾನಮಂತ್ರಿ ಜವಾಹರಲಾಲ್ ನೆಹರು ಅವರ ಪುಣ್ಯಸ್ಮರಣೆ ಅಂಗವಾಗಿ ವಿಧಾನಸೌಧದ ಪೂರ್ವ ದಿಕ್ಕಿನಲ್ಲಿರುವ ಅವರ ಪ್ರತಿಮೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಾಲಾರ್ಪಣೆ ಮಾಡಿ ಗೌರವ ಸಲ್ಲಿಸಿದರು. ಸಚಿವ ಎಚ್.ಸಿ. ಮಹದೇವಪ್ಪ ಉಪಸ್ಥಿತರಿದ್ದರು.

ಜೂ.9ರವರೆಗೆ ನ್ಯಾಯಾಂಗ ಬಂಧನ

ಬೆಳಗಾವಿ: ಬಹುಕೋಟಿ ಆರೋಪಿ ಶಿವಾನಂದ ನೀಲಣ್ಣವರ ಇದೀಗ ಮಹತ್ವದ ಘಟ್ಟಕ್ಕೆ ತಲಪಿದ್ದು ಸಿಐಡಿ ಅಧಿಕಾರಿಗಳ ಹತ್ತು ದಿನಗಳ ಪೊಲೀಸ್ ಕಸ್ಟಡಿ ಅಂತ್ಯವಾದ ಬಳಿಕ ಬುಧವಾರ ಬೆಳಗಾವಿಯ ನ್ಯಾಯಾಲಯಕ್ಕೆ ಸಿಐಡಿ ಅಧಿಕಾರಿಗಳು ವಿಚಾರಣೆಗೆ ಹಾಜರು ಪಡಿಸಿದ್ದರು.

ನ್ಯಾಯಾಲಯವು ವಿಚಾರಣೆಯನ್ನು ಒಳಪಡಿಸಿದ ಬಳಿಕ ಮತ್ತೆ ಶಿವಾನಂದ ನೀಲಣ್ಣವರ್ 14 ದಿನಗಳ ಕಾಲ ನ್ಯಾಯಾಂಗ ಬಂಧನ ನೀಡಿ ಕೋರ್ಟ್ ಆದೇಶ ಹೊರಡಿಸಿದೆ. ಜಾಮೀನು



ಅರ್ಜಿಗೆ ನೀಲಣ್ಣನವರ್ ಪರ ವಕೀಲರು ಅರ್ಜಿ ಸಲ್ಲಿಕೆ ಮುಂದಾಗಿದ್ದು, ಮತ್ತೊಂದೆಡೆ ಪ್ರಕರಣ ತನಿಖೆಯಲ್ಲಿ ಸಿಐಡಿ ಅಧಿಕಾರಿಗಳು ಎರಡು ಪ್ರತ್ಯೇಕ ಹೂಡಿಕೆದಾರರ ಲಿಸ್ಟ್ ಸಿದ್ಧಪಡಿಸಿದ್ದಾರೆ ಎನ್ನಲಾಗುತ್ತಿದೆ.

2ನೇ ಹೆಚ್ಚುವರಿ ಸತ್ರ ನ್ಯಾಯಾಲಯಕ್ಕೆ ಸಿಐಡಿ ಅಧಿಕಾರಿಗಳು ಹಾಜರುಪಡಿಸಿದರು. ಸಿಐಡಿ ಡಿವೈಎಸ್ಪಿ ಕೋದಂಡರಾಮ್ ನೇತೃತ್ವದ ತಂಡ ವೈದ್ಯಕೀಯ ತಪಾಸಣೆ ಬಳಿಕ ಕೋರ್ಟ್ ಕರೆ ತಂದಿತ್ತು. ಪ್ರಕರಣದ ತನಿಖೆ ಇನ್ನೂ ಮುಂದುವರಿದಿರುವ ಹಿನ್ನೆಲೆ ಸಿಐಡಿ ಅಧಿಕಾರಿಗಳು ನ್ಯಾಯಾಂಗ ಬಂಧನಕ್ಕೆ ಮನವಿ ಸಲ್ಲಿಸಿದರು. ಮನವಿಯನ್ನು ಪರಿಗಣಿಸಿದ ನ್ಯಾಯಾಧೀಶ ಗಂಗಾಧರ್ ಕೆ. ಶಿವಾನಂದ ನೀಲಣ್ಣವರ್ ಅವರನ್ನು ಜೂನ್ 9ರವರೆಗೆ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿ ಆದೇಶವನ್ನು ಹೊರಡಿಸಿದ್ದಾರೆ. ಹತ್ತು ದಿನಗಳ ಸಿಐಡಿ ಕಸ್ಟಡಿ ಅಂತ್ಯಗೊಂಡ ಬಳಿಕ ನೀಲಣ್ಣವರ ಹಿಂಡಲಗಾ ಜೈಲಿಗೆ ರವಾನೆ ಮಾಡಲಾಯಿತು.

ಶಿವಾನಂದ ನೀಲಣ್ಣವರ್ ಖರೀದಿಸಿದ ಐಷಾರಾಮಿ ಕಾರುಗಳನ್ನು ಕೂಡ ಸಿಐಡಿ ಅಧಿಕಾರಿಗಳು ಪಂಚನಾಮೆ ನಡೆಸಿ ಈಗಾಗಲೇ ಜಪ್ತಿ ಮಾಡಿದ್ದಾರೆ. ಡಿಫೇಂಡರ್, ವೈಲಫೈರ್ಯ, ಮರ್ಸಿಡಿಸ್ ಬೆಂಚ್ ಕಾರು ಸೇರಿವೆ. ಇನ್ನೂ ಪ್ರಕರಣದ ಸಂಬಂಧಿಸಿದಂತೆ ಶಿವಾನಂದ ನೀಲಣ್ಣವರ್ ಪರ ವಕೀಲ ಆರ್.ಪಿ ಪಾಟೀಲ್ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿ, ಜಾಮೀನು ಅರ್ಜಿ ಸಲ್ಲಿಸಿರುವುದಾಗಿ ತಿಳಿಸಿದ್ದಾರೆ. ಜೂನ್ 1ರಂದು ಜಾಮೀನು ಅರ್ಜಿ ವಿಚಾರಣೆಗೆ ಬರುವ ಸಾಧ್ಯತೆ ಇದೆ. ಯಾರು ಕೂಡ ನೇರವಾಗಿ ನೀಲಣ್ಣವರ್ ವಿರುದ್ಧ ದೂರು ನೀಡಿಲ್ಲ ಎಂದು ತಿಳಿಸಿದರು.

ಕಿರುಸುದ್ದಿ

ಉಚಿತ ಪ್ರವೇಶಕ್ಕಾಗಿ ಆನ್‌ಲೈನ್ ಲಾಟರಿ

ಬೆಂಗಳೂರು: 2026-27ನೇ ಶೈಕ್ಷಣಿಕ ಸಾಲಿನ ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣ ಹಕ್ಕು ಕಾಯ್ದೆ (ಆರ್‌ಟಿಇ) ಅಡಿಯಲ್ಲಿ ಖಾಸಗಿ ಅನುದಾನಿತ ಹಾಗೂ ಅನುದಾನ ರಹಿತ ಶಾಲೆಗಳಲ್ಲಿ ಉಚಿತ ಪ್ರವೇಶಕ್ಕಾಗಿ ಮೊದಲ ಸುತ್ತಿನ ಆನ್‌ಲೈನ್ ಲಾಟರಿ ಪ್ರಕ್ರಿಯೆಯನ್ನು ಶಾಲಾ ಶಿಕ್ಷಣ ಇಲಾಖೆ ನಡೆಸಿದೆ. ಆರ್‌ಟಿಇ ಕಾಯ್ದೆ-2009ರ ಸೆಕ್ಷನ್ 12(1)(ಬಿ) ಹಾಗೂ 12(1)(ಸಿ) ಅಡಿಯಲ್ಲಿ ಸಲ್ಲಿಕೆಯಾಗಿದ್ದ ಅರ್ಹ ಅರ್ಜಿಗಳನ್ನು ಪರಿಗಣಿಸಿ ಮೇ 25 ರಂದು ಮೊದಲ ಸುತ್ತಿನ ಲಾಟರಿಯನ್ನು ಆನ್‌ಲೈನ್ ಮೂಲಕ ನಡೆಸಲಾಗಿದೆ. ಲಾಟರಿ ಪ್ರಕ್ರಿಯೆಯಲ್ಲಿ ಆಯ್ಕೆಯಾದ ಮಕ್ಕಳನ್ನು ವಿವಿಧ ಖಾಸಗಿ ಶಾಲೆಗಳಿಗೆ ಹಂಚಿಕೆ ಮಾಡಲಾಗಿದ್ದು, ಆಯ್ಕೆಯಾದ ಮಕ್ಕಳ ಪೋಷಕರ ನೋಂದಾಯಿತ ಮೊಬೈಲ್ ಸಂಖ್ಯೆಗೆ ಎಸ್‌ಎಂಎಸ್ ಮೂಲಕ ಸೀಟು ಹಂಚಿಕೆ ಮಾಹಿತಿ ಕಳುಹಿಸಲಾಗಿದೆ. ಪೋಷಕರು ಮೇ 26ರಿಂದ ಜೂ. 8ರವರೆಗೆ ಸಂಬಂಧಪಟ್ಟ ಶಾಲೆಗಳಿಗೆ ಸೀಟು ಹಂಚಿಕೆ ಪತ್ರದೊಂದಿಗೆ ಭೇಟಿ ನೀಡಿ ಮಕ್ಕಳ ದಾಖಲಾತಿ ಪ್ರಕ್ರಿಯೆಯನ್ನು ಪೂರ್ಣಗೊಳಿಸಬೇಕು ಎಂದು ಇಲಾಖೆ ತಿಳಿಸಿದೆ. ಸೀಟು ಹಂಚಿಕೆ ವಿವರಗಳನ್ನು ಇಲಾಖೆಯ www.schooleducation.kamataka.gov.in ವೆಬ್‌ಸೈಟ್‌ನಲ್ಲಿ ಪಡೆಯಬಹುದಾಗಿದೆ ಎಂದು ಶಾಲಾ ಶಿಕ್ಷಣ ಇಲಾಖೆಯ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಗಾಳಿಯಲ್ಲಿ ಗುಂಡು; ಐವರ ಸೆರೆ

ಧಾರವಾಡ: ತಡಸಿಕೊಪ್ಪ ಗ್ರಾಮದ ಜಮೀನು ವಿವಾದ ವೇಳೆ ಗಾಳಿಯಲ್ಲಿ ಗುಂಡು ಹಾರಿಸಿ, ಓರ್ವನಿಗೆ ಗಾಯಪಡಿಸಿದ ಆರೋಪದಡಿ ಐವರನ್ನು ವಶಕ್ಕೆ ಪಡೆದಿದೆ ಎಂದು ಪೊಲೀಸ್ ಆಯುಕ್ತ ಎನ್.ಶಶಿಕುಮಾರ್ ಹೇಳಿದರು. ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಫಿಲೋಮಿನಾ, ಪ್ರವೀಣ್ ಸುತಾರ, ಇಂದರ ಪಾಲ್, ಬೆಂಜಮಿನ್, ವಿಶಾಲ್ ಬಂಧಿತ ಆರೋಪಿಗಳು. ತಪ್ಪಿಸಿಕೊಂಡ ಸುಂದರ ಪಾಲ್ ಬಂಧನಕ್ಕೆ ತಂಡ ರಚಿಸಲಾಗಿದೆ ಎಂದರು. ಜಮೀನು ಖರೀದಿ ವಿಚಾರವಾಗಿ ಉಭಯ ಬಣಗಳ ನಡುವೆ ಮಾತಿನ ಚಕಮಕಿ ನಡೆದಿದೆ. ಗಲಾಟೆ ವಿಕೋಪಕ್ಕೆ ಹೋದಾಗ ಗಾಳಿಯಲ್ಲಿ ಗುಂಡು ಹಾರಿಸಿದ್ದರಿಂದ ವಿಠ್ಠಲ ಎಂಬುವರ ಕಾಲಿಗೆ ಗುಂಡು ತಾಗಿದ್ದಾಗಿ ತಿಳಿಸಿದರು. ಮೊದಲು ಅಂಗರಕ್ಷ ಗುಂಡು ಹಾರಿಸಿದ ಮಾಹಿತಿ ಇತ್ತು. ಆದರೆ, ಪೊಲೀಸರು ತನಿಖೆ ನಡೆಸಿ, ಪರಿಶೀಲಿಸಿದಾಗ ಲಭಿಸಿದ ವಿಡಿಯೋ ತುಣುಕು ಆಧರಿಸಿದ ಮೇಲೆ ಐವರನ್ನು ಬಂಧಿಸಿದೆ ಎಂದು ಮಾಹಿತಿ ನೀಡಿದರು. ಗಾಯಾಳು ವಿಠ್ಠಲ ಜಮೀನು ಮಾಲೀಕನ ಸಂಬಂಧಿ. ಅವರ ಮೇಲೆ ಗುಂಡಿನ ದಾಳಿಯಾಗಿದೆ. ಅವರನ್ನು ಚಿಕಿತ್ಸೆಗೆ ಆಸ್ಪತ್ರೆಗೆ ದಾಖಲಿಸಿದೆ. ಕೊಲೆ ಯತ್ನ, ಅಟ್ರಾಸಿಟಿ ಪ್ರಕರಣದಡಿ ದೂರು ದಾಖಲಾಗಿದೆ ಎಂದರು.

ರಸ್ತೆ ಅಪಘಾತ: ನಾಲ್ಕು ಮಂದಿ ಸಾವು

ಚಿತ್ರದುರ್ಗ: ಲಾರಿ ಮತ್ತು ಬೊಲೆರೋ ನಡುವೆ ಡಿಕ್ಕಿ ಸಂಭವಿಸಿದ ಪರಿಣಾಮ ನಾಲ್ಕು ಜನ ಸ್ಥಳದಲ್ಲೇ ದಾರುಣವಾಗಿ ಮೃತಪಟ್ಟಿರುವ ಘಟನೆ ಮೊಳಕಾಲ್ಮುರು ತಾಲೂಕಿನ ಬೈರಾಪುರ ಗ್ರಾಮದ ಬಳಿ ಬುಧವಾರ ನಡೆದಿದೆ. ಮೃತರನ್ನು ಬಳ್ಳಾರಿಯ ಉದಾರ ಗ್ರಾಮದ ನಿವಾಸಿಗಳು ಎಂದು ತಿಳಿದುಬಂದಿದೆ. ಶಿವಮ್ಮ (28), ಮೀನಾಕ್ಷಿ (14), ಪೂಜಾ (4), ಪುರುಷೋತ್ತಮ್ (2) ಎಂದು ಗುರುತಿಸಲಾಗಿದೆ. ವೇಗವಾಗಿ ಬಂದ ಬೊಲೆರೊ ವಾಹನ ಲಾರಿಗೆ ಡಿಕ್ಕಿ ಹೊಡೆದಿದೆ ಎನ್ನಲಾಗಿದ್ದು, ಅಪಘಾತದ ತೀವ್ರತೆಗೆ ಬೊಲೆರೊ ವಾಹನದ ನುಜ್ಜುಗುಜ್ಜಾಗಿದೆ. ಅಪಘಾತದ ಭೀಕರರತೆಯ ಪರಿಣಾಮವಾಗಿ ಬೊಲೆರೋ ವಾಹನದಲ್ಲಿ ಮೂರು ಜನ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಪೊಲೀಸ್ ಅಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ರಾಜ್ಯ ಮುಖ್ಯ ಚುನಾವಣಾಧಿಕಾರಿ ಅನ್ಬುಕುಮಾರ್ ಮನವಿ

ಎಸ್‌ಐಆರ್‌ಗೆ ಸಹಕರಿಸಿ

ಬೆಂಗಳೂರು: ಅನರ್ಹ ಮತದಾರರು ಪಟ್ಟಿಯಲ್ಲಿ ಇರಬಾರದೆಂಬ ಉದೇಶದಿಂದ ಲೋಪ ದೋಷಗಳಿಲ್ಲದ ಹೊಸ ಸಮಗ್ರ ಮತದಾರರ ಪಟ್ಟಿ ಸಿದ್ಧ ಪಡಿಸುವುದೇ ಮತದಾರರ ಪಟ್ಟಿಗಳ ವಿಶೇಷ ಸಮಗ್ರ ಪರಷ್ಕರಣೆ(ಎಸ್‌ಐಆರ್)-2026 ಆಗಿದೆ ಎಂದು ಕರ್ನಾಟಕದ ಮುಖ್ಯ ಚುನಾವಣಾಧಿಕಾರಿ ಅನ್ಬುಕುಮಾರ್ ತಿಳಿಸಿದರು.

ವಾರ್ತಾ ಸೌಧದ ಮಹಾತ್ಮ ಗಾಂಧಿ ಸಭಾಂಗಣದಲ್ಲಿ ಬುಧವಾರ ರಾಜ್ಯ ಚುನಾವಣಾ ಆಯೋಗದಿಂದ ಆಯೋಜಿಸಲಾಗಿದ್ದ ಮಾಧ್ಯಮ ಕಾರ್ಯಾಗಾರದಲ್ಲಿ ಅವರು ಮಾತನಾಡಿದರು. ರಾಜ್ಯದ ಅರ್ಹ ನಾಗರಿಕರು ಮತದಾರರ ಪಟ್ಟಿಯಿಂದ ವಂಚಿತರಾಗಬಾರದು. ಈ ಪ್ರಕ್ರಿಯೆಯಲ್ಲಿ ಪ್ರತಿಯೊಬ್ಬ ಮತದಾರನಿಂದ ಅವರದ್ದೇ ಸಹಿಯಡಿ ಸಮಗ್ರ ಮಾಹಿತಿಯನ್ನು ಪಡೆದು ಮತದಾರರ ಪಟ್ಟಿಯನ್ನು ಪರಿಷ್ಕರಿಸಲಾಗುವುದು. ಎಸ್‌ಐಆರ್‌ನಲ್ಲಿ ಪ್ರತಿಯೊಬ್ಬರೂ ಅರ್ಜಿ ಭರ್ತಿ ಮಾಡಿ, ಫೋಟೋ ಅಂಟಿಸಿ ಸಹಿ ಮಾಡಿ ಕೊಡಬೇಕು. ಇಲ್ಲದಿದ್ದರೆ ಕರಡು ಪಟ್ಟಿಯಲ್ಲಿ ಮತ್ತು ಹೊಸ ಮತದಾರರ ಪಟ್ಟಿಯಲ್ಲಿ ಹೆಸರು ಇರುವುದಿಲ್ಲ ಎಂದು ಸ್ಪಷ್ಟಪಡಿಸಿದರು.

ಚುನಾವಣಾ ಆಯೋಗದ ನಿರ್ದೇಶನದಂತೆ ರಾಜ್ಯದಲ್ಲಿ ಮತದಾರರ ಪಟ್ಟಿಯ ಸಮಗ್ರ ಪರಿಷ್ಕರಣೆ ನಡೆಯುತ್ತಿದ್ದು, ಮತದಾರರ ಪಟ್ಟಿ ರಚನೆಗೆ ಪ್ರತಿಯೊಬ್ಬರ ಸಹಕಾರ ಅಗತ್ಯ. ಮತದಾರರ ಪಟ್ಟಿಯಲ್ಲಿ ಹೆಸರು ಸೇರ್ಪಡೆ ಮಾಡುವ ಹೊಣೆ ಪ್ರತಿಯೊಬ್ಬ ಭಾರತೀಯನದ್ದಾಗಿದೆ. ಇದು ಕೇವಲ ಚುನಾವಣಾ ಆಯೋಗದ ಹೊಣೆಯಷ್ಟೇ ಅಲ್ಲ ಎಂದರು.

ಅರ್ಹ ಮತದಾರರು ಮತದಾರರ ಪಟ್ಟಿಯಿಂದ ಹೊರಗುಳಿಯದಂತೆ ಮತದಾರರ ಪಟ್ಟಿಯಲ್ಲಿ ಹೆಸರು ಸೇರ್ಪಡೆ ಮಾಡಲು ಎಲ್ಲಾ ರೀತಿಯ ಕ್ರಮಗಳನ್ನು ಕೈಗೊಳ್ಳಲಾಗಿದೆ. ಮತಗಟ್ಟೆ ಮಟ್ಟದ ಅಧಿಕಾರಿಗಳು (ಬಿಎಲ್‌ಒ) ಪ್ರತಿ ಮನೆಗೆ ಭೇಟಿ ನೀಡಿ ಮತದಾರರಿಗೆ ಎಣಿಕೆ ಫಾರ್ಮ್ (ಎನ್ಯುಮರೇಷನ್ ಫಾರ್ಮ್) ಜೊತೆಗೆ ಎಲ್ಲ ಮಾಹಿತಿಗಳನ್ನು ಮನೆ ಮನೆ ಭೇಟಿಯಲ್ಲಿ ಪಡೆಯಲಿದ್ದಾರೆ. ಇದಲ್ಲದೆ, ಈ ಸಂಬಂಧ ಉದ್ಭವಿಸುವ ಸಮಸ್ಯೆಗಳು, ಪ್ರಶ್ನೆಗಳ ನಿವಾರಣೆಗೆ ಪಂಚಾಯತ್‌ಗೊಂದು ಫೆಸಿಲಿಟೇಟಿಂಗ್ ಕೇಂದ್ರಗಳನ್ನು ನೀಡಲಾಗುವುದು.

ಒಟ್ಟಿನಲ್ಲಿ ಸ್ವಚ್ಛ ಮತ್ತು ವಿನೂತನ ಮತದಾರರ ಪಟ್ಟಿ ತಯಾರಿಕೆ ಸದ್ಯ ರಾಜ್ಯ ಚುನಾವಣಾ ಆಯೋಗದ ಪ್ರಮುಖ ಕರ್ತವ್ಯ ಎಂದರು. ಮುಕ್ತ ಮತ್ತು ನಿಷ್ಪಕ್ಷಪಾತ ಚುನಾವಣೆಗಳನ್ನು ನಡೆಸಲು ಮತದಾರರ ಪಟ್ಟಿಗಳ ವಿಶ್ವಾಸಾರ್ಹತೆಯನ್ನು ಕಾಪಾಡಿಕೊಳ್ಳುವುದು ಮೂಲಭೂತ ಅಗತ್ಯ. ಈ ನಿಟ್ಟಿನಲ್ಲಿ ಈಗಾಗಲೇ ನಿಗದಿಯಾದ ಮಾರ್ಗಸೂಚಿ ಮತ್ತು ವೇಳಾಪಟ್ಟಿಗನುಗುಣವಾಗಿ ಮತದಾರರ ಪಟ್ಟಿಯ ಸಮಗ್ರ ಪರಿಷ್ಕರಣೆ ನಡೆಯಲಿದೆ ಎಂದು ತಿಳಿಸಿದರು.



ಯಾವಾಗ ಹೆಸರು ತೆಗೆಯಲಾಗುತ್ತದೆ?

2025ರ ಮತದಾರರ ಪಟ್ಟಿಯಲ್ಲಿ ಹೆಸರು ಇರುವ ಎಲ್ಲರಿಗೂ ತಲಾ ಎರಡು ಎಣಿಕೆ ಫಾರ್ಮ್ ಕೊಡಲಾಗುತ್ತದೆ. ಹೆಸರು ಇಲ್ಲದವರು ಹೊಸದಾಗಿ ಹೆಸರು ಸೇರಿಸುವುದಕ್ಕೆ ಅರ್ಜಿ ಸಲ್ಲಿಸಬೇಕು. ಎಣಿಕೆ ಫಾರ್ಮ್ ಭರ್ತಿ ಮಾಡಿ ಸಹಿ ಮಾಡಿ ಕೊಡದಿದ್ದರೆ ಅಂತಹವರ ಹೆಸರು ಮತದಾರರ ಪಟ್ಟಿಯಿಂದ ತೆಗೆಯಲಾಗುತ್ತದೆ. ಹೊಸ ಮತದಾರರ ಕರಡು ಅಥವಾ ಅಂತಿಮ ಪಟ್ಟಿಯಲ್ಲಿ ಸಣ್ಣ ಪುಟ್ಟ ಲೋಪಗಳಿದ್ದರೆ ಮತದಾರರ ಅನುಮತಿ ಇಲ್ಲದೇ ಯಾವುದೇ ಬದಲಾವಣೆ ಮಾಡುವುದಿಲ್ಲ. ಅರ್ಜಿ ಕೊಟ್ಟ ನಂತರ ಮಾಹಿತಿ ತಪ್ಪಾಗಿದ್ದರೆ ಕಾರಣ ಕೇಳಿ ನೋಟಿಸ್ ಕೊಡ್ತದೆ. ನೋಟಿಸ್ ಕೊಡದೇ ಹೆಸರು ತೆಗೆದು ಹಾಕುವುದಿಲ್ಲ. ಒಂದು ವೇಳೆ ಎಸ್‌ಐಆರ್ ನಡೆಯುವ ವೇಳೆ ಮತದಾರರ ಮನೆಯಲ್ಲಿ ಅಥವಾ ಊರಿನಲ್ಲಿಲ್ಲದಿದ್ದರೆ ಆನ್‌ಲೈನ್‌ನಲ್ಲಿಯೂ ಅರ್ಜಿ ಸಲ್ಲಿಸುವುದಕ್ಕೆ ಅವಕಾಶವಿದೆ ಎಂದು ಅನ್ಬು ಕುಮಾರ್ ಸ್ಪಷ್ಟಪಡಿಸಿದರು.

ರಾಜ್ಯದಲ್ಲಿ ಅವಧಿಪೂರ್ವ ಚುನಾವಣೆ: ವಿಜಯೇಂದ್ರ

ಶಿವಮೊಗ್ಗ: ರಾಜ್ಯದಲ್ಲಿ ಅವಧಿಪೂರ್ವ ಚುನಾವಣೆ ನಡೆಯುವ ಸಾಧ್ಯತೆಗಳಿವೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಭವಿಷ್ಯ ನುಡಿದಿದ್ದಾರೆ.

ವಿನೋಬನಗರದ ತಮ್ಮ ನಿವಾಸದಲ್ಲಿ ಬುಧವಾರ ಮಾಧ್ಯಮಗಳ ಜತೆ ಮಾತನಾಡಿ, ಸಿದ್ದರಾಮಯ್ಯ ಅವರು ರಾಜೀನಾಮೆ ನೀಡಿದ ಬಳಿಕ ಯಾವುದೇ ಹೊಸ ಮುಖ್ಯಮಂತ್ರಿ ಬಂದರೂ ಅದು ತಾತ್ಕಾಲಿಕ. ರಾಜ್ಯದಲ್ಲಿ ಅವಧಿಪೂರ್ವ ಚುನಾವಣೆ ನಡೆಯಲಿದೆ.



ಅದಕ್ಕಾಗಿ ರಾಜ್ಯದ ಜನತೆಗೆ ಏನು ಕೊಡಬೇಕು ಹಾಗೂ ಸಂಘಟನೆಯ ಮೂಲಕ ರಾಜ್ಯದಲ್ಲಿ ಹೇಗೆ ಅಧಿಕಾರಕ್ಕೆ ಬರಬೇಕು ಎನ್ನುವ ಬಗ್ಗೆ ಯೋಚಿಸುತ್ತೇವೆ ಎಂದು ತಿಳಿಸಿದರು.

ಸಿದ್ದರಾಮಯ್ಯನವರು ರಾಜೀನಾಮೆ ನೀಡಿ ಯಾರೇ ಮುಖ್ಯಮಂತ್ರಿಯಾದರೂ ಅದರ ಆಯ್ಕೆ ಅಷ್ಟು ಸಲೀಸಾಗಿ ಆಗುವುದಿಲ್ಲ. ರಾಜ್ಯ ಸರ್ಕಾರದಲ್ಲಿ ಗೊಂದಲ ಶುರುವಾಗಲಿದೆ. ಯಾರು ಮುಖ್ಯಮಂತ್ರಿ ಆಗುತ್ತಾರೆ ಎನ್ನುವುದು ಮುಖ್ಯವಲ್ಲ. ಕೊನೆಗೂ ಕಾಂಗ್ರೆಸ್ ಪಕ್ಷದ ಹೈಕಮಾಂಡ್ ರಾಜ್ಯ ಸರ್ಕಾರದ ವೈಫಲ್ಯ ಒಪ್ಪಿಕೊಂಡಿದೆ. ದೇಶದಲ್ಲಿ ಕಾಂಗ್ರೆಸ್ ಅವನತಿ ಶುರುವಾಗಿದೆ. ರಾಜ್ಯದಲ್ಲಿ ಸಿಎಂ ಬದಲಾವಣೆ ಬಳಿಕ ಕರ್ನಾಟಕದಲ್ಲೂ ಕಾಂಗ್ರೆಸ್ ಅಧಿಕಾರ ಕಳೆದುಕೊಳ್ಳಲಿದೆ ಎಂದರು.

ನನಗೆ ಸಿದ್ದರಾಮಯ್ಯನವರ ಬಗ್ಗೆ ಯಾವುದೇ ದ್ವೇಷವಿಲ್ಲ. ಆದರೆ ದಕ್ಷಿಣ ಭಾರತದಲ್ಲೇ ಇತರ ರಾಜ್ಯಗಳಿಗೆ ಹೋಲಿಸಿದರೆ ಹತ್ತು ಲಕ್ಷ ಕೋಟಿ ರೂ.ಸಾಲ ಮಾಡುವ ಮೂಲಕ ಸಿದ್ದರಾಮಯ್ಯ ದಾಖಲೆ ಮುರಿದಿದ್ದಾರೆ ಎಂದರು.

ಹೆಚ್ಚು ಕಾಲ ಪ್ರಧಾನಿ ನರೇಂದ್ರ ಮೋದಿ

ಕೇಂದ್ರದಲ್ಲಿ ಮೋದಿ ಸರ್ಕಾರ 12 ವರ್ಷ ಪೂರೈಸಿದ ಶುಭ ಘಳಿಗೆಯಲ್ಲಿ ಅವರಿಗೆ ಅಭಿನಂದನೆ ಸಲ್ಲಿಸುತ್ತೇನೆ. ಯುಪಿಎ ಅವಧಿಯಲ್ಲಿ ಅತ್ಯಂತ ಭ್ರಷ್ಟಾಚಾರದ ಆಡಳಿತವಿತ್ತು. ಜನತೆ ದೇಶದ ಬಗ್ಗೆ ವಿಶ್ವಾಸ ಕಳೆದುಕೊಂಡಿದ್ದರು. ಆ ಸಂದರ್ಭದಲ್ಲಿ ದೇಶದ ಚುಕ್ಕಾಣಿ ಹಿಡಿದು ಅಭಿವೃದ್ಧಿ ಪಥದತ್ತ ದೇಶವನ್ನು ಕೊಂಡೊಯ್ದು ಜನತೆ ವಿಶ್ವಾಸ ಗಳಿಸಿದ್ದಾರೆ. ಅತಿ ಹೆಚ್ಚು ಕಾಲ ಪ್ರಧಾನಿಯಾಗಿ ದೇಶದ ಆಡಳಿತ ನೀಡಿದ ಕೀರ್ತಿ ಮೋದಿಯವರದ್ದಾಗಲಿದೆ. ಅವರ ಅವಧಿಯಲ್ಲಿ ಯಾವುದೇ ಭ್ರಷ್ಟಾಚಾರದ ಆರೋಪ ಬಂದಿಲ್ಲ. ಕೋವಿಡ್ ಸಂದರ್ಭದಲ್ಲಿ ಇಷ್ಟು ದೊಡ್ಡ ದೇಶವನ್ನು ಯಶಸ್ವಿಯಾಗಿ ನಿರ್ವಹಿಸಿದ ಉದಾಹರಣೆ ನಮ್ಮ ಕಣ್ಣ ಮುಂದಿದೆ. ವಿಶ್ವದಲ್ಲೇ ಭಾರತ 4ನೇ ಅತಿ ದೊಡ್ಡ ಆರ್ಥಿಕ ಶಕ್ತಿಯಾಗುವತ್ತ ಸದೃಢ ಆಡಳಿತ ನೀಡಿ ಸರ್ವಕಾಲಿಕ ದಾಖಲೆ ಮುರಿದಿದ್ದಾರೆ ಎಂದರು.

ಪ್ರತ್ಯೇಕ ಪ್ರಕರಣ: ಸಿಡಿಲಿಗೆ 3 ಸಾವು

ಮೈಸೂರು: ಜಿಲ್ಲೆಯಲ್ಲಿ ನಡೆದ ಮೂರು ಪ್ರತ್ಯೇಕ ಪ್ರಕರಣದಲ್ಲಿ ಸಿಡಿಲು ಬಡಿದು ಮೂವರು ವ್ಯಕ್ತಿಗಳು ಹಾಗೂ ಹಸುವೊಂದು ಸಾವಿಗೀಡಾಗಿರುವ ಘಟನೆ ನಡೆದಿದೆ. ಜಿಲ್ಲೆಯ ಎಚ್.ಡಿ.ಕೋಟೆ ತಾಲೂಕಿನ ಮಾಳದ ಹಾಡಿಯ ನಿವಾಸಿಯಾದ ಅಪ್ಪಯ್ಯ, ಹುಣಸೂರು ತಾಲೂಕಿನ ಹೊಸಪುರ ಗ್ರಾಮದ ನಿವಾಸಿಯಾದ ಯಶೋಧಮ್ಮ ಹಾಗೂ ಮಡಿಕೇರಿ ಜಿಲ್ಲೆಯ ಜಲಾಶಯ ಬಡಾವಣೆಯ ನಿವಾಸಿಯಾದ ರೋಷನ್ (43) ಮೃತಪಟ್ಟವರು.

ಬುಧವಾರ ಮಧ್ಯಾಹ್ನ 1ರ ವೇಳೆಯಲ್ಲಿ ಎಚ್.ಡಿ.ಕೋಟೆ ತಾಲೂಕಿನ ಮಾಳದ ಹಾಡಿಯ ನಿವಾಸಿಯಾದ ಅಪ್ಪಯ್ಯ ಎಂಬುವರು ತಮ್ಮ ಜಮೀನಿನಲ್ಲಿ ಜಾನುವಾರುಗಳನ್ನು ಮೇಯಿಸುತ್ತಿದ್ದ ವೇಳೆ ಗುಡುಗು, ಸಿಡಿಲಿನೊಂದಿಗೆ ಮಳೆ ಸುರಿಯುತ್ತಿದ್ದು, ರಕ್ಷಣೆಗೆಂದು ಮರದ ಕೆಳಗಡೆ ಬಂದ ಅವರಿಗೆ ಸಿಡಿಲು ಬಡಿದು ಸ್ಥಳದಲ್ಲಿಯೇ ಮೃತಪಟ್ಟಿದ್ದಾರೆ. ಹುಣಸೂರು ತಾಲೂಕಿನ ಹೊಸಪುರ ಗ್ರಾಮದ ನಿವಾಸಿಯಾದ ಯಶೋಧಮ್ಮ ಹಳೇ ಪುರ ಗ್ರಾಮ ದಲ್ಲಿರುವ ಪತಿಯ ಜಮೀನಿಗೆ ಹೋಗಿದ್ದು, ಈ ವೇಳೆ ಸುರಿಯುತ್ತಿದ್ದ ಮಳೆಯಿಂದ ರಕ್ಷಣೆ ಪಡೆಯಲೆಂದು ಮರದ ಕೆಳಗಡೆ ಹೋದಾಗ ಸಿಡಿಲು ಬಡಿದು ಸ್ಥಳದಲ್ಲಿಯೇ ಅವರು ಅಸುನೀಗಿದ್ದಾರೆ. ಇವರಿಗೆ ಪತಿ ಹಾಗೂ ಇಬ್ಬರು ಹೆಣ್ಣು ಮಕ್ಕಳಿದ್ದಾರೆ.

ಹಸು ಸಾವು: ಮತ್ತೊಂದೆಡೆ ಜಿಲ್ಲೆಯ ಎಚ್.ಡಿ.ಕೋಟೆ ತಾಲೂಕಿನ ನೂರಲ ಕುಪ್ಪೆ ಎ ಗ್ರಾಮದಲ್ಲಿ ಸಿಡಿಲು ಬಡಿದು ಹಸುವೊಂದು ಸಾವಿಗೀಡಾಗಿದೆ.

ಐಟಿ ಉದ್ಯೋಗಿ ಸಾವು

ಸಿಡಿಲು ಬಡಿದು ಐಟಿ ಉದ್ಯೋಗಿಯೊಬ್ಬರು ಸಾವಿಗೀಡಾಗಿರುವ ಘಟನೆ ಮೈಸೂರು ತಾಲೂಕಿನ ಇಲವಾಲದಲ್ಲಿ ನಡೆದಿದೆ. ಮಡಿಕೇರಿ ಜಿಲ್ಲೆಯ ಜಲಾಶಯ ಬಡಾವಣೆಯ ನಿವಾಸಿಯಾದ ರೋಷನ್ (43) ಮೃತಪಟ್ಟವರು. ಬೆಂಗಳೂರಿನ ಐಟಿ ಕಂಪನಿಯೊಂದರಲ್ಲಿ ಉದ್ಯೋಗಿಯಾಗಿದ್ದ ಅವರು ವರ್ಕ್ ಫ್ರಂ ಹೋಮ್ ಹಿನ್ನೆಲೆಯಲ್ಲಿ ವೃತ್ತಿ ಜತೆಗೆ ತಮ್ಮ ಕುಟುಂಬದ ಕಾಫಿ ತೋಟದ ನಿರ್ವಹಣೆಯನ್ನೂ ನೋಡಿಕೊಳ್ಳುತ್ತಿದ್ದರು.

ಮಾವಿನ ಹಣ್ಣು ಕೀಳುವ ವೇಳೆ ಪಕ್ಕದ ತೆಂಗಿನ ಮರಕ್ಕೆ ಸಿಡಿಲು ಬಡಿದಿದೆ. ಸಿಡಿಲಾಘಾತಕ್ಕೆ ಕುಸಿದು ಬಿದ್ದು, ನಿತ್ರಾಣಗೊಂಡಿದ್ದ ರೋಷನ್ ಅವರನ್ನು ಸ್ಥಳೀಯರ ನೆರವಿನೊಂದಿಗೆ ಹತ್ತಿರದ ಎನ್‌ಜಿ ಆಸ್ಪತ್ರೆಗೆ, ನಂತರ ಜಯದೇವ ಹೃದ್ರೋಗ ಆಸ್ಪತ್ರೆಗೆ ಕರೆ ದೊಯ್ಯಲಾಗಿದೆ. ಆದರೆ, ಪರೀಕ್ಷಿಸಿದ ವೈದ್ಯರು ರೋಷನ್ ಮೃತಪಟ್ಟಿರುವುದಾಗಿ ಖಚಿತಪಡಿಸಿದ್ದಾರೆ. ಬಳಿಕ ಮೃತದೇಹವನ್ನು ಮೈಸೂರು ವೈದ್ಯಕೀಯ ಕಾಲೇಜು ಹಾಗೂ ಸಂಶೋಧನಾ ಸಂಸ್ಥೆಯ ಶವಾಗಾರಕ್ಕೆ ಸ್ಥಳಾಂತರಿಸಲಾಯಿತು.

ರಾಜ್ಯದಲ್ಲಿ ಇಬೋಲಾ ಬಗ್ಗೆ ಆತಂಕ ಇಲ್ಲ

ಬೆಂಗಳೂರು: ರಾಜ್ಯದಲ್ಲಿ ಇಬೋಲಾ ವೈರಸ್ ಸೋಂಕು ಕಾಲಿಟ್ಟಿದೆಯೇ ಎಂಬ ಆತಂಕಕ್ಕೆ ಕೊನೆಗೂ ತೆರೆ ಬಿದ್ದಿದೆ. ಉಗಾಂಡಾ ಮೂಲದ ಮಹಿಳೆಯೊಬ್ಬರ ಮಾದರಿಯನ್ನು ಪರೀಕ್ಷೆಗೆ ಕಳುಹಿಸಲಾಗಿದ್ದು, ಅದರ ವರದಿ ನೆಗೆಟಿವ್ ಬಂದಿರುವುದಾಗಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ತಿಳಿಸಿದೆ.

ಉಗಾಂಡಾ ದೇಶದ ಕ್ಯಾಂಪಲಾ ಮೂಲದ ನಾಗಿರೆ ಲತಿಫಾ (28) ಮಹಿಳೆಯಲ್ಲಿ ಮೇ 23ರಂದು ಬೆಂಗಳೂರಿಗೆ ಆಗಮಿಸಿ ನಗರದ ರಾಯಲ್ ಏಸ್ ಬೂಟಿಕ್ ಹೋಟೆಲ್‌ನಲ್ಲಿ ತಂಗಿದ್ದರು. ಈ ವೇಳೆ ಅವರಿಗೆ ಇಬೋಲಾ ಸೋಂಕಿನ ಲಕ್ಷಣಗಳಿಗೆ ಹೋಲುವ ಆರೋಗ್ಯ ಸಮಸ್ಯೆಗಳು ಕಂಡುಬಂದ ಹಿನ್ನೆಲೆ ಆರೋಗ್ಯ ಇಲಾಖೆ ತುರ್ತು ಕ್ರಮ ಕೈಗೊಂಡಿತ್ತು. ಶಂಕಿತ ಮಹಿಳೆಯನ್ನು ತಕ್ಷಣವೇ ಆ್ಯಂಬುಲೆನ್ಸ್ ಮೂಲಕ ಐಸೋಲೇಷನ್ ವಾರ್ಡ್‌ಗೆ ದಾಖಲಿಸಿ ಚಿಕಿತ್ಸೆ ನೀಡಲಾಗಿತ್ತು.

ಅವರ ರಕ್ತ ಸೇರಿದಂತೆ ಅಗತ್ಯ ಮಾದರಿಗಳನ್ನು ಸಂಗ್ರಹಿಸಿ ಹೆಚ್ಚಿನ ಪರೀಕ್ಷೆಗಾಗಿ ಪುಣೆಯ ವಿಶೇಷ ಪ್ರಯೋಗಾಲಯಕ್ಕೆ ಕಳುಹಿಸಲಾಗಿತ್ತು. ಪರೀಕ್ಷಾ ವರದಿ ಇದೀಗ ನೆಗೆಟಿವ್ ಬಂದಿದ್ದು, ಮಹಿಳೆಗೆ ಇಬೋಲಾ ಸೋಂಕು ಇಲ್ಲ ಎಂಬುದು ದೃಢಪಟ್ಟಿದೆ. ಈ ಕುರಿತು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಮಾಹಿತಿ ನೀಡಿದ್ದು, ರಾಜ್ಯದಲ್ಲಿ ಉಂಟಾಗಿದ್ದ ಆತಂಕ ದೂರವಾಗಿದೆ ಎಂದು ತಿಳಿಸಿದ್ದಾರೆ. ಇಬೋಲಾ ಶಂಕಿತ ಪ್ರಕರಣದ ಹಿನ್ನೆಲೆ ಆರೋಗ್ಯ ಇಲಾಖೆ ಮುನ್ನೆಚ್ಚರಿಕಾ ಕ್ರಮಗಳನ್ನು ಕಟ್ಟುನಿಟ್ಟಾಗಿ ಅನುಸರಿಸಿತ್ತು.

ಹಿಂದುಳಿದ ವರ್ಗದವರಿಗೆ ಮತ್ತೆ ಮೋಸ: ವಿ. ಸುನೀಲ್

ಬೆಂಗಳೂರು: ಹಿಂದುಳಿದ ವರ್ಗದ ನಾಯಕರಿಗೆ ಕಾಂಗ್ರೆಸ್ ಪಕ್ಷ ಮತ್ತೊಮ್ಮೆ ಐತಿಹಾಸಿಕ ದ್ರೋಹ ಬಗೆದಿದೆ ಎಂದು ಶಾಸಕ ವಿ. ಸುನೀಲ್ ಕುಮಾರ್ ತಿಳಿಸಿದ್ದಾರೆ.

ಸಾಮಾಜಿಕ ಜಾಲತಾಣದಲ್ಲಿ ಈ ಕುರಿತು ಪೋಸ್ಟ್ ಮಾಡಿರುವ ಅವರು, ಅಂದು ದೇವರಾಜ್ ಅರಸು ಅವರನ್ನು ಹೀನಾಯವಾಗಿ ಪಟ್ಟದಿಂದ ಇಳಿಸಿದ ರೀತಿಯಲ್ಲಿ ಇಂದು ಸಿದ್ದರಾಮಯ್ಯ ಅವರನ್ನು ಸಿಎಂ ಹುದ್ದೆಯಿಂದ ಪದಚ್ಯುತಗೊಳಿಸುವ ಮೂಲಕ ಹಿಂದುಳಿದ ವರ್ಗದ ಸಮುದಾಯದ ರಾಜಕೀಯ ಉತ್ಕರ್ಷವನ್ನು ಕಾಂಗ್ರೆಸ್ ಹೈಕಮಾಂಡ್ ಸಹಿಸುವುದಿಲ್ಲ ಎಂಬುದನ್ನು ಮತ್ತೆ ಸಾಬೀತು ಮಾಡಿದೆ ಎಂದಿದ್ದಾರೆ.



ಉಳುವವನೇ ಹೊಲದೊಡೆಯ ಕಾಯ್ದೆ ಜಾರಿ ಸೇರಿದಂತೆ ಕರ್ನಾಟಕದಲ್ಲಿ ಕ್ರಾಂತಿಕಾರಿ ಆಡಳಿತ ನೀಡುವ ಮೂಲಕ ಅರಸು ಜನಮನ್ನಣೆ ಗಳಿಸಿದ್ದರು. ಆದರೆ, ಅವರ ಜನಪ್ರಿಯತೆಯನ್ನು ಸಹಿಸದ ಇಂದಿರಾ ಗಾಂಧಿ ಅವರು ಅರಸು ಅವರನ್ನು ಅಧಿಕಾರದಿಂದ ಕೆಳಗಿಳಿಸಿದರು. ಅರಸು ಅವರ ನಂತರ ಕರ್ನಾಟಕ ಹಾಗೂ ರಾಷ್ಟ್ರಮಟ್ಟದ ಜನಪ್ರಿಯ ಹಿಂದುಳಿದ ವರ್ಗದ ನಾಯಕರಾಗಿದ್ದ ಸಿದ್ದರಾಮಯ್ಯ ಅವರನ್ನು ಈಗ ರಾಹುಲ್ ಗಾಂಧಿ ಪದಚ್ಯುತಿಗೊಳಿಸಿದ್ದಾರೆ. ನೂಲಿನಂತೆ ಸೀರೆ ಎಂಬಂತೆ ಗಾಂಧಿ ಕುಟುಂಬದ ಡಿಎನ್‌ಎಯಲ್ಲೇ ಹಿಂದುಳಿದ ವರ್ಗದ ನಾಯಕರ ಬಗ್ಗೆ ದ್ವೇಷ, ಈರ್ಷೆ ಹಾಗೂ ಅಸಹನೆ ಅಡಗಿದೆ ಎಂದು ಹೇಳಿದ್ದಾರೆ.

ಸಿಎಂ ಪದಚ್ಯುತಿ ಯಾಕೆ?

ಒಂದೆಡೆ ತಾನು ಹಿಂದುಳಿದ ಸಮುದಾಯದ ಧ್ವನಿಯನ್ನು ಆಲಿಸುವುದಕ್ಕೆ ವಿಳಂಬ ಮಾಡಿದೆ, ಜಾತಿ ಗಣತಿ ನಡೆಸಿ ಒಬಿಸಿ ಸಮುದಾಯಕ್ಕೆ ನ್ಯಾಯ ಕೊಡುತ್ತೇನೆಂದು ವೇದಿಕೆಯಲ್ಲಿ ರಾಜಕೀಯ ಭಾಷಣ ಮಾಡುವ ರಾಹುಲ್, ಇನ್ನೊಂದೆಡೆ ಒಬಿಸಿ ಸಮುದಾಯದ ರಾಜಕೀಯ ನಾಯಕರನ್ನು ಅಧಿಕಾರದಿಂದ ಎಳೆದು ಕೆಡವುತ್ತಿದ್ದಾರೆ. ಕಾಂಗ್ರೆಸ್ ಅಧಿಕಾರದಲ್ಲಿರುವ ರಾಜ್ಯಗಳಲ್ಲಿ ಇದ್ದ ಒಬ್ಬನೇ ಒಬ್ಬ ಹಿಂದುಳಿದ ವರ್ಗದ ಸಿಎಂಯನ್ನು ಯಾಕೆ ಪದಚ್ಯುತಿಗೊಳಿಸಿದಿರಿ? ಎಂಬ ಪ್ರಶ್ನೆಗೆ ರಾಹುಲ್ ಉತ್ತರಿಸಬೇಕಾಗುತ್ತದೆ ಎಂದಿದ್ದಾರೆ.

ಮಹಿಳೆಯರಿಗೆ ಅರಿಶಿಣ ಕುಂಕುಮ ತಾಂಬೂಲ ಕೊಟ್ಟು ಸಿಹಿ ವಿತರಣೆ

ರೈತನಿಂದ ಗೋಮಾತೆಗೆ ಸೀಮಂತ

ಕೋಲಾರ: ಗರ್ಭಿಣಿಯರಿಗೆ ಸೀಮಂತ ಮಾಡುವುದು ಸಾಮಾನ್ಯ. ಆದರೆ, ರೈತರೊಬ್ಬರು ತಮ್ಮ ಕುಟುಂಬಕ್ಕೆ ನಿರಂತರವಾಗಿ ಹಾಲು ನೀಡಿ ಪೋಷಿಸುತ್ತಿರುವ ಗೋಮಾತೆಗೆ ಸೀಮಂತ ಮಾಡಿ ಸಂಭ್ರಮಿಸಿರುವ ಅಪರೂಪದ ಘಟನೆ ತಾಲೂಕಿನ ಕಳ್ಳಿಪುರ ಗ್ರಾಮದಲ್ಲಿ ನಡೆದಿದೆ.

ಕಳ್ಳಿಪುರ ಗ್ರಾಮದ ರೈತ ಡೈರಿ ನಾಗರಾಜ್ ಅವರ ಮನೆಯಲ್ಲಿ ಗೋಮಾತೆಗೆ ಸೀಮಂತದಂತಹ ಸಂಪ್ರದಾಯಬದ್ಧ ಶಾಸ್ತ್ರ ನಡೆಸಿದ್ದು, ಗೋವನ್ನು ಮನುಷ್ಯರಂತೆಯೇ ಗೌರವ, ಪ್ರೀತಿಯಿಂದ ನಡೆಸಿಕೊಂಡಿರುವುದು ಎಲ್ಲರ ಮೆಚ್ಚುಗೆಗೆ ಪಾತ್ರವಾಗಿದೆ. ಕೋಲಾರ ತಾಲೂಕು ಕಳ್ಳಿಪುರ ಗ್ರಾಮದಲ್ಲಿ ಡೈರಿ ಬಸವರಾಜ್ ರವರ ಮನೆಯ ಹಸುವು ಫಲಕ್ಕೆ ಬಂದು ಗರ್ಭಿಣಿಯಾದಾಗ ಮನೆ ಮಂದಿ ಸಂಭ್ರಮಿಸಿ ಗ್ರಾಮದ ಮಹಿಳೆಯರನ್ನೆಲ್ಲ ಕರೆದು ಮನೆ ಮಗಳ ಸೀಮಂತ ಮಾಡುವಂತೆ ಸಂಭ್ರಮಿಸಿದ್ದು, ಗಮನ ಸೆಳೆದಿದೆ.

ಹಸುವಿಗೆ ಹೂಗಳಿಂದ ಅಲಂಕಾರ ಮಾಡಿ ಬಾಲಕ್ಕೆ ಮೊಗ್ಗಿನ ಜಡೆ ಪೋಣಿಸಿ ಕಾಲುಗಳಿಗೆ ಗೆಜ್ಜೆಯಂತೆ ಬಣ್ಣದ ಟೇಪ್ ಕಟ್ಟಿ ಅಲಂಕರಿಸಿ ಗೋಮಾತೆ ಮುಂದೆ ಸಿಹಿ ಖಾದ್ಯಗಳಲ್ಲಿಟ್ಟು, ಗ್ರಾಮದ ಮುತ್ತೈದೆಯರನ್ನು ಮನೆಗೆ ಕರೆದು ಅರಿಶಿನ ಕುಂಕುಮ ಹಚ್ಚಿ ಸೀಮಂತ ವೈಭವದ ಹಾಡು ಹೇಳಿ ಆರತಿ ಬೆಳಗಿ ಮಡಲಕ್ಕಿ ಕಟ್ಟಿ ಮಡಿಲು ತುಂಬಿ ನಮಸ್ಕರಿಸಿ ಗಮನ ಸೆಳೆದರು.



ಸಮಾರಂಭದ ನಂತರ ಬಂದಂತಹ ಮಹಿಳೆಯರಿಗೆ ಅರಿಶಿಣ ಕುಂಕುಮ ತಾಂಬೂಲ ಕೊಟ್ಟು ಸಿಹಿ ನೀಡಿ ಗೋಮಾತೆಯ ಸೀಮಂತವನ್ನು ವಿಜೃಂಭಣೆಯಿಂದ ಗ್ರಾಮಸ್ಥರು ಆಚರಿಸಿದರು. ಈ ಕುರಿತು ಪತ್ರಕರ್ತರು ಡೈರಿ ನಾಗರಾಜ್‌ರನ್ನು ಪ್ರಶ್ನಿಸಿದಾಗ ಹೆತ್ತ ತಾಯಿ ಒಂದು ವರ್ಷ ಹಾಲುಣಿಸಿ ಸಾಕುತ್ತಾಳೆ ಆದರೆ ಗೋಮಾತೆ ನಮ್ಮ ಜೀವನವಿಡೀ ನಮಗೆ ಹಾಲು, ಮೊಸರು, ಮಜ್ಜಿಗೆ, ತುಪ್ಪ ನೀಡಿ ಪೋಷಿಸುತ್ತಿದ್ದು, ನಾವು ಗೋಮಾತೆಯನ್ನು ನಮ್ಮ ಮನೆಮಗಳಂತೆ ಸಾಗಿದ್ದೇವೆ ಎಂದರು.

ಗೋಹತ್ಯೆಯನ್ನು ಬೆಂಬಲಿಸುವ ಅತ್ಯಂತ ಹೀನ ಸಂಸ್ಕೃತಿಯ ನಡುವೆ ನಮಗೆ ಜೀವನವಿಡಿ ಹಾಲುಣಿಸುವ ಗೋವನ್ನು ನಮ್ಮಂತೆ, ನಮ್ಮ ಕುಟುಂಬ ಸದಸ್ಯನೆಂಬಂತೆ ಪೂಜಿಸಿ ಸಂಭ್ರಮಿಸಿದ ಈ ರೈತರ ಪ್ರಯತ್ನ ಆದರ್ಶವಾಗಿದೆ.

ಮುಖ್ಯಮಂತ್ರಿ ಬದಲಾದರೂ ರಾಜ್ಯದ ಅಭಿವೃದ್ಧಿ ಮಾತ್ರ ಶೂನ್ಯ: ಪ್ರತಿಪಕ್ಷ ನಾಯಕ

ಕೈ ಸರ್ಕಾರ ಬದಲಾವಣೆಯಾಗಲಿ: ಆರ್.ಅಶೋಕ

ಬೆಂಗಳೂರು: ಕರ್ನಾಟಕಕ್ಕೆ ಇಂದು ಬೇಕಿರುವುದು ಕೇವಲ ಮುಖ್ಯಮಂತ್ರಿ ಬದಲಾವಣೆ ಅಲ್ಲ, ಈ ಜನವಿರೋಧಿ ಕಾಂಗ್ರೆಸ್ ಸರ್ಕಾರದ ಸಂಪೂರ್ಣ ಬದಲಾವಣೆ ಎಂದು ವಿಧಾನಸಭೆ ಪ್ರತಿಪಕ್ಷ ನಾಯಕ ಆರ್. ಅಶೋಕ ಹೇಳಿದ್ದಾರೆ.



ಸಾಮಾಜಿಕ ಜಾಲತಾಣದಲ್ಲಿ ಈ ಕುರಿತು ಪೋಸ್ಟ್ ಮಾಡಿರುವ ಅವರು, 2023ರಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದ ದಿನದಿಂದಲೂ ರಾಜ್ಯದಲ್ಲಿ ಆಡಳಿತ ಎನ್ನುವುದು ಸಂಪೂರ್ಣ ಮರೀಚಿಕೆಯಾಗಿದೆ. ಅಭಿವೃದ್ಧಿ, ಜನ ಸಮಸ್ಯೆ, ರೈತರ ಸಂಕಷ್ಟ, ಯುವಕರ ಭವಿಷ್ಯ, ಇವೆಲ್ಲವೂ ಗೌಣವಾಗಿದೆ. ಕುರ್ಚಿ ಯಾರಿಗೆ? ಎನ್ನುವ ಒಂದೇ ಪ್ರಶ್ನೆ ಸರ್ಕಾರವನ್ನು ನುಂಗಿಬಿಟ್ಟಿದೆ ಎಂದಿದ್ದಾರೆ. ಅಧಿಕಾರ ಹಂಚಿಕೆ ಎಂಬ ಪ್ರಹಸನ ಈಗ ಬೀದಿ ನಾಟಕದ ಮಟ್ಟಕ್ಕೆ ಇಳಿದಿದೆ. ಎಗ್ಗಿಲ್ಲದೆ ನಡೆಯುತ್ತಿರುವ ಕುರ್ಚಿ ಕದನ ಇಡೀ ಕರ್ನಾಟಕದ ಮಾನವನ್ನು ದೇಶದ ಮುಂದೆ ಹರಾಜು ಹಾಕುತ್ತಿದೆ. ಪ್ರಜಾಸೌಧದಲ್ಲಿ ಆಡಳಿತದ ಚರ್ಚೆ ಇಲ್ಲ, ಬರಿ ಅಧಿಕಾರದ ಲೆಕ್ಕಾಚಾರ ಮಾತ್ರ ಎನ್ನುವಂತಾಗಿದೆ! ಕನ್ನಡಿಗರು ಅರ್ಥ ಮಾಡಿಕೊಳ್ಳಬೇಕಾದ ಸತ್ಯ ಒಂದೇ. ಸಿದ್ದರಾಮಯ್ಯ ಅವರೇ ಮುಂದುವರಿಯಲಿ, ಡಿ.ಕೆ. ಶಿವಕುಮಾರ್ ಬರಲಿ ಅಥವಾ ಮತ್ತೊಬ್ಬರನ್ನು ಕೂರಿಸಲಿ ಈ ದಿವಾಳಿ ಕಾಂಗ್ರೆಸ್ ಸರ್ಕಾರದಿಂದ ಕನ್ನಡಿಗರಿಗೆ ನಯಾ ಪೈಸೆ ಪ್ರಯೋಜನವಿಲ್ಲ ಎಂಬುದಾಗಿದೆ ಎಂದು ತಿಳಿಸಿದ್ದಾರೆ.

ಕಾಂಗ್ರೆಸ್‌ನವರುಗೆ ರಾಜ್ಯದ ಅಭಿವೃದ್ಧಿಯ ಬಗ್ಗೆ ದೃಷ್ಟಿಯಿಲ್ಲ, ರೈತರ ಕಣ್ಣೀರಿನ ಬಗ್ಗೆ ಕಾಳಜಿಯಿಲ್ಲ, ಯುವಕರ ಭವಿಷ್ಯದ ಬಗ್ಗೆ ಚಿಂತೆಯಿಲ್ಲ ಮತ್ತು ಜನರ ಸಮಸ್ಯೆಗಳ ಬಗ್ಗೆ ಉತ್ತರದಾಯಿತ್ವವೇ ಇಲ್ಲ. ಇವರಿಗೆ ಇರುವುದು ಒಂದೇ ಅಜೆಂಡಾ - ಅದು ಕುರ್ಚಿ, ಅಧಿಕಾರ, ಲೂಟಿ ಮತ್ತು ಸ್ವಾರ್ಥ ರಾಜಕಾರಣ ಎಂದು ಟೀಕಿಸಿದ್ದಾರೆ. ಕರ್ನಾಟಕದ ಜನರ ಸಹನೆಯನ್ನು ಕಾಂಗ್ರೆಸ್ ದುರ್ಬಲತೆ ಎಂದು ಭಾವಿಸಬಾರದು. ಕನ್ನಡಿಗರು ಎಲ್ಲವನ್ನೂ ಗಮನಿಸುತ್ತಿದ್ದಾರೆ ಎಂದು ಅಶೋಕ ಹೇಳಿದ್ದಾರೆ.

ದಲಿತರಿಗೆ ಕಾಂಗ್ರೆಸ್ ವಂಚನೆ: ಛಲವಾದಿ

ಮೈಸೂರು: ಕಾಂಗ್ರೆಸ್ ದಲಿತರನ್ನು ವೋಟ್ ಬ್ಯಾಂಕ್ ಮಾಡಿಕೊಂಡಿದೆ. ಆದರೆ ದಲಿತರನ್ನು ಮುಖ್ಯಮಂತ್ರಿ ಮಾಡದೆ ವಂಚಿಸುತ್ತಿದೆ ಎಂದು ವಿಧಾನ ಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಕಿಡಿಕಾರಿದರು.



ಬುಧವಾರ ನಗರದ ಜಲದರ್ಶಿನಿ ಅತಿಥಿ ಗೃಹದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಡಿ.ಕೆ. ಶಿವಕುಮಾರ್ ಮುಖ್ಯಮಂತ್ರಿಯಾದರೆ ನಮ್ಮ ತಕರಾರು ಇಲ್ಲ. ಆದರೆ, ದಲಿತರನ್ನು ಸಿಎಂ ಮಾಡುತ್ತೇವೆ ಎಂದು ಕಾಂಗ್ರೆಸ್ ಕಳೆದ 70 ವರ್ಷದಿಂದ ವಂಚನೆ ಮಾಡುತ್ತಿದೆ. ಹಾಗಾಗಿ, ಕಾಂಗ್ರೆಸ್‌ನಲ್ಲಿರುವ ದಲಿತ ನಾಯಕರು ಸೀಡ್‌ಲೆಸ್ ಮತ್ತು ಶುಗರ್ ಲೆಸ್ ರೀತಿ ಆಗಿದ್ದಾರೆ. ಯಾರಿಗೂ ನಮಗೆ ಸಿಎಂ ಕೊಡಿ ಎಂದು ಕೇಳುವ ತಾಕತ್ತು ಇಲ್ಲ. ಕಾಂಗ್ರೆಸ್ ಪಕ್ಷ ದಲಿತರಿಗೆ ದ್ರೋಹ ಮಾಡಿದೆ ಎಂದು ವಾಗ್ದಾಳಿ ನಡೆಸಿದರು. ದಲಿತರು ಸಿಎಂ ಆಗಬೇಕಾದ ಸಮಯದಲ್ಲಿ ದಲಿತರಿಗೆ ಸಮಾಧಿ ಕಟ್ಟಿ ಸಿದ್ದರಾಮಯ್ಯ ಮುಖ್ಯಮಂತ್ರಿ ಆಗಿದ್ದರು. ಹಿಂದೆ ಪರಮೇಶ್ವರ್ ಅವರನ್ನು ಸೋಲಿಸಿದ್ದರು. ಈಗಲಾದರೂ ಸಿದ್ದರಾಮಯ್ಯನವರು ದಲಿತರಾದ ಡಾ.ಜಿ. ಪರಮೇಶ್ವರ್ ಪರ ಅವರು ಧ್ವನಿ ಎತ್ತುತ್ತಿಲ್ಲ. ಇದನ್ನು ಕಾಂಗ್ರೆಸ್‌ನಲ್ಲಿರುವ ಎಲ್ಲಾ ದಲಿತರು ಖಂಡಿಸಬೇಕು. ಕಾಂಗ್ರೆಸ್‌ನ ದಲಿತ ನಾಯಕರು ಯಾರು ಕೂಡ ಸಚಿವ ಸ್ಥಾನ ತೆಗೆದುಕೊಳ್ಳದೆ, ಪ್ರತಿಭಟನೆ ಮಾಡಬೇಕು ಎಂದು ಕಿಡಿಕಾರಿದರು.

ಸಂಪಾದಕೀಯ

ರೂಬಿಯೋ ಭೇಟಿ ಎಷ್ಟು ಫಲಕಾರಿ?

ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಮಾರ್ಕೋ ರೂಬಿಯೋ ಭಾರತಕ್ಕೆ ನೀಡಿದ ಭೇಟಿಯು ಉಭಯದೇಶಗಳ ನಡುವಿನ ವ್ಯಾಪಾರ ವಹಿವಾಟು ಹೆಚ್ಚಿಸುವ ಉದ್ದೇಶಕ್ಕಿಂತಲೂ ಹೆಚ್ಚಾಗಿ ಭಾರತ ಮತ್ತು ಅಮೆರಿಕಗಳ ಮಧ್ಯೆ ಹದಗೆಟ್ಟಿರುವ ರಾಜತಾಂತ್ರಿಕ ಸಂಬಂಧಕ್ಕೆ ತೇಪೆ ಹಚ್ಚುವ ಉದ್ದೇಶದ್ದಾಗಿತ್ತು ಎನ್ನುವುದೇ ಹೆಚ್ಚು ಸೂಕ್ತ. ಆದರೆ ಅವರು ಈ ಉದ್ದೇಶದಲ್ಲಿ ಎಷ್ಟು ಸಫಲರಾಗಿದ್ದಾರೆ ಎನ್ನುವುದು ಮಾತ್ರ ಇನ್ನೂ ಪ್ರಶ್ನಾರ್ಥಕವಾಗಿಯೇ ಉಳಿದಿದೆ. ಏಕೆಂದರೆ ಅಮೆರಿಕವು ಭಾರತ ಮತ್ತು ಪಾಕಿಸ್ತಾನ ನಡುವಿನ ಸಮೀಕರಣವನ್ನು ನಿಲ್ಲಿಸದ ಹೊರತು,



ಭಾರತದ ಮೇಲೆ ಹೇರುತ್ತಿರುವ ತೆರಿಗೆ ದಂಡವನ್ನು ಹಿಂತೆಗೆದುಕೊಳ್ಳದ ಹೊರತು ಉಭಯ ದೇಶಗಳ ನಡುವಿನ ರಾಜತಾಂತ್ರಿಕ ಸಂಬಂಧವು ಸರಿದಾರಿಗೆ ಮರಳುವುದು ಕಷ್ಟವೇ ಆಗಿದೆ. ಮಾರ್ಕೋ ರೂಬಿಯೋ ಭಾರತಕ್ಕೆ ಹಿತಕರವಾದಂತಹ ಯಾವುದೇ ಮಾತುಗಳನ್ನು ಆಡಿದರೂ ಅದು ಆಚರಣೆಗೆ ಬಾರದ ಹೊರತು ಸಂಬಂಧ ಸುಧಾರಣೆ ಕಷ್ಟವೆ. ಅಮೆರಿಕದಿಂದ ಭಾರತಕ್ಕೆ ಪೂರಕವಾದ ಕಾರ್ಯಾನುಷ್ಠಾನ ನಡೆಯಬೇಕಾದರೆ ಅದು ಅಧ್ಯಕ್ಷ ಟ್ರಂಪ್‌ರಿಂದ ಆಗಬೇಕೇ ಹೊರತು, ವಿದೇಶಾಂಗ ಕಾರ್ಯದರ್ಶಿಯಿಂದಾಗಲಿ, ಭಾರತದಲ್ಲಿರುವ ಅಮೆರಿಕದ ರಾಯಭಾರಿ ಸರ್ಗಿಯೋ ಗೋರ್ ಅವರಿಂದಾಗಲಿ ಅಲ್ಲ. ಆದರೆ ಟ್ರಂಪ್ ಆದರೋ ಈವರೆಗೆ ಕೈಗೊಂಡ ಕಾರ್ಯಗಳೆಲ್ಲವೂ ಭಾರತದ ಪಾಲಿಗೆ ಹಾನಿ ತರುವಂತಹುದೇ ಆಗಿವೆ. ಭಾರತ ಮಂಟಪಂನಲ್ಲಿ ನಡೆಯುತ್ತಿರುವ ಕಾರ್ಯಕ್ರಮದ ಮಧ್ಯೆಯೇ ಟ್ರಂಪ್ ಅವರು ಅಮೆರಿಕದಿಂದ ಫೋನ್ ಕರೆ ಮಾಡಿ ಭಾರತವು ತನ್ನ ಮೇಲೆ ಶೇ.100ರಷ್ಟು ವಿಶ್ವಾಸವಿಡಬಹುದು ಎಂದು ಹೇಳಿದರಾದರೂ, ಅವರ ಈ ಮಾತಿನ ಮೇಲೆಯೇ ವಿಶ್ವಾಸವಿಡುವುದು ಕಷ್ಟವೇ ಆಗಿದೆ.

ರೂಬಿಯೋ ಅವರು ಕ್ವಾಡ್ ದೇಶಗಳ ಸಚಿವ ಮಟ್ಟದ ಸಭೆಯಲ್ಲಿ ಪಾಲ್ಗೊಂಡರಾದರೂ ಈಗ ಕ್ವಾಡ್‌ಗೆ ಸಂಬಂಧಿಸಿ ಅಮೆರಿಕದ ನಿಲುವಿನ ಮೇಲೆ ಕೂಡಾ ಸಂಶಯದ ನೆರಳು ಕವಿದಿದೆ. ಇಂಡೋ- ಪೆಸಿಫಿಕ್ ಪ್ರದೇಶದಲ್ಲಿ ಚೀನಾದ ಪಾರಮ್ಯಕ್ಕೆ ಸವಾಲೊಡ್ಡುವುದು ಕ್ವಾಡ್ ಕೂಟದ ಉದ್ದೇಶವಾಗಿದ್ದರೂ ಇತ್ತೀಚೆಗಷ್ಟೆ ಚೀನಾಕ್ಕೆ ಭೇಟಿ ನೀಡಿದ್ದ ಟ್ರಂಪ್ ಅವರು ಚೀನಾ ಅಧ್ಯಕ್ಷ ಕ್ಸಿ ಜಿನ್‌ಪಿಂಗ್ ಜತೆ ಆತ್ಮೀಯ ಮಾತುಕತೆ ನಡೆಸಿ ಅವೆರಡು ದೇಶಗಳ ನಡುವಿನ ಬಾಂಧವ್ಯ ವೃದ್ಧಿಸುವ ಮಾತನಾಡಿದ್ದಾರೆ.

ರೂಬಿಯೋ ಭಾರತ ಭೇಟಿಯ ವೇಳೆ ಸಂಭವಿಸಿದ ಒಂದೇ ಒಂದು ಉತ್ತಮ ಬೆಳವಣಿಗೆಯೆಂದರೆ ವಿರಳ ಖನಿಜಗಳ ಗಣಿಗಾರಿಕೆ, ಸಂಸ್ಕರಣೆ ಮತ್ತು ಪೂರೈಕೆ ಜಾಲದ ಕುರಿತಂತೆ ಅಮೆರಿಕ ಮತ್ತು ಭಾರತಗಳು ಒಪ್ಪಂದಕ್ಕೆ ಸಹಿ ಹಾಕಿರುವುದು. ತಂತ್ರಜ್ಞಾನ ಅಭಿವೃದ್ಧಿಗೆ ವಿರಳ ಖನಿಜಗಳು ಈಗ ಅತ್ಯವಶ್ಯವಾಗಿರುವ ಹಿನ್ನೆಲೆಯಲ್ಲಿ ಹಾಗೂ ಪ್ರಸ್ತುತ ಚೀನಾವನ್ನೆ ಇದಕ್ಕೆ ಅವಲಂಬಿಸಿರುವ ಹಿನ್ನೆಲೆಯಲ್ಲಿ ಭಾರತ ಮತ್ತು ಅಮೆರಿಕ ನಡುವಿನ ಒಪ್ಪಂದವು ಈ ಕ್ಷೇತ್ರದಲ್ಲಿ ಸ್ವಾವಲಂಬನೆಗೆ ನೆರವಾಗಬಲ್ಲುದು.

ಈ ಪರಿಸ್ಥಿತಿಗಳಲ್ಲಿ ನಗುವುದೂ ಅಪರಾಧವೇ!

ಗುರುತರ
• ಸೋಮಶೇಖರ ಸಿ.ಜೆ.
sompreethi@gmail.com



ನಗು ಕೆಲವೊಮ್ಮೆ ಮನುಷ್ಯನ ಮಾನಸಿಕ ಸ್ಥಿತಿಯನ್ನು ಬಹಿರಂಗಪಡಿಸಿಬಿಡುತ್ತದೆ. ಒಬ್ಬೊಬ್ಬರೇ ಕುಳಿತು ಸುಮ್ಮನೆ ನಗುತ್ತಿದ್ದರೆ, ಅದನ್ನು ನೋಡಿದವರು ಇವರಿಗೆ ಹುಚ್ಚು ಹಿಡಿದಿದೆ ಎಂದುಕೊಳ್ಳುತ್ತಾರೆಯೇ ಹೊರತು, ಆ ನಗುವಿಗೆ ಒಂದು ಕಾರಣವಿರಬಹುದು ಎಂದು ಭಾವಿಸುವುದಿಲ್ಲ. ಏಕೆಂದರೆ, ಸುಖಾಸುಮ್ಮನೆ ನಗುವುದು ಒಳ್ಳೆಯ ಲಕ್ಷಣವಲ್ಲ. ಹಾಗೆಯೇ, ಸಾವಿನ ಮನೆಯಲ್ಲಿ, ನೊಂದವರಿಗೆ ಸಾಂತ್ವನ ಹೇಳಲು ಹೋದ ವೇಳೆ ಯಾವ ಕಾರಣಕ್ಕೂ ನಗಬಾರದು. ಅಂಥ ಸಂದರ್ಭದ ನಗು ತೀರಾ ಅಪರಾಧ ಎಂದೇ ಎನ್ನಿಸಿಬಿಡುತ್ತದೆ.

ನಗುವಿನ ಬಗ್ಗೆ ಇಷ್ಟೆಲ್ಲಾ ಹೇಳಲು ಕಾರಣಗಳಿವೆ. ತೀರಾ ಮೊನ್ನೆಯಷ್ಟೇ ತಮಿಳುನಾಡಿನಲ್ಲಿ, ಅಂಗಡಿಗೆ ಹೋಗಿ ಬರುತ್ತೇನೆ ಎಂದು ಹೇಳಿ ಹೊರಟಿದ್ದ ಹತ್ತು ವರ್ಷದ ಬಾಲಕಿ ವಾಪಸ್ ಬರಲೇ ಇಲ್ಲ. ಇಬ್ಬರು ದುಷ್ಕರ್ಮಿಗಳು ಆಕೆಯಮೇಲೆಲೈಂಗಿಕದೌರ್ಜನ್ಯಎಸಗಿ,ಕೊಂದುಹಾಕಿದ್ದರು.ಪಾಪ,ಮಗಳ ಬರುವಿಕೆಗಾಗಿ ಕಾದು ಕಾದು ಬಸವಳಿದಿದ್ದ ಪೋಷಕರು ಪೊಲೀಸ್ ಠಾಣೆಯ ಮೆಟ್ಟಿಲೇರಿದ್ದರು. ಎರಡು ದಿನಗಳ ಬಳಿಕ ಆ ಬಾಲಕಿಯ ಶವ ಪತ್ತೆಯಾಗಿತ್ತು. ಇದಾದ ಬಳಿಕ, ಬಾಲಕಿಯನ್ನು ಕೊಂದ ಇಬ್ಬರನ್ನು ಸೆರೆಹಿಡಿದ ಸುದ್ದಿಯನ್ನು ಹೇಳಲು ಪೊಲೀಸರು ಕಾತರಗೊಂಡಿದ್ದರು. ಏಕೆಂದರೆ, ಇತ್ತೀಚೆಗಷ್ಟೇ ತಮಿಳುನಾಡಿನಲ್ಲಿ ಅಧಿಕಾರಕ್ಕೆ ಬಂದಿರುವ ವಿಜಯ್ ಸರ್ಕಾರಕ್ಕೆ ಈ ಪ್ರಕರಣ ಗಂಭೀರ ಸವಾಲಾಗಿ, ದೇಶಾದ್ಯಂತ ಸುದ್ದಿಯಾಗಿತ್ತು. ದುಷ್ಕರ್ಮಿಗಳು ಸಿಕ್ಕಿಬಿದ್ದಿದ್ದಾರೆ ಎಂಬುದನ್ನಷ್ಟೇ ಹೇಳಬೇಕಿತ್ತು. ಆದರೆ, ಆ ಪತ್ರಿಕಾಗೋಷ್ಠಿಯಲ್ಲಿ ಕೆಲವು ಅಪದ್ಧಗಳು ನಡೆದುಹೋದವು. ಪೊಲೀಸರು ಬಾಲಕಿಯ ಸಾವನ್ನೇ ಮರೆತುಬಿಟ್ಟರು! ಸಾವಿಗೆ ಕಾರಣರಾದವರನ್ನು ಹಿಡಿದೆವು ಎಂಬ ಯಶಸ್ಸಿನ ಅಮಲಷ್ಟೇ ಅವರ ತಲೆಯಲ್ಲಿತ್ತು. ಹೀಗಾಗಿ, ಮಾಧ್ಯಮಗಳ ಕ್ಯಾಮೆರಾಗಳ ಮುಂದೆಯೇ ಗಹಗಹಿಸಿ ನಕ್ಕರು, ತಮಾಷೆ ಮಾಡಿದರು. ತಾವು ಬಾಲಕಿಯೊಬ್ಬಳ ಸಾವಿನ ನಂತರದ ಬೆಳವಣಿಗೆಯ ಬಗ್ಗೆ ಮಾತನಾಡಲು ಬಂದಿದ್ದೇವೆ ಎಂಬ ಪ್ರಜ್ಞೆಯೇ ಆ ಮೂವರಿಗೂ ಇರಲಿಲ್ಲ. ದುರಂತವೆಂದರೆ, ಆ ಮೂವರು ಪೊಲೀಸ್ ಅಧಿಕಾರಿಗಳಲ್ಲಿ ಒಬ್ಬರು ಮಹಿಳೆಯೂ ಆಗಿದ್ದರು.

ಒಂದು ವ್ಯವಸ್ಥೆ ಎಷ್ಟರಮಟ್ಟಿಗೆ ಜಡ್ಡುಗಟ್ಟಿಹೋಗಿದೆ ಎಂಬುದನ್ನು ಇಂಥ ಕ್ಷಣಗಳೇ ಬಯಲು ಮಾಡುತ್ತವೆ. ಆ ಬಾಲಕಿಯ ಜಾಗದಲ್ಲಿ ಒಂದು ಕ್ಷಣ ತಮ್ಮದೇ ಮಗಳನ್ನು ಇಟ್ಟು ನೋಡಿಕೊಂಡಿದ್ದರೆ, ಆ ಯಾವ ಅಧಿಕಾರಿಯ ತುಟಿಯಲ್ಲೂ ನಗು ಸುಳಿಯುತ್ತಿರಲಿಲ್ಲ. ಆದರೆ, ಬಲಿಯಾದವಳು ಬೇರೆಯವರ ಮಗಳಾಗಿದ್ದಾಗ ಆಕೆ ಬರೀ ಒಂದು ಪ್ರಕರಣವಾಗಿ, ಒಂದು ಕಡತದ ಸಂಖ್ಯೆಯಾಗಿ ಸೀಮಿತಗೊಂಡುಬಿಡುತ್ತಾಳೆ. ಆ ಸಂಖ್ಯೆಯ ಹಿಂದೆ ಇದ್ದ ಪುಟ್ಟ ಕನಸುಗಳು, ಆ ಮಗುವಿನ ನಗು, ಮನೆಯವರ ಕಣ್ಣೀರು ಯಾವುದೂ ನಮ್ಮ ಲೆಕ್ಕಕ್ಕೇ ಬರುವುದಿಲ್ಲ. ಬೇರೊಬ್ಬರ ದುರಂತವನ್ನು ನಮ್ಮ ಸಾಧನೆಯ ವೇದಿಕೆಯನ್ನಾಗಿ ಬಳಸಿಕೊಳ್ಳುವ ಈ ಮನಃಸ್ಥಿತಿಯೇ ನಮ್ಮ ಕಾಲದ ಅತಿದೊಡ್ಡ ಅನಾಹುತ.

ಈಗ ನನ್ನ ಪ್ರಶ್ನೆ ಇಷ್ಟೇ. ಅಪರಾಧವೇ ನಡೆಯದಂತೆ ಸಮಾಜವನ್ನು ಕಟ್ಟುವುದು ನಮ್ಮ ಸಾಧನೆಯೋ, ಅಥವಾ ಅಪರಾಧ ನಡೆದ ಮೇಲೆ ದುಷ್ಕರ್ಮಿಗಳನ್ನು ಹಿಡಿಯುವುದು ನಮ್ಮ ಸಾಧನೆಯೋ? ಅತ್ಯಂತ ದುಃಖಕರ ಸಂಗತಿ ಎಂದರೆ, ನಾವು ಮತ್ತು ನಮ್ಮ ಸಮಾಜ ಇಂದಿಗೂ ಎರಡನೆಯದನ್ನೇ ದೊಡ್ಡ ಗೆಲುವೆಂದು ಸಂಭ್ರಮಿಸುತ್ತಿದೆ. ಎಲ್ಲೋ ದುರುಳರು ಯುವತಿಯೊಬ್ಬಳನ್ನು ಅತ್ಯಾಚಾರ ಮಾಡಿ ಹತ್ಯೆಗೈಯುತ್ತಾರೆ, ಇನ್ನೆಲ್ಲೋ ಕೆಲಸದ ಸ್ಥಳದಲ್ಲೇ ಸಹೋದ್ಯೋಗಿಯೊಬ್ಬ ಮಹಿಳೆಯ ಮೇಲೆ ಅತ್ಯಾಚಾರವೆಸಗಿ ಸಾಯಿಸುತ್ತಾನೆ, ಮತ್ತೆಲ್ಲೋ ಚಿಕ್ಕ ಮಕ್ಕಳ ಮೇಲೆ ದೌರ್ಜನ್ಯ ನಡೆಯುತ್ತದೆ, ವರದಕ್ಷಿಣೆಯ ನೆಪದಲ್ಲಿ ಮನೆಯೊಳಗೇ ಸೊಸೆಯನ್ನು ಬಲಿ ತೆಗೆದುಕೊಳ್ಳಲಾಗುತ್ತದೆ. ಈ ಎಲ್ಲ ಪ್ರಕರಣಗಳಲ್ಲೂ ನಾವು ಮಾಧ್ಯಮದವರೂ ಸೇರಿದಂತೆ ಎಲ್ಲರೂ ಕೇಳುವ ಪ್ರಶ್ನೆ ಒಂದೇ ದುಷ್ಕರ್ಮಿಗಳ ಬಂಧನ ಯಾವಾಗ? ಆದರೆ, ಈ ಮಹಿಳಾ ಶೋಷಣೆ ಕೊನೆಗೊಳ್ಳುವುದು ಯಾವಾಗ? ಎಂಬ ಪ್ರಶ್ನೆಯನ್ನು ನಾವು ಎಂದಾದರೂ ನಮಗೇ ಕೇಳಿಕೊಂಡಿದ್ದೇವೆಯೇ?

ಇದರಲ್ಲಿ ನಾವು ಮಾಧ್ಯಮದವರ ಪಾಲೂ ಸಣ್ಣದೇನಲ್ಲ ಎಂಬುದನ್ನು ಪ್ರಾಮಾಣಿಕವಾಗಿ ಒಪ್ಪಿಕೊಳ್ಳಬೇಕು. ಒಂದು ಅತ್ಯಾಚಾರ, ಒಂದು ಕೊಲೆ ನಡೆದಾಗ ನಾವು ಅದರ ಮೇಲೆ ಮುಗಿಬೀಳುತ್ತೇವೆ, ಬ್ರೇಕಿಂಗ್ ನ್ಯೂಸ್ ಆಗಿ ಗಂಟೆಗಟ್ಟಲೆ ಚರ್ಚಿಸುತ್ತೇವೆ, ಟಿಆರ್‌ಪಿ ಎಣಿಸುತ್ತೇವೆ. ಆದರೆ, ಆರೋಪಿ ಸಿಕ್ಕಿಬಿದ್ದ ಮರುದಿನವೇ ಆ ಸುದ್ದಿ ತಣ್ಣಗಾಗುತ್ತದೆ. ಆ ಕುಟುಂಬ ಮುಂದೆ ಹೇಗೆ ಬದುಕಿತು, ಕೋರ್ಟಿನಲ್ಲಿ ನ್ಯಾಯ ಸಿಕ್ಕಿತೋ ಇಲ್ಲವೋ ಎಂಬುದನ್ನು ಹಿಂಬಾಲಿಸುವ ತಾಳ್ಮೆ ನಮಗಿಲ್ಲ. ಶೋಷಣೆಯನ್ನು ಸುದ್ದಿಯಾಗಿ ಮಾರುವ ನಾವು, ಆ ಶೋಷಣೆಯನ್ನು ಬೇರಿನಿಂದ ತಡೆಯುವ ಪ್ರಶ್ನೆಯನ್ನು ಮಾತ್ರ ಎಂದೂ ಅಷ್ಟೇ ಗಂಭೀರವಾಗಿ ಎತ್ತುವುದಿಲ್ಲ.

ಇಂದಿಗೂ ಹೆಣ್ಣುಮಕ್ಕಳ ಹೆತ್ತವರ ಮನದಲ್ಲಿ ಈ ಭಯ ಮನೆಮಾಡಿಯೇ ಇದೆ ಮನೆಯಿಂದ ಹೊರಗೆ ಹೋದ ನನ್ನ ಮಗಳು ಸುರಕ್ಷಿತವಾಗಿ ವಾಪಸ್ ಬರುತ್ತಾಳೆಯೇ? ಮಗಳು ಶಾಲೆಗೋ, ಕಾಲೇಜಿಗೋ, ಕೆಲಸಕ್ಕೋ ಹೊರಟಾಗ, ಆಕೆ ಮನೆಗೆ ಮರಳುವವರೆಗೂ ಆ ತಂದೆ-ತಾಯಿಯ ಎದೆಯಲ್ಲಿ ಒಂದು ಸಣ್ಣ ನಡುಕ ಇದ್ದೇ ಇರುತ್ತದೆ. ದುರಂತವೆಂದರೆ, ಈ ಆತಂಕವನ್ನು ಬೇರೊಬ್ಬರ ಬಳಿ ಹೇಳಿಕೊಳ್ಳುವ ಸ್ಥಿತಿಯೂ ಇಲ್ಲ. ಇಂಥ ಮಾತುಗಳನ್ನು ಆಡಿದರೆ, ನಿಮ್ಮ ಆಲೋಚನೆಯೇ ನೆಗೆಟಿವ್ ಎಂಬ ಮುದ್ರೆಯನ್ನೂ ಒತ್ತಿಬಿಡುತ್ತಾರೆ. ಆದರೆ, ಹೆಣ್ಣುಮಗುವನ್ನು ಹೆತ್ತವರ ಎದೆಯೊಳಗಿನ ಆ ನಿತ್ಯದ ನೋವು, ಆ ಮೌನ ಪ್ರಾರ್ಥನೆ ಇವರಿಗೆ ಎಂದಾದರೂ ಅರ್ಥವಾಗುತ್ತದೆಯೇ?

ಇದರ ನಡುವೆಯೇ, ಪುಣೆಯಲ್ಲಿ ಯುವಕ-ಯುವತಿಯ ಮೇಲೆ ಕಾರು ಹರಿಸಿ ಹತ್ಯೆಗೈದ ಅಪ್ರಾಪ್ತ ಬಾಲಕ ಮತ್ತು ಆತನ ಪೋಷಕರ ಸಂಭ್ರಮದ ವಿಡಿಯೋ ಒಂದು ವೈರಲ್ ಆಗಿದೆ. ಜಾಮೀನಿನ ಮೇಲೆ ಬಿಡುಗಡೆಯಾದ ಆರೋಪಿಗಳು ಮನೆಯಲ್ಲಿ ಸಂಭ್ರಮಾಚರಣೆಯನ್ನೇ ಮಾಡಿದ್ದಾರೆ, ಜೈಲಿನಿಂದ ಮರಳಿ ಬಂದವರನ್ನು ಹೆಗಲ ಮೇಲೆ ಎತ್ತಿಕೊಂಡು ಕುಣಿದಿದ್ದಾರೆ. ಆದರೆ, ಇಲ್ಲಿ ಏಳಬೇಕಾದ ಪ್ರಶ್ನೆ ಇಷ್ಟೇ, ಈ ಪರಿಯ ಸಂಭ್ರಮಕ್ಕೆ ಅವರೇನು ಯುದ್ಧ ಗೆದ್ದು ಬಂದಿದ್ದರೇ? ರಸ್ತೆಯಲ್ಲಿ ನಿಂತಿದ್ದ ಇಬ್ಬರ ಮೇಲೆ ಕಾರು ಹಾಯಿಸಿ ಪ್ರಾಣ ತೆಗೆದ ಆರೋಪದ ಮೇಲೆ ಜೈಲಿಗೆ ಹೋಗಿ ಬಂದವರಿವರು. ಅಂದು ಮಡಿದ ಆ ಯುವಕ-ಯುವತಿಯ ಮನೆಗಳಲ್ಲಿ ಕಣ್ಣೀರು ಇನ್ನೂ ಆರಿಲ್ಲ. ಬೆಳೆದು ನಿಂತು, ಕೆಲಸಕ್ಕೆ ಸೇರಿ ಕುಟುಂಬಕ್ಕೆ ದುಡಿಮೆಯ ಆಸರೆಯಾಗಿದ್ದ ಮಕ್ಕಳನ್ನು ಕಳೆದುಕೊಂಡ ಆ ಮನೆಗಳ ಸ್ಥಿತಿ ಏನಾಗಿರಬೇಡ! ಆ ಮಕ್ಕಳ ಬಗ್ಗೆ ಹೆತ್ತವರು ಎಷ್ಟೆಲ್ಲಾ ಕನಸುಗಳನ್ನು ಕಂಡಿದ್ದಿರಬಹುದು ಎಂಬ ಸಣ್ಣ ಅರಿವಾದರೂ ಸಂಭ್ರಮಿಸಿದವರಿಗೆ ಇತ್ತೇ? ಇಲ್ಲ. ನಮ್ಮ ನಾಗರಿಕ ಸಮಾಜ ಈ ಎಲ್ಲ ಸೂಕ್ಷ್ಮ, ಭಾವನಾತ್ಮಕ ಸಂಗತಿಗಳನ್ನು ಮರೆತೇಬಿಟ್ಟಿದೆ. ನಾವೀಗ ಎಲ್ಲವನ್ನೂ ಘಟನೆ ನಡೆದ ಮೇಲೆಯೇ ಆಲೋಚಿಸುತ್ತೇವೆಯೇ ಹೊರತು, ಘಟನೆಗೆ ಮುನ್ನ ಯೋಚಿಸುವುದೇ ಇಲ್ಲ.

ಈ ಸಂಭ್ರಮ ಕೇವಲ ಒಂದು ಕುಟುಂಬದ ಅಸೂಕ್ಷ್ಮತೆಯಲ್ಲ. ಅದು ಇಡೀ ಸಮಾಜಕ್ಕೆ ರವಾನಿಸುವ ಒಂದು ಅಪಾಯಕಾರಿ ಸಂದೇಶ. ಹಣವಿದ್ದರೆ, ಪ್ರಭಾವವಿದ್ದರೆ ಪ್ರಾಣ ತೆಗೆದರೂ ಜಾಮೀನು ಸಿಗುತ್ತದೆ, ಬೇಕಿದ್ದರೆ ಸಂಭ್ರಮಿಸಲೂಬಹುದು ಎಂಬ ಪಾಠವನ್ನು ಅದು ಮುಂದಿನ ಪೀಳಿಗೆಗೆ ಕಲಿಸುತ್ತದೆ.

ಇದೇ ಅಪರಾಧವನ್ನು ಬಡವನ ಮಗ ಮಾಡಿದ್ದರೆ ಆತ ವರ್ಷಗಟ್ಟಲೆ ಜೈಲಿನ ಕಂಬಿಗಳ ಹಿಂದೆ ಕೊಳೆಯಬೇಕಾಗಿತ್ತು. ಆದರೆ ಇಲ್ಲಿ ಹೆಗಲ ಮೇಲೆ ಹೊತ್ತು ಕುಣಿಯುವ ಸ್ವಾತಂತ್ರ್ಯ ಸಿಗುತ್ತದೆ. ಯಾವ ಸಮಾಜದಲ್ಲಿ ಮನುಷ್ಯನ ಪ್ರಾಣಕ್ಕಿಂತ ಆತನ ಜೇಬಿನ ತೂಕ ಹೆಚ್ಚಾಗುತ್ತದೋ, ಆ ಸಮಾಜ ಒಳಗಿನಿಂದಲೇ ಸತ್ತುಹೋಗಿರುತ್ತದೆ.

ಇಲ್ಲಿ ನಗು ಎಂಬುದು ಕೇವಲ ತುಟಿಯ ಮೇಲಿನ ಚಲನೆಯಲ್ಲ. ಅದು ನಮ್ಮ ಒಳಗಿನ ಸಂವೇದನೆ ಸತ್ತುಹೋಗಿರುವುದರ ಸಂಕೇತ. ಬಾಲಕಿಯ ಶವದ ನೆನಪು ಇನ್ನೂ ಹಸಿಯಾಗಿರುವಾಗಲೇ ಪೊಲೀಸರ ತುಟಿಯಲ್ಲಿ ನಗು ಅರಳುತ್ತದೆ, ಇಬ್ಬರ ಪ್ರಾಣ ಬಲಿ ಪಡೆದ ಕೈಗಳು ಮನೆಯಲ್ಲಿ ಸಂಭ್ರಮದಿಂದ ಕುಣಿಯುತ್ತವೆ. ಇದು ನಮ್ಮ ಗೆಲುವಿನ ಲಕ್ಷಣವಲ್ಲ, ನಮ್ಮ ಮನುಷ್ಯತ್ವದ ಸೋಲಿನ ಲಕ್ಷಣ.

ಒಂದು ನಾಗರಿಕ ಸಮಾಜದ ನಿಜವಾದ ಅಳತೆಗೋಲು, ಅದು ಎಷ್ಟು ಬೇಗ ಅಪರಾಧಿಯನ್ನು ಹಿಡಿಯುತ್ತದೆ ಎಂಬುದಲ್ಲ, ಎಷ್ಟು ಹೆಣ್ಣುಮಕ್ಕಳು ಭಯವಿಲ್ಲದೆ ಮನೆಯಿಂದ ಹೊರಬಿದ್ದು, ಸುರಕ್ಷಿತವಾಗಿ ಮರಳಿ ಬರುತ್ತಾರೆ ಎಂಬುದು. ಆ ದಿನ ಬಂದಾಗ ಮಾತ್ರ ನಾವು ನಿಜವಾಗಿಯೂ ಸಂಭ್ರಮಿಸಲು ಅರ್ಹರಾಗುತ್ತೇವೆ. ಅಲ್ಲಿಯವರೆಗೆ ಪ್ರತಿ ಬಂಧನವೂ ಒಂದು ಸೋಲಿನ ಒಪ್ಪಿಗೆಯಷ್ಟೇ, ಅಪರಾಧವನ್ನು ತಡೆಯಲು ನಮಗೆ ಸಾಧ್ಯವಾಗಲಿಲ್ಲ ಎಂಬ ಮೌನ ಒಪ್ಪಿಗೆ. ಹೀಗಾಗಿ, ಮುಂದಿನ ಬಾರಿ ಇಂಥದ್ದೊಂದು ಸುದ್ದಿ ಕಿವಿಗೆ ಬಿದ್ದಾಗ ನಮ್ಮೊಳಗೆ ನಗು ಮೂಡಬಾರದು, ಮೂಡಿದರೂ ಒಂದು ಕ್ಷಣದಲ್ಲಿ ಗಂಟಲಲ್ಲೇ ಅದು ಸತ್ತುಹೋಗಬೇಕು.

ಬೇರೊಬ್ಬರ ನೋವಿಗೆ ನಮ್ಮ ಮುಖ ಬಾಡಬೇಕು, ಕಣ್ಣಂಚು ಒದ್ದೆಯಾಗಬೇಕು. ಆ ಬಾಡಿದ ಮುಖ, ಆ ಮೌನ, ಆ ಒದ್ದೆಗಣ್ಣು ಇವೇ ನಮ್ಮನ್ನು ಇನ್ನೂ ಮನುಷ್ಯರನ್ನಾಗಿ ಉಳಿಸಿಕೊಂಡಿರುವ ಕೊನೆಯ ಗುರುತುಗಳು. ಆ ಗುರುತುಗಳನ್ನೂ ನಾವು ಕಳೆದುಕೊಂಡ ದಿನ ಹೌದು, ಆಗ ಈ ಪರಿಸ್ಥಿತಿಗಳಲ್ಲಿ ನಗುವುದೇ ಅತಿದೊಡ್ಡ ಅಪರಾಧವಾಗುತ್ತದೆ.

ಸಕಾಲದಲ್ಲಿ ಫಲ

ಅಚೋದ್ಯಮಾನಾನಿ ಯಥಾ ಪುಷ್ಪಾಣಿ ಚ ಫಲಾನಿ ಚ।
ಸ್ವಂ ಕಾಲಂ ನಾತಿವರ್ತಂತೇ ತಥಾ ಕರ್ಮ ಪುರಾಕೃತಮ್ ॥ -ಮಹಾಭಾರತ

ಫಲ ಪುಷ್ಪಗಳು ಯಾರೂ ಪ್ರೇರೇಪಿಸದೆ ಬರುವಂತೆ ನಾವು ಮಾಡಿದ ಪ್ರಾಚೀನ ಕರ್ಮವು (ಫಲವನ್ನೀಯುವ ವಿಷಯದಲ್ಲಿ) ತನ್ನ ಕಾಲವನ್ನು ಮೀರುವುದಿಲ್ಲ. ಕಾಲದಲ್ಲಿ ಫಲವನ್ನು ಕೊಟ್ಟೇ ಕೊಡುತ್ತವೆ - ಎಂಬುದು ಶ್ಲೋಕಾರ್ಥ.

ಜಗತ್ತಿನಲ್ಲಿ ಯಾವ ಕಾಲದಲ್ಲಿ ಏನಾಗಬೇಕೋ ಅದು ಆಯಾ ಕಾಲದಲ್ಲಿ ಸಂಭವಿಸುತ್ತದೆ. ಜಗದ ನಿಯಮವನ್ನು ಬದಲಾಯಿಸುವುದು ಸಾಧ್ಯವಿಲ್ಲವೆಂದೇ ಹೇಳಬಹುದು. ಯಾರ ಪ್ರೇರೇಪಣೆಯಿಲ್ಲದೇ, ಯಾರದೇ ಕೈವಾಡವಿಲ್ಲದೇ ಆಗಬೇಕಾದದ್ದು ಸಂದರ್ಭಕ್ಕನುಗುಣವಾಗಿ ಆಗುತ್ತದೆ.

ಗಿಡವನ್ನು ನೆಟ್ಟು ಮಣ್ಣು ಗೊಬ್ಬರಗಳನ್ನು ಹಾಕಿ ಹೆಚ್ಚೆಚ್ಚು ನೀರೆರೆದರೆ ತಕ್ಷಣ ಫಲ-ಪುಷ್ಪಾದಿಗಳು ಬಿಡುವುದಿಲ್ಲ. ಅದಕ್ಕೆ ಅದರದೇ ಆದ ಕಾಲ ಬೇಕಾಗುತ್ತದೆ. ಸಮಾಧಾನ ಚಿತ್ತದಿಂದ ಎಲ್ಲವನ್ನು ಗಮನಿಸಬೇಕು. ಒಂದಷ್ಟು ಸಮಯ ಕಾಯಬೇಕಾಗುತ್ತದೆ.



ನಮ್ಮದು ಕಿಂಚಿತ್ ಪ್ರಯತ್ನ ವಿಲ್ಲದಿದ್ದರೂ, ಯಾರೂ ಪ್ರೇರೇಪಿಸದಿದ್ದರೂ ತಾನು ಹೂ ಬಿಡುವ ಸಂದರ್ಭಗಳಲ್ಲಿ ಬಳ್ಳಿಗಳು, ಗಿಡ-ಮರಗಳು ಫಲ- ಪುಷ್ಪಾದಿಗಳನ್ನು ಕೊಡುತ್ತವೆ. ಅದರ ಸಮಯ ಬಂದಾಗ ಹೀಗಾಗುವುದು ಸಹಜ. ಯಾರ ಪ್ರಯತ್ನವೂ ಬೇಕಾಗಿಲ್ಲ. ಫಲಾದಿಗಳು ತನ್ನಷ್ಟಕ್ಕೆ ಬರುತ್ತವೆ. ತಡೆಯುವುದಕ್ಕೆ ನಮ್ಮಿಂದ ಸಾಧ್ಯವಾಗುವುದಿಲ್ಲ . ಫಲವನ್ನು ನೀಡುವ ವಿಷಯದಲ್ಲಿ ಕಾಲವನ್ನು ಮೀರದೇ ಸಕಾಲದಲ್ಲಿ ನೀಡುತ್ತವೆ.

'ನಿಯತಂ ಕುರು ಕರ್ಮತ್ವಂ' ನಿರಂತರವಾಗಿ ಕರ್ಮವನ್ನು ಮಾಡುತ್ತಿರಬೇಕು ಎಂಬುದು ಸೂಕ್ತಿಯ ಅರ್ಥ. ಮನುಷ್ಯನು ತನ್ನ ಕೆಲಸವನ್ನು ನಿರಂತರ ಮಾಡುತ್ತಲೇ ಇರಬೇಕು. ಕರ್ಮ ಮಾಡದೆ ಸಮಯವನ್ನು ವ್ಯರ್ಥ ಮಾಡಬಾರದು. ಕಾಲ ಕೂಡಿ ಬಂದಾಗ ಅದರ ಫಲ ನಮಗೆ ಸಿಕ್ಕೇ ಸಿಗುತ್ತದೆ. ನಮ್ಮ ಪ್ರಯತ್ನ, ಪರಿಶ್ರಮ, ನಿಷ್ಠೆ ಇವುಗಳನ್ನು ಆಧರಿಸಿ ಕರ್ಮದ ಫಲ ಪ್ರಾಪ್ತಿಯಾಗುತ್ತದೆ. ಪ್ರಯತ್ನಿಸದೇ ಫಲವನ್ನು ಬಯಸುವುದು ಮೂರ್ಖತನ. ಅದು ಸರಿಯಲ್ಲ. ಚೆನ್ನಾಗಿ ಓದಿ ಅರ್ಥ ಮಾಡಿಕೊಂಡು ಉತ್ತರವನ್ನು ಬರೆದ ವಿದ್ಯಾರ್ಥಿ ಉತ್ತಮ ಅಂಕಗಳೊಂದಿಗೆ ಉತ್ತೀರ್ಣನಾಗುತ್ತಾನೆ. ಗೌರವಕ್ಕೆ ಭಾಜನನಾಗುತ್ತಾನೆ. ಪ್ರಯತ್ನಿಸದೆ ಅಂಕ ಬರಲೆಂದು ಆಶಿಸುವುದು ಮೂರ್ಖತನ. ನಾವು ನಿರಂತರ ಒಳ್ಳೆಯ ಕರ್ಮಗಳನ್ನು ಮಾಡುತ್ತಿರಬೇಕು. ಇದು ಯಾರನ್ನೂ ಮೆಚ್ಚಿಸುವುದಕ್ಕಾಗಿ ಆಗಬಾರದು. ಕೇವಲ ಕರ್ತವ್ಯ ದೃಷ್ಟಿ ಮಾತ್ರ ಇರಬೇಕು. ಕರ್ತವ್ಯ ಮಾಡುವುದಕ್ಕೆ ನಮಗೆ ಅಧಿಕಾರವೇ ವಿನಾ ಫಲದ ವಿಷಯದಲ್ಲಲ್ಲ. ಕರ್ತವ್ಯವನ್ನು ಪ್ರಾಮಾಣಿಕವಾಗಿ ಮಾಡಿದರೆ ಅದಕ್ಕೆ ಅನುಗುಣವಾದ ಫಲವು ಸಿಕ್ಕೇ ಸಿಗುತ್ತದೆ. ನಾವು ಮಾಡಿದ ಕರ್ಮವು ಕಾಲ ಕೂಡಿ ಬಂದಾಗ ಫಲದ ರೂಪದಲ್ಲಿ ದೊರೆಯುತ್ತದೆ. ನಾವಿಂದು ಕರ್ತವ್ಯವನ್ನು ಮಾಡದೆ ಹಕ್ಕುಗಳ ಬಗ್ಗೆ ಸಾಕಷ್ಟು ಮಾತನ್ನಾಡುತ್ತೇವೆ. ಹಕ್ಕುಗಳನ್ನು ಪ್ರತಿಪಾದಿಸುವುದರಲ್ಲೇ ಮುಳುಗಿದ ನಾವು ಕರ್ತವ್ಯವನ್ನು ಮರೆಯುತ್ತೇವೆ. ಆಗ ಫಲವೆಂತು ಲಭ್ಯವಾಗುತ್ತದೆ? ನಮ್ಮ ಪ್ರಾಮಾಣಿಕ ಕರ್ತವ್ಯಕ್ಕೆಂದೂ ಮೋಸವಾಗದು. ಕಾಲಕ್ಕೆ ಸರಿಯಾಗಿ ಮಳೆ ಬೆಳೆಯಾಗುವಂತೆ, ಮರಬಳ್ಳಿಗಳು ಪುಷ್ಪವನ್ನೂ ಫಲವನ್ನೂ ಕೊಡುವಂತೆ ಕರ್ತವ್ಯವು ಕಾಲಕ್ಕೆ ಸರಿಯಾಗಿ ಫಲವೀಯುತ್ತದೆ. ಆದ್ದರಿಂದ ನಾವು ಕರ್ತವ್ಯ ಪರರಾಗಬೇಕು.

ಶಿಕ್ಷಣವಿದೆ...ಆದರೆ ನಾಗರಿಕ ಪ್ರಜ್ಞೆ ಎಲ್ಲಿದೆ?

▸ ಡಾ.ಮೈತ್ರಿ ಭಟ್, ವಿಟ್ಲ

ಅದೇನು ಹೊಸ ಹಾದಿಯಲ್ಲ. ಸುಮಾರು ಹತ್ತು-ಹನ್ನೆರಡು ವರುಷಗಳಿಂದ ಚಿರಪರಿಚಿತ ರಸ್ತೆ. ಮೊನ್ನೆ ಮೊನ್ನೆ ಆ ರಸ್ತೆಯಲ್ಲಿ ಸಾಗುವಾಗಲೂ ಸ್ವಚ್ಛವಾಗಿದ್ದ ಆ ರಸ್ತೆ ಕೆಲವೇ ದಿನಗಳಲ್ಲಿ ಎಷ್ಟು ಬದಲಾಗಿತ್ತೆಂದರೆ ರಸ್ತೆಯ ಇಕ್ಕೆಲಗಳಲ್ಲಿ ಕಸದ ರಾಶಿ, ವಾಸನೆ.... ಆಗಲೇ ಅನಿಸಿದ್ದು... ಆಧುನಿಕ ಶಿಕ್ಷಣ ಪಡೆದ ನಾವು ಅದೇಕೆ ನಾಗರಿಕ ಪ್ರಜ್ಞೆ ಮರೆಯುತ್ತಿದ್ದೇವೆ? ನಾವು ಎಚ್ಚರಗೊಳ್ಳುವುದು ಯಾವಾಗ ಅಥವಾ ನಮ್ಮಲ್ಲಿ ಈ 'ಸಿವಿಕ್ ಸೆನ್ಸ್' ಬೆಳೆಸುವುದು ಹೇಗೆ? ಇತ್ಯಾದಿ.

ಒಮ್ಮೆ ಮನೆಯ ಕಾಂಪೌಂಡ್ ದಾಟಿ ರಸ್ತೆಗಿಳಿದರೆ ಸಾಕು. ನಮ್ಮ ಸುತ್ತಮುತ್ತ ಎಲ್ಲೆಂದರಲ್ಲಿ ಕಸ ಎಸೆಯುವುದು, ಸಾರ್ವಜನಿಕ ಸ್ಥಳಗಳಲ್ಲಿ ಉಗುಳುವುದು, ಸಂಚಾರ ನಿಯಮಗಳನ್ನು ಪಾಲಿಸದೇ ಅಪಘಾತಗಳಿಗೆ ಕಾರಣವಾಗುವುದು, ಸರ್ಕಾರಿ ಆಸ್ತಿಪಾಸ್ತಿಗಳನ್ನು ಹಾನಿಗೊಳಿಸುವುದು -ಇವೆಲ್ಲವೂ ಇಂದು ಎಲ್ಲಿ ನೋಡಿದರಲ್ಲಿ ಕಣ್ಣಿಗೆ ಬೀಳುವ ಸಾಮಾನ್ಯ ದೃಶ್ಯಗಳಾಗಿಬಿಟ್ಟಿವೆ. ವಿಜ್ಞಾನ, ತಂತ್ರಜ್ಞಾನ, ಶಿಕ್ಷಣ ಮತ್ತು ಆರ್ಥಿಕತೆಯಲ್ಲಿ ಭಾರತ ವೇಗವಾಗಿ ಮುನ್ನಡೆಯುತ್ತಿದ್ದರೂ 'ನಾಗರಿಕ ಪ್ರಜ್ಞೆ' ಅಥವಾ 'ಸಿವಿಕ್ ಸೆನ್ಸ್' ವಿಷಯದಲ್ಲಿ ನಾವು ಇನ್ನೂ ಬಹಳಷ್ಟು ದೂರವೇ ಉಳಿದು ಬಿಟ್ಟಿದ್ದೇವೆ. ಈ ದಿಕ್ಕಿನಲ್ಲಿ ನಾವು ಬಹಳಷ್ಟು ದೂರ ಸಾಗಬೇಕಿದೆ ಎಂಬುದು ಕಳವಳಕಾರಿ ಸಂಗತಿ. ಆದರೆ ನಾವು ಸಮಾಜದಲ್ಲಿ ಶಿಸ್ತಿನ ಬದುಕು ನಡೆಸಲು ಮತ್ತು ಸುಸಂಸ್ಕೃತ ರಾಷ್ಟ್ರ ನಿರ್ಮಾಣಕ್ಕೆ ನಾಗರಿಕ ಪ್ರಜ್ಞೆ ಅತ್ಯಗತ್ಯ.

ಹಾಗಾದರೆ, 'ಸಿವಿಕ್ ಸೆನ್ಸ್' ಎಂದರೇನು?

ಸಮಾಜದಲ್ಲಿ ಬದುಕುವ ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಹಕ್ಕುಗಳ ಜೊತೆಗೆ ಕರ್ತವ್ಯಗಳನ್ನೂ ಅರಿತು ನಡೆದುಕೊಳ್ಳುವುದು, ಇತರರಿಗೆ ತೊಂದರೆ ಆಗದಂತೆ ಸಾರ್ವಜನಿಕ ಸ್ಥಳಗಳನ್ನು ಬಳಸುವುದು, ಕಾನೂನು ಮತ್ತು ನಿಯಮಗಳನ್ನು ಗೌರವಿಸುವುದು, ಪರಿಸರದ ಸ್ವಚ್ಛತೆಯನ್ನು ಕಾಪಾಡುವುದು... ಇವೆಲ್ಲವನ್ನು ಒಟ್ಟಾಗಿ 'ಸಿವಿಕ್ ಸೆನ್ಸ್' ಎಂದು ಕರೆಯಬಹುದು. ಇದು ಕೇವಲ ಪುಸ್ತಕಗಳಲ್ಲಿ ಕಲಿಯುವ ಪಾಠವಲ್ಲ; ಬದಲಾಗಿ ನಮ್ಮ ನಿತ್ಯ ಜೀವನದಲ್ಲಿ ಪಾಲಿಸಬೇಕಾದ ಮೌಲ್ಯವಾಗಿದೆ.

ಏಕೆಂದರೆ, ನಾಗರಿಕ ಪ್ರಜ್ಞೆ ಇರುವ ವ್ಯಕ್ತಿ ಎಲ್ಲೆಂದರಲ್ಲಿ ಕಸ ಎಸೆಯುವುದಿಲ್ಲ, ಸಾಲಿನಲ್ಲಿ ನಿಂತು ತನ್ನ ಸರದಿಯನ್ನು ಕಾಯುತ್ತಾನೆ, ಸಂಚಾರಿ ನಿಯಮಗಳನ್ನು ಪಾಲಿಸುತ್ತಾನೆ, ನೀರನ್ನು ಅನಗತ್ಯ ಪೋಲು ಮಾಡುವುದಿಲ್ಲ, ಸಾರ್ವಜನಿಕ ಆಸ್ತಿಯನ್ನು ತನ್ನದೇ ಆಸ್ತಿಯಂತೆ ಕಾಪಾಡುತ್ತಾನೆ. ನಾವು ಬೆಳೆಸಿಕೊಳ್ಳುವ ಇಂತಹ ಸಣ್ಣಪುಟ್ಟ ಅಭ್ಯಾಸಗಳೇ ಒಂದು ಉತ್ತಮ ಸಮಾಜವನ್ನು ರೂಪಿಸುತ್ತವೆ.

ಆದರೆ ಇಂದಿನ ಸಮಾಜದಲ್ಲಿ ನಾಗರಿಕ ಪ್ರಜ್ಞೆಯ ಕೊರತೆ ಹಲವಾರು ರೂಪಗಳಲ್ಲಿ ಕಾಣಿಸುತ್ತಿದೆ. ಎಲ್ಲೆಂದರಲ್ಲಿ ಉಗುಳುವುದು, ಸಾರ್ವಜನಿಕ ಸ್ಥಳಗಳಲ್ಲಿ ಪ್ಲಾಸ್ಟಿಕ್ ಕಪ್, ಚಿಪ್ಸ್ ಕವರ್, ಬಾಟಲ್‌ಗಳನ್ನು ಎಸೆಯುವುದು ಸಾಮಾನ್ಯವಾಗಿದೆ. ರೈಲು ನಿಲ್ದಾಣ, ಬಸ್ ನಿಲ್ದಾಣ, ಉದ್ಯಾನವನ, ದೇವಸ್ಥಾನ ಮುಂತಾದ ಸ್ಥಳಗಳಲ್ಲಿ ಎದ್ದು ನಿಂತಿರುವ ಕಸದ ರಾಶಿ ಜನರ ನಿರ್ಲಕ್ಷ್ಯ ಮನೋಭಾವಕ್ಕೆ ಸಾಕ್ಷಿಯಾಗಿದೆ. ಸಂಚಾರ ನಿಯಮ



ಉಲ್ಲಂಘನೆಯೂ ದೊಡ್ಡ ಸಮಸ್ಯೆಯಾಗಿದ್ದು, ಹೆಲ್ಮೆಟ್ ಧರಿಸದೇ ವಾಹನ ಚಲಾಯಿಸುವುದು, ಸಿಗ್ನಲ್ ಮೀರುವುದು, ಅತಿಯಾದ ವೇಗದಿಂದ ಅಥವಾ ಮೊಬೈಲ್‌ನಲ್ಲಿ ಮಾತನಾಡುತ್ತ ವಾಹನ ಚಲಾಯಿಸುವುದು ... ಇವೆಲ್ಲವೂ ನಾಗರಿಕ ಪ್ರಜ್ಞೆಯ ಕೊರತೆಗೆ ಉದಾಹರಣೆಗಳು. ಇಂತಹ ನಿರ್ಲಕ್ಷ್ಯದಿಂದ ಪ್ರತಿದಿನ ಅನೇಕ ಅಮಾಯಕರು ಜೀವ ಕಳೆದುಕೊಳ್ಳುತ್ತಿದ್ದಾರೆ.

ಶಿಕ್ಷಣ ಇದ್ದರೂ ನಾಗರಿಕ ಪ್ರಜ್ಞೆ ಏಕಿಲ್ಲ?

ಇಂದು ಅನೇಕರು ಉನ್ನತ ಶಿಕ್ಷಣ ಪಡೆದಿದ್ದಾರೆ. ಆದರೆ ಶಿಕ್ಷಣದೊಡನೆ ನಾಗರಿಕ ಪ್ರಜ್ಞೆಯೂ ಹೆಚ್ಚಳವಾಗಬೇಕು ಎಂಬ ನಿರೀಕ್ಷೆ ಸಾಕಾರವಾಗುತ್ತಿಲ್ಲ. ಇದಕ್ಕೆ ಪ್ರಮುಖ ಕಾರಣ ಮೌಲ್ಯಾಧಾರಿತ ಶಿಕ್ಷಣದ ಕೊರತೆ. ಇಂದು ನಮ್ಮ ಶಾಲೆಗಳಲ್ಲಿ ನೀಡುವ ಶಿಕ್ಷಣ ಕೇವಲ ಅಂಕ ಆಧಾರಿತವಾಗಿದೆ. ಇಲ್ಲಿ ಜೀವನ ಮೌಲ್ಯಗಳು, ಸಾಮಾಜಿಕ ಹೊಣೆಗಾರಿಕೆ, ಪರಿಸರ ಜಾಗೃತಿ, ಸಾರ್ವಜನಿಕ ಶಿಸ್ತಿನ ಬಗ್ಗೆ ಸಾಕಷ್ಟು ಒತ್ತನ್ನು ನೀಡಲಾಗುತ್ತಿಲ್ಲ. ಜೊತೆಗೆ ಮನೆಯಲ್ಲಿಯೂ ಮಕ್ಕಳಿಗೆ ಉತ್ತಮ ಅಭ್ಯಾಸಗಳನ್ನು ಬೆಳೆಸುವುದು ಕಡಿಮೆಯಾಗುತ್ತಿದೆ. ಹಿರಿಯರು ಸಾರ್ವಜನಿಕ ಸ್ಥಳಗಳಲ್ಲಿ ನಿಯಮ ಉಲ್ಲಂಘಿಸಿದರೆ, ತಮ್ಮ ಮನೆಯ ಕಸವನ್ನು ಎಲ್ಲೆಂದರಲ್ಲಿ ಎಸೆದರೆ ಮಕ್ಕಳು ಅದನ್ನೇ ಅನುಕರಿಸುತ್ತಾರೆ. ಆದ್ದರಿಂದ ನಾಗರಿಕ ಪ್ರಜ್ಞೆಯ ಅರಿವು ನಮ್ಮ ಮನೆಯಿಂದಲೇ ಆರಂಭವಾಗಬೇಕು.

ಪ್ರಸ್ತುತ 'ಸ್ವಚ್ಛ ಭಾರತ' ಎಂಬ ಘೋಷಣೆ ದೇಶಾದ್ಯಂತ ಕೇಳಿಬಂದರೂ, ಈ ಕನಸು ನನಸಾಗಬೇಕಾದರೆ ಸ್ವಚ್ಛತೆಯ ಕಲ್ಪನೆ-ಅರಿವು ಜನರ ಮನಸ್ಸಿನಲ್ಲಿ ಮೂಡಬೇಕು. ಏಕೆಂದರೆ, ಸರ್ಕಾರ ರಸ್ತೆಗಳನ್ನು ಸ್ವಚ್ಛಗೊಳಿಸಬಹುದು; ಆದರೆ ಮತ್ತೆ ಕಸ ಎಸೆಯದಿರುವ ಹೊಣೆಗಾರಿಕೆ ನಾಗರಿಕರದ್ದೇ ಆಗಿದೆ. ಅಲ್ಲವೇ?

ವಿದೇಶಗಳಲ್ಲಿ ಸಾರ್ವಜನಿಕ ಸ್ಥಳಗಳನ್ನು ಜನರು ತುಂಬಾ ಎಚ್ಚರದಿಂದ ಬಳಸುತ್ತಾರೆ. ಅಲ್ಲಿ ಕಸ ಎಸೆಯುವುದನ್ನು ಅಪರಾಧವೆಂದು ಪರಿಗಣಿಸಲಾಗುತ್ತದೆ. ಆದರೆ ನಮ್ಮ ದೇಶದಲ್ಲಿ ''ಇದು ನನ್ನ ಮನೆ ಅಲ್ಲ'' ಎಂಬ ಮನೋಭಾವದಿಂದ ಜನರು ಎಲ್ಲೆಂದರಲ್ಲಿ ಎಸೆಯುತ್ತಾರೆ. ಆದುದರಿಂದ 'ಸಾರ್ವಜನಿಕ ಸ್ಥಳವೂ ನಮ್ಮದೇ' ಎಂಬ ಅರಿವು ಮೂಡಬೇಕು.

ಪ್ರತಿದಿನ ನಡೆಯುವ ರಸ್ತೆ ಅಪಘಾತಗಳಲ್ಲಿ ಬಹುಪಾಲು ನಾವು ಎಸಗುವ ತಪ್ಪುಗಳಿಂದಲೇ ಸಂಭವಿಸುತ್ತವೆ. ಹೀಗಿರುವಾಗ ಟ್ರಾಫಿಕ್ ನಿಯಮಗಳನ್ನು ಪಾಲಿಸುವುದು ಕೇವಲ ಪೊಲೀಸರ ಭಯದಿಂದಲ್ಲ; ನಮ್ಮ ಮತ್ತು ಇತರರ ಜೀವದ ಸುರಕ್ಷತೆಗಾಗಿ ಎಂಬ ಅರಿವು ಅಗತ್ಯ. ಜೀಬ್ರಾ ಕ್ರಾಸಿಂಗ್‌ನಲ್ಲಿ ಪಾದಚಾರಿಗಳಿಗೆ ದಾರಿ ಬಿಡುವುದು, ಸಿಗ್ನಲ್ ಪಾಲಿಸುವುದು, ಹೆಲ್ಮೆಟ್ ಮತ್ತು ಸೀಟ್‌ಬೆಲ್ಟ್ ಧರಿಸುವುದು, ಅತಿವೇಗ ತಪ್ಪಿಸುವುದು... ಇವೆಲ್ಲವೂ ನಾಗರಿಕ ಪ್ರಜ್ಞೆಯ ಭಾಗವೇ ಆಗಿವೆ. ರಸ್ತೆ ಮೇಲೆ ಶಿಸ್ತಿನಿಂದ ವರ್ತಿಸುವ ವ್ಯಕ್ತಿಯೇ ನಿಜವಾದ ಜವಾಬ್ದಾರಿಯುತ ನಾಗರಿಕ.

ನಾಗರಿಕ ಪ್ರಜ್ಞೆ ಎಂಬುದು ಕೇವಲ ಸಂಚಾರಿ ನಿಯಮ ಮತ್ತು ಸ್ವಚ್ಛತೆಗೆ ಸೀಮಿತವಲ್ಲ. ಪರಿಸರವನ್ನು ಕಾಪಾಡುವುದೂ ಪ್ರತಿಯೊಬ್ಬರ ಹೊಣೆಗಾರಿಕೆ. ನೀರನ್ನು ಮಿತವಾಗಿ ಬಳಸುವುದು, ಪ್ಲಾಸ್ಟಿಕ್ ಬಳಕೆ ಕಡಿಮೆ ಮಾಡುವುದು, ಮರಗಳನ್ನು ನೆಡುವುದು, ವಿದ್ಯುತ್ ಉಳಿತಾಯ ಮಾಡುವುದು.... ಇವೆಲ್ಲವೂ ಉತ್ತಮ ನಾಗರಿಕನ ಲಕ್ಷಣಗಳು. ಅದರಲ್ಲೂ ಇಂದು ಪರಿಸರ ಮಾಲಿನ್ಯ, ಹವಾಮಾನ ಬದಲಾವಣೆ, ನೀರಿನ ಕೊರತೆ ಮುಂತಾದ ಸಮಸ್ಯೆಗಳು ಜಗತ್ತನ್ನು ಕಾಡುತ್ತಿರುವ ಸಂದರ್ಭಗಳಲ್ಲಿ ನಾಗರಿಕ ಪ್ರಜ್ಞೆ ಇರುವ ಜನರು ಮಾತ್ರ ಪರಿಸರ ಸಂರಕ್ಷಣೆಯಲ್ಲಿ ಮಹತ್ವದ ಪಾತ್ರ ವಹಿಸಬಲ್ಲರು.

ಡಿಜಿಟಲ್ ಯುಗದಲ್ಲಿ ನಾಗರಿಕ ಪ್ರಜ್ಞೆ ಸಾಮಾಜಿಕ ಜಾಲತಾಣಗಳಲ್ಲಿಯೂ ಅಗತ್ಯವಾಗಿದೆ. ಸುಳ್ಳು ಸುದ್ದಿಗಳನ್ನು ಹಂಚುವುದು, ದ್ವೇಷಭರಿತ ಸಂದೇಶಗಳನ್ನು ಹರಡುವುದು, ಇತರರನ್ನು ಅವಹೇಳನ ಮಾಡುವುದು.... ಇವುಗಳೂ ಸಮಾಜದ ಅಶಾಂತಿಗೆ ಕಾರಣವಾಗುತ್ತವೆ. ಆದ್ದರಿಂದ ಆನ್‌ಲೈನ್‌ನಲ್ಲಿ ಜವಾಬ್ದಾರಿಯುತವಾಗಿ ವರ್ತಿಸುವುದೂ ನಮ್ಮೆಲ್ಲರ ಕರ್ತವ್ಯವಾಗಿದೆ.

ಒಂದು ದೇಶದ ಭವಿಷ್ಯ ಯುವಜನರ ಕೈಯಲ್ಲಿದೆ. ಸಾಮಾಜಿಕ ಹೊಣೆಗಾರಿಕೆಯನ್ನು ಅರಿತು ಕಾರ್ಯನಿರ್ವಹಿಸುವ ಯುವಶಕ್ತಿಯೇ ದೇಶದ ಬಹುದೊಡ್ಡ ಸಂಪತ್ತು. ಯುವಜನತೆ ನಾಗರಿಕ ಪ್ರಜ್ಞೆಯನ್ನು ಅಳವಡಿಸಿಕೊಂಡರೆ ಸಮಾಜದಲ್ಲಿ ಎಂತಹ ಬದಲಾವಣೆ ಬೇಕಿದ್ದರೂ ತರಬಹುದು. ಆದುದರಿಂದ ಮೊದಲು ''ನಾನು ಬದಲಾದರೆ ಸಮಾಜ ಬದಲಾಗುತ್ತದೆ'' ಎಂಬ ಮನೋಭಾವ ಬೆಳೆಯಬೇಕು.

ನಾಗರಿಕ ಪ್ರಜ್ಞೆಯನ್ನು ಬೆಳೆಸುವಲ್ಲಿ ಸರ್ಕಾರದ ಪಾತ್ರವೂ ಮಹತ್ವದ್ದಾಗಿದ್ದು, ಶಾಲಾ ಶಿಕ್ಷಣದಲ್ಲಿ ಮೌಲ್ಯ ಶಿಕ್ಷಣಕ್ಕೆ ಹೆಚ್ಚಿನ ಒತ್ತನ್ನು ನೀಡಬೇಕು. ಸಾರ್ವಜನಿಕ ಜಾಗೃತಿ ಕಾರ್ಯಕ್ರಮಗಳನ್ನು ನಿರಂತರವಾಗಿ ನಡೆಸಬೇಕು. ಮಾತ್ರವಲ್ಲ, ಕಾನೂನು ಉಲ್ಲಂಘಿಸುವವರ ವಿರುದ್ಧ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು. ಹಾಗೆಂದು ಈ ನಿಟ್ಟಿನಲ್ಲಿ ಕೇವಲ ಸರ್ಕಾರದ ಪ್ರಯತ್ನ ಸಾಕಾಗುವುದಿಲ್ಲ; ಜನರ ಸಹಭಾಗಿತ್ವವೂ ಅಗತ್ಯ. ಆದುದರಿಂದ ನಮ್ಮ ಮಕ್ಕಳಿಗೆ ಬಾಲ್ಯದಿಂದಲೇ ಉತ್ತಮ ಅಭ್ಯಾಸಗಳನ್ನು ಕಲಿಸೋಣ. ಆ ಮೂಲಕ ಅವರನ್ನು ದೇಶದ ಉತ್ತಮ ಪ್ರಜೆಗಳನ್ನಾಗಿಸಿ ಜವಾಬ್ದಾರಿಯುತ ನಾಗರಿಕರನ್ನಾಗಿಸೋಣ.

ಒಂದು ರಾಷ್ಟ್ರದ ಪ್ರಗತಿಯ ಅಳತೆಗೋಲುಗಳು ಕೇವಲ ಗಗನಚುಂಬಿ ಕಟ್ಟಡಗಳು, ತಂತ್ರಜ್ಞಾನ ಅಥವಾ ಆರ್ಥಿಕ ಬೆಳವಣಿಗೆಯಷ್ಟೇ ಅಲ್ಲ. ಅಲ್ಲಿನ ನಾಗರಿಕರ ಶಿಸ್ತು, ಸಂಸ್ಕೃತಿ ಮತ್ತು ಸಾಮಾಜಿಕ ಜವಾಬ್ದಾರಿಗಳು ಆ ದೇಶದ ನಿಜವಾದ ಪ್ರಗತಿಯನ್ನು ನಿರ್ಧರಿಸುವಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತವೆ. ಆದುದರಿಂದ ''ದೇಶ ನನ್ನದು'' ಎಂಬ ಭಾವದಿಂದ 'ಮೊದಲು ಸಮಾಜ ಬದಲಾಗಲಿ, ಮತ್ತೆ ನಾನು ಬದಲಾಗುತ್ತೇನೆ ಎಂದು ಯೋಚಿಸುವ ಬದಲು ''ಮೊದಲು ನಾನು ಬದಲಾಗುತ್ತೇನೆ, ಆಗ ಸಮಾಜವೂ ಬದಲಾಗುತ್ತದೆ'' ಎಂಬ ಸಂಕಲ್ಪದಿಂದ ಮುನ್ನಡೆದಾಗ ಸಂಸ್ಕೃತಿ ಹಾಗೂ ಸಂಸ್ಕಾರಯುತ ಭಾರತ ನಿರ್ಮಾಣ ಸಾಧ್ಯವಾಗುತ್ತದೆ.

ಟ್ರಂಪ್ ಇರುವ ತನಕ ಮೋದಿಯವರು ಅಮೆರಿಕಕ್ಕೆ ಭೇಟಿ ನೀಡಬಾರದು...

▸ ಮೈಕೆಲ್ ರೂಬಿನ್

ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಮಾರ್ಕೋ ರೂಬಿಯೋ ಭಾರತಕ್ಕೆ ನೀಡಿದ ಪ್ರವಾಸದ ವೇಳೆ ಪ್ರಧಾನಿ ನರೇಂದ್ರ ಮೋದಿಯವರನ್ನು ಭೇಟಿಯಾಗಿ ಶ್ವೇತ ಭವನಕ್ಕೆ ಭೇಟಿ ನೀಡುವಂತೆ ಆಹ್ವಾನ ನೀಡಿದ್ದಾರೆ. ಆದರೆ ಪ್ರಧಾನಿ ಮೋದಿಯವರು ಈ ಆಹ್ವಾನ ಸ್ವೀಕರಿಸಲು ಆತುರ ತೋರಬಾರದು. ಟ್ರಂಪ್ ಅಧ್ಯಕ್ಷ ಪದವಿಯಿಂದ ಇಳಿಯುವ ತನಕ ಮೋದಿಯವರು ಅಮೆರಿಕಕ್ಕೆ ಭೇಟಿ ನೀಡದಿರುವುದೇ ಒಳ್ಳೆಯದು.

ಭಾರತ ಮತ್ತು ಅಮೆರಿಕ ನಡುವೆ ಸುದೀರ್ಘ ಕಾಲಾವಧಿಯಲ್ಲಿ ಬೆಳೆದು ಬಂದ ಸೌಹಾರ್ದ ಸಂಬಂಧವು ಇದೀಗ ಟ್ರಂಪ್ 2ನೇ ಅವಧಿಯಲ್ಲಿ ಕೆಡತೊಡಗಿದೆ. ಟ್ರಂಪ್ ಇತರರನ್ನು ಬಹಿರಂಗವಾಗಿ ಅವಹೇಳನ ಮಾಡುವವರಾದರೆ, ರೂಬಿಯೋ ಈ ವಿಷಯದಲ್ಲಿ ತುಸು ಮಂದಗತಿಯವರೆನ್ನುವುದು ನಿಜವಾದರೂ ಟ್ರಂಪ್ ತಾಳಕ್ಕೆ ಕುಣಿಯುವುದಕ್ಕೆ ಅವರು ತಪ್ಪುವವರಲ್ಲ.

ರೂಬಿಯೋ ವಿದೇಶಾಂಗ ಕಾರ್ಯದರ್ಶಿಯಾಗಿ ಭಾರತಕ್ಕೆ ಭೇಟಿನೀಡುತ್ತಿರುವುದು ಇದೇ ಮೊದಲು. ಅವರು ಈಗಾಗಲೇ ಇತರ 31 ರಾಷ್ಟ್ರಗಳಿಗೆ ಭೇಟಿ ನೀಡಿದ್ದಾರೆ. ಭಾರತವು ವಿಶ್ವದ ಅತ್ಯಂತ ಹೆಚ್ಚು ಜನಸಂಖ್ಯೆಯುಳ್ಳ ಮತ್ತು ಅತ್ಯಂತ ದೊಡ್ಡ ಪ್ರಜಾತಾಂತ್ರಿಕ ರಾಷ್ಟ್ರವಾಗಿದ್ದರೂ ರೂಬಿಯೋಗೆ ಇದಕ್ಕಿಂತ ಮುನ್ನ ಭಾರತಕ್ಕೆ ಭೇಟಿ ನೀಡಲು ಅವಕಾಶ ಸಿಗದಿದ್ದುದು ಆಶ್ಚರ್ಯ. ಸೈಂಟ್ ಕಿಟ್ಸ್, ಸುರಿನಾಮ್‌ನಂತಹ ಸಣ್ಣ ರಾಷ್ಟ್ರಗಳಿಗೂ ಭೇಟಿ ನೀಡಲು ಅವರಿಗೆ ಸಮಯವಿತ್ತು. ಜಪಾನ್ ಮತ್ತು ದಕ್ಷಿಣ ಕೊರಿಯಾಕ್ಕೆ ಭೇಟಿ ನೀಡಿದಾಗಲೇ ಭಾರತಕ್ಕೂ ಬರಬಹುದಿತ್ತು. ಮಲೇಷ್ಯಾಕ್ಕೆ ಕೂಡಾ ಎರಡು ಬಾರಿ ಭೇಟಿ ನೀಡಿದ್ದಾರೆ. ಭಾರತಕ್ಕೆ ಬರಲು ಅವರಿಗೆ ಅವಕಾಶವೇ ಸಿಗಲಿಲ್ಲವೆ?

ನಿಜವಾಗಿ ರೂಬಿಯೋ ಎದುರಿನಿಂದ ಒಂದು, ಹಿಂದಿನಿಂದ ಮತ್ತೊಂದು ಎಂಬುದಕ್ಕೆ ಅನ್ವರ್ಥವಾಗಿದ್ದಾರೆ. ತಮ್ಮನ್ನು ಪ್ರಶ್ನಿಸುವ ಆಪ್ತರನ್ನು ಕೂಡಾ ಟ್ರಂಪ್ ಬದಿಗೆ ಸರಿಸುವ ಜಾಯಮಾನ ಹೊಂದಿರುವುದರಿಂದ ಟ್ರಂಪ್‌ರ ಬಾಲವಾಗಿಯೇ ಉಳಿಯಲು ರೂಬಿಯೋ ಪ್ರಯತ್ನಿಸುತ್ತಿದ್ದಾರೆ. ಇದೊಂದು ರೀತಿಯಲ್ಲಿ ಹಳೆಯ ಇರಾಕಿ ಜೋಕ್‌ನ್ನು ನೆನಪಿಸುತ್ತದೆ. ಇರಾಕಿನ ವಿದೇಶಾಂಗ ಸಚಿವ ತಾರೀಖ್ ಅಜೀಜ್‌ರನ್ನು ಓರ್ವ ಪತ್ರಕರ್ತ ''ಆನೆಗಳು ಹಾರುತ್ತವೆಯೇ'' ಎಂದು ಪ್ರಶ್ನಿಸಿದನಂತೆ. ''ಅದು ಹೇಗೆ ಸಾಧ್ಯ. ಖಂಡಿತಾ ಹಾರಲಾರದು'' ಎಂದು ಅವರು ಉತ್ತರಿಸಿದರಂತೆ. ಆಗ ಆ ಪತ್ರಕರ್ತ ''ಇರಾಕಿನ ಅಧ್ಯಕ್ಷ ಸದ್ದಾಂ ಹುಸೇನ್ ಆನೆಗಳು ಹಾರುತ್ತವೆ ಎಂದಿದ್ದಾರಲ್ಲ'' ಎಂದು ಉದ್ಗರಿಸಿದಾಗ ತಾರೀಖ್ ಅಜೀಜ್ ಕೂಡಲೇ ''ನಿಜ, ಆನೆಗಳು ಹಾರುತ್ತವೆ. ಆದರೆ ತುಂಬಾ ನಿಧಾನವಾಗಿ'' ಎಂದು ಉತ್ತರಿಸಿದರಂತೆ. ರೂಬಿಯೋ ಕೂಡಾ ಹಾಗೆಯೇ. ಟ್ರಂಪ್ ಏನೇ ಮೂರ್ಖತನದ ಮಾತನಾಡಿದರೂ ಅದನ್ನೆಲ್ಲಾ ಸಮರ್ಥಿಸುವವರು. ರೂಬಿಯೋಗೆ ಕೂಡಾ ಭವಿಷ್ಯದಲ್ಲಿ ಅಧ್ಯಕ್ಷರಾಗಬೇಕೆಂಬ ಮಹತ್ವಾಕಾಂಕ್ಷೆಯಿದೆ. ಹಾಗಾಗಿ ಟ್ರಂಪ್‌ರ ವಿರೋಧ ಕಟ್ಟಿಕೊಳ್ಳಲಾರರು.

ತಮ್ಮ ತತ್ವ ಮತ್ತು ಮಹತ್ವಕಾಂಕ್ಷೆಯ ವಿಷಯ ಬಂದಾಗ ರೂಬಿಯೋ ಮಹತ್ವಾಕಾಂಕ್ಷೆಗೇ ಆದ್ಯತೆ ಕೊಡುತ್ತಾರೆ. ಆದಕ್ಕಾಗಿಯೇ ಮೋದಿಯವರು ಎಚ್ಚರಿಕೆ ವಹಿಸಬೇಕಾದುದು. ಪಾಕಿಸ್ತಾನದ ಸೇನಾ ಮುಖ್ಯಸ್ಥ ಮುನೀರ್‌ನನ್ನು ಟ್ರಂಪ್ ಆಲಂಗಿಸಿಕೊಳ್ಳುವುದನ್ನು ಹಾಗೂ ಭಾರತದ ಮೇಲೆ ತೆರಿಗೆ ಹೇರುವುದನ್ನು ರೂಬಿಯೋಗೆ ತಪ್ಪಿಸಲಾಗಲಿಲ್ಲ. ಸೆನೆಟರ್ ಆಗಿ ರೂಬಿಯೋ ಬಹುಕಾಲದಿಂದ ಉಕ್ರೇನ್‌ನನ್ನು ಸಮರ್ಥಿಸುತ್ತಿದ್ದರು. ಆದರೆ ಟ್ರಂಪ್ ಈ ವಿಷಯದಲ್ಲಿ ಅವರನ್ನು ತರಾಟೆಗೆ ತೆಗೆದುಕೊಂಡ ಬಳಿಕ ರೂಬಿಯೋ ಕೂಡಾ ಜೆಲೆನ್‌ಸ್ಕಿ ವಿರುದ್ಧವಾಗಿ ವರ್ತಿಸಿ ಟ್ರಂಪ್ ಜತೆ ಕ್ಷಮೆ ಕೇಳಬೇಕೆಂದು ಜೆಲೆನ್‌ಸ್ಕಿಗೆ ಹೇಳಿದ್ದರು. ಪಶ್ಚಿಮ ಏಷ್ಯಾದಲ್ಲಿ ಕೂಡಾ ರೂಬಿಯೋ ಹಮಾಸ್ ಮತ್ತು ಇರಾನನ್ನು ವಿರೋಧಿಸುವವರಾದರೂ ಟ್ರಂಪ್‌ರ ಸೂಚನೆಯಂತೆ ಅವುಗಳೊಡನೆ ಸಂಧಾನಕ್ಕೆ ಮುಂದಾಗಿದ್ದರು. ರೂಬಿಯೋ ತಮ್ಮ ವೈಯಕ್ತಿಕ ನಂಬಿಕೆಯಲ್ಲಿ ಪ್ರಾಮಾಣಿಕರಾಗಿರಬಹುದು ಹಾಗೂ ಭಾರತ - ಅಮೆರಿಕ ಸಂಬಂಧ ಉತ್ತಮಗೊಳ್ಳಬೇಕೆಂದು ಬಯಸುತ್ತಿರಬಹುದು. ಆದರೆ ಅದಕ್ಕೆ ಅವರು ಅಧ್ಯಕ್ಷರಾಗುವ ತನಕ ಕಾಯಬೇಕಾಗುತ್ತದೆ. ಟ್ರಂಪ್ ಅಧ್ಯಕ್ಷತೆಯಲ್ಲಿ ಅದು ಸಾಧ್ಯವಾಗದು.

ಮೋದಿ ಅಮೆರಿಕಕ್ಕೆ ಬಂದು ಟ್ರಂಪ್‌ರನ್ನು ಭೇಟಿಯಾದರೆ ಜೆಲೆನ್‌ಸ್ಕಿ ಸಿಲುಕಿಕೊಂಡ ಬಲೆಯಲ್ಲೇ ಸಿಕ್ಕಿಬೀಳಬಹುದು. ಪಾಕಿಸ್ತಾನದ ಪರವಾಗಿ ಟ್ರಂಪ್‌ರ ಕಿವಿಯೂದುವ ಅವರ ಹಳೆಯ ಮಿತ್ರರು ಈಗಲೂ ಟ್ರಂಪ್‌ರಿಗೆ ಆಪ್ತರಾಗಿಯೇ ಇದ್ದಾರೆ. ಟ್ರಂಪ್ ಆಡಳಿತದ ರಚನೆಯಲ್ಲಿ ವಿದೇಶಾಂಗ ಕಾರ್ಯದರ್ಶಿ ಅಥವಾ ರಾಷ್ಟ್ರೀಯ ಭದ್ರತಾ ಸಲಹೆಗಾರರಿಗಿಂತ ಟ್ರಂಪ್‌ರ ಈ ಹಳೆಯ ಸ್ನೇಹಿತರೇ ಹೆಚ್ಚು ಪ್ರಬಲರಾಗಿದ್ದಾರೆ. ಮೋದಿ ಜತೆಗಿನ ಭೇಟಿ ವೇಳೆ ಟ್ರಂಪ್ ಹಠಾತ್ತನೆ ಕಾಶ್ಮೀರಕ್ಕೆ ಸಂಬಂಧಿಸಿ ರಾಜೀಸೂತ್ರವನ್ನು ಮಂಡಿಸಿದರೂ ಅಚ್ಚರಿಪಡಬೇಕಾಗಿಲ್ಲ. ಭಾರತ ಮತ್ತು ಪಾಕಿಸ್ತಾನ ನಡುವಿನ '1500 ವರ್ಷಗಳ' ಗಡಿ ವಿವಾದವನ್ನು ಪರಿಹರಿಸುವುದಾಗಿ ಘೋಷಿಸಿದರೂ ಅಚ್ಚರಿಯಿಲ್ಲ. ಮೋದಿಯವರು ಟ್ರಂಪ್ ಹೇಳಿಕೆ ಸರಿಯಿಲ್ಲ ಎಂದು ಹೇಳಿ ಅವರನ್ನು ಸರಿಪಡಿಸಲೆತ್ನಿಸಿದರೆ ಜೆಲೆನ್‌ಸ್ಕಿಗೆ ಮಾಡಿದಂತೆ ಮೋದಿ ಕೂಡಾ ಕ್ಷಮೆ ಕೋರಬೇಕೆಂದು ಇದೇ ರೂಬಿಯೋ ಹೇಳಿಯಾರು.

ಟ್ರಂಪ್ ತಮ್ಮ ಸಹಾಯಕರ ನಿಷ್ಠೆಯನ್ನು ಪರೀಕ್ಷಿಸುವುದು ಹೇಗೆಂದರೆ ಅವರು ತಮ್ಮ ಸ್ನೇಹಿತರಿಗೇ ವಿಶ್ವಾಸ ದ್ರೋಹ ಬಗೆಯುವಂತೆ ಮಾಡುವುದು. ಅದೇ ರೀತಿ, ರೂಬಿಯೋ ಕೂಡಾ ಇಂತಹುದೇ ಪರೀಕ್ಷೆಗೆ ಒಳಪಡಬೇಕೆಂದು ಟ್ರಂಪ್ ಬಯಸಿ ಭಾರತವನ್ನು ಹೀಯಾಳಿಸಿ ಪಾಕಿಸ್ತಾನವನ್ನು ಹೊಗಳುವಂತೆ ಒತ್ತಡ ಹೇರಲೂಬಹುದು. ಅಂತಹ ಪರಿಸ್ಥಿತಿ ಏರ್ಪಡಲು ಮೋದಿ ಅವಕಾಶ ಕೊಡಬಾರದು. ಮಾತುಕತೆಯಾಡುವುದರಿಂದ ಯಾವುದೇ ಹಾನಿಯಾಗದು ಎಂಬ ಮಿಥ್ಯೆಯೊಂದು ಪಾಶ್ಚಿಮಾತ್ಯ ದೇಶಗಳಲ್ಲಿದೆ. ಅದು ಸುಳ್ಳು. ನಿಜವಾಗಿ, ಕೆಟ್ಟ ರಾಜತಾಂತ್ರಿಕತೆಯು ದೀರ್ಘಾವಧಿ ಹಾನಿಯನ್ನು ತರಬಲ್ಲದು. ಪಾಕಿಸ್ತಾನದ ಮುನೀರ್‌ಗೆ ಅಮೆರಿಕವು ಕೆಂಪು ಹಾಸಿನ ಸ್ವಾಗತ ನೀಡಿದ್ದು ಭಾರತೀಯರಿಗೆ ಅಸಹನೆ ಸೃಷ್ಟಿಸಿರುವುದು ಸಹಜವೇ ಆಗಿದೆ. ಅದಕ್ಕಾಗಿ ತಾವು ಕೂಡಾ ಟ್ರಂಪ್‌ರಿಂದ ಅದಕ್ಕಿಂತ ಹೆಚ್ಚಿನ ಆತಿಥ್ಯ ಪಡೆಯಬೇಕೆಂದು ಹಾತೊರೆಯುವುದು ಸರಿಯಲ್ಲ. ಅದರ ಬದಲಾಗಿ ಮೋದಿಯವರು ದೀರ್ಘಾವಧಿ ಸಹನೆಯ ಆಟವಾಡಬೇಕು.

ಮೋದಿಯವರು ಅಮೆರಿಕಕ್ಕೆ ಭೇಟಿನೀಡುವುದೆಂದರೆ ಅದು ಅಮೆರಿಕದ ಪಾಲಿಗೇ ಘನತೆಯ ವಿಷಯ. ಆದರೆ ಟ್ರಂಪ್ ಇದಕ್ಕೆ ಅರ್ಹರಾಗಿಲ್ಲ. ಟ್ರಂಪ್ ಕಾಲಾವಧಿಯಲ್ಲಿ ಮೋದಿಯವರು ಅಮೆರಿಕಕ್ಕೆ ಭೇಟಿ ನೀಡದಿರುವುದೇ ಒಳ್ಳೆಯದು.

(ಲೇಖಕರು ಅಮೆರಿಕನ್ ರಾಜಕೀಯ ವಿಶ್ಲೇಷಕರು)

ಕೇಂದ್ರ ಸಂಪುಟ ಸಭೆಯಲ್ಲಿ ಮಂಜೂರಾತಿ

ಸಾರ್ಥಕ್ ಪಿಡಿಎಸ್ ಪ್ಯಾಕೇಜ್‌ಗೆ ಅಸ್ತು

•ಹೊಸದಿಲ್ಲಿ: ಮುಂದಿನ 5ವರ್ಷಗಳಲ್ಲಿ ಭಾರತದ ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಅತ್ಯಾಧುನೀಕರಿಸುವ ಮತ್ತು ಬಲಪಡಿಸುವ ಆಶಯದ, ಮಹತ್ವದ 25ಸಾವಿರ ಕೋಟಿ ರೂ. ಮೊತ್ತದ ಸಾರ್ಥಕ್ ಪಿಡಿಎಸ್ ಪ್ಯಾಕೇಜ್‌ನ್ನು ಕೇಂದ್ರ ಸರಕಾರ ಮಂಜೂರು ಮಾಡಿದೆ. ದೇಶದ ಮೆಗಾ ಆಹಾರ ಸುರಕ್ಷತಾ ಜಾಲದಲ್ಲಿ ಬರುವ, ದೇಶದ 80ಕೋಟಿ ಬಡವರ್ಗಕ್ಕೆ ಪಡಿತರ ವಿತರಣಾ ವ್ಯವಸ್ಥೆಯನ್ನು ಮತ್ತಷ್ಟು ಸುಲಲಿತಗೊಳಿಸುವುದು ಪ್ರಸ್ತುತ ಪ್ಯಾಕೇಜ್‌ನ ಆಶಯವಾಗಿದೆ. ಪಡಿತರ ಸಾಗಣೆ ಮತ್ತು ನಿರ್ವಹಣೆ ಮತ್ತು ಪಡಿತರ ವಿತರಣಾ ವ್ಯವಸ್ಥೆಗಳಿಗೆ ಸ್ವಯಂಚಾಲಿತ ಆದಾಯಕ್ಕೆ ಪ್ರಸ್ತುತ ಪ್ಯಾಕೇಜ್ ಉತ್ತೇಜಕವಾಗಲಿದೆ.

ಪ್ರಧಾನಿ ನರೇಂದ್ರ ಮೋದಿ ಅಧ್ಯಕ್ಷತೆಯಲ್ಲಿ ನಡೆದ ಕೇಂದ್ರ ಸಚಿವ ಸಂಪುಟ ಸಭೆಯಲ್ಲಿ ಯೋಜನೆಗೆ ಮಂಜೂರಾತಿ ನೀಡಲಾಗಿದೆ. 25,530 ಕೋಟಿ. ರೂ ಕೇಂದ್ರೀಯ ಅಂದಾಜುವೆಚ್ಚದ ಪ್ರಸ್ತುತ ಪ್ಯಾಕೇಜ್ 2026ರ ಏಪ್ರಿಲ್‌ನಿಂದ ಅನ್ವಯಿಸುವಂತೆ ಜಾರಿಗೆ ಬರಲಿದೆ ಮತ್ತು 2031 ಮಾರ್ಚ್‌ವರೆಗೆ ಚಾಲ್ತಿಯಲ್ಲಿರುವುದು ಎಂದು ಕೇಂದ್ರ ಮಾಹಿತಿ ಮತ್ತು ಪ್ರಸಾರ ಸಚಿವ ಅಶ್ವಿನಿ ವೈಷ್ಣವ್ ತಿಳಿಸಿದ್ದಾರೆ.

ಅಂತರ್ಗತ ಬೆಳವಣಿಗೆ: ಸಮಸ್ತರ ಅಂತರ್ಗತ ಬೆಳವಣಿಗೆ ಮತ್ತು ಜನ ಕಲ್ಯಾಣಕ್ಕೆ ಜಾಗತಿಕ ಮಾದರಿಯಾಗಿದೆ ಪ್ರಸ್ತುತ ಉಪಕ್ರಮ ಮತ್ತು ಜಗತ್ತಿನ ಬೃಹತ್ ಆಹಾರ ಸುರಕ್ಷತಾ ಯೋಜನೆಯಾಗಿದೆ. ಪ್ರಧಾನಿಯವರ ಗರೀಬ್ ಕಲ್ಯಾಣ್ ಅನ್ನ ಯೋಜನೆ ಮತ್ತಿತರ ಆಹಾರ ಹಂಚಿಕೆ ಕಾರ್ಯಕ್ರಮಗಳ ಜಾರಿ ವ್ಯವಸ್ಥೆಯನ್ನು ಬಲಪಡಿಸಲು ಪ್ರಸ್ತುತ ಪ್ಯಾಕೇಜ್ ಪೂರಕವಾಗಲಿದೆ. ಭಾರತ ಆಹಾರ ನಿಗಮದ ಗೋದಾಮುಗಳಿಂದ ಆಹಾರಧಾನ್ಯಗಳನ್ನು ಜಿಲ್ಲೆಗಳಿಗೆ ಮತ್ತು ಪಡಿತರ ಅಂಗಡಿಗಳಿಗೆ ಸಾಗಿಸುವಲ್ಲಿ ರಾಜ್ಯಸರಕಾರಗಳಿಗೆ ಸಾರ್ಥಕ್-ಪಿಡಿಎಸ್ ಯೋಜನೆ ನೆರವಾಗಲಿದೆ. ಪಡಿತರ ವಿತರಣಾ ವ್ಯವಸ್ಥೆಯಲ್ಲಿ ತಾಂತ್ರಿಕ ಸುಧಾರಣೆಗಳ ಅನುಷ್ಠಾನಕ್ಕೂ ಯೋಜನೆ ಪೂರಕವಾಗಲಿದೆ ಎಂದು ಸಚಿವರು ವಿವರಿಸಿದ್ದಾರೆ.

ಕಡಿಮೆಯಾಗಲಿದೆ ಸಾಗಣೆ ಹೊರೆ: ಅತ್ಯಧಿಕ ವೆಚ್ಚದ ಕಾರಣ ರಾಜ್ಯದೊಳಗೇ ಆಹಾರಧಾನ್ಯಗಳ ಸಾಗಣೆಯು ಹಲವು ರಾಜ್ಯ ಏಜೆನ್ಸಿಗಳಿಗೆ ಹೊರೆಯಾಗಿ ಪರಿಣಮಿಸಿದೆ. ಈ ನಿಟ್ಟಿನಲ್ಲಿ ಅಂತರ್ ರಾಜ್ಯ ಸಾರಿಗೆ ಮತ್ತು ನಿರ್ವಹಣೆಗೆ ಹೊಸ ಪ್ಯಾಕೇಜ್ ನಡಿ ಕೇಂದ್ರ ಸರಕಾರವು ಹಣಕಾಸು ನೆರವು ನೀಡಲಿದೆ. ತನ್ಮೂಲಕ ರಾಜ್ಯಗಳ ಹೊರೆ ಕುಗ್ಗಿಸಿ , ಪೂರೈಕೆ ವ್ಯವಸ್ಥೆಯಲ್ಲಿ ದಕ್ಷತೆಗೆ ನೆರವಾಗಲಿದೆ.



ಇದಲ್ಲದೆ ಪಾರದರ್ಶಿತ್ವ,ಫಲಾನುಭವಿ ಕೇಂದ್ರೀಕೃತ ಮತ್ತು ನಿಗಾ ವ್ಯವಸ್ಥೆ ಸುಧಾರಣೆ ಆಶಯದ ನಿರ್ಮಲ್, ಆಶಾ ಮತ್ತು ಸಕ್ಷಮ್ ಎಂಬ ಮೂರು ತಂತ್ರಜ್ಞಾನ ಆಧಾರಿತ ವೇದಿಕೆ ಅಥವಾ ವ್ಯವಸ್ಥೆಗಳನ್ನು ಪ್ರಸ್ತುತ ಪ್ಯಾಕೇಜ್‌ನಡಿ ಜಾರಿಗೊಳಿಸಲಾಗುವುದು.

ಫಲಾನುಭವಿ ರಿಜಿಸ್ಟ್ರಿ: ನಿರ್ಮಲ್ ವ್ಯವಸ್ಥೆಯಡಿ ಸರಕಾರವು ಪಡಿತರ ಸೌಲಭ್ಯಗಳು ಅರ್ಹ ಫಲಾನುಭವಿಗಳಿಗೆ ತಲುಪುವಂತಾಗಲು ತಂತ್ರಜ್ಞಾನ ಆಧಾರಿತ ಫಲಾನುಭವಿ ರಿಜಿಸ್ಟ್ರಿಯನ್ನು ರೂಪಿಸಲು ಸರಕಾರ ಯೋಜಿಸಿದೆ. ನೈಜ ಫಲಾನುಭವಿಗಳನ್ನು ಗುರುತಿಸಿ, ವ್ಯವಸ್ಥೆಯಲ್ಲಿನ ಸೋರಿಕೆ ತಡೆಯಲು ಕೃತಕ ಬುದ್ಧಿಮತ್ತೆ ಸಹಿತ ಅತ್ಯಾಧುನಿಕ ತಂತ್ರಜ್ಞಾನ ಬಳಸಲಾಗುವುದು. ವಿವಿಧ ಖಾತೆಗಳು ಮತ್ತು ಇಲಾಖೆಗಳ ನಡುವೆ ಸಮನ್ವಯತೆಗೂ ಪ್ರಸ್ತಾವಿತ ಪ್ಯಾಕೇಜ್ ಪೂರಕವಾಗಿರುವುದು.

ಅಹವಾಲು ಆಲಿಸಲಿದೆ ಆಶಾ: ಪಡಿತರ ಚೀಟಿದಾರರ ಅಹವಾಲುಗಳನ್ನು ಆಲಿಸುವ ಎಐ ಆಧಾರಿತ ವೇದಿಕೆಯಾಗಿದೆ ಆಶಾ. ಪ್ರಸಕ್ತ ಪಡಿತರ ವ್ಯವಸ್ಥೆಯ ಕಾರ್ಯನಿರ್ವಹಣೆ ಬಗ್ಗೆ ಮಾಹಿತಿ ಪಡೆಯುವನ್ವಯ ತಿಂಗಳಿಗೆ ಬರೋಬ್ಬರಿ ಎರಡು ಲಕ್ಷ ಕರೆಗಳನ್ನು ಮಾಡಲಾಗುತ್ತಿದೆ. ಆಶಾ ವೇದಿಕೆ ಮುಖೇನ ಪಡಿತರ ವ್ಯವಸ್ಥೆಗಳ ಹೊಣೆಗಾರಿಕೆ , ವಿಶ್ವಾಸಾರ್ಹತೆ ಬಲಪಡಿಸುವುದು ಸರಕಾರದ ಆಶಯವಾಗಿದೆ. ಸಂಪೂರ್ಣ ಡಿಜಿಟಲೀಕರಣ ಮತ್ತು ಆಹಾರಧಾನ್ಯ ಪೂರೈಕೆ ಸರಪಳಿಯ ಮೇಲೆ ನಿಗಾ ವಹಿಸುವುದು ಸಕ್ಷಮ್ ವೇದಿಕೆಯ ಆಶಯವಾಗಿದೆ. ಇದರಡಿ ಆಹಾರ ಧಾನ್ಯ ತುಂಬಿದ ಚೀಲಗಳು ಕ್ಯೂಆರ್ ಕೋಡ್ ಹೊಂದಿರುತ್ತವೆ ಮತ್ತು ಆಹಾರಧಾನ್ಯ ಸಾಗಿಸುವ ವಾಹನಗಳು ಜಿಪಿಎಸ್ ಹೊಂದಿರಲಿವೆ. ಪಡಿತರ ವಿತರಣೆಯಲ್ಲಿ ವಿಳಂಬ ಪತ್ತೆಯಲ್ಲಿ ಅಧಿಕಾರಿಗಳಿಗೆ ನೆರವಾಗಲು ಮತ್ತು ವ್ಯವಸ್ಥೆಯನ್ನು ಸಂಪೂರ್ಣ ದಕ್ಷಗೊಳಿಸಲು ಡಿಜಿಟಲ್ ಮಾಧ್ಯಮಗಳನ್ನು ಬಳಸಲಾಗುವುದು.

ತ್ರಿಭಾಷಾ ನೀತಿ: ಕೇಂದ್ರಕ್ಕೆ ನೋಟಿಸ್

•ಹೊಸದಿಲ್ಲಿ: ಜುಲೈ 1 ರಿಂದ 9 ನೇ ತರಗತಿ ವಿದ್ಯಾರ್ಥಿಗಳಿಗೆ ಎರಡು ಸ್ಥಳೀಯ ಭಾರತೀಯ ಭಾಷೆಗಳು ಸೇರಿದಂತೆ ಮೂರು ಭಾಷೆಗಳನ್ನು ಕಡ್ಡಾಯಗೊಳಿಸುವ ಸಿಬಿಎಸ್‌ಇ ನೀತಿಯನ್ನು ಪ್ರಶ್ನಿಸಿ ಸಲ್ಲಿಸಲಾದ ಅರ್ಜಿಯನ್ನು ಪರಿಶೀಲಿಸಲು ಸುಪ್ರೀಂ ಕೋರ್ಟ್ ಒಪ್ಪಿಕೊಂಡಿದೆ. ಮುಖ್ಯ ನ್ಯಾಯಮೂರ್ತಿ ಸೂರ್ಯ ಕಾಂತ್ ನೇತೃತ್ವದ ಪೀಠ, ಕೇಂದ್ರ ಸರ್ಕಾರ, ಸಿಬಿಎಸ್‌ಇ ಮತ್ತು ಎನ್‌ಸಿಇಆರ್‌ಟಿಗೆ ನೋಟಿಸ್ ಜಾರಿ ಮಾಡಿದ್ದು, ಎರಡು ವಾರಗಳಲ್ಲಿ ಪ್ರತಿಕ್ರಿಯೆ ನೀಡುವಂತೆ ಕೋರಿದೆ.





ಸುದ್ದಿ ಸಮಗ್ರ

ಅಕ್ರಮ ವಲಸಿಗರ ಸಕ್ರಮ ಗಡಿಪಾರಿಗೆ ಉನ್ನತ ಸಿದ್ಧತೆ

ಒಳನುಸುಳುವಿಕೆ, ಜನಸಂಖ್ಯೆಯ ಅಸ್ವಾಭಾವಿಕ ಬದಲಾವಣೆ ಅಧ್ಯಯನಕ್ಕಾಗಿ ಉನ್ನತ ಮಟ್ಟದ ಸಮಿತಿ ರಚನೆ

ಅಕ್ರಮ ನುಸುಳುವಿಕೆ ಮತ್ತು ಇತರ ಅಸ್ವಾಭಾವಿಕ ಕಾರಣಗಳಿಂದ ಜನಸಂಖ್ಯೆಯಲ್ಲಿ ಉಂಟಾಗುತ್ತಿರುವ ಬದಲಾವಣೆಗಳನ್ನು ಅಧ್ಯಯನ ನಡೆಸಲು ಕೇಂದ್ರ ಸರ್ಕಾರವು ಉನ್ನತ ಮಟ್ಟದ ಸಮಿತಿಯನ್ನು ರಚಿಸಿದೆ. ಈ ವಿಚಾರವನ್ನು ಕೇಂದ್ರ ಗೃಹ ಸಚಿವ ಅಮಿತ್ ಶಾ ಮಂಗಳವಾರ ಎಕ್ಸ್‌ನಲ್ಲಿ ಪ್ರಕಟಿಸಿದ್ದಾರೆ. ಕಳೆದ ವರ್ಷ ಆ.15ರಂದು ಪ್ರಧಾನಿ ನರೇಂದ್ರ ಮೋದಿ, ಜನಸಂಖ್ಯಾ ಬದಲಾವಣೆಯ ಅಧ್ಯಯನಕ್ಕಾಗಿ ಉನ್ನತ ಮಟ್ಟದ ತಂಡದ ರಚನೆಯನ್ನು ಘೋಷಿಸಿದ್ದರು. ಒಳನುಸುಳುವಿಕೆ ಮತ್ತು ಇತರ ಕಾರಣಗಳಿಂದಾಗಿ ಜನಸಂಖ್ಯೆಯಲ್ಲಿನ ಅಸ್ವಾಭಾವಿಕ ಬದಲಾವಣೆಯು ರಾಷ್ಟ್ರದ ವರ್ತಮಾನ ಮತ್ತು ಭವಿಷ್ಯಕ್ಕೆ ದೊಡ್ಡ ಸವಾಲೊಡ್ಡುತ್ತದೆ. ಸವಾಲನ್ನು ಎದುರಿಸಲು ಪ್ರಧಾನಿ ಮೋದಿ ಉನ್ನತ ಮಟ್ಟದ ಸಮಿತಿ ರಚನೆಯನ್ನು ಘೋಷಿಸಿದ್ದರು. ಭಾಷಣದ ಮುಂದುವರಿದ ಭಾಗವಾಗಿ ಸರ್ಕಾರ ಸಮಿತಿಯನ್ನು ರಚಿಸಿದೆ ಎಂದು ನಿಮಗೆ ತಿಳಿಸಲು ನನಗೆ ಬಹಳ ಸಂತೋಷವಾಗುತ್ತಿದೆ ಎಂದು ಶಾ ತಿಳಿಸಿದ್ದಾರೆ. ಉನ್ನತ ಮಟ್ಟದ ಸಮಿತಿಗೆ ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ಪ್ರಕಾಶ್ ಪ್ರಭಾಕರ್ ನವಲೇಕರ್ ಅವರನ್ನು ಅಧ್ಯಕ್ಷರನ್ನಾಗಿ ನೇಮಿಸಲಾಗಿದೆ. ಅಕ್ರಮ ಒಳನುಸುಳುವಿಕೆ, ಜನಸಂಖ್ಯೆಯಲ್ಲಿನ ಅಸ್ವಾಭಾವಿಕ ಬದಲಾವಣೆ ಹಾಗೂ ಉನ್ನತ ಮಟ್ಟದ ಸಮಿತಿ ಕೆಲಸವೇನು? ಇತ್ಯಾದಿ ವಿಚಾರಗಳ ಕುರಿತ ಸಂಕ್ಷಿಪ್ತ ಮಾಹಿತಿ ಇಲ್ಲಿದೆ.

ಏನು ಮಾಡಲಿದೆ ಸಮಿತಿ?

ಜನಸಂಖ್ಯಾ ಬದಲಾವಣೆಯು ಕೇವಲ ನಮ್ಮ ಸಾರ್ವಭೌಮತ್ವಕ್ಕೆ ಮಾತ್ರವಲ್ಲದೆ ರಾಷ್ಟ್ರೀಯ ಭದ್ರತೆ, ಕಾನೂನು ಮತ್ತು ಸುವ್ಯವಸ್ಥೆ, ಸಾಮಾಜಿಕ ರಚನೆಯಲ್ಲಿನ ಪ್ರಮುಖ ಬದಲಾವಣೆಗಳು ಹಾಗೂ ಬುಡಕಟ್ಟು ಸಮುದಾಯಗಳ ರಕ್ಷಣೆಗೆ ಸಂಬಂಧಿಸಿದ ಗಂಭೀರ ಸಮಸ್ಯೆಯಾಗಿದೆ. ಅಕ್ರಮ ವಲಸೆ ಮತ್ತು ಅಸ್ವಾಭಾವಿಕ ಕಾರಣಗಳಿಂದಾಗಿ ದೇಶಾದ್ಯಂತ ಸಂಭವಿಸುತ್ತಿರುವ ಜನಸಂಖ್ಯಾ ಬದಲಾವಣೆಗಳ ಸಮಗ್ರ ಮೌಲ್ಯಮಾಪನವನ್ನು ಈ ಸಮಿತಿಯು ನಡೆಸಲಿದೆ. ಮೌಲ್ಯಮಾಪನದ ನಂತರ ಸೂಕ್ತವಾದ ನೀತಿ, ಶಾಸಕಾಂಗ ಮತ್ತು ಆಡಳಿತಾತ್ಮಕ ಕ್ರಮಗಳನ್ನು ಸಮಿತಿ ಶಿಫಾರಸು ಮಾಡಲಿದೆ. ಸಮಿತಿಯ ಉದ್ದೇಶಿತ ರಚನೆ ಮತ್ತು ಅಧ್ಯಯನ ನಡೆಸುವ ಪ್ರಮುಖ ಅಂಶಗಳು ಈ ಕೆಳಗಿನಂತಿವೆ:

1. ಅಕ್ರಮ ವಲಸೆ ಸೇರಿ ಜನಸಂಖ್ಯಾ ಬದಲಾವಣೆಗಳಿಂದ ಉಂಟಾಗುವ ಸವಾಲುಗಳನ್ನು ಸಮಗ್ರ ಪರಿಶೀಲನೆ
2. ಗಡಿಯಾಚೆಗಿನ ಚಟುವಟಿಕೆಗಳು (ಅಕ್ರಮ ವಲಸೆ ಸೇರಿದಂತೆ), ಆರ್ಥಿಕ ಅವಕಾಶ, ಇತರ ಸಾಮಾಜಿಕ-ಪರಿಸರ ಅಂಶಗಳಂತಹ ಜನಸಂಖ್ಯಾ ಬದಲಾವಣೆಗಳ ಸಂಭಾವ್ಯ ಕಾರಣ ಬಗ್ಗೆ ಅಧ್ಯಯನ
3. ಅಕ್ರಮ ವಲಸೆ, ಅಸಹಜ ನೆಲೆಸುವಿಕೆಯ ಮಾದರಿಗಳು ಮತ್ತು ವ್ಯವಸ್ಥಿತ ವಲಸೆಯನ್ನು ಒಳಗೊಂಡಿರುವ ಈ ಬದಲಾವಣೆಗಳ ಹಿಂದಿನ ಮೂಲಭೂತ ಅಂಶಗಳನ್ನು ಗುರುತಿಸುವುದು.
4. ಧಾರ್ಮಿಕ ಅಥವಾ ಸಾಮಾಜಿಕ ಸಮುದಾಯಗಳ ಮಟ್ಟದಲ್ಲಿ, ವಿಶೇಷವಾಗಿ ಅವು ವಿಶಾಲವಾದ ಪ್ರವೃತ್ತಿಗಳಿಂದ ಭಿನ್ನವಾಗಿರುವ ಕಡೆಗಳಲ್ಲಿ, ಜನಸಂಖ್ಯೆಯ ರಚನಾತ್ಮಕ ಬದಲಾವಣೆಗಳ ವಿಶ್ಲೇಷಣೆ
5. ದೇಶದಲ್ಲಿ ಈಗಾಗಲೇ ತುಂಬಿರುವ ಅಕ್ರಮ ವಲಸಿಗರನ್ನು ಕಾನೂನುಬದ್ಧ, ನ್ಯಾಯಯುತ ಮತ್ತು ಕಾಲಮಿತಿಯೊಳಗೆ ಗುರುತಿಸಿ ಬಂಧಿಸಲು ಮತ್ತು ಗಡೀಪಾರು ಮಾಡಲು ಸುಗಮ ಹಾಗೂ ಶಾಶ್ವತ ಕಾರ್ಯಾಚರಣಾ ವಿಧಾನವನ್ನು (ಸ್ಟ್ಯಾಂಡರ್ಡ್ ಆಪರೇಟಿಂಗ್ ಪ್ರೊಸೀಜರ್) ಶಿಫಾರಸು ಮಾಡುವುದು.
6. ಇಂತಹ ಪ್ರವೃತ್ತಿಗಳ ನಿರಂತರ ಮೇಲ್ವಿಚಾರಣೆಗಾಗಿ ಗಡಿ ನಿರ್ವಹಣೆ, ಜನಸಂಖ್ಯಾ ಸ್ಥಿರೀಕರಣ ಮತ್ತು ಗುರುತಿಸುವಿಕೆ ವ್ಯವಸ್ಥೆಗಳನ್ನು ಬಲಪಡಿಸಲು ಸೂಕ್ತವಾದ ಸಾಂಸ್ಥಿಕ ಕಾರ್ಯವಿಧಾನವನ್ನು ಶಿಫಾರಸು ಮಾಡುವುದು.
7. ಅಕ್ರಮ ವಲಸೆ ಮತ್ತು ಅದರ ಪರಿಣಾಮದಿಂದ ಉಂಟಾಗುವ ಜನಸಂಖ್ಯಾ ಅಸಮತೋಲನಕ್ಕೆ ಸಂಬಂಧಿಸಿದ ವಿಷಯಗಳಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನಡುವೆ ಸಮನ್ವಯತೆಯನ್ನು ಹೆಚ್ಚಿಸಲು ಸಮಗ್ರ ನೀತಿ ಚೌಕಟ್ಟನ್ನು ಪ್ರಸ್ತಾಪಿಸುವುದು.
8. ಅಕ್ರಮ ವಲಸೆ ಸೇರಿದಂತೆ ಜನಸಂಖ್ಯಾ ಬದಲಾವಣೆಗಳಿಂದ ಉಂಟಾಗುವ ಸವಾಲುಗಳನ್ನು ನಿಭಾಯಿಸಲು ಸಮಿತಿಯು ಸೂಕ್ತವೆಂದು ಭಾವಿಸುವ ಯಾವುದೇ ಇತರ ಕ್ರಮಗಳನ್ನು ಶಿಫಾರಸು ಮಾಡುವುದು.

ಸಮಿತಿಯಲ್ಲಿ ಯಾರಿದ್ದಾರೆ?

ಜನಸಂಖ್ಯೆಯಲ್ಲಿನ ಅಸ್ವಾಭಾವಿಕ ಬದಲಾವಣೆಯ ಅಧ್ಯಯನಕ್ಕಾಗಿ ರಚಿಸಿದ ಉನ್ನತ ಮಟ್ಟದ ಸಮಿತಿಗೆ ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ಪ್ರಕಾಶ್ ಪ್ರಭಾಕರ್ ನವೊಲೇಕರ್ ಅವರನ್ನು ಅಧ್ಯಕ್ಷರನ್ನಾಗಿ ನೇಮಿಸಲಾಗಿದೆ. ಭಾರತದ ಜನಗಣತಿ ಆಯುಕ್ತರು, ನಿವೃತ್ತ ಐಎಎಸ್ ದುರ್ಗಾ ಶಂಕರ್ ಮಿಶ್ರಾ, ನಿವೃತ್ತ ಐಪಿಎಸ್ ಬಾಲಾಜಿ ಶ್ರೀವಾಸ್ತವ ಮತ್ತು ಡಾ.ಶಮಿಕಾ ರವಿ ಅವರನ್ನು ಸದಸ್ಯರನ್ನಾಗಿ ಆಯ್ಕೆ ಮಾಡಲಾಗಿದೆ.

ಸಮಿತಿಗೆ ನೀಡಿದ ಕಾಲಾವಧಿ?

ಜನಸಂಖ್ಯೆಯಲ್ಲಿನ ಅಸ್ವಾಭಾವಿಕ ಬದಲಾವಣೆಗಳ ಅಧ್ಯಯನ ನಡೆಸಿ ವರದಿ ಸಲ್ಲಿಸಲು ಉನ್ನತ ಮಟ್ಟದ ಸಮಿತಿಗೆ ಕೇಂದ್ರ ಸರ್ಕಾರ ಒಂದು ವರ್ಷದ ಕಾಲಾವಧಿ ನೀಡಿದೆ. ಅಗತ್ಯ ಬಿದ್ದರೆ ಸಮಿತಿಯ ಅಧ್ಯಯನ ಅವಧಿಯನ್ನು ಆರು ತಿಂಗಳವರೆಗೆ ವಿಸ್ತರಿಸಬಹುದಾಗಿದೆ.

ಎಲ್ಲೆಲ್ಲಿ ಅಕ್ರಮ ವಲಸೆ?

ಅಸ್ಸಾಂ, ಪಶ್ಚಿಮ ಬಂಗಾಳದಲ್ಲಿ ಹಲವು ವರ್ಷಗಳಿಂದ ಅಕ್ರಮ ವಲಸಿಗರು ಅಥವಾ ಒಳನುಸುಳುಕೋರರನ್ನು ಕಳ್ಳ ಮತದಾನದಲ್ಲಿ ಬಳಸಿಕೊಳ್ಳುವ ರಾಜಕೀಯ ಆರೋಪಗಳಿವೆ. ಹೀಗೆ ಅಕ್ರಮ ವಲಸೆಯು ರಾಜಕೀಯ ಸೂಕ್ಷ್ಮತೆಗಳಿಂದ ಕೂಡಿದೆ. ಈ ಕೆಳಗಿನ ರಾಜ್ಯಗಳ ಮೇಲೆ ಅಕ್ರಮ ವಲಸೆ ಭಾರೀ ಪರಿಣಾಮ ಬೀರಿದೆ:

- ಅಸ್ಸಾಂ, ಪಶ್ಚಿಮ ಬಂಗಾಳ, ತ್ರಿಪುರಾ, ಮಿಝೋರಾಂ, ಮಣಿಪುರ

ಸಮಿತಿ ರಚನೆಗೆ ಪ್ರಮುಖ ಕಾರಣಗಳೇನು?

ಈ ಕೆಳಗಿನ ಕಾರಣಗಳಿಂದ ಕೇಂದ್ರ ಸರ್ಕಾರ ಉನ್ನತ ಮಟ್ಟದ ಸಮಿತಿಯನ್ನು ರಚಿಸಿದೆ:

- ರಾಷ್ಟ್ರೀಯ ಭದ್ರತೆ
- ಸಾರ್ವಭೌಮತ್ವ
- ಗಡಿ ನಿರ್ವಹಣೆ
- ಕಾನೂನು ಪಾಲನೆ
- ಸಾಮಾಜಿಕ ಸಮತೋಲನ
- ಬುಡಕಟ್ಟು ಮತ್ತು ಮೂಲನಿವಾಸಿ ಸಮುದಾಯಗಳ ಸಂರಕ್ಷಣೆ



ಏನಿದು ಅಸ್ವಾಭಾವಿಕ ಬದಲಾವಣೆ?

ಅಕ್ರಮ ವಲಸೆ, ಒಳನುಸುಳುವಿಕೆ, ಪ್ರಾದೇಶಿಕ ಜನಸಂಖ್ಯಾ ವರ್ಗಾವಣೆ ಮತ್ತು ಸಾಮಾಜಿಕ ಪರಿಣಾಮಗಳಿಂದಾಗಿ ಉಂಟಾಗುವ ಜನಸಂಖ್ಯೆಯಲ್ಲಿನ ದಿಢೀರ್ ಬದಲಾವಣೆಯನ್ನು ಅಸ್ವಾಭಾವಿಕ ಬದಲಾವಣೆ ಎನ್ನಲಾಗುತ್ತದೆ. ಈ ಕೆಳಗಿನವುಗಳಲ್ಲಿ ಬದಲಾವಣೆಗಳು ಆಗುವುದೇ ಜನಸಂಖ್ಯಾ ಬದಲಾವಣೆಯಾಗಿದೆ.

- ಜನಸಂಖ್ಯಾ ಗಾತ್ರ
- ಜನನ ಮತ್ತು ಮರಣ ಪ್ರಮಾಣ
- ವಲಸೆ (ಆಂತರಿಕ ಮತ್ತು ಅಂತಾರಾಷ್ಟ್ರೀಯ)
- ಧಾರ್ಮಿಕ ಅಥವಾ ಸಾಮಾಜಿಕ ಸಂಯೋಜನೆ
- ನಗರೀಕರಣ ಮತ್ತು ವಯೋಮಾನದ ರಚನೆ

ಕಿರುಸುದ್ದಿ

ಜೂ.1-4ರವರೆಗೆ ಭಾರತ ಅಮೆರಿಕ ವ್ಯಾಪಾರ ಚರ್ಚೆ

•ಹೊಸದಿಲ್ಲಿ: ಭಾರತ ಜತೆಗಿನ ದ್ವಿಪಕ್ಷೀಯ ವ್ಯಾಪಾರ ಒಪ್ಪಂದ ಅಂತಿಮಗೊಳಿಸಲು ಅಮೆರಿಕ ನಿಯೋಗವು ಭಾರತಕ್ಕೆ ಭೇಟಿ ನೀಡಲಿದ್ದು, ಜೂ.1ರಿಂದ 4ರವರೆಗೆ ಚರ್ಚೆ ನಡೆಸಲಿದ್ದಾರೆ. ಮಾರುಕಟ್ಟೆ ವ್ಯಾಪ್ತಿ, ತೆರಿಗೇತರ ಕ್ರಮಗಳು, ಸುಂಕ ವ್ಯವಸ್ಥೆಗಳು ಸೇರಿ ಹಲವು ವಿಚಾರಗಳ ಬಗ್ಗೆ ಉಭಯ ರಾಷ್ಟ್ರಗಳ ನಿಯೋಗಗಳು ದ್ವಿಪಕ್ಷೀಯ ವ್ಯಾಪಾರ ಚರ್ಚೆ ನಡೆಯಲಿದೆ ಎಂದು ಅಧಿಕಾರಿಗಳು ಬುಧವಾರ ತಿಳಿಸಿದ್ದಾರೆ.

ಇಸ್ರೇಲ್ ದಾಳಿಗೆ ಹಮಾಸ್ ಮುಖ್ಯಸ್ಥನ ಹತ್ಯೆ

•ಟೆಲ್ ಅವೀವ್: ಗಾಜಾದಲ್ಲಿನ ಹಮಾಸ್ ಉಗ್ರ ಸಂಘಟನೆಯ ಹೊಸ ನಾಯಕ ಮೊಹಮ್ಮದ್ ಒಡೆಹ್ ಅನ್ನು ಹೊಡೆದುರುಳಿಸಿದ್ದೇವೆ ಎಂಬ ಇಸ್ರೇಲ್ ಹೇಳಿಕೆಯನ್ನು ಹಮಾಸ್ ಒಪ್ಪಿಕೊಂಡಿದೆ. ಉತ್ತರ ಗಾಜಾದಲ್ಲಿ ಇಸ್ರೇಲ್ ಸೇನೆ ನಡೆಸಿದ ವೈಮಾನಿಕ ದಾಳಿಯಲ್ಲಿ ಮೊಹಮ್ಮದ್ ಸಾವಿಗೀಡಾಗಿದ್ದಾನೆ. ದಾಳಿಯಲ್ಲಿ ತಮ್ಮ ನಾಯಕ ಒಡೆಹ್, ಆತನ ಪತ್ನಿ ಮತ್ತು ಇಬ್ಬರು ಪುತ್ರರು ಮೃತಪಟ್ಟಿದ್ದಾರೆ.

ಗಡಿ ಸಮೀಪದ ಅಕ್ರಮ ರಚನೆ ತೆರವಿಗೆ ಸೂಚನೆ

•ಹೊಸದಿಲ್ಲಿ: ನೆರೆಯ ದೇಶಗಳೊಂದಿಗಿನ ಭಾರತದ ಅಂತಾರಾಷ್ಟ್ರೀಯ ಗಡಿಗಳ 15 ಕಿಮೀ ವ್ಯಾಪ್ತಿಯಲ್ಲಿರುವ ಎಲ್ಲಾ ಕಾನೂನುಬಾಹಿರ ನಿರ್ಮಾಣಗಳನ್ನು ಧ್ವಂಸಗೊಳಿಸಲು ಕೇಂದ್ರ ಗೃಹ ಸಚಿವ ಅಮಿತ್ ಶಾ ಅಧಿಕಾರಿಗಳಿಗೆ ನಿರ್ದೇಶನ ನೀಡಿದ್ದಾರೆ.

ರಾಜಸ್ಥಾನದ ಬಿಕಾನೇರ್ ಜಿಲ್ಲೆಯಲ್ಲಿ ನಡೆದ ಉನ್ನತ ಮಟ್ಟದ ಭದ್ರತಾ ಪರಿಶೀಲನಾ ಸಭೆಯಲ್ಲಿ ಈ ನಿರ್ದೇಶನ ನೀಡಲಾಗಿದೆ. ಸೂಕ್ಷ್ಮ ಗಡಿ ಪ್ರದೇಶಗಳಲ್ಲಿನ ಅತಿಕ್ರಮಣಗಳ ವಿರುದ್ಧ ಶೂನ್ಯ-ಸಹಿಷ್ಣುತೆ ನೀತಿಯನ್ನು ಅಳವಡಿಸಿಕೊಳ್ಳಲು ಶಾ ಕರೆ ನೀಡಿದರು ಮತ್ತು ಭಾರತ-ಪಾಕಿಸ್ತಾನ ಗಡಿಯುದ್ದಕ್ಕೂ ಇರುವ ಭದ್ರತಾ ವ್ಯವಸ್ಥೆಗಳನ್ನು ಪರಿಶೀಲಿಸಿದರು. ಈ ಸಭೆಯಲ್ಲಿ ರಾಜಸ್ಥಾನದ ಮುಖ್ಯಮಂತ್ರಿ ಭಜನ್‌ಲಾಲ್ ಶರ್ಮಾ, ಹಿರಿಯ ಅಧಿಕಾರಿಗಳು, ಗಡಿ ಜಿಲ್ಲೆಗಳ ಜಿಲ್ಲಾಧಿಕಾರಿಗಳು ಭಾಗವಹಿಸಿದ್ದರು.

ಗಡಿ ಭದ್ರತೆಗಾಗಿ ನಾಗರಿಕರು, ರಾಜ್ಯ ಏಜೆನ್ಸಿಗಳು ಮತ್ತು ಭದ್ರತಾ ಪಡೆಗಳನಡುವೆಬಲವಾದಸಮನ್ವಯದಅಗತ್ಯವನ್ನುಶಾಒತ್ತಿಹೇಳಿದ್ದಾರೆ ಎಂದು ಗೃಹ ಸಚಿವಾಲಯದ ಅಧಿಕಾರಿಗಳು ತಿಳಿಸಿದ್ದಾರೆ. ಅಪರಾಧ, ಮಾದಕ ದ್ರವ್ಯ ಸಾಗಣೆ ಮತ್ತು ಗಡಿಯಾಚೆಗಿನ ಕಳ್ಳಸಾಗಣೆ ಜಾಲಗಳ ಬಗ್ಗೆ ಅಧ್ಯಯನ ನಡೆಸಲು ಮತ್ತು ದೀರ್ಘಕಾಲೀನ ತಡೆ ಕ್ರಮಗಳನ್ನು ಅಭಿವೃದ್ಧಿಪಡಿಸಲು ಜಿಲ್ಲಾಡಳಿತಗಳಿಗೆ ಸೂಚನೆ ನೀಡಲಾಗಿದೆ. ಅನುಮಾನಾಸ್ಪದ ಹಣಕಾಸು ವಹಿವಾಟುಗಳನ್ನು ಮೇಲ್ವಿಚಾರಣೆ ಮಾಡಲು, ದೊಡ್ಡ ವ್ಯಾಪಾರ ಸಂಸ್ಥೆಗಳನ್ನು ಪರಿಶೀಲಿಸಲು, ಮ್ಯೂಲ್ ಬ್ಯಾಂಕ್ ಖಾತೆಗಳು ಮತ್ತು ಶೆಲ್ ಕಂಪನಿಗಳನ್ನು ಪತ್ತೆಹಚ್ಚಲು ಹಾಗೂ ನಕಲಿ ಆಧಾರ್ ಕಾರ್ಡ್‌ಗಳನ್ನು ಗುರುತಿಸಲು ಗೃಹ ಸಚಿವಾಲಯ ಜಿಲ್ಲಾಧಿಕಾರಿಗಳ ಜವಾಬ್ದಾರಿಗಳನ್ನು ವಿಸ್ತರಿಸಿದೆ.

ಅಲ್-ಫಲಾ ಸ್ಥಾಪಕನ ವಿರುದ್ಧ ಆರೋಪಪಟ್ಟಿ

•ಹೊಸದಿಲ್ಲಿ: ದಕ್ಷಿಣ ದಿಲ್ಲಿಯ ಮದನ್‌ಪುರ ಖಾದರ್ ಪ್ರದೇಶದಲ್ಲಿನ ಸುಮಾರು 46 ಕೋಟಿ ರೂ. ಮೌಲ್ಯದ ಭೂಮಿಯನ್ನು ನಕಲಿ ದಾಖಲೆಗಳ ಮೂಲಕ ಅಕ್ರಮವಾಗಿ ಪಡೆದುಕೊಂಡ ಆರೋಪಕ್ಕೆ ಸಂಬಂಧಿಸಿ ಅಲ್-ಫಲಾಹ್ ವಿಶ್ವವಿದ್ಯಾಲಯದ ಸ್ಥಾಪಕ ಜವಾದ್ ಅಹ್ಮದ್ ಸಿದ್ದೀಕಿ ಸೇರಿದಂತೆ ನಾಲ್ವರು ವಿರುದ್ಧ ಜಾರಿ ನಿರ್ದೇಶನಾಲಯ (ಇಡಿ) ಆರೋಪಪಟ್ಟಿ ಸಲ್ಲಿಸಿದೆ.

46 ಕೋಟಿ ರೂ. ಭೂ ಹಗರಣ

ಸಾಕೇತ್‌ನ ವಿಶೇಷ ಪಿಎಂಎಲ್‌ಎ ನ್ಯಾಯಾಲಯಕ್ಕೆ ಸಲ್ಲಿಸಲಾದ ಆರೋಪಪಟ್ಟಿಯಲ್ಲಿ ಜವಾದ್ ಅಹ್ಮದ್ ಸಿದ್ದೀಕಿ, ಅವರಿಂದ ಪ್ರೋತ್ಸಾಹಿತ ಟರ್ಬಿಯಾ ಎಜುಕೇಶನ್ ಫೌಂಡೇಶನ್, ವಿನೋದ್ ಕುಮಾರ್ ಹಾಗೂ ಶ್ರೀಓಂ ಚೌಹಾಣ್ ಹೆಸರುಗಳನ್ನು ಉಲ್ಲೇಖಿಸಲಾಗಿದೆ. ಈ ಪ್ರಕರಣದಲ್ಲಿ ಸಿದ್ದೀಕಿ, ವಿನೋದ್ ಕುಮಾರ್ ಮತ್ತು ಶ್ರೀಓಂ ಚೌಹಾಣ್ ಅವರನ್ನು ಇಡಿ ಈಗಾಗಲೇ ಬಂಧಿಸಿದೆ. ದಿಲ್ಲಿ ಪೊಲೀಸ್ ದಾಖಲಿಸಿದ್ದ ಎಫ್‌ಐಆರ್‌ಗಳ ಆಧಾರದಲ್ಲಿ ಇಡಿ ತನಿಖೆ ಆರಂಭಿಸಿತ್ತು. ಮದನ್‌ಪುರ ಖಾದರ್‌ನ ಭೂಮಿಯನ್ನು ನಕಲಿ ಸಾಮಾನ್ಯ ಅಧಿಕಾರ ಪತ್ರಗಳು (ಜಿಪಿಎ), ಕೃತಕ ಹಕ್ಕುಪತ್ರಗಳು ಹಾಗೂ ಸುಳ್ಳು ದಾಖಲೆಗಳ ಮೂಲಕ ಕಬಳಿಸಲಾಗಿದೆ ಎಂದು ಆರೋಪಿಸಲಾಗಿದೆ.

ಈ ಮಧ್ಯೆ ಅಲ್-ಫಲಾಹ್ ವಿಶ್ವವಿದ್ಯಾಲಯದ ಹೆಸರು ಈ ಹಿಂದೆ ದಿಲ್ಲಿಯ ಕೆಂಪುಕೋಟೆ ಸ್ಫೋಟ ಪ್ರಕರಣಕ್ಕೆ ಸಂಬಂಧಿಸಿದ ವೈಟ್ ಕಾಲರ್ ಟೆರರ್ ತನಿಖೆಯಲ್ಲೂ ಕೇಳಿಬಂದಿತ್ತು. 2025ರ ನವೆಂಬರ್ 10ರಂದು ನಡೆದ ಆ ಸ್ಫೋಟದಲ್ಲಿ 15 ಮಂದಿ ಮೃತಪಟ್ಟಿದ್ದರು.

ಆನ್‌ಲೈನ್ ಗೇಮಿಂಗ್ ಕಂಪನಿಗಳಿಗೆ ಶಾಕ್

•ಹೊಸದಿಲ್ಲಿ: ಆನ್‌ಲೈನ್ ಗೇಮಿಂಗ್ ಕಂಪನಿಗಳ ಮೇಲೆ ಪೂರ್ವಾನ್ವಯವಾಗುವಂತೆ ಶೇ.28 ಜಿಎಸ್‌ಟಿ ವಿಧಿಸಿರುವ ಕೇಂದ್ರ ಸರ್ಕಾರದ ಕ್ರಮವನ್ನು ಸುಪ್ರೀಂ ಕೋರ್ಟ್ ಬುಧವಾರ ಮಾನ್ಯಗೊಳಿಸಿದೆ. ಈ ತೆರಿಗೆ ವಿಧಾನ ಸಂವಿಧಾನಬದ್ಧವಾಗಿದ್ದು, ಆನ್‌ಲೈನ್ ಗೇಮಿಂಗ್ ವೇದಿಕೆಗಳು ಕೇವಲ ಮಧ್ಯವರ್ತಿಗಳಲ್ಲ, ಜಿಎಸ್‌ಟಿ ವ್ಯಾಪ್ತಿಗೆ ಬರುವ ಸೇವಾ ಪೂರೈಕೆದಾರರು ಎಂದು ನ್ಯಾಯಾಲಯ ಸ್ಪಷ್ಟಪಡಿಸಿದೆ.

ನ್ಯಾಯಮೂರ್ತಿಗಳಾದ ಜೆ.ಬಿ. ಪಾರ್ದಿವಾಲಾ ಹಾಗೂ ಆರ್. ಮಹಾದೇವನ್ ಅವರಿದ್ದ ಪೀಠ ಈ ಮಹತ್ವದ ತೀರ್ಪು ನೀಡಿತು. ಡಿಜಿಟಲ್ ವೇದಿಕೆಗಳಲ್ಲಿ ನಡೆಯುವ ಫ್ಯಾಂಟಸಿ ಸ್ಪೋರ್ಟ್ಸ್ ಸೇರಿದಂತೆ ಅನಿಶ್ಚಿತ ಫಲಿತಾಂಶಗಳ ಮೇಲೆ ಹಣ ಹೂಡಿ ಆಡುವ ಎಲ್ಲಾ ಆಟಗಳು 'ಬೆಟ್ಟಿಂಗ್ ಮತ್ತು ಜೂಜು' ವ್ಯಾಪ್ತಿಗೆ ಬರುತ್ತವೆ ಎಂದು ಪೀಠ ಅಭಿಪ್ರಾಯಪಟ್ಟಿದೆ.

'ಬೆಟ್ಟಿಂಗ್ ಹಾಗೂ ಜೂಜಿನಿಂದ ಉಂಟಾಗುವ ಆಕ್ಷನಬಲ್ ಕ್ಲೇಮ್ಸ್ ಮೇಲೆ ಜಿಎಸ್‌ಟಿ ವಿಧಿಸುವುದು ಸಂವಿಧಾನಬದ್ಧವಾಗಿದೆ. ಇದು ಸಂವಿಧಾನದ 366(12) ಮತ್ತು 366(12ಎ) ವಿಧಿಗಳನ್ನು ಉಲ್ಲಂಘಿಸುವುದಿಲ್ಲ' ಎಂದು ಸುಪ್ರೀಂ ಕೋರ್ಟ್ ತನ್ನ ತೀರ್ಪಿನಲ್ಲಿ ಹೇಳಿದೆ.

ಇದೇ ವೇಳೆ, ಹಣ ಪಣಕ್ಕಿಟ್ಟು ಆಡುವ ಆನ್‌ಲೈನ್ ಆಟಗಳನ್ನು ನಿಷೇಧಿಸುವ ಉದ್ದೇಶದಿಂದ ತಮಿಳುನಾಡು ಮತ್ತು ಕರ್ನಾಟಕ ಸರ್ಕಾರಗಳು ಜಾರಿಗೆ ತಂದಿದ್ದ ಕಾನೂನುಗಳನ್ನೂ ನ್ಯಾಯಾಲಯ ಮಾನ್ಯಗೊಳಿಸಿದೆ. ರಮ್ಮಿ, ಪೋಕರ್ ಮೊದಲಾದ ಕೌಶಲ್ಯಾಧಾರಿತ ಆಟಗಳೂ ಇದರಲ್ಲಿ ಸೇರಿವೆ ಎಂದು ಕೋರ್ಟ್ ತಿಳಿಸಿದೆ.

ಕೇರಳ: ಮುಂಗಾರು ಪ್ರವೇಶ ವಿಳಂಬ

•ಹೊಸದಿಲ್ಲಿ: ನಿರೀಕ್ಷಿತ ದಿನಾಂಕವಾದ ಮೇ 26ರಂದು ಕೇರಳಕ್ಕೆ ನೈಋತ್ಯ ಮುಂಗಾರು ಪ್ರವೇಶಿಸದಿದ್ದರೂ, ಅರಬ್ಬಿ ಸಮುದ್ರ, ಲಕ್ಷದ್ವೀಪ ಪ್ರದೇಶ ಹಾಗೂ ಬಂಗಾಳಕೊಲ್ಲಿಯ ಹಲವು ಭಾಗಗಳಿಗೆ ಮುಂಗಾರು ಮತ್ತಷ್ಟು ಮುಂದುವರಿದಿದೆ ಎಂದು ಭಾರತೀಯ ಹವಾಮಾನ ಇಲಾಖೆ (ಐಎಂಡಿ) ಬುಧವಾರ ತಿಳಿಸಿದೆ. ಈ ಹಿಂದೆ ಐಎಂಡಿ, 4 ದಿನಗಳ ವ್ಯತ್ಯಾಸದ ಸಾಧ್ಯತೆಯೊಂದಿಗೆ ಮೇ 26ರಂದು ಕೇರಳಕ್ಕೆ ಮುಂಗಾರು ಆಗಮಿಸಬಹುದು ಎಂದು ಅಂದಾಜಿಸಿತ್ತು. ಸಾಮಾನ್ಯವಾಗಿ ಜೂನ್ 1ರ ಸುಮಾರಿಗೆ ಕೇರಳದಲ್ಲಿ ಮುಂಗಾರು ಆರಂಭವಾಗುತ್ತದೆ. ಐಎಂಡಿ ಪ್ರಕಟಣೆಯ ಪ್ರಕಾರ, ಮುಂದಿನ 2-3 ದಿನಗಳಲ್ಲಿ ನೈಋತ್ಯ ಮತ್ತು ಆಗ್ನೇಯ ಅರಬ್ಬಿ ಸಮುದ್ರದ ಇನ್ನಷ್ಟು ಭಾಗಗಳು, ಲಕ್ಷದ್ವೀಪ ಪ್ರದೇಶ, ನೈಋತ್ಯ, ಪೂರ್ವ-ಮಧ್ಯ ಹಾಗೂ ಪಶ್ಚಿಮ-ಮಧ್ಯ ಬಂಗಾಳಕೊಲ್ಲಿ, ಆಗ್ನೇಯ ಬಂಗಾಳಕೊಲ್ಲಿಯ ಉಳಿದ ಭಾಗಗಳು ಹಾಗೂ ಈಶಾನ್ಯ ಬಂಗಾಳಕೊಲ್ಲಿಯ ಕೆಲವು ಭಾಗಗಳಿಗೆ ಮುಂಗಾರು ವಿಸ್ತರಿಸಲು ಅನುಕೂಲಕರ ವಾತಾವರಣವಿದೆ.

ಆರೋಪ ತಳ್ಳಿಹಾಕಿದ ದೇಗುಲ ಆಡಳಿತ | ವರದಿ ಕೇಳಿದ ಸರ್ಕಾರ

ಪದ್ಮನಾಭಸ್ವಾಮಿ ದೇಗುಲದಲ್ಲಿ ಚಿನ್ನಾಭರಣ ನಾಪತ್ತೆ ಆರೋಪ!

•ತಿರುವನಂತಪುರಂ: ದೇಶದ ಅತ್ಯಂತ ಶ್ರೀಮಂತ ದೇವಾಲಯಗಳಲ್ಲಿ ಒಂದಾದ ಅನಂತಪದ್ಮನಾಭ ದೇವಸ್ಥಾನದಲ್ಲಿ ಭದ್ರತಾ ಲೋಪ ಹಾಗೂ ಅಮೂಲ್ಯ ವಸ್ತುಗಳ ನಿರ್ವಹಣೆಯಲ್ಲಿ ಗಂಭೀರ ಅವ್ಯವಸ್ಥೆ ನಡೆದಿದೆ ಎಂಬ ಆತಂಕಕಾರಿ ಮಾಹಿತಿ ಬಹಿರಂಗವಾಗಿದೆ. ರಾಜ್ಯ ಪೊಲೀಸ್ ಮುಖ್ಯಸ್ಥರು ಸರ್ಕಾರಕ್ಕೆ ಸಲ್ಲಿಸಿರುವ ವರದಿಯಲ್ಲಿ ಹಲವು ಅಕ್ರಮಗಳು, ಭದ್ರತಾ ವೈಫಲ್ಯಗಳು ಹಾಗೂ ದಾಖಲೆರಹಿತ ವಸ್ತು ಚಲಾವಣೆಗಳ ಬಗ್ಗೆ ಉಲ್ಲೇಖಿಸಲಾಗಿದೆ ಎಂದು ವರದಿಗಳು ತಿಳಿಸಿವೆ.

ದೇವಸ್ಥಾನಕ್ಕೆ ಭಕ್ತರು ಸಮರ್ಪಿಸಿದ್ದ ಸುಮಾರು 78 ಗ್ರಾಂ ಚಿನ್ನದ ನಾಣ್ಯಗಳು ಮತ್ತು ಚಿನ್ನದ ತುಂಡುಗಳು ನಾಪತ್ತೆಯಾಗಿರುವ ಶಂಕೆ ವ್ಯಕ್ತವಾಗಿದೆ. ಅಲ್ಲದೆ, ದುರಸ್ತಿಗಾಗಿ ತೆಗೆದುಕೊಂಡು ಹೋಗಿದ್ದ ಬಹುಮಟ್ಟಿನ ಚಿನ್ನದ ದೀಪವನ್ನು ದಾಖಲೆ ಇಲ್ಲದೆ ಬೆಳ್ಳಿಯ ದೀಪದಿಂದ ಬದಲಾಯಿಸಲಾಗಿದೆ ಎಂಬ ಆರೋಪವೂ ಕೇಳಿಬಂದಿದೆ. ವರದಿಯ ಪ್ರಕಾರ, ದೇವಸ್ಥಾನದ ಒಳಭಾಗದಲ್ಲಿ ಅಳವಡಿಸಿದ್ದ ಕೆಲವು ಅಮೂಲ್ಯ ವಸ್ತುಗಳು ತಿಂಗಳಿನಿಂದ ಕಾಣೆಯಾಗಿದ್ದು, ಅವುಗಳ ಚಲನವಲನದ ಕುರಿತು ಯಾವುದೇ ಸಮರ್ಪಕ ದಾಖಲೆ ಇಲ್ಲ ಎನ್ನಲಾಗಿದೆ. ದೇವಾಲಯದ ಭದ್ರತಾ ತಪಾಸಣೆಯನ್ನು ಮೀರಿ ಕೆಲ ಸಿಬ್ಬಂದಿ ಹಾಗೂ ರಾಜಕುಟುಂಬದ ಆಪ್ತರು ಪ್ರವೇಶಿಸುತ್ತಿದ್ದರು ಎಂಬ ಗಂಭೀರ ಆರೋಪವೂ ವರದಿಯಲ್ಲಿ ಉಲ್ಲೇಖವಾಗಿದೆ.ದೇವಸ್ಥಾನದಲ್ಲಿರುವ ಚಿನ್ನ-ಬೆಳ್ಳಿ ವಸ್ತುಗಳನ್ನು ಕೇಂದ್ರೀಕೃತ ಭದ್ರ ಕೋಣೆಗೆ ಸ್ಥಳಾಂತರಿಸಬೇಕು. ಭಕ್ತರ ಕಾಣಿಕೆಗಳನ್ನು ಕಟ್ಟುನಿಟ್ಟಿನ ಪೊಲೀಸ್ ನಿಗಾದಲ್ಲಿ ದಾಖಲಿಸಿ ಸಂಗ್ರಹಿಸಬೇಕು ಎಂದು ವರದಿಯಲ್ಲಿ ಶಿಫಾರಸು ಮಾಡಲಾಗಿದೆ. ಇದರ ಮಧ್ಯೆ ದೇವಸ್ಥಾನ ಆಡಳಿತವು ಎಲ್ಲಾ ಆರೋಪಗಳನ್ನು ತಳ್ಳಿಹಾಕಿದೆ. ಯಾವುದೇ ಅಮೂಲ್ಯ ವಸ್ತು ಕಳುವಾಗಿಲ್ಲ, ಭದ್ರತೆಯಲ್ಲಿ ಲೋಪವಿಲ್ಲ ಎಂದು ದೇವಸ್ಥಾನದ ಕಾರ್ಯನಿರ್ವಹಣಾಧಿಕಾರಿ ಸ್ಪಷ್ಟನೆ ನೀಡಿದ್ದಾರೆ. ದೇವಾಲಯದಲ್ಲಿ ಸಿಸಿಟಿವಿ ನಿಗಾವಿದ್ದು, ಅಮೂಲ್ಯ ವಸ್ತುಗಳ ಸ್ಥಳಾಂತರವನ್ನು ಕಟ್ಟುನಿಟ್ಟಿನ ಕ್ರಮಗಳೊಂದಿಗೆ ಮಾತ್ರ ಮಾಡಲಾಗುತ್ತದೆ ಎಂದು ಆಡಳಿತ ಹೇಳಿದೆ. ಇದೇ ವೇಳೆ ಕೇರಳ ಸರ್ಕಾರವೂ ಪ್ರತಿಕ್ರಿಯೆ ನೀಡಿದ್ದು, ಪೊಲೀಸರಿಂದ ಚಿನ್ನ ನಾಪತ್ತೆಯಾಗಿರುವ ಬಗ್ಗೆ ನಮಗೆ ಮಾಹಿತಿ ಬಂದಿದೆ. ಈ ಬಗ್ಗೆ ವರದಿ ನೀಡುವಂತೆ ದೇಗುಲ ಆಡಳಿತ ಮಂಡಳಿಗೆ ಸೂಚಿಸಿದ್ದೇವೆ ಎಂದು ಹೇಳಿದೆ.

10 ಬೋಗಿಗಳ ರೈಲು | ಶೀಘ್ರದಲ್ಲಿ ಪರಿಸರ ಸ್ನೇಹಿ ರೈಲು ಸಂಚಾರ ಕಾರ್ಯಾರಂಭ

ಹೈಡ್ರೋಜನ್ ರೈಲು ಸಂಚಾರಕ್ಕೆ ಕೇಂದ್ರ ಅಸ್ತು

•ಹೊಸದಿಲ್ಲಿ: ರೈಲ್ವೆ ಸಚಿವಾಲಯವು ದೇಶದ ಮೊದಲ ಹೈಡ್ರೋಜನ್ ಚಾಲಿತ 10 ಕೋಚ್‌ಗಳ ಡಿಇಎಂಯು(ಡೀಸೆಲ್ ಎಲೆಕ್ಟ್ರಿಕ್ ಮಲ್ಟಿಪಲ್ ಯೂನಿಟ್) ರೈಲಿನ ಸಂಚಾರಕ್ಕೆ ಅನುಮತಿ ನೀಡಿದೆ.

ಈ ರೈಲು ಉತ್ತರ ರೈಲ್ವೆ ವಲಯದ ಅನ್ವಯ ಜಿಂದ್ ಮತ್ತು ಸೋನಿಪತ್ ನಡುವೆ ಗರಿಷ್ಠ ಗಂಟೆಗೆ 75 ಕಿ.ಮೀ. ವೇಗದಲ್ಲಿ ಸಂಚರಿಸಲಿದೆ ಎಂದು ಮೇ 26ರ ಪಿಟಿಐ ವರದಿಯಲ್ಲಿ ಉಲ್ಲೇಖಿಸಲಾಗಿದೆ. ಈ ಅನುಮೋದನೆಗೆ ಮುನ್ನ, ಸಂಶೋಧನಾ ವಿನ್ಯಾಸ ಮತ್ತು ಗುಣಮಟ್ಟ ಸಂಸ್ಥೆ (ಆರ್‌ಡಿಎಸ್‌ಒ) ತಾಂತ್ರಿಕ ಅನುಮತಿ ನೀಡಿದ್ದು, ರೈಲ್ವೆ ಸುರಕ್ಷತೆಯ ಆಯುಕ್ತರ (ಸಿಸಿಆರ್‌ಎಸ್) ಸುರಕ್ಷತಾ ಪರೀಕ್ಷೆಗಳನ್ನು ಪೂರ್ಣಗೊಳಿಸಿತ್ತು.

ಉತ್ತರ ರೈಲ್ವೆಯ ಮಹಾಪ್ರಬಂಧಕರಿಗೆ ಕಳುಹಿಸಲಾದ ಅನುಮತಿ ಪತ್ರದಲ್ಲಿ, ಅಂತಿಮ ವೇಗ ಪ್ರಮಾಣಪತ್ರ (ಎಫ್‌ಎಸ್‌ಸಿ) ಅನುಸರಿಸುವುದರ ಜತೆಗೆ ಆರ್‌ಡಿಎಸ್‌ಒ ಹೊರಡಿಸಿರುವ ನಿರ್ವಹಣಾ ನಿಯಮಗಳು ಮತ್ತು ಸಿಸಿಆರ್‌ಎಸ್ ಸೂಚಿಸಿರುವ ಎಲ್ಲಾ ಸುರಕ್ಷತಾ ಮಾನದಂಡಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಸೂಚಿಸಲಾಗಿದೆ.



- **ಗರಿಷ್ಠ ವೇಗ:** ಪ್ರತಿ ಗಂಟೆಗೆ 75 ಕಿ.ಮೀ.
- **ಶಕ್ತಿ ವ್ಯವಸ್ಥೆ:** ಹೈಡ್ರೋಜನ್ ಫ್ಯೂಯೆಲ್ ಸೆಲ್‌ಗಳ ಮೂಲಕ 1,200 ಕಿಲೋವ್ಯಾಟ್ ಶಕ್ತಿ ಉತ್ಪಾದನೆ
- **ಪ್ರಾಮುಖ್ಯತೆ:** ಹೈಡ್ರೋಜನ್ ಬಳಕೆಯಿಂದ ಕಾರ್ಬನ್ ಹೊರಸೂಸುವಿಕೆ ಕಡಿಮೆ.

ಪರಿಸರ ಸ್ನೇಹಿ ಶಕ್ತಿ ಸಾಮರ್ಥ್ಯ

10 ಕೋಚ್‌ಗಳ ಡಿಇಎಂಯು ರೈಲು 1,200 ಕಿಲೋವ್ಯಾಟ್ ಸಾಮರ್ಥ್ಯದ ಹೈಡ್ರೋಜನ್ ಫ್ಯೂಯೆಲ್ ಸೆಲ್‌ಗಳ ಸಹಾಯದಿಂದ ಕಾರ್ಯನಿರ್ವಹಿಸಲಿದೆ. ಇದು ಡೀಸೆಲ್ ಮತ್ತು ಸಾಂಪ್ರದಾಯಿಕ ವಿದ್ಯುತ್ ಬದಲಾಗಿ ಡಿಪಿಆರ್‌ಎಸ್ ತಂತ್ರಜ್ಞಾನವನ್ನು ಬಳಸಲಿದೆ. ಮಾಲಿನ್ಯ ಕಡಿಮೆಯಾಗುವುದಲ್ಲದೆ ಹಸಿರು ಇಂಧನ ಬಳಕೆಗೆ ಉತ್ತೇಜನ ಸಿಗಲಿದೆ.

ಮಾರ್ಗ ಮತ್ತು ಕಾರ್ಯಾಚರಣೆ : ಈ ರೈಲು ಜಿಂದ್-ಸೋನಿಪತ್ ಮಾರ್ಗದಲ್ಲಿ ಮಾತ್ರ ಸಂಚಾರಕ್ಕೆ ಅನುಮತಿ ನೀಡಲಾಗಿದೆ. ಇದರ ನಿರ್ವಹಣಾ ಕಾರ್ಯಗಳನ್ನು ದಿಲ್ಲಿಯ ಶಕೂರ್‌ಬಸ್ತಿ ಕೇಂದ್ರದಲ್ಲಿ ಮಾಡಲಾಗುವುದು.

ಸುರಕ್ಷತೆ ಮತ್ತು ತರಬೇತಿ: ಉತ್ತರ ರೈಲ್ವೆಯ ಪ್ರಮುಖ ಜವಾಬ್ದಾರಿಗಳನ್ನು ನಿರ್ವಹಿಸುವ ಸಿಬ್ಬಂದಿಗೆ ವಿಶೇಷ ತರಬೇತಿ ನೀಡಲಾಗುವುದು. ಎಲ್ಲಾ ಸುರಕ್ಷತಾ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಲಾಗುವುದು. ಆರಂಭಿಕ 3 ತಿಂಗಳುಗಳ ಕಾಲ ರೈಲಿನೊಂದಿಗೆ ತಾಂತ್ರಿಕ ತಜ್ಞರ ತಂಡ ಪ್ರಯಾಣಿಸಿ ಕಾರ್ಯಾಚರಣೆಯ ಮೇಲ್ವಿಚಾರಣೆ ಮಾಡಲಿದೆ.

ದೇಶದ ಮೊದಲ ಹೈಡ್ರೋಜನ್ ಚಾಲಿತ ರೈಲಿನ ಸಂಚಾರ ಆರಂಭ ಯಾವಾಗ ಎಂಬ ಪ್ರಶ್ನೆಗೆ ಇನ್ನೂ ಸ್ಪಷ್ಟತೆಯಿಲ್ಲ. ರೈಲ್ವೆ ಸಚಿವಾಲಯ ಇನ್ನೂ ರೈಲು ಸಂಚಾರದ ಅಧಿಕೃತ ದಿನಾಂಕ ಘೋಷಿಸಿಲ್ಲ.

ಹುಬ್ಬಳ್ಳಿ ಇಂದಿನ ಉತ್ಪನ್ನವಾರು ದರ

ಉತ್ಪನ್ನಗಳು	₹ ಕನಿಷ್ಠ (ಕ್ವಿಂ)	₹ ಗರಿಷ್ಠ (ಕ್ವಿಂ)
ಕಡಲೆಕಾಳು	1111	6112
ಒಣ ಮೆಣಸಿನಕಾಯಿ	7869	54699
ಹೆಸರುಕಾಳು	3010	6300
ನೆಲಗಡಲೆ (ಶೇಂಗಾ)	4344	5309
ಜೋಳ	1629	4216
ಮೆಕ್ಕೆಜೋಳ	1989	1989
ಈರುಳ್ಳಿ	400	1900
ಆಲೂಗಡ್ಡೆ	1300	1800
ಕುಸುಬೆ	5201	5329
ಸೋಯಾಬಿನ್	2536	7210
ಗೋಧಿ	2207	3999

ಬಯಲಾಟ ಹಿನ್ನೆಲೆ ಗಾಯಕ ಜಡೇಪ್ಪ ನಿಧನ



• ಕುರುಗೋಡು: ಎಮ್ಮಿಗನೂರು ಗ್ರಾಮದ ಜಡೇಪ್ಪ ಬಾವಿಕಟ್ಟೆ ಕೋಟೆ (85) ಬುಧವಾರ ರಾತ್ರಿ ನಿಧನರಾಗಿದ್ದಾರೆ. ಇರುವ ಅವಳಿ ಜಿಲ್ಲೆಯ ಸೇರಿದಂತೆ ಬಯಲಾಟ ಉತ್ತರ ಕರ್ನಾಟಕ ವಿವಿಧ ಜಿಲ್ಲೆ ಸೇರಿದಂತೆ ಗ್ರಾಮೀಣದಲ್ಲಿ 500ಕ್ಕೂ ಹಿನ್ನೆಲೆ ಗಾಯಕರಾಗಿ ಹಾಗೂ ತಾಳಮದ್ದೆ ಶಬ್ದದಲ್ಲಿ ನಿರಂತವಾಗಿ 5 ದಶಕಕಾಲ ಸೇವೆ ಸಲ್ಲಿಸಿದ್ದಾರೆ. ಗುರುವಾರ ವೀರಶೈವ ರುದ್ರಭೂಮಿಯಲ್ಲಿ ಜರುಗಲಿ ಎಂದು ಕುಟುಂಬದ ಮೂಲ ತಿಳಿಸಿದೆ.

ಪ್ರವಾಸೋದ್ಯಮದ ವೈಶಿಷ್ಟ್ಯಗಳಿಗೆ ಅನುಗುಣವಾಗಿ
ರೈಲ್ವೆ ನಿಲ್ದಾಣಗಳ ಪುನರ್ ಅಭಿವೃದ್ಧಿ

• ಹುಬ್ಬಳ್ಳಿ: ನೈರುತ್ಯ ರೈಲ್ವೆಯ ಹುಬ್ಬಳ್ಳಿ ರೈಲ್ವೆ ವಿಭಾಗದ ವತಿಯಿಂದ 40 ನೇ ವಿಭಾಗೀಯ ರೈಲ್ವೆ ಬಳಕೆದಾರರ ಸಲಹಾ ಸಮಿತಿ ಸಭೆ ಬುಧವಾರ ನಗರದ ಹುಬ್ಬಳ್ಳಿ ರೈಲ್ವೆ ಕಾರ್ಯಾಗಾರರ ಸೆಮಿನಾರ್ ಹಾಲ್‌ನಲ್ಲಿ ನಡೆಯಿತು.

ಸಭೆಯ ಅಧ್ಯಕ್ಷತೆ ವಹಿಸಿದ್ದ ವಿಭಾಗೀಯ ರೈಲ್ವೆ ವ್ಯವಸ್ಥಾಪಕಿ ಬೇಲಾ ಮೀನಾ ಮಾತನಾಡಿ, ಅಮೃತ ಭಾರತ ಯೋಜನೆಯಡಿ ವಿಭಾಗದ ಹಲವು ರೈಲು ನಿಲ್ದಾಣಗಳನ್ನು ಸ್ಥಳೀಯತೆ, ಐತಿಹಾಸಿಕತೆ ಹಾಗೂ ಪ್ರವಾಸೋದ್ಯಮದ ವೈಶಿಷ್ಟ್ಯಗಳಿಗೆ ಅನುಗುಣವಾಗಿ ಪುನರ್ ಅಭಿವೃದ್ಧಿಪಡಿಸಲಾಗುತ್ತಿದಿತೆ.

ರೈಲು ನಿಲ್ದಾಣಗಳಲ್ಲಿ ಪ್ರಯಾಣಿಕ ಸ್ನೇಹಿ ಸೌಲಭ್ಯಗಳನ್ನು ಒದಗಿಸುವುದು ಇಲಾಖೆಯ ಪ್ರಮುಖ ಧ್ಯೇಯವಾಗಿದೆ ಎಂದು ತಿಳಿಸಿದರು.

ಅಳ್ನಾವರ, ಬಾದಾಮಿ, ಕೊಪ್ಪಳ ಹಾಗೂ ಹೊಸಪೇಟೆ ರೈಲು ನಿಲ್ದಾಣಗಳ ಎಬಿಎಸ್‌ಎಸ್ ಪುನರಾಭಿವೃದ್ಧಿ ಕಾಮಗಾರಿಗಳು ಭರದಿಂದ ಸಾಗುತ್ತಿವೆ. ಅದೇ ರೀತಿ ಹಂತ ಹಂತವಾಗಿ ವಾಸ್ಕೋ-ಡ-ಗಾಮಾ ಹಾಗೂ ಬಳ್ಳಾರಿ ರೈಲು ನಿಲ್ದಾಣಗಳಲ್ಲಿ ಸುವ್ಯವಸ್ಥಿತ ಮತ್ತು ಆಧುನಿಕ ಮಟ್ಟದ ಉನ್ನತೀಕರಣ ಕಾಮಗಾರಿಗಳನ್ನು ನಡೆಸಲಾಗುತ್ತಿದೆ ಎಂದರು.

ಸಭೆಯಲ್ಲಿ ಡಿಆರ್‌ಯುಸಿಸಿ ಸದಸ್ಯ ಚಂದ್ರಕಾಂತ ಗವಾಸ್ (ಗೋವಾ), ಸದಸ್ಯ ವಿ.ಜಿ. ಹಿರೇಗೌಡರ, ಸಭೆಯಲ್ಲಿ ಕರ್ನಾಟಕ ವಾಣಿಜ್ಯೋದ್ಯಮ ಮತ್ತು ಕೈಗಾರಿಕಾ ಸಂಸ್ಥೆ, ಕಿರಣ ದೀನನಾಥ ನಾಯ್ಕ, ಆರ್. ಗೋಪಾಲ ಕೃಷ್ಣ, ವಿ.ಜಿ. ಹಿರೇಗೌಡರ, ಡಿ.ಆರ್. ರಾಟಿ, ಚನ್ನವೀರ ಮುಂಗುರವಾಡಿ, ಗಿರಿಧರ ಸೊಂತ, ಕೆ.ಎಂ. ಕೊಟ್ರೇಶ, ಚಂದ್ರಕಾಂತ ಗವಾಸ್ ಹಾಗೂ ಅಗಸ್ಟೊ ಕೋಸ್ತಾ ಭಾಗವಹಿಸಿದ್ದರು.



ಪ್ರಯಾಣಿಕರ ಸುರಕ್ಷತೆಗೆ ಆದ್ಯತೆ

ರೈಲು ಪ್ರಯಾಣಿಕರ ಸುರಕ್ಷತೆಗೆ ಹೆಚ್ಚಿನ ಆದ್ಯತೆ ನೀಡಲಾಗುತ್ತಿದೆ.ರಾಜ್ಯ ರೈಲ್ವೆ ಪೊಲೀಸ್ ಹಾಗೂ ರೈಲ್ವೆ ರಕ್ಷಣಾ ಪಡೆ ಸಿಬ್ಬಂದಿ ದಕ್ಷತೆಯಿಂದ ಕಾರ್ಯನಿರ್ವಹಿಸುತ್ತಿದ್ದು, ಅಗತ್ಯ ಸ್ಥಳಗಳ ಮೇಲೆ ನಿಗಾವಹಿಸಲಾಗುತ್ತಿದೆ ಎಂದು ವಿಭಾಗೀಯ ಹಿರಿಯ ವಾಣಿಜ್ಯ ವ್ಯವಸ್ಥಾಪಕರು ಹಾಗೂ ಡಿಆರ್‌ಯುಸಿಸಿ ಕಾರ್ಯದರ್ಶಿ ಡಾ. ಕಾರ್ತಿಕ್ ವಿ. ಹೆಗಡೆಕಟ್ಟೆ ತಿಳಿಸಿದರು.

ಭಾಗವತ ಸ್ವಾಹಾರ ಸಪ್ತಾಹ ಕಾರ್ಯಕ್ರಮ

• ಕಲಬುರಗಿ: ದುರ್ಬಲವಾದ ಮೋಕ್ಷ ಸಾಧನೆಯೇ ಮಾನವರ ಅಂತಿಮ ಗುರಿಯಾಗಿದೆ ಎಂದು ಪಂ.ಹಣಮಂತಾಚಾರ್ಯ ಸರಡಗಿ ಹೇಳಿದರು.

ಬ್ರಹ್ಮಪುರದ ಶ್ರೀ ಲಕ್ಷ್ಮಿ ನರಸಿಂಹ ದೇವಸ್ಥಾನದಲ್ಲಿ ಭಾಗವತ ಸ್ವಾಹಾಕಾರ ಸಪ್ತಾಹಸಮಿತಿ ಹಮ್ಮಿಕೊಂಡಿದ್ದ ಸಂಪೂರ್ಣ ಭಾಗವತ ಸಪ್ತಾಹ ಸಮಾರೋಪ ಸಮಾರಂಭದಲ್ಲಿ ಅವರು ಪ್ರವಚನ ನೀಡಿದರು.

ಮೋಕ್ಷ ಸಾಧನೆ ಪಡೆಯುವುದು ಸುಲಭದ ಮಾತಲ್ಲ, ಮೋಕ್ಷಕ್ಕಾಗಿ ವ್ರತ, ನಿಯಮಗಳಂತಹ ಅನೇಕ ಸಾಧನೆ ಮಾಡಬೇಕಾಗುತ್ತದೆ. ಭಗವಂತನಲ್ಲಿ ನಿಶ್ಚಲ ಭಕ್ತಿ ಮಾಡುವುದು ಮೋಕ್ಷ ಸಾಧನೆಯ ಮೊದಲ ಮೆಟ್ಟಿಲು ಎಂದರು. ಮೇ 18 ರಿಂದ 25 ರ ವರೆಗೆ ಸಂಪೂರ್ಣ ಭಾಗವತ ಸ್ವಾಹಾಕಾರ ಯಜ್ಞ ಕೈಗೊಳ್ಳಲಾಗಿತ್ತು.ನಗರದ ಅನೇಕ ವಿದ್ವಾಂಸರು ಪ್ರವಚನ ನೀಡಿದರು. ಉತ್ತರಾದಿ ಮಠದ ಮಠಾಧಿಕಾರಿ ರಾಮಾಚಾರ್ಯ ಘಂಟಿ, ಪಂ. ವಿಷ್ಣುದಾಸಾಚಾರ್ಯ ಖಜೂರಿ, ವಾಸುದೇವಾಚಾರ್ಯ ಸರಡಗಿ, ಲಕ್ಷ್ಮಣಾಚಾರ್ಯ ಗಂಗಾವತಿ, ಗಿರಿಯಾಚಾರ್ಯ ಆಡಕಿ, ಗೋವಿಂದಾಚಾರ್ಯ, ಬಾಲಕೃಷ್ಣ ಲಾತೂರಕರ ಹಾಗೂ ಅನೇಕ ಭಕ್ತರು ಪಾಲ್ಗೊಂಡಿದ್ದರು.



ಬಿರುಗಾಳಿಗೆ ಧರೆಗುರುಳಿದ ವಿದ್ಯುತ್ ಕಂಬ: ಆತಂಕ
ಕಲಬುರಗಿಯಲ್ಲಿ ಮಳೆರಾಯನ ಆರ್ಭಟ

• ಕಲಬುರಗಿ: ಬಿಸಿಲಿನ ನಾಡು ಎಂದೇ ಪ್ರಸಿದ್ಧಿ ಪಡೆದಿರುವ ಕಲಬುರಗಿ ಜಿಲ್ಲೆಯಲ್ಲಿ ಬುಧವಾರ ಬೆಳಗ್ಗಿನಿಂದಲೇ ಮಳೆರಾಯನ ಆರ್ಭಟ ಜೋರಾಗಿದೆ. ನಗರ ಸೇರಿದಂತೆ ಗ್ರಾಮೀಣ ಭಾಗಗಳಲ್ಲೂ ತುಂತುರು ಮಳೆ ನಿರಂತರವಾಗಿ ಸುರಿಯುತ್ತಿದ್ದು, ಜನರಿಗೆ ಮಲೆನಾಡಿನ ಅನುಭವ ಮೂಡಿಸಿದೆ.

ಬೆಳಗಿನ ಜಾವ ಆರಂಭವಾದ ಮಳೆ ಬಿಟ್ಟುಬಿಡದೆ ಸುರಿಯುತ್ತಿದ್ದು, ಹಲವು ಕಡೆಗಳಲ್ಲಿ ವಾತಾವರಣ ತಂಪಾಗಿದೆ. ಕೆಲವೆಡೆ ಬಿರುಗಾಳಿಯೂ ಸಹಿತ ಮಳೆಯಾಗಿರುವುದರಿಂದ ಜನಜೀವನದಲ್ಲಿ ಅಸ್ತವ್ಯಸ್ತತೆ ಉಂಟಾಗಿದೆ. ಇದರಿಂದ ಚಿತ್ತಾಪುರ ತಾಲೂಕು ವ್ಯಾಪ್ತಿಯ ಲಾಡ್ಲಾಪುರ ಗ್ರಾಮದಲ್ಲಿ ವಿದ್ಯುತ್ ಕಂಬವೊಂದು ಧರೆಗುರುಳಿದ ಘಟನೆ ನಡೆದಿದೆ. ಗ್ರಾಮದ ನಿವಾಸಿ ದ್ಯಾವಪ್ಪ ನಡಿಗೇರಿ ಅವರ ಮನೆ ಮೇಲೆಯೇ ವಿದ್ಯುತ್ ಕಂಬ ಬಿದ್ದಿದ್ದು, ಅದೃಷ್ಟವಶಾತ ಯಾವುದೇ ಪ್ರಾಣಾಪಾಯ ಸಂಭವಿಸಿಲ್ಲ.

ಕಂಬ ಬಿದ್ದ ಪರಿಣಾಮ ಬಡಾವಣೆಯಾದ್ಯಂತ ವಿದ್ಯುತ್ ತಂತಿಗಳು ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದು, ಸ್ಥಳೀಯರಲ್ಲಿ ಆತಂಕ ಮನೆಮಾಡಿದೆ. ತಕ್ಷಣವೇ ದುರಸ್ಥಿ ಕಾರ್ಯ ಕೈಗೊಳ್ಳುವಂತೆ ಗ್ರಾಮಸ್ಥರು ಮನವಿ ಮಾಡಿದ್ದಾರೆ. ಘಟನೆಗೆ ಸಂಬಂಧಿಸಿ ಜೆಸ್ಕಾಂ ಅಧಿಕಾರಿಗಳ ನಿರ್ಲಕ್ಷ್ಯವೇ ಕಾರಣ ಎಂದು ಆರೋಪಿಸಿರುವ ಸ್ಥಳೀಯರು, ವಿದ್ಯುತ್ ಕಂಬಗಳ ನಿರ್ವಹಣೆಯಲ್ಲಿ ಅಧಿಕಾರಿಗಳು ವಿಫಲರಾಗಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.



ಜಿಲ್ಲೆಯಾದ್ಯಂತ ಸುರಿದ ಮಳೆ ವಿವರ

ಕಲಬುರಗಿ ಸೇಡಂನ ಮೋತಕಪಲ್ಲಿ-90.5 ಮೀ.ಮೀ.ರಿಬ್ಬನಪಲ್ಲಿ-86.5 ಮೀಮೀ. ಕಮರವಾಡಿ-79.5 ಮೀಮೀ. ಶಹಾಬಾದ್ ವಾಡಿ-66.5 ಮೀಮೀ.ನೀಲಹಳ್ಳಿ-65.5 ಮೀಮೀ. ಚಿಂಚೋಳಿ -63.6 ಮೀಮೀ. ಚಿಮ್ಮದಲಾಯಿ-63.5 ಮೀಮೀ. ಕಾಳಗಿ-61.5 ಮೀಮೀ.ದಿಗ್ಗಾಂವ -61.5 ಮೀಮೀ. ಜೇವರ್ಗಿ ಕೆಲ್ಲೂರ -60.5 ಮೀಮೀ.ಚಿತ್ತಾಪುರ ಭಾಗೋಡಿ-58.5 ಮೀಮೀ ಮಳೆಯಾಗಿದೆ.

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸ ಪೂರ್ಣವೇ ಆದರೂ ಅವುಗಳಲ್ಲಿ ಕೊಡುವ ಮಾಹಿತಿ, ಗುಣಮಟ್ಟ ಮುಂತಾದವುಗಳ ಕುರಿತು ಸಾರ್ವಜನಿಕರು ಜಾಹೀರಾತು ನೀಡಿದವರೊಡನೆ ವ್ಯವಹರಿಸಬೇಕು. ಇದಕ್ಕೆ ಪತ್ರಿಕೆ ಜವಾಬ್ದಾರಿ ಇಲ್ಲಾ.

ಜಾಹೀರಾತು ವ್ಯವಸ್ಥಾಪಕರು



CHANGE OF NAME

I, **ISMAIL BYARI** (Old Name) R/o: New Colony, Muglihonda, Bhatkal - 581320, Uttara Kannada, Karnataka, have changed my name as **MOHAMMED ISMAIL BEARY S/O : MOHAMED BEARY** (New Name) henceforth I will be called and recognized by new name for all future purposes, dated: 27/05/2026.

CHANGE OF NAME

I, **POOJA GURULINGAYYA GUDNAYYANAVARMATH (Old Name)** Before Marriage, and I, R/o.Hubballi-580024, have changed my name to **POOJA ROHITH POOJARI (New Name)** After Marriage. Henceforth I will be called and recognized by my New Name for all Purposes, Vide Affidavit Sworn Before Notary V.H.Patil at Hubballi on 27/05/2026

ಕ್ರಿಮಿ. ನಂ: 385/2026

ಮಾ॥ ಪ್ರಧಾನ ಸಿವ್ಹಿಲ್ ನ್ಯಾಯಾಧೀಶರು ವ ಜೆಎಮ್‌ಎಫ್‌ಸಿ ಬಸವನ ಬಾಗೇವಾಡಿ ಇವರ ನ್ಯಾಯಾಲಯದಲ್ಲಿ

1) ರಾಮು ತಂ. ಧೀರು ಲಮಾಣಿ .....ಅರ್ಜಿದಾರರು

ವಿರುದ್ಧ

1) ತಹಶೀಲ್ದಾರರು, ಜನನ ಮರಣ ನೋಂದಣಾಧಿಕಾರಿಗಳು ಬಸವನ ಬಾಗೇವಾಡಿ .....ಎದುರುದಾರ

ಪತ್ರಿಕಾ ಪ್ರಕಟಣೆ

ಸದರ ಮೇಲ್ಕಾಣಿಸಿದ ಅರ್ಜಿಯಲ್ಲಿಯ ತಾಯಿಯಾದ ಮೋತಾಬಾಯಿ ಗಂ. ಧೀರು ಲಮಾಣಿ ಇವಳು ದಿನಾಂಕ: 15-09-2020 ರಂದು ಬಸವನ ಬಾಗೇವಾಡಿ ತಾಲೂಕಿನ ಅಂಬಳನೂರ ಗ್ರಾಮದಲ್ಲಿ ಮೃತವಾಗಿದ್ದು, ಸದರಿಯವರ ಮರಣ ಪ್ರಮಾಣ ಪತ್ರ ಪಡೆಯಲು ಅರ್ಜಿದಾರರು ಈ ಅರ್ಜಿಯನ್ನು ದಾಖಲಿಸಿರುತ್ತಾರೆ. ಆದ್ದರಿಂದ ಸದರಿ ಅರ್ಜಿದಾರರ ತಾಯಿಯ ಮರಣದ ಬಗ್ಗೆ ಮರಣ ನೋಂದಣಾಧಿಕಾರಿಗಳ ರಜಿಸ್ಟರ್‌ದಲ್ಲಿ ದಾಖಲಿಸುವ ಕುರಿತು. ಯಾರಾದರೂ ಯಾವುದೇ ರೀತಿಯ ತಂಟೆ, ವ ತಕರಾರು ಇದ್ದಲ್ಲಿ ಅಂತವರು ಹಾಜರಾಗಲು ಮಾನ್ಯ ನ್ಯಾಯಾಲಯದವರು ದಿನಾಂಕ: 02-07-2026 ರಂದು ಬೆಳಿಗ್ಗೆ 11 ಘಂಟೆಗೆ ಮುದ್ದತ್ ನೇಮಿಸಿದ್ದು ಇರುತ್ತದೆ. ತಾವಾಗಲೀ ತಮ್ಮ ವಕೀಲರ ಮುಖಾಂತರವಾಗಲೀ ಈ ನ್ಯಾಯಾಲಯಕ್ಕೆ ಹಾಜರಾಗತಕ್ಕದ್ದು, ಇದಕ್ಕೆ ತಪ್ಪಿದಲ್ಲಿ ಪ್ರಕರಣವನ್ನು ತಮ್ಮ ಗೈರ ಹಾಜರಾತಿಯಲ್ಲಿ ನಿರ್ಣಯಿಸಲಾಗುವದು. ಈ ಹೊತ್ತು ದಿನಾಂಕ : 27-05-2026 ರಂದು ನ್ಯಾಯಾಲಯದ ಆದೇಶದ ಮೇರೆಗೆ ನನ್ನ ಸಹಿ ಹಾಗೂ ನ್ಯಾಯಾಲಯದ ಮುದ್ರೆಯೊಂದಿಗೆ ಕೊಡಲ್ಪಟ್ಟಿತು.

ಬಸವನಬಾಗೇವಾಡಿ
ದಿನಾಂಕ: 27-05-2026
ನ್ಯಾಯಾಲಯದ ಆದೇಶದ ಮೇರೆಗೆ

ಸಹಿ/- ಶಿರಸ್ತೆದಾರರು, (ಆಡಳಿತ)
ಮಾ॥ ಪ್ರಧಾನ ಸಿವ್ಹಿಲ್ ನ್ಯಾಯಾಧೀಶರು ವ ಜೆ.ಎಮ್. ಎಫ್.ಸಿ. ನ್ಯಾಯಾಲಯ ಬಸವನಬಾಗೇವಾಡಿ
ಸಹಿ/- ಶ್ರೀ ಎಸ್.ಎಸ್. ಬಿರಾದಾರ
ಅರ್ಜಿದಾರರ ಪರ ವಕೀಲರು

IN THE COURT OF THE 4th ADDITIONAL CIVIL JUDGE & JMFC AT BALLARI

Crl. M.C. No. 48/2026

Between:-

1) SHANKARAPPA S/O LATE. SHIVANNA, aged about 48 years,

2) BASAPPA N. S/O LATE SHIVANNA, aged about 56 years, both are R/o, ward No.2, Jeer Oni, Sunkalamma road, Bennakallu Ballari taluk and District. ....Petitioners

And

The register of Birth & Death's Register, Thasildhar, Taluk office, Ballari .....Respondent

NOTICE

WHEREAS, the above named petitioner has filed the above petition under section 13(2) of Birth and Deaths Act, 1969 against the respondent for the purpose of seeking date of death of Petitioner's father by name SHIVANNA S/O LATE. MARENNA was died on 15-06-1973 at Bennakallu village, Ballari taluk and District in the above mentioned address.

Therefore, If any persons are interested you are hereby directed to appear in this court in person or by a pleader duly instructed on 29-06-2026 at about 11.00 a.m to show cause against the above suit, failing which the suit will be heard and determined ex-parte against you.

Given under my hand and seal of the court on this 26th May 2026.

By Order of the court.
Sd/- Sharestedar
4th Addl. Civil Judge and JMFC Ballari
Sd/- Laliya Naik Advocate for the petitioners

ಕರ್ನಾಟಕ ಸರ್ಕಾರ

ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ ಇಲಾಖೆ, ವಿಭಾಗ ಕಾರವಾರ

ಸಂ: ಕಾ.ನಿ.ಇಂ./ಲೋ.ಇ.ವಿ,ಕಾ/ಪಿ.ಬಿ-1/ಟೆಂಡರ- 04/ 2026-27/876 ದಿನಾಂಕ: 22.05.2026

ಗುತ್ತಿಗೆ ಆಹ್ವಾನ ಪ್ರಕಟಣೆ (ಇ-ಪ್ರಕ್ಯೂರಮೆಂಟ್)

ಅರ್ಹ ಗುತ್ತಿಗೆದಾರರಿಂದ ಈ ಕೆಳಗಿನ ಕೋಷ್ಟಕದಲ್ಲಿ ವಿವರಿಸಿರುವ ಕಾಮಗಾರಿಗಳಿಗಾಗಿ ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ, ಕಾರವಾರ ಇವರಿಂದ ಗುತ್ತಿಗೆ ಆಹ್ವಾನಿಸಲಾಗಿದೆ. ಗುತ್ತಿಗೆದಾರರು ಕೋಷ್ಟಕದಲ್ಲಿ ಕೊಟ್ಟಿರುವ ಕಾಮಗಾರಿಯ ಗುತ್ತಿಗೆಯನ್ನು ಇ-ಪ್ರೊಕ್ಯೂರಮೆಂಟ್ ಮುಖಾಂತರ ಮಾತ್ರ ಸಲ್ಲಿಸುವದು. ಗುತ್ತಿಗೆಯನ್ನು ವಹಿಸಲು ಅರ್ಹರಾಗಬೇಕಾದಲ್ಲಿ ಗುತ್ತಿಗೆದಾರರು (ಕೆಸಿ-8) ರಲ್ಲಿ ನಿಗದಿಪಡಿಸಿರುವ ಷರತ್ತುಗಳನ್ನು ಗಮನಿಸುವದು.

(1) ಗುತ್ತಿಗೆಗೆ ಸಂಬಂಧಿಸಿದ ವಿಚಾರಣೆಗೆ ಕೊನೆಯ ದಿ: 04-06-2026 16.30 ಗಂಟೆವರೆಗೆ (2) ಟೆಂಡರನ್ನು ಸ್ವೀಕರಿಸುವ ಕೊನೆಯ ದಿ: 05-06-2026 16.30 ಗಂಟೆವರೆಗೆ (3) ಟೆಂಡರನ ಆರ್ಥಿಕ ಬಿಡ್ ತೆರೆಯುವ ದಿ: 06-06-2026 17.00 ಗಂಟೆವರೆಗೆ

ಕಾಮಗಾರಿಯ ಹೆಸರು: ಲೆಕ್ಕಶೀರ್ಷಿಕೆ: 4059-80-051-42-386 (8443 Deposit Contribution) During 2025-26 ವರ್ಕ ಇಂಡೆಂಟ್ (1) PWD/2026-27/SE1177

(ಕೆಸಿ-8) ರಲ್ಲಿನ ನಿಭಂದನೆಗಳನ್ನು ಮುಂದಿನ ದಿನಗಳಲ್ಲಿ e-proc ನಲ್ಲಿ ಸೂಚಿಸಲಾದ ನಿಭಂದನೆಗಳನ್ನು ಇಲಾಖಾ ವೆಬ್‌ಸೈಟ್‌ನಲ್ಲಿ ಅಂದರೆ "https://kppp.karnataka.gov.in" ನೋಡಬಹುದು. ಹೆಚ್ಚಿನ ಮಾಹಿತಿಗಾಗಿ help desk Bangalore (Phone No. 91802550121 & 918025501227) ಇವರನ್ನು ಸಂಪರ್ಕಿಸಬಹುದು.

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು,
ಲೋಕೋಪಯೋಗಿ ಇಲಾಖೆ, ವಿಭಾಗ, ಕಾರವಾರ

DIPR/KWR/KSMCA/166/26-27 dt. 26.05.2026

ಕರ್ನಾಟಕ ಸರ್ಕಾರ

ಹಾವೇರಿ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ದೇವಗಿರಿ-ಯಲ್ಲಾಪುರ, ಹಾವೇರಿ-581110

(ಕರ್ನಾಟಕ ಸರ್ಕಾರದ ಸ್ವಾಯತ್ತ ಸಂಸ್ಥೆ)

Website : https://himshaveri.karnataka.gov.in
E-mail : tenders.hims.dme@gmail.com

ಸಂ: ಹಿಮ್ಸ್/ವೈಉ/02/2026-27, ದಿನಾಂಕ : 26/05/2026

ಮರು ಇ-ಟೆಂಡರ ಪ್ರಕಟಣೆ

ಕರ್ನಾಟಕ ಸಾರ್ವಜನಿಕ ಸಂಗ್ರಹಗಳ ಪಾರದರ್ಶಕ ಅಧಿನಿಯಮ-99/2000 ಮತ್ತು ಸರ್ಕಾರದಿಂದ ಕಾಲಕಾಲಕ್ಕೆ ಹೊರಡಿಸಿರುವ ಷರತ್ತುಗಳನ್ವಯ ನೊಂದಾಯಿತ ಅರ್ಹ ಸಂಸ್ಥೆಗಳಿಂದ/ಪ್ರತಿಷ್ಠಿತ ಮೂಲ ತಯಾರಕರು/ಅಧಿಕೃತ ಪ್ರತಿನಿಧಿಗಳು/ ಅಧಿಕೃತ ವಿತರಕರಿಂದ 2026-27ನೇ ಸಾಲಿಗಾಗಿ ಹಾವೇರಿ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾವೇರಿಗೆ ಬೇಕಾದ **BIO MEDICAL CONSUMABLES** ಗಳನ್ನು ಖರೀದಿಸುವ ಕುರಿತು ಮರು ಇ-ಟೆಂಡರ್ ಆಹ್ವಾನಿಸಲಾಗಿದೆ ಅರ್ಹ ಟೆಂಡರ್‌ದಾರರು ಕೆ.ಪಿ.ಪಿ. ಪೋರ್ಟಲ್ **https://kppp.karnataka.gov.in** ಮುಖಾಂತರ ಟೆಂಡರ್‌ನಲ್ಲಿ ಸಲ್ಲಿಸಬಹುದು. ಹೆಚ್ಚಿನ ವಿವರಗಳನ್ನು ಮೇಲ್ಕಂಡ ವಿಳಾಸದಲ್ಲಿ ಪಡೆಯುವುದು.

ಟೆಂಡರ್ ವೇಳಾಪಟ್ಟಿ: (1) ಟೆಂಡರ್ ಪ್ರಕಟಣೆ ದಿನಾಂಕ: **25/05/2026** (2) ಟೆಂಡರ್‌ನ ಒಟ್ಟು ಅಂದಾಜು ಮೌಲ್ಯ ರೂ. **19.94** ಲಕ್ಷ (3) ಆನ್‌ಲೈನ್‌ನಲ್ಲಿ ಟೆಂಡರ್ ಅನ್ನು **KPP Portal** ಮುಖಾಂತರ ಸಲ್ಲಿಸಲು ಕೊನೆಯ ದಿನಾಂಕ : **08/06/2026** ಅಪರಾಹ್ನ 4:30 (4) ತಾಂತ್ರಿಕ ಲಕೋಟೆ ತೆರೆಯುವ ದಿನಾಂಕ : **09/06/2026** ಅಪರಾಹ್ನ 4:30 (5) ತಾಂತ್ರಿಕ ಲಕೋಟೆಯ ದಾಖಲೆಗಳ ಪರಿಶೀಲನೆ : ತಿಳಿಸಲಾಗುವುದು (6) ಹಣಕಾಸಿನ ಲಕೋಟೆಯನ್ನು ತೆರೆಯುವ ದಿನಾಂಕ : ತಿಳಿಸಲಾಗುವುದು (7) ಟೆಂಡರ್‌ನೊಂದಿಗೆ ಪಾವತಿಸಬೇಕಾದ ಇ.ಎಂ.ಡಿ ಶೇ 2.5% ರಷ್ಟು ರೂ. **49,865/-** (8) E-Procurement Portal Processing Fees : https://kppp.karnataka.gov.inPortal ನಲ್ಲಿ ನಿಗದಿಪಡಿಸಿರುವಂತೆ (9) ವ್ಯವಹರಿಸಬೇಕಾದ ಅಧಿಕಾರಿ ಹಾಗೂ ವಿಳಾಸ, ದೂರವಾಣಿ ಸಂಖ್ಯೆ ರಜಾ ದಿನಗಳನ್ನು ಹೊರತುಪಡಿಸಿ : ಡೀನ್ ಮತ್ತು ನಿರ್ದೇಶಕರು, ಹಾವೇರಿ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾವೇರಿ, ದೂರವಾಣಿ ಸಂಖ್ಯೆ: **8660990320 Email : tenders.hims.dme@gmail.com**

ಸಹಿ/- ಆರ್ಥಿಕ ಸಲಹೆಗಾರರು,
ಹಾವೇರಿ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾವೇರಿ

ವಾಸಾಸಂಇ/ಹಾವೇರಿ/ಕೆಎಸ್‌ಎಂಸಿಎ/116/2026-27

ಕಾವೇರಿ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)

ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ ನಂ. 1 ಹೇಮಾವತಿ ಬಲಮೇಲ್ದಂಡೆ ನಾಲಾ ವಿಭಾಗ, ಗೊರೂರು

ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ ಸಂಖ್ಯೆ 01/2026-27 ದಿನಾಂಕ:25/05/2026

ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ ಇವರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ನಂ.1 ಹೇಮಾವತಿ ಬಲಮೇಲ್ದಂಡೆ ನಾಲಾ ವಿಭಾಗ, ಗೊರೂರು ಹಾಸನ ಜಿಲ್ಲೆ, ಇವರಿಂದ ಕಾವೇರಿ ನೀರಾವರಿ ನಿಗಮದಲ್ಲಿ ನೊಂದಾಯಿತವಾಗಿರುವ ನಿಗಧಿತ ದರ್ಜೆಯ ಗುತ್ತಿಗೆದಾರರಿಂದ ಈ ಅಧಿಸೂಚನೆಯಲ್ಲಿ ತಿಳಿಸಿರುವಂತೆ ಒಟ್ಟು 07 ಕಾಮಗಾರಿಗಳಿಗೆ ಟೆಂಡರ್‌ಅನ್ನು ಕೆ ಪಿ ಪಿ ಪೋರ್ಟಲ್‌ನಲ್ಲಿ ಆಹ್ವಾನಿಸಲಾಗಿದೆ. ಈ ಕಾಮಗಾರಿಗೆ ಟೆಂಡರ್ ಸಲ್ಲಿಸುವ ಗುತ್ತಿಗೆದಾರರು ಟೆಂಡರ್‌ಗಿಟ್ಟ ಕನಿಷ್ಠ ಮೊತ್ತ ರೂ. 4.24 ಲಕ್ಷ ಮತ್ತು ಗರಿಷ್ಠ ಮೊತ್ತ ರೂ.12.63 ಲಕ್ಷಗಳಾಗಿರುತ್ತದೆ. ಅರ್ಜಿ ಬೆಲೆ ಕೆ ಪಿ ಪಿ-portal ನಂತೆ ಇರುತ್ತದೆ. ಕೆ ಪಿ ಪಿ ಪೋರ್ಟಲ್‌ನಲ್ಲಿ ಅರ್ಹ ಗುತ್ತಿಗೆದಾರರು ಅಂತರ್ಜಾಲದಲ್ಲಿ ದಿನಾಂಕ:26/05/2026 ರಂದು ಬೆಳಿಗ್ಗೆ 11.00 ಗಂಟೆಯಿಂದ ದಿನಾಂಕ:03/06/2026 ರ ಮಧ್ಯಾಹ್ನ 4.00 ಗಂಟೆಯವರೆಗೆ ಟೆಂಡರ್‌ನ ನಿಗಧಿತ ನಮೂನೆಗಳನ್ನು https://kppp.karnataka.gov.in ನಲ್ಲಿ ಡೌನ್ ಲೋಡ್ ಮಾಡಿ ಅವಶ್ಯ ಮಾಹಿತಿಗಳೊಂದಿಗೆ ಹಾಗೂ ನಿಗದಿತ ಇ.ಎಂ.ಡಿ. ಯೊಂದಿಗೆ ಅಪ್‌ಲೋಡ್ ಮಾಡಬಹುದಾಗಿದೆ. ಟೆಂಡರ್‌ಅನ್ನು ದಿನಾಂಕ:04/06/2026 ರಂದು ನಂ.1 ಹೇಮಾವತಿ ಬಲಮೇಲ್ದಂಡೆ ನಾಲಾ ವಿಭಾಗ, ಗೊರೂರು ಕಚೇರಿಯಲ್ಲಿ ತೆರೆಯಲಾಗುವುದು. ಹೆಚ್ಚಿನ ಮಾಹಿತಿ ಹಾಗೂ ಇತರೆ ನಿಬಂದನೆಗಳನ್ನು ಕಛೇರಿ ವೇಳೆಯಲ್ಲಿ ಪಡೆಯಬಹುದು.

ಸಹಿ/- ಕಾರ್ಯಪಾಲಕ ಇಂಜಿನಿಯರ್, ನಂ.1
ಹೇಮಾವತಿ ಬಲಮೇಲ್ದಂಡೆ ನಾಲಾವಿಭಾಗ, ಗೊರೂರು

ವಾಸಾಸಂಇ/ಹಿಸನಿ/ಹಾಸನ/171/ಕೆಎಸ್‌ಎಂಸಿಎ/2026-27

ಕರ್ನಾಟಕ ಸರಕಾರ

ಜಿಲ್ಲಾ ಪಂಚಾಯತ, ಗದಗ

ಉಪ ನಿರ್ದೇಶಕರು ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ ಗದಗ ಇವರ ಕಚೇರಿ

ದೂರವಾಣಿ: 08372-295153 ಮಿಂಚಂಚೆ:-gdgddahvs@gmail.com

ಸಂ:ಉನಿಗ/ಪಪಾಇ/ವಾಹನ/ಟೆಂಡರ್/2026-27 ದಿನಾಂಕ: 26-05-2026

ಟೆಂಡರ್ ಅಧಿಸೂಚನೆ

ದಿನಾಂಕ: **01-05-2026** ರಿಂದ **31-03-2027**ರ ಅವಧಿಗೆ ಉಪನಿರ್ದೇಶಕರು(ಆಡಳಿತ) ಪಶುಪಾಲನಾ ಇಲಾಖೆ ಗದಗ ಕಚೇರಿಗೆ ಉಪಯೋಗಕ್ಕೆ **2023-2024**ರಲ್ಲಿ ನೊಂದಣಿಯಾದ ಹವಾನಿಯಂತ್ರಿತ ಸ್ವಿಫ್ಟ್ ಡಿಜೈರ್(ಹಳದಿಬೋರ್ಡ) ಹೊಂದಿರುವ ವಾಹನವನ್ನು ಹೊರಗುತ್ತಿಗೆ ಮೂಲಕ ಪಡೆಯುವ ಅಗತ್ಯವಿದ್ದು, ವಾಹನ ಮಾಲಿಕರಿಂದ ಟೆಂಡರ್ ಕರೆಯಲಾಗಿದೆ. ಇಚ್ಛೆಯುಳ್ಳವರು ಉಪನಿರ್ದೇಶಕರು(ಆಡಳಿತ) ಪಶುಪಾಲನಾ ಇಲಾಖೆ ಗದಗ ಇವರ ಕಚೇರಿ ವೇಳೆಯಲ್ಲಿ ಟೆಂಡರ್ ಅರ್ಜಿ **ರೂ.1000**(ಜಿಎಸ್‌ಟಿ ಪ್ರತ್ಯೇಕ)ನ್ನು ಸಂದಾಯ ಮಾಡಿ ಅರ್ಜಿಯನ್ನು ಪಡೆಯಬಹುದಾಗಿದೆ, ಟೆಂಡರ್ ಅರ್ಜಿಯನ್ನು ಭರ್ತಿಮಾಡಿ **ದಿನಾಂಕ: 04-06-2026 ರಂದು ಸಂಜೆ 4-00 ಗಂಟೆಯೊಳಗೆ** ಟೆಂಡರ್ ಅರ್ಜಿಗಳನ್ನು ಸಲ್ಲಿಸುವುದು. ದಿನಾಂಕ: **05-06-2026** ರಂದು ಸಂಜೆ **4-30 ಗಂಟೆಗೆ** ಟೆಂಡರ್ ತೆರೆದು ಅಂತಿಮಗೊಳಿಸಲಾಗುವುದು. ಹೆಚ್ಚಿನ ಮಾಹಿತಿಗಾಗಿ ಈ ಕಚೇರಿಗೆ ಸಂಪರ್ಕಿಸಬಹುದಾಗಿದೆ.

ಸಹಿ/-
ಉಪ ನಿರ್ದೇಶಕರು(ಆಡಳಿತ)
ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ
ಗದಗ

ವಾ.ಸಾ.ಸಂ.ಇ/ಗದಗ/90/ದೇಶಪಾಂಡೆಪಬ್ಲಿಸಿಟಿ/2026-27

ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ,

ಜ್ಞಾನಸಾಗರ ಆವರಣ, ವಿನಾಯಕನಗರ, ಕಂಟೋನ್ಮೆಂಟ್,ಬಳ್ಳಾರಿ-583105

ಕುಲಸಚಿವರು(ಮೌಲ್ಯಮಾಪನ) ದೂಸಂ:08392241011

ಸಂಖ್ಯೆ:ವಿಶ್ರೀಕೃವಿಬ/ಪರೀಕ್ಷಾ/2026-27/330 ದಿನಾಂಕ: 22.05.2026

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಇ-ಪ್ರೋಕ್ಯೂರ್‌ಮೆಂಟ್ ಮುಖಾಂತರ ಮಾತ್ರ)

ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದ ಪರೀಕ್ಷಾ ವಿಭಾಗಕ್ಕೆ ಅಗತ್ಯವಿರುವ ಉತ್ತರ ಪತ್ರಿಕೆಗಳನ್ನು ಈ ಕೆಳಕಂಡಂತೆ ಮುದ್ರಿಸಿ ಸರಬರಾಜು ಮಾಡುವ ನಿಮಿತ್ತ ಅರ್ಹ ಟೆಂಡರ್‌ದಾರರಿಂದ ಅಲ್ಪಾವಧಿ ಟೆಂಡರ್ ಪ್ರಕಟಣೆಯನ್ನು ದಿನಾಂಕ: 22.05.2026 ರಂದು ಆಹ್ವಾನಿಸಲಾಗಿದೆ.

ಕೆಲಸದ ಹೆಸರು: ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದ ಪರೀಕ್ಷಾ ವಿಭಾಗಕ್ಕೆ ಉತ್ತರ ಪತ್ರಿಕೆಗಳನ್ನು ಮುದ್ರಿಸಿ ಸರಬರಾಜು ಮಾಡುವ ಕುರಿತು. **ಕೆಲಸದ ಅಂದಾಜು ಮೊತ್ತ ರೂ.ಗಳಲ್ಲಿ:** 1,58,62,500/-. **EMD (ರೂ.ಗಳಲ್ಲಿ):** 2,35,937/- **ಟೆಂಡರ್ ಪ್ರಕ್ರಿಯೆ ಶುಲ್ಕ (ರೂ.ಗಳಲ್ಲಿ):** ಇ-ಪ್ರೊಕ್ಯೂರ್‌ಮೆಂಟ್ ನಿಯಮಾನುಸಾರ. **ಕೆಲಸ ಪೂರ್ಣಗೊಳಿಸಲು ನಿಗಧಿಪಡಿಸಿದ ಅವಧಿ:** 07 ದಿನಗಳು

ಟೆಂಡರ್‌ಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ಮಾತ್ರ ಸ್ವೀಕರಿಸಲಾಗುವುದು. ಇ-ಪ್ರೊಕ್ಯೂರ್‌ಮೆಂಟ್ ಪ್ರಕಟಣೆಗೆ ಸಂಬಂಧಿಸಿದಂತೆ ಹೆಚ್ಚಿನ ಮಾಹಿತಿಯನ್ನು ದಿನಾಂಕ:29.05.2026ರ 04.00 ಗಂಟೆಯವರೆಗೆ ವೆಬ್‌ಸೈಟ್ **www.e-proc.karnataka.gov.in** ನಲ್ಲಿ ಹಾಗೂ ಇತರೆ ಮಾಹಿತಿಯನ್ನು ಈ ಕೆಳಕಂಡ ವಿಳಾಸದಿಂದ ಪಡೆಯಬಹುದು.

ಸಹಿ/-ಕುಲಸಚಿವರು(ಮೌಲ್ಯಮಾಪನ)
ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ-583105.

ವಾ.ಸಾ.ಸಂ.ಇ/ಬಳ್ಳಾರಿ/2026-27/ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/185

ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ

ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ,
ಪಂ.ರಾ.ಇಂ. ವಿಭಾಗ, ತುಮಕೂರು.

ಸಂಖ್ಯೆ : ಕಾ.ಇಂ./ಪಂ.ರಾ.ಇಂ.ವಿ./ತುಮ/ತಾಂ.ಶಾ./ಟೆಂಡರ್/2026-27/234
ದಿನಾಂಕ : 26-05-2026

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ : 05/2026-27

(ಕೆ.ಪಿ.ಪಿ. ಪೋರ್ಟಲ್ ಮುಖಾಂತರ ದ್ವಿ-ಲಕೋಟೆ ಪದ್ಧತಿ)

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಐಟಂವಾರು ಟೆಂಡರ್‌ಗಳನ್ನು KW-3 & KW-4 (ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್) ಹಾಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮಗಳು KTPP Act 1999 and KTPP Rule 2000 ಹಾಗೂ ಇತ್ತೀಚಿನ ತಿದ್ದುಪಡಿ ನಿಬಂಧನೆಗೊಳಪಟ್ಟಂತೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಸಪೋರ್ಟ್‌ಗಾಗಿ **1/1, ಸನ್‌ಬೀಮ್ ಬಿಲ್ಡಿಂಗ್, ಈಗಲ್ ಸ್ಟ್ರೀಟ್, ಲಾಂಗ್‌ಫೋರ್ಡ್ ರೋಡ್, ಲಾಂಗ್‌ಫೋರ್ಡ್ ಟೌನ್, ಬೆಂಗಳೂರು - 560 025, ದೂರವಾಣಿ : 080-2248 5867, 080-2248 5927** ರಲ್ಲಿ ಹಾಗೂ ಪಂಚಾಯತ್‌ರಾಜ್ ಇಂಜಿನಿಯರಿಂಗ್ / ಪಿ.ಡಬ್ಲ್ಯೂ.ಡಿ. ಇಲಾಖೆಯಲ್ಲಿ ಅರ್ಹ (ಸಿವಿಲ್) ನೊಂದಾಯಿಸಿದ ಗುತ್ತಿಗೆದಾರರುಗಳಿಂದ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ತುಮಕೂರು ವಿಭಾಗ ವ್ಯಾಪ್ತಿಯ 2025-26 ನೇ ಸಾಲಿನ ಮುಖ್ಯಮಂತ್ರಿಯವರ ಮೂಲಸೌಕರ್ಯ ಅಭಿವೃದ್ಧಿ ಯೋಜನೆಗಳಡಿ ಕಾಮಗಾರಿಗಳಿಗೆ ಟೆಂಡರ್‌ನ್ನು ಕೆ.ಪಿ.ಪಿ. ಪೋರ್ಟಲ್ ಮುಖಾಂತರ ಏಕ ಮತ್ತು ದ್ವಿ-ಲಕೋಟೆ ಮೂಲಕ ಮಾತ್ರ ಆಹ್ವಾನಿಸಲಾಗಿದೆ.

Indent No : 1) RDPR/2025-26/RD/WORK_INDENT22840/Call-2, 2) RDPR/2025-26/RD/WORK_INDENT22063/Call-2, ಕಾಮಗಾರಿಗಳ ಟೆಂಡರ್‌ನನ್ನು ಕೆ.ಪಿ.ಪಿ. ಪೋರ್ಟಲ್ ಮುಖಾಂತರ ದ್ವಿ-ಲಕೋಟೆ ಮೂಲಕ ಮಾತ್ರ ಆಹ್ವಾನಿಸಲಾಗಿದೆ.

ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವ ಅರ್ಹ ಗುತ್ತಿಗೆದಾರರು ಕಾಮಗಾರಿಗಳ ಸಂಪೂರ್ಣ ವಿವರಗಳನ್ನು **ವೆಬ್‌ಸೈಟ್ : http://www.kppp.karnataka.gov.in** ಮುಖಾಂತರ ದಿನಾಂಕ : **26-05-2026** ರಿಂದ **02-06-2026** ರ ಸಂಜೆ **5.00 ಗಂಟೆವರೆಗೆ ಫಾರಂ ಫೀ ಕೆ.ಪಿ.ಪಿ. ಪೋರ್ಟಲ್ ಮುಖಾಂತರ (ಹಿಂತಿರುಗಿಸಲಾಗುವುದಿಲ್ಲ) ಸಲ್ಲಿಸಿ ನಿಗದಿತ ಇ.ಎಂ.ಡಿ. ಪಾವತಿಸಿ ಟೆಂಡರ್‌ಗಳನ್ನು ಪಡೆಯಬಹುದಾಗಿದೆ ಹಾಗೂ ಸಲ್ಲಿಸಬಹುದಾಗಿದೆ**. ಹಾಗೂ ಈ ಕೆಳ ಸಹಿದಾರರಿಂದ ಕಚೇರಿ ಕೆಲಸದ ಅವಧಿಯಲ್ಲಿ ಪಡೆಯಬಹುದಾಗಿರುತ್ತದೆ. **ದೂರವಾಣಿ ಸಂಖ್ಯೆ : 0816-2272620** ಟೆಂಡರ್‌ಗೆ ಯಾವುದೇ ಮಾರ್ಪಾಟು, ತಿದ್ದುಪಡಿಗಳ ಮಾಹಿತಿಗಳನ್ನು ಕೆ.ಪಿ.ಪಿ. ಪೋರ್ಟಲ್ ಮುಖಾಂತರವೇ ಮಾತ್ರ ಪ್ರಕಟಿಸಲಾಗುವುದು.

ಸಹಿ/- ಕಾರ್ಯಪಾಲಕ ಇಂಜಿನಿಯರ್,
ಪಂ.ರಾ.ಇಂ. ವಿಭಾಗ, ತುಮಕೂರು.

ಡಿಐಪಿಆರ್/ತುಮಕೂರು/19/ಮಣಿಪಾಲ್/2026-27

ಕರ್ನಾಟಕ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)

ಕಾರ್ಯನಿರ್ವಾಹಕ ಅಭಿಯಂತರರು ಕನೀನಿನಿ ಘಟಕಾನಿ ವಿಭಾಗ ನಂ.5 ಕೌಜಲಗಿ

ಕನೀನಿನಿ/ಘಟಕಾನಿ/ವಿ-5/ಡಿಬಿ/ಫೀಡರ್ ಚಾನಲ್/ಮರು ಟೆಂಡರ್/2026-27/260 ದಿನಾಂಕ:26-05-2026

ಅಲ್ಪಾವಧಿ ಶೇಕಡಾವಾರು ಮರುಟೆಂಡರ್ (Call-2) ಪ್ರಕಟಣೆ (ಕೆ.ಪಿ.ಪಿ-ಪ್ರೊಕ್ಯೂರಮೆಂಟ್ ಪೋರ್ಟಲ್‌ನಲ್ಲಿ)

ಕಾರ್ಯನಿರ್ವಾಹಕ ಅಭಿಯಂತರರು ಕನೀನಿನಿ ಘಟಕಾನಿ ವಿಭಾಗ ನಂ.5 ಕೌಜಲಗಿ ವಿಭಾಗ ಅಡಿಯಲ್ಲಿ ಅಲ್ಪಾವಧಿ ಶೇಕಡಾವಾರು ಟೆಂಡರ್‌ನ್ನು ಕೆ.ಪಿ.ಪಿ. ಪೋರ್ಟಲ್‌ನಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ (ದ್ವಿಲಕೋಟೆಯಲ್ಲಿ) ಸ್ಟ್ಯಾಂಡರ್ಡ ಟೆಂಡರ ಡಾಕ್ಯೊಮೆಂಟ್ ಲೆಕ್ಕ ಶೀರ್ಷಿಕೆ 4701 ರ ಅಡಿಯಲ್ಲಿ ಒಂದು (1) ಕಾಮಗಾರಿಗೆ ಮರು ಟೆಂಡರ್ ಕರೆಯಲಾಗಿದ್ದು ಗುತ್ತಿಗೆಗೆ ಇಟ್ಟ ಅಂದಾಜು ಮೊತ್ತವು 336.87 ಲಕ್ಷಗಳು ಇದ್ದು ಮುಂಗಡ ಠೇವಣಿ ಮೊತ್ತವು 5,05,000.00 ರೂಗಳು ಇರುತ್ತದೆ. ಟೆಂಡರನ್ನು ಸ್ವೀಕರಿಸುವ ದಿನಾಂಕ:27-05-2026 ರಿಂದ 04-06-2026 ರ ಸಂಜೆ 05.00 ಘಂಟೆಯವರೆಗೆ ಮತ್ತು ಟೆಂಡರನ್ನು ತೆರೆಯುವ ದಿನಾಂಕ:06-06-2026 ರ ಮುಂಜಾನೆ 11.00 ಘಂಟೆ ನಂತರ. ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಈ ಕೆಳಗೆ ಸಹಿ ಮಾಡಿದವರ ಕಚೇರಿಯಲ್ಲಿ ಹಾಗೂ ಅಂತರ್‌ಜಾಲದ ಮೂಲಕ ವೆಬ್‌ಸೈಟ್ ವಿಳಾಸ:-www.kppp.karnataka.gov.in ರಲ್ಲಿ ದಿನಾಂಕ:-27-05-2026 ರ ನಂತರ ಪಡೆಯಬಹುದು.

ಸಹಿ/-ಕಾರ್ಯನಿರ್ವಾಹಕ ಅಭಿಯಂತರರು
ಕನೀನಿನಿ ಘಟಕಾನಿ ವಿಭಾಗ ನಂ.5 ಕೌಜಲಗಿ.

DIPR/BGM/RO-NO-322/KSMCA/2026-27

ಕರ್ನಾಟಕ ಸರ್ಕಾರ

ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಲೋ.ಇ ವಿಭಾಗ, ಶಿವಮೊಗ್ಗ

ಟೆಂಡರ್ ಪ್ರಕಟಣೆ ಸಂಖ್ಯೆ ಕಾಪಾಅ/ಶಿವಿಶಿ/ಎಇ-1&2/ಜೆಇ-1&2/ಐಎಫ್‌ಟಿ-08/2026-27 ದಿನಾಂಕ: 26.05.2026

ಅಲ್ಪಾವಧಿ ಟೆಂಡರ್ ಪ್ರಕಟಣೆ (ದ್ವಿ-ಲಕೋಟೆ ಪದ್ಧತಿ)

ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ಅರ್ಹ ನೊಂದಾಯಿತ 2,3 & 4 ನೇ ದರ್ಜೆ ಮೇಲ್ಪಟ್ಟ ಗುತ್ತಿಗೆದಾರರಿಂದ ಇ ಪ್ರಕ್ಯೂರಮೆಂಟ್ ಪೋರ್ಟಲ್ ಆವೃತ್ತಿ-2.0 kppp.karnataka.gov.in ಮೂಲಕ ಈ ಕೆಳಕಂಡ ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸಲಾಗಿದೆ.

5054-80-190-0-01-132 ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ-ಬಂಡವಾಳ ವೆಚ್ಚ

ಟೆಂಡರ್ ದಾಖಲಾತಿಗಳನ್ನು ಡೌನ್‌ಲೋಡ್ ಮಾಡಲು ಮತ್ತು ಸಲ್ಲಿಸಲು ದಿನಾಂಕ:29-05-2026 ರಿಂದ 08-06-2026

ಪರಿಶಿಷ್ಟ ಜಾತಿ ಗುತ್ತಿಗೆದಾರರಿಗೆ ಮೀಸಲಿಡಲಾದ ಕಾಮಗಾರಿಗಳು

1. ಸಾಗರ ತಾಲ್ಲೂಕು 1 ಕಾಮಗಾರಿ (ಇ.ನಂ:36337)
2. ಸೊರಬ ತಾಲ್ಲೂಕು 2 ಕಾಮಗಾರಿ (ಇ.ನಂ:36318, 36333)

ಪರಿಶಿಷ್ಟ ಪಂಗಡ ಗುತ್ತಿಗೆದಾರರಿಗೆ ಮೀಸಲಿಡಲಾದ ಕಾಮಗಾರಿಗಳು

1. ಸಾಗರ ತಾಲ್ಲೂಕು 1 ಕಾಮಗಾರಿ (ಇ.ನಂ:36343)

ಪ್ರವರ್ಗ-1 ಗುತ್ತಿಗೆದಾರರಿಗೆ ಮೀಸಲಿಡಲಾದ ಕಾಮಗಾರಿಗಳು

1. ಹೊಸನಗರ ತಾಲ್ಲೂಕು 1 ಕಾಮಗಾರಿ (ಇ.ನಂ:36314)

ಪ್ರವರ್ಗ-2(ಎ) ಗುತ್ತಿಗೆದಾರರಿಗೆ ಮೀಸಲಿಡಲಾದ ಕಾಮಗಾರಿಗಳು

1. ಸಾಗರ ತಾಲ್ಲೂಕು 1 ಕಾಮಗಾರಿ (ಇ.ನಂ:36339)
2. ಶಿಕಾರಿಪುರ ತಾಲ್ಲೂಕು 1 ಕಾಮಗಾರಿ (ಇ.ನಂ:36348)

ಎಲ್ಲಾ ಗುತ್ತಿಗೆದಾರರಿಗೆ ಭಾಗವಹಿಸಬಹುದಾದ ಕಾಮಗಾರಿಗಳು

1. ಹೊಸನಗರ ತಾಲ್ಲೂಕು 2 ಕಾಮಗಾರಿ (ಇ.ನಂ:36312, 36313)
2. ಸಾಗರ ತಾಲ್ಲೂಕು 3 ಕಾಮಗಾರಿ (ಇ.ನಂ:36344, 36336, 36316)
3. ಸೊರಬ ತಾಲ್ಲೂಕು 3 ಕಾಮಗಾರಿ (ಇ.ನಂ:36331, 36332, 36319)

ಕಾಮಗಾರಿ ಪೂರ್ಣಗೊಳಿಸಲು ಕಾಲಾವಧಿ(ಮಳೆಗಾಲ ಸೇರಿ) : 09 ತಿಂಗಳುಗಳು ಪ್ರಕಟಿತ ಟೆಂಡರ್‌ನಲ್ಲಿ ಯಾವುದೇ ತಿದ್ದುಪಡಿ ಇದ್ದಲ್ಲಿ ಇ-ಪ್ರಕ್ಯೂರಮೆಂಟ್ ಪೋರ್ಟಲ್ ಆವೃತ್ತಿ-2.0 kppp.karnataka.gov.in ನಲ್ಲಿಯೇ ಪ್ರಕಟಿಸಲಾಗುವುದು, ಹೆಚ್ಚಿನ ವಿವರಗಳಿಗೆ ಸದರಿ ಕಛೇರಿಯಿಂದ (ದೂರವಾಣಿ 08182- 274942) ಹಾಗೂ ಸಹಾಯಕ ದೂರವಾಣಿ ಸಂಖ್ಯೆ: 080-25501216/080-25501227 ರಿಂದ ಮಾಹಿತಿ ಪಡೆಯಬಹುದು.

ಸಹಿ/- ಕಾ.ಇಂ, ಲೋಕೋಪಯೋಗಿ ಇಲಾಖೆ, ವಿಭಾಗ, ಶಿವಮೊಗ್ಗ

ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಶಿ/26-27/122/05/293

ಕಾವೇರಿ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ಯಮ)

ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ, ಕಾನೀನಿನಿ., ಯಗಚಿ ಯೋಜನಾ ವಿಭಾಗ, ಬೇಲೂರು, ಹಾಸನ ಜಿಲ್ಲೆ

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 1/2026-27 ದಿನಾಂಕ: 27-05-2026 (ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ಮಾತ್ರ)

ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ, ಬೆಂಗಳೂರು ಇವರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಯಗಚಿ ಯೋಜನಾ ವಿಭಾಗ, ಬೇಲೂರು ಇವರು ಕರ್ನಾಟಕ ಲೋಕೋಪಯೋಗಿ/ ಕೇಂದ್ರ ಲೋಕೋಪಯೋಗಿ ಇಲಾಖೆಗಳಲ್ಲಿ ದರ್ಜೆ-II ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಕರ್ನಾಟಕ ಪಾರದರ್ಶಕ ಕಾಯಿದೆ KW-4ರ ಅನ್ವಯ ಐಟಂವಾರು ಅಲ್ಪಾವಧಿ ಟೆಂಡರ್‌ಗಳನ್ನು E-Procurement PlatForm (https://kppp.karnataka.gov.in) ನಲ್ಲಿ ಟೆಂಡರ್‌ಗಳನ್ನು ಕಾರ್ಯಪಾಲಕ ಇಂಜಿನಿಯರ್, ಯಗಚಿ ಯೋಜನಾ ವಿಭಾಗ, ಬೇಲೂರು ಇವರು ಆಹ್ವಾನಿಸಿದ್ದು, ಟೆಂಡರ್ ಪ್ರಕ್ರಿಯೆ ದಿನಾಂಕಗಳು ಈ ಕೆಳಕಂಡಂತಿವೆ. (1)ಟೆಂಡರ್ ಪ್ರೊಸೆಸಿಂಗ್ ಫೀ: https://kppp.karnataka.gov.in ನಲ್ಲಿ ನೋಡುವುದು (2) E-Procurement ನಲ್ಲಿ ದಾಖಲಾತಿಗಳನ್ನು ಪಡೆಯುವ ಹಾಗೂ ಅಪ್‌ಲೋಡ್ ಮಾಡುವ ಅವಧಿ: ದಿನಾಂಕ: 27-05-2026 ರಿಂದ ದಿನಾಂಕ: 03-06-2026 ವರೆಗೆ ಸಂಜೆ 4.00 ಘಂಟೆವರೆಗೆ (3) ಪ್ರೀ-ಬಿಡ್ ಮೀಟಿಂಗ್ ದಿನಾಂಕ: 30-05-2026 ಮಧ್ಯಾಹ್ನ 03.00 ಘಂಟೆಗೆ (4) ಟೆಂಡರ್ ತೆರೆಯುವ ದಿನಾಂಕ: 05-06-2026 ಬೆಳಿಗ್ಗೆ 11.00 ಘಂಟೆಗೆ (5) ಕಾಮಗಾರಿಗಳ ಸಂಖ್ಯೆ: 02 (ಎರಡು) (6) ಕೆಲಸದ ಕಾಲಮಿತಿ : 11 ತಿಂಗಳು (ಮಳೆಗಾಲ ಸೇರಿ) (7) ಕಾಮಗಾರಿಯ ಟೆಂಡರಿಗಿಟ್ಟ ಗರಿಷ್ಠ ಮೊತ್ತ: ರೂ.421.27 ಲಕ್ಷಗಳು (ಜಿ.ಎಸ್.ಟಿ ಹೊರತುಪಡಿಸಿ) (8) ಕಾಮಗಾರಿಯ ಟೆಂಡರಿಗಿಟ್ಟ ಕನಿಷ್ಠ ಮೊತ್ತ: ರೂ. 421.23 ಲಕ್ಷಗಳು (ಜಿ.ಎಸ್.ಟಿ ಹೊರತುಪಡಿಸಿ) (9) ಇ.ಎಂ.ಡಿ. ಮೊತ್ತ ರೂ. 6.32 ಲಕ್ಷಗಳು (10)ಲೋಕೋಪಯೋಗಿ/ಕೇಂದ್ರ ಲೋಕೋಪಯೋಗಿ ಇಲಾಖೆ ದರ್ಜೆ-II ಮತ್ತು ಮೇಲ್ಪಟ್ಟ ವರ್ಗ. ಸೂಚನೆ: 1. ಯಾವುದೇ ಸಂದರ್ಭದಲ್ಲಾದರೂ ಯಾವುದೇ ಕಾರಣ ನೀಡದೆ ಟೆಂಡರ್‌ಗಳನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಈ ಕೆಳಗೆ ಸಹಿ ಮಾಡಿರುವವರು ಕಾಯ್ದಿರಿಸಿಕೊಂಡಿರುತ್ತಾರೆ. 2. ಟೆಂಡರ್ ನಿಬಂಧನೆಗಳು ಹಾಗೂ ಸಂಬಂಧಪಟ್ಟ ವಿವರಗಳನ್ನು KPP portal https://kppp.karnataka.gov.in ವೆಬ್‌ಸೈಟ್‌ನಲ್ಲಿ ಪಡೆಯಬಹುದಾಗಿರುತ್ತದೆ. ಟೆಂಡರಿಗಿಟ್ಟ ಮೊತ್ತವು ಬದಲಾವಣೆಗೆ ಒಳಪಟ್ಟಿರುತ್ತದೆ.

ಸಹಿ/-ಕಾರ್ಯಪಾಲಕ ಇಂಜಿನಿಯರ್, ಕಾನೀನಿನಿ, ಯಗಚಿ ಯೋಜನಾ ವಿಭಾಗ, ಬೇಲೂರು

ವಾಸಾಸಂಇ/ಹಿಸನಿ/ಹಾಸನ/173/ಕೆಎಸ್‌ಎಂಸಿಎ/2026-27

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

(ಸಿಐಎನ್: ಯು40109ಕೆಎ1999ಎಸ್‌ಜಿಸಿ025521)

ಸಂ.: 947/ಕಾನಿಇಂ(ವಿ)/ಕಾ/ಸ.ಇಂ(ಕ)/2026-27/ಕ-ಎ13/908 ದಿನಾಂಕ: 25.05.2026

ಸೀಮಿತ ಟೆಂಡರ್ ಅಧಿಸೂಚನೆ

ಕವಿಪ್ರನಿನಿಯು ಹುಬ್ಬಳ್ಳಿ ಕಾರ್ಯಾಚರಣೆಗಳ ವಿಭಾಗದಲ್ಲಿ ಕೆಳಕಂಡ ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸಿದೆ. 1) 110V DC ಬ್ಯಾಟರಿ ಚಾರ್ಜರ್ ಸರಬರಾಜು-110kV ಸಬ್‌ಸ್ಟೇಷನ್, ಅಣ್ಣಿಗೇರಿ. 2) ವಿವಿಧ 220KV ಹಾಗೂ 110KV ಸಬ್‌ಸ್ಟೇಷನ್‌ಗಳಿಗೆ 18 ಲಾಗ್ ಬುಕ್ಕುಗಳ ಸರಬರಾಜು ಹಾಗೂ ವಿಭಾಗೀಯ ಸ್ಟೋರ್ಸ್‌ಗೆ ರಿಜಿಸ್ಟರ್‌ಗಳು-ಹುಬ್ಬಳ್ಳಿ. 3) ಕಾರ್ಯಾಚರಣೆ ವಿಭಾಗ ಮತ್ತು ಇತರೆ ಕಚೇರಿಗಳಿಗೆ 300 A4 JK ಪೇಪರ್ ರೀಮುಗಳ ಸರಬರಾಜು-ಹುಬ್ಬಳ್ಳಿ. 4) TNC ಮತ್ತು LR ಸ್ವಿಚ್‌ಗಳ ಸರಬರಾಜು-220kV SRS, ಹುಬ್ಬಳ್ಳಿ. 5) ಹಾರ್ಡ್‌ವೇರ್ ಸಾಮಗ್ರಿಗಳ ಸರಬರಾಜು-220kV R/s ಬಿಡ್ನಾಳ. 6) 96kV ಮೆಟಲ್ ಆಕ್ಸೈಡ್ ಸರ್ಜ್ ಅರೆಸ್ಟರ್‌ಗಳ ಸರಬರಾಜು (ಸರ್ಜ್ ಕೌಂಟರ್ ಜೊತೆ)-110kV ಸಬ್‌ಸ್ಟೇಷನ್ ಗೋಪನಕೊಪ್ಪ ಮತ್ತು ಕಾಡನಕೊಪ್ಪಳ. 7) ದೋಷಪೂರಿತ ಘಟಕಗಳ ಬದಲಾವಣೆಗಾಗಿ ಸರ್ಜ್ ಮಾನಿಟರ್‌ಗಳ ಸರಬರಾಜು-110kV ಸಬ್‌ಸ್ಟೇಷನ್ ಕಾಡನಕೊಪ್ಪ. 8) 11kV 800 Amps ಐಸೋಲೇಟರ್ (ಟ್ಯೂಬ್ಯುಲರ್ ಟೈಪ್) ಮೇಲ್ ಮತ್ತು ಫೀಮೇಲ್ ಕಾಂಟ್ಯಾಕ್ಟ್‌ಗಳ ಸರಬರಾಜು-110KV ಸಬ್‌ಸ್ಟೇಷನ್ ರಾಮನಕೊಪ್ಪ, ಹುಬ್ಬಳ್ಳಿ. 9) ಹಾರ್ಡ್‌ವೇರ್ ಸಾಮಗ್ರಿಗಳ ಸರಬರಾಜು-220KV SRS, ಹುಬ್ಬಳ್ಳಿ. 10) 110V DC ಬ್ಯಾಟರಿ ಚಾರ್ಜರ್ ಸರಬರಾಜು-110kV ಸಬ್‌ಸ್ಟೇಷನ್ ರಾಮನಕೊಪ್ಪ. 11) ಮಾರ್ಷಲಿಂಗ್ ಬಾಕ್ಸ್ ಗ್ಯಾಸ್ಕೆಟ್‌ಗಳು, ಬಾಗಿಲಿನ ಗ್ಯಾಸ್ಕೆಟ್‌ಗಳು ಹಾಗೂ ಗ್ಲಾಸ್ ಕವರ್‌ಗಳ ರಿಪೇರಿ/ಪುನರುತ್ಥಾನ-110kV ಸಬ್‌ಸ್ಟೇಷನ್ ಗೋಪನಕೊಪ್ಪ. 12) MEGAWIN ಬ್ರೇಕರ್‌ಗಳ ಮಾರ್ಷಲಿಂಗ್ ಬಾಕ್ಸ್ ಗ್ಯಾಸ್ಕೆಟ್‌ಗಳು, ಬಾಗಿಲಿನ ಗ್ಯಾಸ್ಕೆಟ್‌ಗಳು ಮತ್ತು ಗ್ಲಾಸ್ ಕವರ್‌ಗಳ ರಿಪೇರಿ/ಪುನರುತ್ಥಾನ-110kV ಸಬ್‌ಸ್ಟೇಷನ್ ರಾಮನಕೊಪ್ಪ. 13) AC ಕಾಂಟಾಕ್ಟರ್‌ಗಳು, ಥರ್ಮಲ್ ಓವರ್‌ಲೋಡ್ ರಿಲೇ, AC/DC MCCBಗಳ ಸರಬರಾಜು-220kV SRS, ಹುಬ್ಬಳ್ಳಿ. 14) 110V DC ಬ್ಯಾಟರಿ ಚಾರ್ಜರ್ ಸರಬರಾಜು-110kV ಸಬ್‌ಸ್ಟೇಷನ್ ಆನಂದನಗರ. 15) ಹಾರ್ಡ್‌ವೇರ್ ಸಾಮಗ್ರಿಗಳ ಸರಬರಾಜು-220KV SRS, ಹುಬ್ಬಳ್ಳಿ. 16) ವಿವಿಧ ಸಬ್‌ಸ್ಟೇಷನ್‌ಗಳಿಗೆ ಸಿಂಗಲ್ ಲೈನ್ ಮತ್ತು ಲೇಔಟ್ ಡಯಾಗ್ರಾಂ ಬೋರ್ಡ್‌ಗಳ ಸರಬರಾಜು (AutoCAD ಫಾರ್ಮ್ಯಾಟ್ ಅಪ್‌ಡೇಟ್ ಸಹಿತ)-ನೋಡಲ್ ಸೆಂಟರ್, ಹುಬ್ಬಳ್ಳಿ. 17) 50ಕೆಜಿ ಕೆಪ್ಯಾಸಿಟಿಯ SF6 Gas Cylinder ನ ಸರಬರಾಜು-220KV SRS, ಹುಬ್ಬಳ್ಳಿ.

ವಿಚಾರಣೆಯ ವಿವರಗಳನ್ನು **ದಿನಾಂಕ: 27.05.2026 ರಂದು 10:00 ಗಂಟೆಯ** ತದನಂತರ ಪಡೆಯಬುದು. ಉದ್ಧರಣ (ಕೋಟೆಷನ್) ಸ್ವೀಕರಿಸುವ ಕೊನೆಯ **ದಿನಾಂಕ: 10.06.2026ರ ಸಂಜೆ 04:00 ಗಂಟೆ**. ಇನ್ನಿತರೆ ವಿವರಗಳನ್ನು ಕೆಳಸಹಿದಾರರ ಕಛೇರಿಯಿಂದ ಪಡೆಯಬಹುದು.

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು(ವಿ)
ಕಾರ್ಯಾಚರಣೆ ವಿಭಾಗ, ಕವಿಪ್ರನಿನಿ, ವಿದ್ಯುತ್ ನಗರ, ಹುಬ್ಬಳ್ಳಿ

ಕರ್ನಾಟಕ ಸರ್ಕಾರ

ಜಿಲ್ಲಾ ಪಂಚಾಯತ್ ಧಾರವಾಡ
ಕಾರ್ಯನಿರ್ವಾಹಕ ಇಂಜನೀಯರರು,
ಪಂಚಾಯತ್ ರಾಜ್ ಇಂಜನೀಯರಿಂಗ್ ವಿಭಾಗ, ಧಾರವಾಡ

ಕ್ರ.ಸಂ.ಪಂ.ರಾ.ಇಂ.ವಿ.ಧಾ/ಸ.ಇಂ.-2/2026-2027/556 ದಿನಾಂಕ: 26-05-2026

ಅಲ್ಪಾವಧಿ ಟೆಂಡರ್ ಪ್ರಕಟಣೆ-02/2026-27
(ಇ-ಪ್ರೊಕ್ಯೂರಮೆಂಟ್ ಮುಖಾಂತರ)

ಕರ್ನಾಟಕದ ಗೌರವಾನ್ವಿತ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನೀಯರ್, ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ, ಧಾರವಾಡ ಇವರಿಂದ ಸರ್ಕಾರಿ ಆದೇಶ ಸಂಖ್ಯೆ: **No. FD 876 Exp-12/2017, Bangalore, dated: 15-09-2017** ರನ್ವಯ ವಿವಿಧ ಯೋಜನೆಯಡಿ ಕಾಮಗಾರಿಗಳ ಐಟಂವಾರು ಟೆಂಡರ್‌ನ್ನು ಇ-ಪ್ರೋಕ್ಯೂರಮೆಂಟ್ ಮುಖಾಂತರ ನಿಗದಿತ ನಮೂನೆಯಲ್ಲಿ ಲೋಕೋಪಯೋಗಿ/ಪಂ. ರಾ. ಇಂ. ಇಲಾಖೆಯಲ್ಲಿ ನೋಂದಾಯಿಸಲ್ಪಟ್ಟಿರುವ ಅರ್ಹ ಗುತ್ತಿಗೆದಾರರಿಂದ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ಸ್ **KW-1, KW-2** ರಲ್ಲಿಯ ನಿಬಂಧನೆಗೊಳಪಟ್ಟು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದೇಶ 2000 ರನ್ವಯ ಇ-ಪ್ರೋಕ್ಯುರಮೆಂಟ್‌ನ **https://kppp.karnataka.gov.in/** ನಿಂದ ಟೆಂಡರ್ ದಾಖಲೆಗಳನ್ನು ಡೌನ್‌ಲೋಡ್ ಮಾಡಿಕೊಂಡು ಟೆಂಡರ್‌ಗಳನ್ನು ಸಲ್ಲಿಸಬಹುದು.

Indent Numbers :
General : 24384/Call-2, 24803/Call-2, 24335/Call-2, 24360/Call-2. 26963, 26798.
SC Category : 24424/call-2, 24807/Call-2, 26967.
ST Category : 19946/Call-2.
CAT-1 : 26797.

ಕ್ಯಾಲೆಂಡರ್ ಆಫ್ ಇವೆಂಟ್ಸ್:

1) ಟೆಂಡರ್ ದಾಖಲೆಗಳನ್ನು **ದಿನಾಂಕ: 29-05-2026** ರಿಂದ ಡೌನಲೋಡ್ ಮಾಡಿಕೊಂಡು **ದಿನಾಂಕ: 06-06-2026 ರ ಸಂಜೆ 4.00 ಗಂಟೆಯವರೆಗೆ** ಟೆಂಡರ್‌ಗಳನ್ನು ಸಲ್ಲಿಸಬಹುದು.

2) ಟೆಂಡರ್ ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 08-06-2026 ರ ಬೆಳಿಗ್ಗೆ 11.00 ಗಂಟೆಗೆ.** ಈ ಕೆಳಗೆ ಸಹಿ ಮಾಡಿದವರ ಕಚೇರಿಯಲ್ಲಿ.

ಕಾಮಗಾರಿಯ ಹೆಸರು/ಗುತ್ತಿಗೆದಾರರ ಅರ್ಹತೆ/ಟೆಂಡರ್ ನಿಯಮ/ಟೆಂಡರ್ ಷರತ್ತುಗಳು/ಟೆಂಡರ್ ಪ್ರೋಸೆಸ್ಸಿಂಗ್ ಶುಲ್ಕ/EMD ಮೊತ್ತ ಇತ್ಯಾದಿ ವಿವರಗಳಿಗೆ **https://kppp.karnataka.gov.in/** ಮೂಲಕ ಮಾಹಿತಿ ಪಡೆಯಬಹುದು ಅಥವಾ ಈ ಕೆಳಗೆ ಸಹಿ ಮಾಡಿದವರ ಕಚೇರಿಯಲ್ಲಿ ಸಂಬಂಧಿಸಿದ ವಿಷಯ ನಿರ್ವಾಹಕರನ್ನು ಸಂಪರ್ಕಿಸಬಹುದು.

ಟೆಂಡರ್‌ಗಳನ್ನು ಸ್ವೀಕರಿಸುವ ಅಧಿಕಾರಿಯು ಯಾವುದೇ ಕಾರಣ ನೀಡದೇ, ಯಾವುದೇ ಟೆಂಡರ್‌ನ್ನು ಅಥವಾ ಎಲ್ಲಾ ಟೆಂಡರ್‌ಗಳನ್ನು ತಿರಸ್ಕರಿಸುವ ಅಧಿಕಾರವನ್ನು ಹೊಂದಿರುತ್ತಾರೆ.

ಸಹಿ/-
(ಬಿ. ಎನ್. ಗೌಡರ)
ಕಾರ್ಯನಿರ್ವಾಹಕ ಇಂಜನೀಯರರು,
ಪಂ.ರಾ.ಇಂ.ವಿಭಾಗ, ಧಾರವಾಡ.

ವಾ.ಸಾ.ಇ./ಧಾರವಾಡ/236/ದೇಶಪಾಂಡೆಪಬ್ಲಿಸಿಟಿ/2026-27

ಹುಬ್ಬಳ್ಳಿ-ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರ, ನವನಗರ, ಹುಬ್ಬಳ್ಳಿ-580025

☎ 0836-2956097, 2224195, 2224274, 2222161

ಕ್ರ.ಸಂ:ಹು.ಧಾ.ನ.ಪ್ರಾ:ಯೋವಿ/ಭೂ.ಬ/2026-27/1285 ದಿನಾಂಕ : 27-05-2026

ಪ್ರಕಟಣೆ


ಹುಬ್ಬಳ್ಳಿ-ಧಾರವಾಡ ಸ್ಥಳೀಯ ಯೋಜನಾ ಪ್ರದೇಶದ ಮಹಾಯೋಜನೆ ಪರಿಷ್ಕೃತ-II ರ ವ್ಯಾಪ್ತಿಯಲ್ಲಿ ಬರುವ ಈ ಕೆಳಗೆ ವಿವರಿಸಿದ ಜಮೀನಿನ ಭೂ ಉಪಯೋಗ ಬದಲಾವಣೆ ಮಾಡಲು ಕೆಟಿಸಿಪಿ ಕಾಯ್ದೆ 1961 ಕಲಂ 14(ಎ) ರನ್ವಯ ಅರ್ಜಿದಾರರು ಮನವಿ ಸಲ್ಲಿಸಿರುತ್ತಾರೆ.

ಕ್ರ ಸಂ	ಜಮೀನಿನ ಮಾಲೀಕರ ಹೆಸರು	ಗ್ರಾಮ	ರಿ.ಸ.ನ/ ಬ್ಲಾಕ ನಂ.	ಕ್ಷೇತ್ರ	ಮ.ಯೋ. ಪ-II ರಂತೆ ಹಾಲಿ ಉಪಯೋಗ	ಭೂಉಪಯೋಗ ಬದಲಾವಣೆಗೆ ಕೋರಿರುವ ಉದ್ದೇಶ	ಸಾರ್ವಜನಿಕ ಹಿತಾಸಕ್ತಿ
1	ಶ್ರೀ ನಾಗನಗೌಡ ತಂದೆ ಕಲ್ಲನಗೌಡ ಕೆಂಚನಗೌಡ್ರ ಇವರ ತರ್ಫೆ ಶ್ರೀ ಮಾರುತಿ ತಂದೆ ಮಹಾದೇವಪ್ಪ ಶಿಂಧೆ ಹಾಗೂ ಇತರರು ಪಾಲುದಾರರು ಮೆಜೆಸ್ಟಿಕ್ ಬಿಲ್ಡರ್ಸ್ & ಡೆವಲಪರ್ಸ್	ಕುಸುಗಲ್ಲ	808/1 808/2 809/5	04ಎ-01ಗುಂ 03ಎ-00ಗುಂ 01ಎ-00ಗುಂ ಒಟ್ಟು 08ಎ-01ಗುಂ	ವ್ಯವಸಾಯ	ವಸತಿ	ವಸತಿ ಉದ್ದೇಶದ ನಿವೇಶನಗಳನ್ನು ತಯಾರಿಸಿ ಸಾರ್ವಜನಿಕರಿಗೆ ಮಾರಾಟ ಮಾಡುವುದು
2	ಶ್ರೀ ಆನಂದ ಪ ಶಿರಕೋಳ	ಕುಸುಗಲ್ಲ	755/1	02ಎ-00ಗುಂ	ವ್ಯವಸಾಯ	ವಾಣಿಜ್ಯ	ಸಾರ್ವಜನಿಕರಿಗೆ ಉದ್ಯೋಗ ಕಲ್ಪಿಸಿ ಕೊಡುವುದಾಗಿ ತಿಳಿಸಿರುತ್ತಾರೆ
3	ಶ್ರೀ ಈಶ್ವರಪ್ಪ ಗುರಪ್ಪ. ಗುಡಗುಡಿ ಉರ್ಫ ಶಿರಕೋಳ ಹಾಗೂ ಇತರರು	ಕುಸುಗಲ್ಲ	755/2	04ಎ-03ಗುಂ	ವ್ಯವಸಾಯ	ವಾಣಿಜ್ಯ	ಸಾರ್ವಜನಿಕರಿಗೆ ಉದ್ಯೋಗ ಕಲ್ಪಿಸಿ ಕೊಡುವುದಾಗಿ ತಿಳಿಸಿರುತ್ತಾರೆ
4	ಶ್ರೀ ಪರಮೇಶ್ವರಪ್ಪ ಗುರಪ್ಪ ಗುಡಗುಡಿ ಉರ್ಫ ಶಿರಕೋಳ	ಕುಸುಗಲ್ಲ	774/1	03ಎ-08ಗುಂ	ವ್ಯವಸಾಯ	ವಾಣಿಜ್ಯ	ಸಾರ್ವಜನಿಕರಿಗೆ ಉದ್ಯೋಗ ಕಲ್ಪಿಸಿ ಕೊಡುವುದಾಗಿ ತಿಳಿಸಿರುತ್ತಾರೆ
5	ಶ್ರೀ ಮಹಮ್ಮದ ಹುಸೇನ ತಂದೆ ಅಲ್ಲಾಬಕ್ಷ ಹಲವೂರ ಹಾಗೂ ಇತರರು	ಕುಸುಗಲ್ಲ	1030/3	02ಎ-05ಗುಂ	ವ್ಯವಸಾಯ	ವಸತಿ	ವಸತಿ ಉದ್ದೇಶದ ನಿವೇಶನಗಳನ್ನು ತಯಾರಿಸಿ ಸಾರ್ವಜನಿಕರಿಗೆ ಮಾರಾಟ ಮಾಡುವುದು
			1030/4	35ಗುಂ	ವ್ಯವಸಾಯ	ವಾಣಿಜ್ಯ	ಸಾರ್ವಜನಿಕರಿಗೆ ಉದ್ಯೋಗ ಕಲ್ಪಿಸಿ ಕೊಡುವುದಾಗಿ ತಿಳಿಸಿರುತ್ತಾರೆ

ಸದರಿ ಜಮೀನುಗಳನ್ನು ಕರ್ನಾಟಕ ನಗರ ಮತ್ತು ಗ್ರಾಮಾಂತರ ಕಾಯ್ದೆ 1961 ರ ಕಲಂ 14 (ಎ) ರನ್ವಯ ಭೂ ಉಪಯೋಗ ಬದಲಾವಣೆ ಮಾಡುವ ಬಗ್ಗೆ ಪತ್ರಿಕಾ ಪ್ರಕಟಣೆ ನೀಡಿ, ಸಾರ್ವಜನಿಕ ಆಕ್ಷೇಪಣೆಗಳು ಏನಾದರೂ ಇದ್ದಲ್ಲಿ ಈ ಪ್ರಕಟಣೆ ಆದ ದಿನಾಂಕದಿಂದ 16 ದಿನದೊಳಗಾಗಿ ಆಯುಕ್ತರು, ಹುಬ್ಬಳ್ಳಿ-ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರ, ನವನಗರ ಹುಬ್ಬಳ್ಳಿ-580025 ಇವರಿಗೆ ಸಂಬಂಧಪಟ್ಟ ದಾಖಲೆಗಳೊಂದಿಗೆ ಲಿಖಿತವಾಗಿ ಸಲ್ಲಿಸಲು ಕೋರಲಾಗಿದೆ. ಅವಧಿ ಮುಗಿದ ನಂತರ ಬಂದ ಆಕ್ಷೇಪಣೆಗಳನ್ನು, ಪರಿಗಣಿಸಲಾಗುವುದಿಲ್ಲ.

ಸಹಿ/- ಆಯುಕ್ತರು,
ಹುಬ್ಬಳ್ಳಿ-ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರ, ಹುಬ್ಬಳ್ಳಿ.

ವಾಸಾಸಂಇ/ಧಾರವಾಡ/ಕೆಎಸ್‌ಎಂಸಿಎ/235/2026-27



ಕಿರುಸುದ್ದಿ

ಏಷ್ಯನ್ ರಿಲೇಸ್, ಇಂಡೋರ್ ಅಥ್ಲೆಟಿಕ್‌ಗೆ ಭಾರತ ಆತಿಥ್ಯ

ಹೊಸದಿಲ್ಲಿ: 2027ರ ಏಷ್ಯನ್ ರಿಲೇಸ್ ಚಾಂಪಿಯನ್‌ಶಿಪ್ ಚಂಡೀಗಢದಲ್ಲಿ ಹಾಗೂ 2028ರ ಏಷ್ಯನ್ ಇಂಡೋರ್ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್ ಅನ್ನು ಭುವನೇಶ್ವರದಲ್ಲಿ ಏಷ್ಯನ್ ಅಥ್ಲೆಟಿಕ್ಸ್ ಸಂಸ್ಥೆ ಘೋಷಿಸಿದೆ. ಹಾಂಗ್ ಕಾಂಗ್‌ನಲ್ಲಿ ಬುಧವಾರ ನಡೆದ ಏಷ್ಯನ್ ಅಥ್ಲೆಟಿಕ್ಸ್ ಸಂಸ್ಥೆಯ ಕಾರ್ಯಕಾರಿ ಮಂಡಳಿ ಸಭೆಯಲ್ಲಿ ಈ ತೀರ್ಮಾನ ಕೈಗೊಳ್ಳಲಾಯಿತು. ಈ ಎರಡು ಏಷ್ಯಾ ಮಟ್ಟದ ಪ್ರಮುಖ ಅಥ್ಲೆಟಿಕ್ಸ್ ಸ್ಪರ್ಧೆಗಳು ಮೊದಲ ಬಾರಿಗೆ ಭಾರತದಲ್ಲಿ ನಡೆಯಲಿವೆ. 2027ರ ಮೇ ತಿಂಗಳಲ್ಲಿ ನಡೆಯಲಿರುವ ಏಷ್ಯನ್ ರಿಲೇಸ್ ಚಾಂಪಿಯನ್‌ಶಿಪ್ ಚಂಡೀಗಢದ ಸೆಕ್ಟರ್-7 ಕ್ರೀಡಾಂಗಣದಲ್ಲಿ ನಡೆಯಲಿದೆ. ಪುರುಷರ 4100 ಮೀ., 4400 ಮೀ., ಮಹಿಳೆಯರ 4100 ಮೀ., 4400 ಮೀ. ಹಾಗೂ ಮಿಶ್ರ ವಿಭಾಗದ 4100 ಮೀ. ಮತ್ತು 4400 ಮೀ. ಸೇರಿ ಒಟ್ಟು ಆರು ಸ್ಪರ್ಧೆಗಳು ನಡೆಯಲಿವೆ. ಏಷ್ಯಾದ ವಿವಿಧ ರಾಷ್ಟ್ರಗಳಿಂದ 200ಕ್ಕೂ ಹೆಚ್ಚು ಅಥ್ಲೀಟ್‌ಗಳು ಭಾಗವಹಿಸುವ ನಿರೀಕ್ಷೆಯಿದೆ. 2028ರ ಜನವರಿಯಲ್ಲಿ ನಡೆಯಲಿರುವ ಏಷ್ಯನ್ ಇಂಡೋರ್ ಚಾಂಪಿಯನ್‌ಶಿಪ್‌ಗೆ ಭುವನೇಶ್ವರದ ಕಳಿಂಗ ಕ್ರೀಡಾಂಗಣದ ಅತ್ಯಾಧುನಿಕ ಒಳಾಂಗಣ ವೇದಿಕೆಯಾಗಲಿದೆ. ಇದೇ ಕ್ರೀಡಾಂಗಣದಲ್ಲಿ 2028ರ ವಿಶ್ವ ಇಂಡೋರ್ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್ ಕೂಡ ನಡೆಯಲಿದೆ.

ಹಾಕಿ: ಮಹಿಳೆಯರಿಗೆ ರೋಚಕ ಗೆಲುವು



ಹೊಸದಿಲ್ಲಿ: ಆಸ್ಟ್ರೇಲಿಯಾ ವಿರುದ್ಧದ ಫ್ರೆಂಡ್ಲಿ ಹಾಕಿ ಸರಣಿಯ ಎರಡನೇ ಪಂದ್ಯದಲ್ಲಿ ಭಾರತೀಯ ಮಹಿಳಾ ಹಾಕಿ ತಂಡ ರೋಚಕ ಗೆಲುವು ದಾಖಲಿಸಿದೆ. ಪರ್ಥ್ ಹಾಕಿ ಕ್ರೀಡಾಂಗಣದಲ್ಲಿ ಬುಧವಾರ ನಡೆದ ಪಂದ್ಯದಲ್ಲಿ ಭಾರತ ಶೂಟೌಟ್‌ನಲ್ಲಿ 4-2 ಅಂತರದಲ್ಲಿ ಆಸ್ಟ್ರೇಲಿಯಾವನ್ನು ಮಣಿಸಿ ನಾಲ್ಕು ಪಂದ್ಯಗಳ ಸರಣಿಯನ್ನು 1-1ರಿಂದ ಸಮಬಲಗೊಳಿಸಿದೆ. ಪಂದ್ಯದ ಆರಂಭದಲ್ಲೇ ಆಸ್ಟ್ರೇಲಿಯಾ ಮೇಲುಗೈ ಸಾಧಿಸಿತು. ಒಲಿವಿಯಾ ಡೌನ್ಸ್ 10ನೇ ನಿಮಿಷದಲ್ಲಿ ಗೋಲು ಬಾರಿಸಿ ಆತಿಥೇಯರಿಗೆ ಮುನ್ನಡೆ ತಂದರು. ಬಳಿಕ ಭಾರತೀಯ ತಂಡ ದಾಳಿಯ ತೀವ್ರತೆಯನ್ನು ಹೆಚ್ಚಿಸಿ ಪೆನಾಲ್ಟಿ ಕಾರ್ನರ್‌ಗಳ ಮೂಲಕ ನಿರಂತರ ಒತ್ತಡ ಹೇರಿತು. ಆದರೆ ಆಸ್ಟ್ರೇಲಿಯಾ ರಕ್ಷಣಾ ಆಟಗಾರರು ಭಾರತದ ಪ್ರಯತ್ನಗಳನ್ನು ತಡೆಯುವಲ್ಲಿ ಯಶಸ್ವಿಯಾಗಿದ್ದರು. ಕೊನೆ ಕ್ವಾರ್ಟರ್‌ನಲ್ಲಿ ಭಾರತದ ಹೋರಾಟಕ್ಕೆ ಫಲ ಸಿಕ್ಕಿತು. 46ನೇ ನಿಮಿಷದಲ್ಲಿ ಸುಶೀಲಾ ಚಾನು ಪುಕ್ರಂಬಮ್ ಗೋಲು ಬಾರಿಸಿ ಪಂದ್ಯವನ್ನು 1-1 ಸಮಬಲಕ್ಕೆ ತಂದರು. ನಂತರ ನಡೆದ ಶೂಟೌಟ್‌ನಲ್ಲಿ ಭಾರತ ಮೇಲುಗೈ ಸಾಧಿಸಿತು. ನವ್ನೀತ್ ಕೌರ್, ಇಶಿಕಾ ಚೌಧರಿ, ಅನ್ನು ಹಾಗೂ ರುತುಜಾ ದಾದಾಸೋ ಪಿಸಾಳ್ ಗೋಲು ಬಾರಿಸಿ ತಂಡಕ್ಕೆ 4-2 ಅಂತರದ ಜಯ ತಂದುಕೊಟ್ಟರು.

ಸಿಕ್ಸರ್‌ಗಳ ಸುರಿಮಳೆಗೈದ ಸೂರ್ಯವಂಶಿ | ಕ್ವಾಲಿಫೈಯರ್-2ರಲ್ಲಿ ಗುಜರಾತ್ ಎದುರಾಳಿ

ಸನ್ ಎಲಿಮಿನೇಟ್, ಸೆಮಿಗೆ ಆರ್‌ಆರ್!

ಚಂಡೀಗಢ: ಹೈದರಾಬಾದ್ ತಂಡದ ಗೆಲುವಿನೋಟದ ಐಪಿಎಲ್ ಅಭಿಯಾನಕ್ಕೆ ವೈಭವ್ ತೆರೆ ಎಳೆದರು. ಸಿಕ್ಸರ್‌ಗಳ ಸುರಿಮಳೆಗೈದ 15 ವರ್ಷದ ಸೂರ್ಯವಂಶಿ ತಮ್ಮ ತಂಡವನ್ನು ಸೆಮಿಫೈನಲ್ ಅಂದರೆ ಕ್ವಾಲಿಫೈಯರ್‌ಗೆ ಕೊಂಡೊಯ್ದರು. ಕ್ವಾಲಿಫೈಯರ್ 2ರಲ್ಲಿ ರಾಜಸ್ಥಾನ ಗುಜರಾತ್ ತಂಡವನ್ನು ಶುಕ್ರವಾರದ ಪಂದ್ಯದಲ್ಲಿ ಎದುರಿಸಲಿದೆ.

ಎಲಿಮಿನೇಟರ್ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ರಾಜಸ್ಥಾನ 20 ಓವರ್‌ಗಳಲ್ಲಿ 8 ವಿಕೆಟ್ ನಷ್ಟಕ್ಕೆ 243 ರನ್ ಗಳಿಸಿತು. ಸೂರ್ಯವಂಶಿ 12 ಸಿಕ್ಸರ್, 5 ಬೌಂಡರಿಗಳೊಂದಿಗೆ 97 ರನ್ ಗಳಿಸಿದರು. ಜುರೇಲ್ 21 ಬಾಲ್‌ಗಳಲ್ಲಿ 50 ರನ್ ಗಳಿಸಿದರು. ಪ್ರಫುಲ್ ಹಿಂಗೆ ಹೈದರಾಬಾದ್ ಪರ 3 ವಿಕೆಟ್ ಪಡೆದುಕೊಂಡರು. ಹೈದರಾಬಾದ್ ಪರ ಯಾರೊಬ್ಬರೂ ಹೇಳಿಕೊಳ್ಳುವ ಪ್ರದರ್ಶನ ನೀಡದ ಕಾರಣ ಸೋಲೊಪ್ಪಿಕೊಂಡಿತು.

ಹೈದರಾಬಾದ್ ಹೈರಾಣು: ಮೊದಲ ಬಾಲ್‌ನಿಂದಲೂ ವೈಭವ್ ಅಬ್ಬರ ನಡೆಯಿತು. ಬಂದ ಬಾಲ್‌ಗಳನ್ನೆಲ್ಲಾ ಮನಬಂದ ಜಾಗದಲ್ಲಿ, ಮನಬಂದ ಸ್ಟೈಲ್‌ನಲ್ಲಿ, ಮನ ಬಂದಂತೆ ದಂಡಿಸಿದರು. 16 ಬಾಲ್‌ಗಳಲ್ಲಿ 50 ರನ್ ದಾಟಿ 28 ಬಾಲ್‌ಗಳಲ್ಲಿ 97 ರನ್ ಬಾರಿಸಿದರು. ಜೈಸ್ವಾಲ್ ಕೂಡ ಆಗಾಗ ಬೌಂಡರಿ ಬಾರಿಸಿದರು. ಮೊದಲ ವಿಕೆಟ್‌ಗೆ ಈ ಜೋಡಿ 125 ರನ್ ಜೊತೆಯಾಟ ನಿರ್ಮಿಸಿತು. 97 ರನ್ ಗಳಿಸಿದ ವೈಭವ್ ವಿಕೆಟ್ ಒಪ್ಪಿಸಿ ಶತಕ ವಂಚಿತರಾದರು. ಮೂರನೇ ಕ್ರಮಾಂಕದಲ್ಲಿ ಬಂದ ಜುರೇಲ್ ಕೂಡ ಬರುತ್ತಲೇ ಸ್ಫೋಟಕ ಬ್ಯಾಟಿಂಗ್ ಮಾಡಿದರು. 20 ಬಾಲ್‌ಗಳಲ್ಲಿ ಅರ್ಧಶತಕ ಬಾರಿಸಿ ವಿಕೆಟ್ ಒಪ್ಪಿಸಿದರು. ಜೈಸ್ವಾಲ್ ಆಟ 29 ರನ್‌ಗೆ ನಿಂತಿತು. ಮಧ್ಯಮ ಕ್ರಮಾಂಕದಲ್ಲಿ ನಾಯಕ ರಿಯಾನ್ 26 ರನ್‌ಗಳಿಸಿದರು. ಅಂತಿಮದಲ್ಲಿ ಯಾವುದೇ ಬ್ಯಾಟಿಗರೂ ಹೇಳಿಕೊಳ್ಳುವ ಸ್ಕೋರ್ ಗಳಿಸದ ನಿಟ್ಟಿನಲ್ಲಿ ರಾಜಸ್ಥಾನ 243 ರನ್‌ಗೆ ನಿಂತಿತು. ಹೈದರಾಬಾದ್ ಪರ ಪ್ರಫುಲ್ 3 ವಿಕೆಟ್ ಪಡೆದುಕೊಂಡರು.



ಕ್ರಿಸ್ ಗೇಲ್ ದಾಖಲೆ ಉಡೀಸ್

ಐಪಿಎಲ್ ಇತಿಹಾಸದ ಪ್ರಮುಖ ದಾಖಲೆಗಳಲ್ಲಿ ಒಂದಾಗಿದ್ದ ಕ್ರಿಸ್ ಗೇಲ್ ಅವರ 58 ಸಿಕ್ಸರ್ ದಾಖಲೆ ವೈಭವ್ ಮುರಿದರು. 15 ವರ್ಷದ ಅವರು, ಒಂದೇ ಆವೃತ್ತಿಯಲ್ಲಿ ಅತಿ ಹೆಚ್ಚು ಸಿಕ್ಸರ್ ಬಾರಿಸಿದವರ ಪಟ್ಟಿಯಲ್ಲಿ ಅಗ್ರಸ್ಥಾನಕ್ಕೇರಿದ್ದಾರೆ. ಒಟ್ಟು 65 ಸಿಕ್ಸರ್‌ಗಳನ್ನು ಬಾರಿಸಿದ ವೈಭವ್ ಗೇಲ್ ಅವರ 58 ಸಿಕ್ಸರ್‌ಗಳ ದಾಖಲೆ ಮುರಿದರು.

ದಾಖಲೆಯ ಪರ್ವ

ಪ್ರತಿ ಎಸತವನ್ನು ಸ್ಟ್ಯಾಂಡ್‌ಗಳತ್ತ ಬಾರಿಸುತ್ತಾ ಬಂದ ವೈಭವ್ ಸೂರ್ಯವಂಶಿ ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಯಲ್ಲಿ ಸಿಕ್ಸರ್‌ಗಳ ಬೆಟ್ಟವೇ ಕಟ್ಟಿದರು. ಬಾಲಿಗೆ ಮೈದಾನದ ಪ್ರತಿ ದಿಕ್ಕು ತೋರಿಸುತ್ತಾ, ಲೀಲಾಜಾಲವಾಗಿ ಸಿಕ್ಸರ್‌ಗಳನ್ನು ಬಾರಿಸಿದರು. ಇನ್ನಿಂಗ್ಸ್‌ನಲ್ಲಿ 12 ಸಿಕ್ಸರ್ ಬಾರಿಸಿದರು. ಬಹುತೇಕ ಪ್ರತಿ ಬಾಲ್ ಬೌಂಡರಿ ಬಾರಿಸಿದ ವೈಭವ್ ದಾಖಲೆಗಳ ಸುರಿಮಳೆಗೈದರು. ವೈಭವ್ ಬಾರಿಸಿದ ಪ್ರತಿಯೊಂದು ಸಿಕ್ಸರ್‌ಗೂ ಒಂದೊಂದು ದಾಖಲೆ ಮುರಿಯುತ್ತಿತ್ತು. ಪ್ರತಿಯೊಂದು ಬೌಂಡರಿ ಇತಿಹಾಸ ನಿರ್ಮಿಸುತಿತ್ತು. ಐಪಿಎಲ್‌ನಲ್ಲಿ ಹಿಂದೆಂದೂ ಆಗದ ದಾಖಲೆಗಳು ವೈಭವ್ ಬ್ಯಾಟ್‌ನಿಂದ ಮೂಡಿಬಂದವು.

ಕುಸಿದ ಹೈದರಾಬಾದ್

ಗುರಿ ಬೆನ್ನತ್ತಿದ ಹೈದರಾಬಾದ್‌ಗೆ ಆರಂಭಿಕ ಆಘಾತ ಎದುರಾಯಿತು. ಸ್ಫೋಟಕ ಬ್ಯಾಟರ್ ಅಭಿಷೇಕ್ ಶರ್ಮ ಶೂನ್ಯಕ್ಕೆ ಔಟಾದರು. ಮೂರನೇ ಕ್ರಮಾಂಕದಲ್ಲಿ ಬ್ಯಾಟಿಂಗ್‌ಗಿಳಿದ ಇಶಾನ್ ಕಿಶನ್ ಬರುತ್ತಲೇ ಸ್ಫೋಟಕ ಬ್ಯಾಟಿಂಗ್ ಶುರು ಮಾಡಿದರು. 11 ಬಾಲ್ ಎದುರಿಸಿದ ಕಿಶನ್ 33 ರನ್ ಬಾರಿಸಿದರು. ಇನ್ನೇನು ಪಂದ್ಯದ ರೋಚಕ ಹಂತಕ್ಕೆ ತಲುಪಿತು ಅನ್ನುಷ್ಟರಲ್ಲಿ ವಿಕೆಟ್ ಒಪ್ಪಿಸಿದರು. ಮಧ್ಯಮ ಕ್ರಮಾಂಕದಲ್ಲಿ ಯಾರೊಬ್ಬರೂ ಹೇಳಿಕೊಳ್ಳುವ ಬ್ಯಾಟಿಂಗ್ ಮಾಡಲಿಲ್ಲ, ಸಲೀಲ್ ಆರೋರಾ, ನಿತೀಶ್‌ಕುಮಾರ್ ರೆಡ್ಡಿ ಹೋರಾಡಿದರು. ಉಳಿದ ಬ್ಯಾಟರ್‌ಗಳು ಬೇಗನೇ ವಿಕೆಟ್ ಒಪ್ಪಿಸಿದರು.

ಅನ್‌ಕ್ಯಾಪ್ಡ್ ಸಾಧನೆ

ಈಗಾಗಲೇ 680 ರನ್ ರನ್ ಗಳಿಸಿರುವ ವೈಭವ್ ಸೂರ್ಯವಂಶಿ ಇಂಡಿಯನ್ ಪ್ರೀಮಿಯರ್ ಲೀಗ್ ಇತಿಹಾಸದಲ್ಲಿ ಯಾರೂ ಮಾಡದ ದಾಖಲೆಯೊಂದನ್ನು ಮಾಡಿದ್ದು, ಅನ್‌ಕ್ಯಾಪ್ಡ್ ಆಟಗಾರ ಗಳಿಸಿದ ಅತಿ ಹೆಚ್ಚು ಸ್ಕೋರ್ ಅನ್ನು ಮಾಡಿದರು.

12 ಸಿಕ್ಸರ್, ದಾಖಲೆ

ಐಪಿಎಲ್ ಇತಿಹಾಸದ ಪ್ಲೇಆಫ್‌ಗಳಲ್ಲಿ ಅತಿ ಹೆಚ್ಚು ಸಿಕ್ಸರ್ ಬಾರಿಸಿದ ದಾಖಲೆ ವೈಭವ್ ಸೂರ್ಯವಂಶಿ ಮಾಡಿದರು.

ನಾರ್ವೆ ಚೆಸ್: ದಿವ್ಯಾಗೆ ಜಯ

ಒಸ್ಲೋ (ನಾರ್ವೆ): ನಾರ್ವೆ ಚೆಸ್ 2026 ಟೂರ್ನಿಯ ಎರಡನೇ ಸುತ್ತು ಮತ್ತೊಮ್ಮೆ ರೋಚಕ ಪೈಪೋಟಿಗಳಿಗೆ ಸಾಕ್ಷಿಯಾಯಿತು. ಕಠಿಣ ಹೋರಾಟಗಳು ನಡೆದವು, ದಿವ್ಯಾ ದೇಶಮುಖ್ ಸೇರಿದಂತೆ ಭಾರತೀಯ ಗ್ರ್ಯಾಂಡ್‌ಮಾಸ್ಟರ್ ಗಮನಾರ್ಹ ಪ್ರದರ್ಶನ ನೀಡಿದ್ದಾರೆ.

ದಿನದ ಏಕೈಕ ಕ್ಲಾಸಿಕಲ್ ಗೆಲುವಿನಲ್ಲಿ ಫ್ರಾನ್ಸ್‌ನ ಅಲಿರೆಝಾ ಫಿರೋಜ್ಜಾ, ಭಾರತದ ತಾರೆ ಆರ್. ಪ್ರಜ್ಞಾನಂದ ಅವರನ್ನು ಮಣಿಸಿದರು. ಮಧ್ಯ ಹಂತದಿಂದಲೇ ಒತ್ತಡ ಹೆಚ್ಚಿಸುತ್ತ ಬಂದ ಫಿರೋಜ್ಜಾ, ಶಾಂತ ಹಾಗೂ ನಿಖರ ಆಟದ ಮೂಲಕ ಮುನ್ನಡೆಯನ್ನು ಗೆಲುವಿಗೆ ಪರಿವರ್ತಿಸಿದರು. ಇದರಿಂದ ಟೂರ್ನಿಯಲ್ಲಿ ಸತತ ಎರಡನೇ ಕ್ಲಾಸಿಕಲ್ ಜಯ ದಾಖಲಿಸಿದರು.

ವಿಶ್ವ ನಂ.1 ಆಟಗಾರ ಮ್ಯಾಗ್ನಸ್ ಕಾರ್ಲ್ಸನ್ ಹಾಗೂ ಜರ್ಮನಿಯ ಅಗ್ರ ಆಟಗಾರ ವಿನ್ಸೆಂಟ್ ಕೀಮರ್ ನಡುವಿನ ಬಹುನಿರೀಕ್ಷಿತ ಹಣಾಹಣಿ ಡ್ರಾದಲ್ಲಿ ಅಂತ್ಯವಾಯಿತು. ಬಹುತೇಕ ಸಮಯ ಕಾರ್ಲ್ಸನ್ ಮೇಲುಗೈ ಸಾಧಿಸಿದ್ದರೂ, ಸಂಕಷ್ಟದ ಸ್ಥಿತಿಯಲ್ಲಿ ಕೈಮರ್ ಅದ್ಭುತ ರಕ್ಷಣಾತ್ಮಕ ಆಟವಾಡಿ ಡ್ರಾ ಉಳಿಸಿಕೊಂಡರು. ಬಳಿಕ ನಡೆದ ಆರ್ಮಗೆಡನ್ ಪಂದ್ಯದಲ್ಲಿ ಕಾರ್ಲ್ಸನ್ ಗೆದ್ದು ಹೆಚ್ಚುವರಿ ಅಂಕ ಪಡೆದರು.

ಗುಕೇಶ್ ಪಂದ್ಯ ಡ್ರಾ: ಮತ್ತೊಂದು ಪಂದ್ಯದಲ್ಲಿ ವೆಸ್ಲಿ ಸೋ ಹಾಗೂ ಹಾಲಿ ವಿಶ್ವ ಚಾಂಪಿಯನ್ ಡಿ. ಗುಕೇಶ್ ನಡುವಿನ ಕಠಿಣ ಪಂದ್ಯ ಸಮಬಲದಲ್ಲಿ ಅಂತ್ಯವಾಯಿತು. ನಂತರದ ಆರ್ಮಗೆಡನ್ ಪಂದ್ಯದಲ್ಲಿ ವೆಸ್ಲಿ ಸೋ ಗೆದ್ದು ಹೆಚ್ಚುವರಿ ಅಂಕಗಳನ್ನು ತಮ್ಮದಾಗಿಸಿಕೊಂಡರು. ಎರಡನೇ ಸುತ್ತಿನ ಬಳಿಕ ಸತತ ಎರಡು ಸಾಂಪ್ರದಾಯಿಕ ಗೆಲುವು ದಾಖಲಿಸಿರುವ



ಫಿರೋಜ್ಜಾ ಅಂಕಪಟ್ಟಿಯಲ್ಲಿ ತನ್ನ ಮುನ್ನಡೆಯನ್ನು ಮತ್ತಷ್ಟು ಬಲಪಡಿಸಿದ್ದಾರೆ.

ದಿವ್ಯಾ ದೇಶಮುಖ್‌ಗೆ ಗೆಲುವು: ಅಖಿಲ ಭಾರತ ಮುಖಾಮುಖಿಯಲ್ಲಿ ಭಾರತದ ದಿವ್ಯಾ ದೇಶಮುಖ್, ಕೊನೆರು ಹಂಪಿ ವಿರುದ್ಧ ಆರ್ಮಗೆಡನ್‌ನಲ್ಲಿ ಗೆಲುವು ಸಾಧಿಸಿದರು. ಕ್ಲಾಸಿಕಲ್ ಪಂದ್ಯ ಸಮಬಲದಲ್ಲಿ ಅಂತ್ಯಗೊಂಡಿತ್ತು. ಎರಡನೇ ಸುತ್ತಿನ ಬಳಿಕ ಮಹಿಳಾ ವಿಭಾಗದಲ್ಲಿ ಅಸೌಬಯೇವಾ ಅಂಕಪಟ್ಟಿಯಲ್ಲಿ ತನ್ನ ಮುನ್ನಡೆಯನ್ನು ಕಾಯ್ದುಕೊಂಡಿದ್ದಾರೆ. ಮಹಿಳಾ ವಿಭಾಗದಲ್ಲೂ ಮತ್ತೊಂದು ರೋಚಕ ಸುತ್ತು ನಡೆಯಿತು. ಎಲ್ಲಾ ಮೂರು ಸಾಂಪ್ರದಾಯಿಕ ಪಂದ್ಯಗಳು ಡ್ರಾದಲ್ಲಿ ಅಂತ್ಯಗೊಂಡ ಬಳಿಕ ಫಲಿತಾಂಶ ಆರ್ಮಗೆಡನ್‌ನಲ್ಲಿ ನಿರ್ಧಾರವಾಯಿತು. ಟೂರ್ನಿಯ ಮುಂಚೂಣಿಯಲ್ಲಿರುವ ಬಿಬಿಸಾರಾ ವಿರುದ್ಧ ಆರ್ಮಗೆಡನ್‌ನಲ್ಲಿ ಗೆದ್ದು ತಮ್ಮ ಅದ್ಭುತ ಆರಂಭವನ್ನು ಮುಂದುವರಿಸಿದರು. ವೇಗದ ಸಮಯ ನಿಯಂತ್ರಣದಲ್ಲಿ ಆತ್ಮವಿಶ್ವಾಸದ ಆಟವಾಡಿದ ಅವರು ಹೆಚ್ಚುವರಿ ಅಂಕ ಕಲೆಹಾಕಿದರು.

ಸತತ 2ನೇ ಕಪ್‌ನತ್ತ ಆರ್‌ಸಿಬಿ | ಸಾಂಘಿಕ ಆಟಕ್ಕೆ ಜಿಟಿ ತತ್ತರ

ರಜತ್ ಪಾಟಿದಾರ್ ಪರಾಕ್ರಮ

ಧರ್ಮಶಾಲಾ: ಐಪಿಎಲ್ ಪ್ರಾರಂಭಕ್ಕೆ ಸ್ವಲ್ಪೇ ದಿನವಿತ್ತು. ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಬೌಲಿಂಗ್ ಪಡೆಯತ್ತ ಅಲ್ಪ ಗಮನ ಹರಿಸಿದ್ದರೆ, ಹೆಚ್ಚಿನ ಅನುಭವ ಇರಲಿಲ್ಲ. ಆಸ್ಟ್ರೇಲಿಯಾದ ಜೋಶ್ ಹ್ಯಾಜೆಲ್ವುಡ್ ಸ್ವಲ್ಪ ಪಂದ್ಯಗಳಿಗೆ ಅಲಭ್ಯರಂದರೆ, ಯಶ್ ದಯಾಳ್ ಇಲ್ಲದೆ ಕಣಕ್ಕಿಳಿಯಬೇಕಾಗಿತ್ತು ಆರ್‌ಸಿಬಿ. ಭುವನೇಶ್ವರ್ ಕುಮಾರ್ ಜತೆಗೆ ಐಪಿಎಲ್‌ನಲ್ಲಿ ಅನುಭವ ಇಲ್ಲದ ಜೇಕಬ್ ಡಫಿ, ರೋಮಾರಿಯೋ ಶೇಫರ್ಡ್ ಹೀಗೆ ಹೆಚ್ಚಿನ ಅನುಭವ ರಹಿತ ಬೌಲರ್‌ಗಳೊಂದಿಗೆ ಮೈದಾನದಲ್ಲಿ ಮಿಂಚಬೇಕಿತ್ತು.

ಮೊದಲ ಪಂದ್ಯದಲ್ಲೇ ದೊಡ್ಡ ಪ್ರಯೋಗ. ಡಫಿ ಅವರೊಂದಿಗೆ ಕಣಕ್ಕಿಳಿದ ಆರ್‌ಸಿಬಿ ಗೆಲುವಿನ ನಗೆ ಬೀರಿತು. ಅಲ್ಲಿಂದ ಹೊಸ ಆರ್‌ಸಿಬಿ ಆಟ ಶುರು. ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಯ ಫೈನಲ್‌ಗೇರಿದ ಮೊದಲ ತಂಡವಾಗಿ ಬೆಂಗಳೂರು ಹೊರಹೊಮ್ಮಿದೆ. ಮಂಗಳವಾರ ನಡೆದ ಕ್ವಾಲಿಫೈಯರ್ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಆರ್‌ಸಿಬಿ 20 ಓವರ್‌ಗಳಲ್ಲಿ 4 ವಿಕೆಟ್ ನಷ್ಟಕ್ಕೆ 254 ರನ್ ಗಳಿಸಿತು. ನಾಯಕ ರಜತ್ ಪಾಟಿದಾರ್ 33 ಬಾಲ್‌ಗಳಲ್ಲಿ ಔಟಾಗದೇ 93 ರನ್ ಗಳಿಸಿದರು. ಕೊಹ್ಲಿ ಹಾಗೂ ಕೃಣಾಲ್ 43 ರನ್ ಗಳಿಸಿದರು. ಗುಜರಾತ್ ಪರ ಹೋಲ್ಡರ್ ಮತ್ತು ರಬಾಡ ತಲಾ 2 ವಿಕೆಟ್ ಕಿತ್ತರು. ಗುರಿ ಬೆನ್ನತ್ತಿದ ಗುಜರಾತ್ 162 ರನ್‌ಗಳಿಗೆ ಪತನಗೊಂಡಿತು. ಆರಂಭದಿಂದಲೂ ಪಂದ್ಯದ ಮೇಲೆ ಪ್ರಾಬಲ್ಯ ಸಾಧಿಸಿದ ಆರ್‌ಸಿಬಿ, ಸಮಯಕ್ಕೂ ಮೊದಲೇ ವಿಕೆಟ್ ಪಡೆಯಿತು. ಆದಾಗ್ಯೂ ಬ್ಯಾಟರ್ ರಾಹುಲ್ ತೇವಾಟಿಯ ಹೋರಾಟ ನಡೆಸಿದ ಬೆನ್ನಲ್ಲೇ ಪಂದ್ಯ ಕೊನೆಯ ಓವರ್‌ಗಳವರೆಗೂ ಹೋಯಿತು. ಆರ್‌ಸಿಬಿ ಪರ ಜೇಕಬ್ ಡಫಿ 3, ಭುವನೇಶ್ವರ್, ರಸೀಖ್ ತಲಾ 2 ವಿಕೆಟ್ ಪಡೆದರೆ, ಹ್ಯಾಜೆಲ್ವುಡ್ 1 ವಿಕೆಟ್ ಕಿತ್ತರು.

ರಜತ್- ಪ್ಲೇಆಫ್‌ಗಳ ಬೆಸ್ಟ್ ಬ್ಯಾಟರ್: ಮಧ್ಯಮ ಕ್ರಮಾಂಕದಲ್ಲಿ ರಜತ್ ಪಾಟಿದಾರ್ ಅಬ್ಬರದ ಬ್ಯಾಟಿಂಗ್ ಮಾಡುತ್ತಿವುದೇ ಆರ್‌ಸಿಬಿ ಗೆಲುವಿನ ಮೂಲವಾಗಿದೆ. ಅದರಲ್ಲೂ ಪ್ಲೇಆಫ್‌ಗಳಲ್ಲಿ ಪಾಟಿದಾರ್ ಆಡುತ್ತಿರುವ ಆಟ ಗಮನಾರ್ಹ. ಬ್ಯಾಟಿಂಗ್ ಇಳಿದ ನಂತರ ಸಾಮಾನ್ಯ ಬ್ಯಾಟರ್‌ಗಳಂತೆ ಸಿಂಗಲ್-ಡಬಲ್‌ಗಳ ಮೂಲಕ ಸೆಟ್ ಆಗದ ಅವರು, ಬರುತ್ತಲೇ ಹೊಡೆಯಲಾರಂಭಿಸುತ್ತಾರೆ. ಕ್ವಾಲಿಫೈಯರ್‌ನಲ್ಲೂ ಅವರು ಮಾಡಿದ್ದು ಅದನ್ನೆ. 33 ಬಾಲ್‌ಗಳಲ್ಲಿ 9 ಸಿಕ್ಸರ್, 5 ಬೌಂಡರಿ ಚಚ್ಚಿದ ಅವರು, 93★ ರನ್ ಗಳಿಸಿದರು. ಇದರೊಂದಿಗೆ ಆರ್‌ಸಿಬಿ ದೊಡ್ಡ ಸ್ಕೋರ್ ನಿರ್ಮಿಸಿತು.



ಪ್ಲೇಆಫ್‌ನಲ್ಲಿ ಪಾಟಿದಾರ್

- 2022ರ ಎಲಿಮಿನೇಟರ್(ಎಲ್‌ಎಸ್‌ಜಿಯೊಂದಿಗೆ): 112*(54)
- 2022ರ ಕ್ವಾಲಿಫೈಯರ್ (ರಾಜಸ್ಥಾನದೊಂದಿಗೆ): 58(44)
- 2024ರ ಎಲಿಮಿನೇಟರ್ (ರಾಜಸ್ಥಾನದೊಂದಿಗೆ): 34(22)
- 2025ರ ಕ್ವಾಲಿಫೈಯರ್ (ಪಂಜಾಬ್‌ನೊಂದಿಗೆ): 15*(8)
- 2025ರ ಫೈನಲ್: 26(16)
- 2026ರ ಕ್ವಾಲಿಫೈಯರ್ (ಗುಜರಾತ್‌ನೊಂದಿಗೆ): 93*(33)

ಸಂಕ್ಷಿಪ್ತ ಸ್ಕೋರ್: **ಆರ್‌ಸಿಬಿ 20 ಓವರ್‌ಗಳಲ್ಲಿ 254/5:** ರಜತ್ 93★, ಕೊಹ್ಲಿ 43, ಕೃಣಾಲ್ 43; ಹೋಲ್ಡರ್ 39/2, **ಗುಜರಾತ್ 19.3 ಓವರ್‌ಗಳಲ್ಲಿ 162/10:** ರಾಹುಲ್ 68, ಬಟ್ಲರ್ 29; ಡಫಿ 39/3

ಪ್ಯಾರಾ ಅಥ್ಲೆಟಿಕ್ಸ್‌ನಲ್ಲಿ 2ನೇ ದಿನವೂ ಪದಕ ಬೇಟೆ | ರನ್ನಿಂಗ್‌ನಲ್ಲಿ ಮಿಂಚಿನೋಟ

ಮುಂದುವರಿದ ಕನ್ನಡಿಗರ ಪಾರುಪತ್ಯ

ಬೆಂಗಳೂರು: ಇಲ್ಲಿ ನಡೆಯುತ್ತಿರುವ 8ನೇ ಇಂಡಿಯನ್ ಓಪನ್ ಪ್ಯಾರಾ ಅಥ್ಲೆಟಿಕ್ಸ್ ಕೂಟದಲ್ಲಿ ಕರ್ನಾಟಕ ಅಥ್ಲೀಟ್‌ಗಳ ಪಾರುಪತ್ಯ ಮುಂದುವರೆದಿದೆ. ಬುಧವಾರದ ಕೂಟದ ಎಫ್-12/13 ವಿಭಾಗ ಮಹಿಳೆಯರ ಜಾವೆಲಿನ್ ಸ್ಪರ್ಧೆಯಲ್ಲಿ ಕನ್ನಡತಿ ಗಂಗವ್ವಾ ನೀಲಪ್ಪ ಹರಿಜರ್ ಚಿನ್ನದ ಪದಕ ಗೆದ್ದರು.

22.85 ಮೀ. ದೂರ ಎಸೆದ ಅವರು, ಅರುಣಾಚಲ ಪ್ರದೇಶದ ಕಿಪಾ ಮೇರೊ ಅವರನ್ನು ಹಿಂದಿಕ್ಕಿದರು. ಮಹಾರಾಷ್ಟ್ರದ ರಾಜೇಶ್ವರಿ 19.94 ಮೀ. ದೂರದೊಂದಿಗೆ ಕಂಚಿನ ಪದಕ ಗೆದ್ದರು.

ಓಟದಲ್ಲಿ ಪ್ರಾಬಲ್ಯ: ಪುರುಷರ 400 ಮೀ. ಟಿ11 ಓಟದಲ್ಲಿ ಗುರು ಕೇಶವ ಬೆಳ್ಳಿ ಪದಕ ಗೆದ್ದರು. 59.72 ಸೆಕೆಂಡುಗಳಲ್ಲಿ ಓಟ ಮುಗಿಸಿದ ಅವರು, ಒಡಿಶಾದ ಮಜ್ಹಿ ಅವರ ಹಿಂದಿದ್ದರು. ಈ ವಿಭಾಗದಲ್ಲಿ ಮೂರ್ತಿ ಮೂರನೇ ಸ್ಥಾನ ಪಡೆದರು. ಅಷ್ಟೇ ಅಲ್ಲದೆ ಟಿ11 400 ಮೀ. ಓಟದಲ್ಲಿ 59.72 ಸೆಕೆಂಡುಗಳಲ್ಲಿ ಓಟ ಮುಗಿಸಿ ಬೆಳ್ಳಿ ಪದಕ ಗೆದ್ದುಕೊಂಡರು. ಟಿ47 400 ಮೀ. ಓಟ ವಿಭಾಗದಲ್ಲಿ ಬಾಬು ಜಾನು ಬೆಳ್ಳಿ ಗೆದ್ದುಕೊಂಡರು. ಟಿ 38 ವಿಭಾಗದಲ್ಲಿ ದೇವ ಸಚ್ಚಿದಾನಂದ ಅವರು, 1:02.25 ನಿಮಿಷಗಳಲ್ಲಿ ಓಟ ಮುಗಿಸಿ ಕಂಚಿನ ಪದಕ ಗೆದ್ದರು.

ಮಂಗಳವಾರದಂದು ಪದಕ ಗೆದ್ದಿದ್ದ ಹರ್ಷಿತಾ ಮತ್ತು ಭಾರತಿ ಭಾರತೇಶ್ ಮಹಿಳೆಯರ ಟಿ37/38 ವಿಭಾಗದಲ್ಲಿ ಕ್ರಮವಾಗಿ ಬೆಳ್ಳಿ ಮತ್ತು ಕಂಚಿನ ಪದಕ ಗೆದ್ದುಕೊಂಡರು. ಹರ್ಷಿತಾ 3.13 ಮೀ. ದೂರ ಜಿಗಿದರೆ, ಭಾರತಿ 2.98 ಮೀ. ದೂರ ಜಿಗಿದರು. ಇನ್ನು ಮಹಿಳೆಯರ 400 ಮೀ. ಟಿ12 ಓಟದಲ್ಲಿ ಸೌಮ್ಯ ಎರಡನೇ ಸ್ಥಾನ ಪಡೆದುಕೊಂಡರು. 1;06 ನಿಮಿಷಗಳಲ್ಲಿ ಓಟ ಕ್ರಮಿಸಿದ ಅವರು, 56.42 ಸೆಕೆಂಡುಗಳಲ್ಲಿ ಓಟ ಮುಗಿಸಿದ ತೇಜಲ್‌ಬೇನ್ ಅವರ ಹಿಂದಿದ್ದರು.

ಚಿತ್ರ: ಮೋಹನ್ ಕುಮಾರ್ ಬಿ.ಎಸ್.



ಶಾಟ್‌ಪುಟ್‌ನಲ್ಲಿ ಕನ್ನಡಿಗರ ಪಾರಮ್ಯ

ಇನ್ನು ಶಾಟ್‌ಪುಟ್‌ನಲ್ಲಿ ಮಂಜುಳಾ, ಗಂಗವ್ವಾ ಕ್ರಮವಾಗಿ ಬೆಳ್ಳಿ ಮತ್ತು ಕಂಚಿನ ಪದಕ ಗೆದ್ದುಕೊಂಡರು. ಎಫ್ 11/12 ವಿಭಾಗದಲ್ಲಿ ಮಂಜುಳಾ 7.42 ಮೀ. ದೂರ ಎಸೆದರೆ, ಗಂಗವ್ವಾ 7.19 ಮೀ. ದೂರ ಎಸೆದು ಕಂಚಿನ ಪದಕ ಗೆದ್ದುಕೊಂಡರು.



ಫ್ರೆಂಚ್ ಓಪನ್ | ನಂಬರ್ 1 ಆಟಗಾರ ಶುಭಾರಂಭ

ಎರಡನೇ ಸುತ್ತಿಗೆ ಯಾನಿಕ್ ಸಿನ್ನರ್

ಪ್ಯಾರಿಸ್: ವಿಶ್ವದ ನಂಬರ್ ಒನ್ ಆಟಗಾರ, ಫ್ರೆಂಚ್ ಓಪನ್ ಪಂದ್ಯಾವಳಿಯ ಗೆಲುವಿನ ಫೇವರಿಟ್ ಯಾನಿಕ್ ಸಿನ್ನರ್ ರೋಲ್ಯಾಂಡ್ ಗ್ಯಾರೋಸ್‌ನಲ್ಲಿ ಗೆಲುವಿನ ಆರಂಭ ಮಾಡಿದ್ದಾರೆ. ಮಂಗಳವಾರ ತಡ ರಾತ್ರಿ ನಡೆದ ಪಂದ್ಯದಲ್ಲಿ ಫ್ರೆಂಚ್‌ನ ಕ್ಲೆಮೆಂಟ್ ತಾಬುರ್ ಎದುರಿಸಿದ ಅವರು, 6-1, 6-3, 6-4ರಿಂದ ಗೆಲುವು ಸಾಧಿಸಿದರು.

ಆರಂಭದಿಂದಲೂ ಮುನ್ನಡೆ ಕಾಯ್ದುಕೊಂಡ ಸಿನ್ನರ್ ಏಸ್, ಸರ್ವ್ ಮತ್ತು ಬ್ರೇಕ್‌ನಲ್ಲಿ ಮಿಂಚಿ ಪದಕ ಗೆದ್ದುಕೊಂಡರು. ಇದರೊಂದಿಗೆ ಎರಡನೇ ಸುತ್ತಿಗೆ ಲಗ್ಗೆ ಹಾಕಿದ್ದಲ್ಲದೆ, 29 ಪಂದ್ಯಗಳ ಗೆಲುವಿನ ಸ್ಟ್ರೀಕ್ ವಿಸ್ತರಿಸಿಕೊಂಡಿದ್ದಾರೆ. ಮಹಿಳೆಯರ ಪ್ರಮುಖ ಪಂದ್ಯದಲ್ಲಿ ಎರಡನೇ ಸೀಡ್‌ನ ಜೆಸ್ಸಿಕಾ ಪೇಗುಲಾ ಆಸ್ಟ್ರೇಲಿಯಾದ ಬಿರ್ರೆಲ್ ಅವರೊಂದಿಗೆ 1-6, 6-3, 6-3ರಿಂದ ಸೋತು ಹೊರಬಿದ್ದರು. ಮೊದಲನೇ ಸೆಟ್‌ನಲ್ಲಿ ಮುನ್ನಡೆ ಸಾಧಿಸಿದ್ದರೂ ಎರಡನೇ ಹಾಗೂ ಮೂರನೇ ಸೆಟ್‌ನಲ್ಲಿ ಹಿನ್ನಡೆ ಅನುಭವಿಸಿದ



ಅವರು, ಅಭಿಯಾನ ಅಂತ್ಯಗೊಳಿಸಿದ್ದಾರೆ. ಈಗಾ ಸ್ವಿಯಾಟೆಕ್ ಎರಡನೇ ಸುತ್ತಿನ ಪಂದ್ಯದಲ್ಲಿ ಬೆಜ್ಲೆಕ್ ಅವರೊಂದಿಗೆ ಗೆದ್ದು ಮುನ್ನಡೆ ಸಾಧಿಸಿದ್ದಾರೆ. ನೇರ ಸೆಟ್ ಪಂದ್ಯದಲ್ಲಿ ಈಗಾ 6-2, 6-3ರಿಂದ ಗೆಲುವು ಸಾಧಿಸಿದರು.

ಕೊಕೊ ಗೌಫ್ ಕಾರ್ ಅಪಘಾತ: ಪಂದ್ಯವಾಡಲು ಬರುತ್ತಿರುವಾಗ ಹಾಲಿ ಫ್ರೆಂಚ್ ಓಪನ್ ಚಾಂಪಿಯನ್ ಕೊಕೊ ಗೌಫ್ ಅವರಿದ್ದ ಕಾರು ಅಪಘಾತಕ್ಕೊಳಗಾಗಿದೆ. ಸ್ಥಳೀಯ ವರದಿಗಳ ಪ್ರಕಾರ ಚಿಕ್ಕ ಅಪಘಾತಕ್ಕೀಡಾದ ಅವರಿಗೆ ಯಾವುದೇ ಗಾಯಗಳಾಗಿಲ್ಲ.

ಸಿಂಗಾಪುರ್ ಓಪನ್‌ನಲ್ಲಿ ಮುನ್ನಡೆ | ಕ್ರಿಸ್ಟಿ ಸೋಲಿಸಿದ ಭಾರತೀಯ

ಬ್ಯಾಡ್ಮಿಂಟನ್: ಪ್ರಣಯ್‌ಗೆ ಭರ್ಜರಿ ಗೆಲುವು

ಸಿಂಗಾಪುರ್: ಬ್ಯಾಡ್ಮಿಂಟನ್‌ನಲ್ಲಿ ಭಾರತದ ಪಾರುಪತ್ಯ ಸಿಂಗಾಪುರ್ ಓಪನ್‌ಗೂ ವಿಸ್ತರಿಸಿದ್ದು, ಟೂರ್ನಿಯಲ್ಲಿ ಭಾರತದ ಅನುಭವಿ ಶಟ್ಲರ್ ಎಚ್. ಎಸ್. ಪ್ರಣಯ್ ಭರ್ಜರಿ ಗೆಲುವು ಸಾಧಿಸಿದ್ದಾರೆ. ಬುಧವಾರ ನಡೆದ ಪಂದ್ಯದಲ್ಲಿ ವಿಶ್ವ ರ್‍ಯಾಂಕಿಂಗ್‌ನಲ್ಲಿ ಐದನೇ ಸ್ಥಾನದಲ್ಲಿರುವ ಇಂಡೋನೇಷ್ಯಾದ ಜೊನಾಥನ್ ಕ್ರಿಸ್ಟಿಯನ್ನು ಪ್ರಣಯ್ 10-21, 21-12, 21-18 ಅಂತರದಲ್ಲಿ ಮಣಿಸಿ ಎರಡನೇ ಸುತ್ತಿಗೆ ಪ್ರವೇಶಿಸಿದರು.

ಪ್ರಣಯ್‌ಗೆ ರೋಚಕ ಗೆಲುವು: ಪ್ರಣಯ್ ರೋಚಕ ಗೆಲುವು ಸಾಧಿಸಿದರು. ಪಂದ್ಯದಲ್ಲಿ ಸಂಪೂರ್ಣ ಹಿಡಿತ ಯಾರಿಂದಲೂ ಸಾಧ್ಯವಾಗಿಲ್ಲ. ಮೊದಲನೇ ಸೆಟ್‌ನಲ್ಲಿ ಎದುರಾಳಿ ಕ್ರಿಸ್ಟಿ ಮುನ್ನಡೆ ಸಾಧಿಸಿದರು. ಮೊದಲಿನಿಂದಲೂ ಮುನ್ನಡೆ ಸಾಧಿಸಿದ ಅವರು, ಆ ಸೆಟ್ ಅನ್ನು 21-10ರಿಂದ ಗೆದ್ದರು. ಎರಡನೇ ಸುತ್ತಿನಲ್ಲಿ ಕಂಬ್ಯಾಕ್ ಮಾಡಿದ ಪ್ರಣಯ್ ಆಕ್ರಮಣಕಾರಿ ಆಟದೊಂದಿಗೆ




ಮುನ್ನಡೆ ಸಾಧಿಸಿದರು. ಪಂದ್ಯದುದ್ದಕ್ಕೂ ಮುನ್ನಡೆ ಕಾಯ್ದುಕೊಂಡ ಅವರು, 21-12ರಿಂದ ಸೆಟ್ ಗೆದ್ದರು. ಅದೇ ಭರವಸೆ ಮತ್ತು ಆಕ್ರಮಣಕಾರಿ ಆಟದೊಂದಿಗೆ ನಿರ್ಣಾಯಕ ಸೆಟ್‌ನಲ್ಲೂ ಉತ್ತಮ ಪ್ರದರ್ಶನ ನೀಡಿದ ಅವರು, 21-18ರಿಂದ ಗೆಲುವು ಸಾಧಿಸಿದರು. ಇನ್ನೊಂದೆಡೆ ಭಾರತದ ಕಿಡಂಬಿ ಶ್ರೀಕಾಂತ್ ಹೋರಾಟದ ನಡುವೆಯೂ ಸೋಲು ಅನುಭವಿಸಿದರು. ಸಿಂಗಾಪುರ್‌ನ ಲೋ ಕೀನ್ ಯೂ ವಿರುದ್ಧ ನಡೆದ ಮೂರು ಗೇಮ್‌ಗಳ ಪೈಪೋಟಿಯಲ್ಲಿ ಶ್ರೀಕಾಂತ್ 20-22, 21-19, 17-21 ಅಂತರದಲ್ಲಿ ಮಣಿದರು

ಮಹಿಳೆಯರ ವಿಭಾಗದಲ್ಲಿ ಭಾರತಕ್ಕೆ ನಿರಾಸೆ: ಆದರೆ ಮಹಿಳಾ ಸಿಂಗಲ್ಸ್ ವಿಭಾಗದಲ್ಲಿ ಭಾರತದ ಮಾಳವಿಕಾ ಬನ್ಸೋದ್ ಮೊದಲ ಸುತ್ತಿನಲ್ಲೇ ನಿರಾಸೆ ಅನುಭವಿಸಿದರು. ಚೈನೀಸ್ ತೈಪೆಯ ಲಿನ್ ಹ್ಸಿಯಾಂಗ್ ಟಿ ವಿರುದ್ಧ 21-11, 19-21, 12-21 ಅಂತರದಲ್ಲಿ ಸೋತು ಟೂರ್ನಿಯಿಂದ ಹೊರಬಿದ್ದರು. ಮಿಶ್ರ ಡಬಲ್ಸ್ ವಿಭಾಗದಲ್ಲಿ ಧ್ರುವ್ ಕಪಿಲಾ ಮತ್ತು ತನಿಷಾ ಕ್ರಾಸ್ಟೊ ಜೋಡಿ ಉತ್ತಮ ಪ್ರದರ್ಶನ ನೀಡಿತು. ಮಲೇಷ್ಯಾದ ವಾಂಗ್ ಟಿಯನ್ ಸಿ ಹಾಗೂ ಲಿಮ್ ಚೀವ್ ಸಿಯೆನ್ ಜೋಡಿಯನ್ನು 21-14, 20-22, 21-13 ಅಂತರದಲ್ಲಿ ಸೋಲಿಸಿ ಮುಂದಿನ ಸುತ್ತಿಗೆ ಲಗ್ಗೆಯಿಟ್ಟರು.

ಪದಬಂಧ 5997

ರಾಜಾ ಸಂಗಮೇಶ ಹಿರೇಮಠ



ಎಡದಿಂದ ಬಲಕ್ಕೆ
1.ವಿವಾಹವಾದ ಮಹಿಳೆ (3)
3.ಚುಚ್ಚುಮಾತು-ಕಟಕಿಯಾಡುವಿಕೆ (4)
5.ದೊಡ್ಡಗಾತ್ರದ ಈ ಮೀನು ಸಸ್ತನಿ (4)
7.ಹಸುವಿನ ಹಾಲನ್ನು ಹೀಗೂ ಹೇಳುತ್ತೇವೆ (3)
8.ಹಾಕಿದ ಸಹಿ, ಗುರುತು (3)
10.ಇಲ್ಲದಿರುವಿಕೆ (3)
12.ಮನೆಯ ಮುಂದೆ ಹಾಕುವ ಹಿಟ್ಟಿನ ಚಿತ್ತಾರ (3)
16.ಕೆಟ್ಟ ಮಾರ್ಗವನ್ನು ಹಿಡಿ (4)
17.ದಳ ನಡುವೆ ಇರುವ ಸೀಳುವಿಕೆ (4)
18.ಉಗುರು ಮುಂತಾದವುಗಳಿಂದ ಕೆದರು (3)

ಮೇಲಿನಿಂದ ಕೆಳಕ್ಕೆ
1.ಅಡಿಗೆಗಾಗಿ ತಂದ ಮಣ್ಣಿನ ಪಾತ್ರ (3)
2.ಅತಿರೇಕಿಯೂ ತಿಳಿದುಕೊಳ್ಳದ ತಾಳ್ಮೆ (3)
4.ಸುಬ್ರಹ್ಮಣ್ಯನನ್ನು ಹೀಗೆ ಮಗನೆಂದೂ ಹೇಳುತ್ತೇವೆ (3)
6.ಚಕ್ರಾಕಾರವಾಗಿ ಸುತ್ತುವಿಕೆ (3)
7.ದೇವಾಲಯದ ಮೇಲಿನ ಶಿಖರ (3)
9.ಹಿಂದುಮುಂದಿಲ್ಲದ ಅನಾಥ (3)
11.ಮಹಮ್ಮದೀಯರ ಕಾಲಗಣನೆ (3)
13.ಇದು ಸಾರ್ವಜನಿಕ ಹುಲ್ಲುಗಾವಲು (3)
14.ತಬ್ಬಿಕೊಳ್ಳುವಿಕೆ (3)
15.ತುಂಬ ಸೂಕ್ಷ್ಮತೆಯಿಂದ ಕೂಡಿದ್ದು (3)

5996 ಉತ್ತರ

ಎಡದಿಂದ ಬಲಕ್ಕೆ:
2.ತಿವಾಸಿ 5.ರಣಹದ್ದು
6.ದಾರಿಕೆಡು 7.ಕುಲವಾಡಿ
9.ದೇಶಪ್ರೇಮ 11.ತಿಂಡಿಪೋತ 13.ದಾರುಕರ್ಮ
14.ಪರೀಕ್ಷಿತ 15.ಗಾಳಿಮಾತು 17.ಮಗ್ಗುಲು

ಮೇಲಿನಿಂದ ಕೆಳಕ್ಕೆ:
1.ಹಾರ 2.ತಿದ್ದುಪಡಿ
3.ದೇವದಾಸಿ
4.ಬೆಂಡು 8.ಲಗಡಿ
10.ಪ್ರೇರಕ 12.ತರತಮ
13.ದಾಮುಗಾಲು 14.ಪತ್ತೆ
16.ತುದಿ

ಕಿರುಸುದ್ದಿ



ಗದಗ: ಗದಗ-ಬೆಟಗೇರಿ ನಗರದ ವಾರ್ಡ್ ನಂ. 10ರ ಕುರಹಟ್ಟಿ ಪೇಟೆಯಲ್ಲಿ 1 ಕೋಟಿ ವೆಚ್ಚದ ಸಿ.ಸಿ ರಸ್ತೆ ಹಾಗೂ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ. ಪಾಟೀಲರು ಭೂಮಿಪೂಜೆ ನೆರವೇರಿಸಿದರು.

ಸಮಾವೇಶಕ್ಕೆ ವಿರೋಧ ಸಲ್ಲ



ಮುಂಡರಗಿ: ವಿಶ್ವಮಾನವ ಬಸವಣ್ಣನವರು ಎಲ್ಲರನ್ನೂ ಸಮಾನವಾಗಿ ಕಾಣಬೇಕೆಂಬ ಸಂದೇಶವನ್ನು ಸಾರಿದ್ದಾರೆ. ಹಿಂದು ವಿರೋಧಿ ಮನಸ್ಥಿಯನ್ನು ಹೊಂದಿರುವ ಕೆಲವು ಜನರು ಬಸವಣ್ಣನ ಮೂಲ ಆಶಯವನ್ನು ಅರ್ಥಮಾಡಿಕೊಳ್ಳದೆ ಗದಗಿನಲ್ಲಿ ನಡೆಯಲಿರುವ ಹಿಂದು ಸಮಾವೇಶವನ್ನು ವಿರೋಧಿಸುತ್ತಿರುವುದು ಸಮಂಜಸವಲ್ಲ ಎಂದು ಹಿಂದೂ ರಾಷ್ಟ್ರ ಸಂಕಲ್ಪ ಸಮಿತಿ ತಾಲೂಕು ಸಂಚಾಲಕ ದೇವಪ್ಪ ಇಟಗಿ ಹೇಳಿದರು. ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿರುವ ಅವರು, ಇತಿಹಾಸ ಹಾಗೂ ಬಸವಣ್ಣನನ್ನು ಸರಿಯಾಗಿ ಅರ್ಥ ಮಾಡಿಕೊಳ್ಳದೆ ಸನಾತನ ಹಿಂದೂ ಧರ್ಮವನ್ನು ವಿರೋಧಿಸುವುದು ಸಮಂಜಸವಲ್ಲ. ಬಸವಣ್ಣನು ಸನಾತನ ಹಿಂದೂ ಧರ್ಮಕ್ಕಾಗಿ ಶ್ರಮಿಸಿದ್ದು, ಅವರು ಎಂದೂ ಹಿಂದು ಧರ್ಮವನ್ನು ಅವಹೇಳನ ಮಾಡಿಲ್ಲ. ಎಲ್ಲರೂ ನಮ್ಮವರು ಎನ್ನುವ ಉದಾತ್ತ ಮನೋಭಾವವನ್ನು ಹೊಂದಿ ಎಲ್ಲರನ್ನು ಸಮಾನರಾಗಿ ಕಾಣುತ್ತಿದ್ದ ಬಸಣ್ಣ ಹಾಗೂ ಶರಣರನ್ನು ಅರ್ಥಮಾಡಿಕೊಳ್ಳುವಲ್ಲಿ ಕೆಲವರು ಸಂಪೂರ್ಣವಾಗಿ ವಿಫಲರಾಗಿದ್ದಾರೆ ಎಂದು ಆರೋಪಿಸಿದರು. ನಮ್ಮ ನಾಡಿನಲ್ಲಿ ಬಾಳಿಹೋದ ಸಂತರು, ಶರಣರು ಹಾಗೂ ಮಹಾತ್ಮರು ಯಾವುದೇ ಒಂದು ಧರ್ಮಕ್ಕೆ ಸೀಮಿತರಾಗಿಲ್ಲ. ಅವರೆಲ್ಲ ವಿಶ್ವಧರ್ಮವನ್ನು ಪ್ರತಿಪಾದಿಸಿದ್ದಾರೆ. ಸರ್ವರನ್ನು ಸಮಾನವಾಗಿ ಕಾಣುವುದು ಶರಣ ಮೂಲ ಉದ್ದೇಶವಾಗಿತ್ತು. ಅದೇ ಹಾದಿಯಲ್ಲಿ ಹಿಂದು ಸಮಾವೇಶ ನಡೆಯುತ್ತಲಿದೆ. ಅಂಬೇಡ್ಕರ್ ಅವರು ರಚಿಸಿರುವ ಸಂವಿಧಾನವು ಸರ್ವರಿಗೂ ಸಮಾನತೆ ನೀಡಿದ್ದು, ಸಂವಿಧಾನದ ಆಶಯದಂತೆ ಹಿಂದು ಸಮಾವೇಶ ಆಯೋಜಿಸಲಾಗಿದೆ. ಸಮಾವೇಶವನ್ನು ಸಂಶಯದ ದೃಷ್ಟಿಯಿಂದ ನೋಡುವುದು ಸಮಂಜಸವಲ್ಲ ಎಂದರು.

ವಿದ್ಯಾರ್ಥಿಗಳಿಗೆ ಸನ್ಮಾನ ಇಂದು

ಮುಂಡರಗಿ: ಅಂಜುಮನ್ ಏ. ಇಸ್ಲಾಂ ಕಮಿಟಿ ಕಲಕೇರಿ ಹಾಗೂ ಗ್ರಾಮದ ನಾಲ್ಕು ವಾರ್ಡಿನ ನವಜವಾನ ಕಮಿಟಿ ಸಹಯೋಗದಲ್ಲಿ ಮೇ 28ರಂದು ಸಂಜೆ 5.30ಕ್ಕೆ ಕಲಕೇರಿಯ ಹಿರೇಮಸೂತಿ ಜಾಗದಲ್ಲಿ ಬಕ್ರೀದ್ ಆಚರಣೆ ಮತ್ತು ಕಲಕೇರಿ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಬರುವ ಕಲಕೇರಿ, ಮುಷ್ಟಕೊಪ್ಪ, ವಿರುಪಾಪೂರ, ವಿರುಪಾಪೂರ ತಾಂಡಾದ ಎಸ್.ಎಸ್.ಎಲ್.ಸಿ. ಹಾಗೂ ಪಿ.ಯು.ಸಿ. ಪರಿಕ್ಷೆಯಲ್ಲಿ ಶೇ 70 ಕಿಂತ ಹೆಚ್ಚು ಅಂಕ ಪಡೆದು ತೇರ್ಗಡೆಯಾದ ವಿದ್ಯಾರ್ಥಿಗಳಿಗೆ ಸನ್ಮಾನ ಹಾಗೂ ಅಭಿನಂದನಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಸಾನ್ನಿಧ್ಯವನ್ನು ಬೆಳಗಟ್ಟಿ ಹಜರತ್ ಮುಸ್ತಫಾ ಖಾದ್ರಿಸಾಹೇಬ್ ಹಾಗೂ ಕಲಕೇರಿ ವಿರುಪಾಪೂರದ ಅಭಿನವ ಮುದುಕೇಶ್ವರ ಶಿವಾಚಾರ್ಯ ಸ್ವಾಮೀಜಿ ವಹಿಸುವರು. ಧಾರವಾಡ ಕೆ.ಸಿ.ಸಿ. ಬ್ಯಾಂಕ್ ಅಧ್ಯಕ್ಷ ಶಿವಕುಮಾರಗೌಡ ಎಸ್. ಪಾಟೀಲ ಕಾರ್ಯಕ್ರಮ ಉದ್ಘಾಟಿಸುವರು. ಅಧ್ಯಕ್ಷತೆಯನ್ನು ದರ್ಗಾ ಕಮೀಟಿ ಅಧ್ಯಕ್ಷ ಎಂ.ಯು. ಮಕಾಂದಾರ ವಹಿಸುವರು. ಕೆ.ಪಿ.ಸಿ.ಸಿ ಪ್ರಧಾನ ಕಾರ್ಯದರ್ಶಿ ಎಸ್.ಡಿ. ಮಕಾಂದಾರ, ಜಾಹೀರುದ್ದೀನ್ ಮುಲ್ಲಾ, ಕ್ಷೇತ್ರ ಶಿಕ್ಷಣಾಧಿಕಾರಿ ಗಂಗಾಧರ ಅಣ್ಣಿಗೇರಿ ಮುಂತಾದವರು ಭಾಗವಹಿಸುವರು.

ಗದಗ ಮಾರುಕಟ್ಟೆ ಧಾರಣೆ (ಕ್ವಿಂಟಲ್)

ಕಡಲೆಕಾಳು	2112-6239
ಉದ್ದಿನಕಾಳು	3044-3044
ಅಲಸಂದೆ	2677-6729
ಬಟಾಣಿ	4850-4850
ಹೆಸರುಕಾಳು	1412-7011
ಶೇಂಗಾ	4211-8117
ಜೋಳ	1424-4721
ಮೆಕ್ಕೆಜೋಳ	2006-2011
ನವಣೆ	3500-3500
ಕುಸುಬೆ	4111-5290
ಸೂರ್ಯಕಾಂತಿ	6882-7350
ತೊಗರಿ	3617-3617
ಗೋಧಿ	1319-3016



ಗಜೇಂದ್ರಗಡ: ನಗರದಲ್ಲಿ ಇತ್ತೀಚಿಗೆ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಅಧ್ಯಕ್ಷರು ಹಾಗೂ ಪದಾಧಿಕಾರಿಗಳ ಆಯ್ಕೆ ಮಾಡಲಾಗಿತ್ತು ಅದರಂತೆ ಚುನಾವಣಾ ಅಧಿಕಾರಿಗಳು ಅಧಿಕೃತ ಪ್ರಮಾಣ ಪತ್ರವನ್ನು ವಿತರಣೆ ಮಾಡಿದ್ದರು. ನಗರದ ಕಿತ್ತೂರು ಚೆನ್ನಮ್ಮ ಮಹಿಳಾ ಪತ್ತಿನ ಸಹಕಾರಿ ಸಂಘದ ವತಿಯಿಂದ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಗಜೇಂದ್ರಗಡ ತಾಲೂಕು ಘಟಕಕ್ಕೆ ಆಯ್ಕೆ ಆದ ಅಧ್ಯಕ್ಷರು ಹಾಗೂ ಪದಾಧಿಕಾರಿಗಳಿಗೆ ಸನ್ಮಾನಿಸಲಾಯಿತು. ಸಂಘದ ಸಲಹೆಗಾರ ಮುತ್ತಣ್ಣ ಮ್ಯಾಗೇರಿ ಇತರರಿದ್ದರು.

2ಬಿ ಮೀಸಲಾತಿ ಮರು ಜಾರಿಗೊಳಿಸಲು ಆಗ್ರಹ

ಗಜೇಂದ್ರಗಡ: ಅಲ್ಪಸಂಖ್ಯಾತರ ಸಮುದಾಯದ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಅಂಜುಮನ್ ಇಸ್ಲಾಂ ಕಮಿಟಿ ಹಾಗೂ ತಾಲೂಕು ಮುಸಲ್ಮಾನ ಸಮಾಜ ಭಾಂದವರಿಂದ ತಹಶೀಲ್ದಾರ್ ಮೂಲಕ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಲಾಯಿತು.

ಈ ವೇಳೆ ಮಾತನಾಡಿದ ಅಂಜುಮನ್ ಇಸ್ಲಾಂ ಕಮಿಟಿ ನಿರ್ದೇಶಕ, ವಕೀಲ ದಾವಲಸಾಬ ತಾಳಿಕೋಟಿ ರಾಜ್ಯ ಸರ್ಕಾರ ಅಧಿಕಾರಕ್ಕೆ ಬಂದ ನಂತರದಲ್ಲಿ ಅಲ್ಪಸಂಖ್ಯಾತ ಸಮುದಾಯದ ಹಿತ ಕಾಯುವಲ್ಲಿ ಸಂಪೂರ್ಣವಾಗಿ ವಿಫಲಗೊಂಡಿದ್ದು ಈ ಹಿಂದೆ ಚುನಾವಣೆಗೂ ಮುನ್ನ ನೀಡಿದ ಭರವಸೆಗಳಲ್ಲವೂ ಕೂಡಾ ಕೇವಲ ಬಾಯಿ ಮಾತಿನಲ್ಲಿಯೇ ಇದೆ. ಅದ್ಯಾವುದು ಕೂಡಾ ಇದುವರೆಗೂ ಜಾರಿಗೆ ಬಂದಿಲ್ಲ ಎಂದರು.

ಅಂಜುಮನ್ ಇಸ್ಲಾಂ ಕಮಿಟಿ ಕಾರ್ಯದರ್ಶಿ ಫಯಾಜ್ ತೋಟದ ಮಾತನಾಡಿ. ಇತ್ತೀಚೆಗೆ ಒಂದಷ್ಟು ಪ್ರತಿರೋಧ ಮುಸಲ್ಮಾನರಿಂದ ಎದುರಿಸಿದ ರಾಜ್ಯ ಸರ್ಕಾರ ಹಿಜಾಬ್ ನಿರ್ಬಂಧವನ್ನು ತೆರವುಗೊಳಿಸಿದೆ. ಆದರೆ ನೈಜವಾಗಿ ಮುಸ್ಲಿಮರಿಗೆ ಸೀಗಬೇಕಾದ 2ಬಿ ಮೀಸಲಾತಿ ರದ್ದತಿ, ವಿಶೇಷ ಮತದಾರರ ಪರಿಷ್ಕರಣೆ (ಎಸ್ ಐ ಆರ್) ರಾಜ್ಯದಲ್ಲಿ ವಿರೋಧ ವ್ಯಕ್ತಪಡಿಸುವ ಬದಲಾಗಿ ಅದನ್ನು ಜಾರಿಗೆ ತರಲು ಮುಂದಾಗಿರುವುದು ಹಾಗೂ ದ್ವೇಷ ಭಾಷಣ - ದ್ವೇಷ ಅಪರಾಧ ನಿಯಂತ್ರಣ, ಬಜೆಟ್, ರಾಜಕೀಯ ಪ್ರಾತಿನಿಧ್ಯ , ವಿದ್ಯಾರ್ಥಿ ವೇತನ ಇಂತಹ ಮಹತ್ವದ ವಿಷಯಗಳಲ್ಲಿ ರಾಜ್ಯ ಸರಕಾರ ಯಾವುದೇ ಕ್ರಮ ಕೈಗೊಳ್ಳದೇ ಇರುವುದು ಬೇಸರ ಉಂಟು ಮಾಡಿದೆ. ರಾಜ್ಯ ಸರ್ಕಾರಕ್ಕೆ ಅಲ್ಪಸಂಖ್ಯಾತರ ಬಗ್ಗೆ ಹಾಗೂ ಮುಸಲ್ಮಾನರ ಬಗ್ಗೆ ಕಳಾಜಿ ಇದ್ದರೆ 2ಬಿ ಮೀಸಲಾತಿಯನ್ನು ಶೇ.4ರ ಬದಲಾಗಿ 8 ರಷ್ಟು ಹೆಚ್ಚಿಸಿ ಮರು ಜಾರಿಗೊಳಿಸಬೇಕು. ವಿಶೇಷ ಮತದಾರರ ಪರಿಷ್ಕರಣೆ (ಎಸ್ ಐ ಆರ್) ರಾಜ್ಯದಲ್ಲಿ ಯಾವುದೇ ಕಾರಣಕ್ಕೂ ಜಾರಿಗೆ ತರಬಾರದು ಎಂದರು.



ಗಜೇಂದ್ರಗಡ: ಅಲ್ಪಸಂಖ್ಯಾತರ ಸಮುದಾಯದ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಅಂಜುಮನ್ ಇಸ್ಲಾಂ ಕಮಿಟಿ ಹಾಗೂ ತಾಲೂಕು ಮುಸಲ್ಮಾನ ಸಮಾಜ ಭಾಂದವರಿಂದ ತಹಶೀಲ್ದಾರ್ ಮೂಲಕ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಲಾಯಿತು. ಅಂಜುಮನ್ ಇಸ್ಲಾಂ ಕಮೀಟಿ ನಿರ್ದೇಶಕರಾದ ನಾಸೀರ ಅಲಿ ಸುರಪುರ, ಎ.ಕೆ.ಕಾತರಕಿ, ಅಬ್ಬಾಸಲಿ ನಿಶಾನದಾರ, ಫಕ್ರುಸಾಬ ಕಾತರಕಿ, ಮಾಬುಸಾಬ ಸುರಪುರ, ರಜಾಕ ಢಾಲಾಯತ್, ಖಾಸಿಂಸಾಬ ಅಲಿ ದಿಂಡವಾಡ, ಅಂಜುಮನ್ ಇಸ್ಲಾಂ ಕಮೀಟಿ ಚೇರ್ಮನ್ ಹಸನಸಾಬ ತಟಗಾರ ಇದ್ದರು.

ವಿವಿಧ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಸಚಿವ ಎಚ್.ಕೆ.ಪಾಟೀಲ ಚಾಲನೆ

ಮೂಲಸೌಲಭ್ಯಗಳ ವಿಸ್ತರಣೆ ಅಗತ್ಯ



- ಗದಗ-ಬೆಟಗೇರಿ ನಗರದ ವಾರ್ಡ್ ನಂ. 10ರ ಕುರಹಟ್ಟಿ ಪೇಟೆಯಲ್ಲಿ 1 ಕೋಟಿ ವೆಚ್ಚದ ಸಿ.ಸಿ ರಸ್ತೆ ಹಾಗೂ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಸಚಿವ ಎಚ್.ಕೆ. ಪಾಟೀಲರಿಂದ ಭೂಮಿಪೂಜೆ
- ಮುಖ್ಯಮಂತ್ರಿಗಳ ಮೂಲಸೌಕರ್ಯ ಅಭಿವೃದ್ಧಿ ಕಾರ್ಯಕ್ರಮ ಯೋಜನೆಯಡಿ ಕೈಗೆತ್ತಿಕೊಳ್ಳಲಾಗಿರುವ ಈ ಕಾಮಗಾರಿ ನಾಲ್ಕು ತಿಂಗಳೊಳಗೆ ಪೂರ್ಣಗೊಳ್ಳಲಿದ್ದು, ರಸ್ತೆ ಅಭಿವೃದ್ಧಿ ಕಾರ್ಯಗಳನ್ನು ಗುಣಮಟ್ಟದಿಂದ ಪೂರ್ಣಗೊಳಿಸುವಂತೆ ಸಚಿವರು ಅಧಿಕಾರಿಗಳು ಹಾಗೂ ಗುತ್ತಿಗೆದಾರರಿಗೆ ಸೂಚಿಸಿದರು
- ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ ಯೋಜನೆಯಡಿ ವಾರ್ಡ್ ನಂ. 10ರಲ್ಲಿ ನೂತನವಾಗಿ ನಿರ್ಮಿಸಲಾದ ಅಂಗನವಾಡಿ ಕಟ್ಟಡವನ್ನು ಸಚಿವರು ಲೋಕಾರ್ಪಣೆ ಮಾಡಿದರು.

ಗದಗ: ನಗರದ ವಾರ್ಡ್ ನಂ. 06ರ ಬೆಟಗೇರಿಯಲ್ಲಿ ಮೂಲಸೌಕರ್ಯ ಅಭಿವೃದ್ಧಿಗೆ ಮತ್ತೊಂದು ಮಹತ್ವದ ಹೆಜ್ಜೆಯಾಗಿ 1 ಕೋಟಿ ವೆಚ್ಚದ ಸಿ.ಸಿ ರಸ್ತೆ ಹಾಗೂ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ.ಪಾಟೀಲ ಭೂಮಿಪೂಜೆ ನೆರವೇರಿಸಿದರು.

ಚನ್ನಪ್ಪಗೌಡರ ಮನೆಯ ಸಮೀಪ ಆಯೋಜಿಸಲಾಗಿದ್ದ ಕಾರ್ಯಕ್ರಮದಲ್ಲಿ ಸಚಿವರು ನೂತನ ಅಂಗನವಾಡಿ ಕಟ್ಟಡವನ್ನು ಉದ್ಘಾಟಿಸಿ ಸಾರ್ವಜನಿಕ ಬಳಕೆಗೆ ಸಮರ್ಪಿಸಿದರು. ಬಳಿಕ ಮಾತನಾಡಿದ ಅವರು, ನಗರದ ಸಮಗ್ರ ಅಭಿವೃದ್ಧಿಗೆ ರಸ್ತೆ, ಶಿಕ್ಷಣ ಹಾಗೂ ಮೂಲಭೂತ ಸೌಲಭ್ಯಗಳ ವಿಸ್ತರಣೆ ಅತ್ಯಗತ್ಯವಾಗಿದ್ದು, ಸರ್ಕಾರ ಜನಸಾಮಾನ್ಯರ ಅಗತ್ಯಗಳಿಗೆ ಸ್ಪಂದಿಸುವ ಕೆಲಸ ಮಾಡುತ್ತಿದೆ ಎಂದರು. ಅಂಗನವಾಡಿ ಕಟ್ಟಡ ಉದ್ಘಾಟಿಸಿ ಮಾತನಾಡಿದ ಸಚಿವರು, ಮಕ್ಕಳ ಭವಿಷ್ಯ ನಿರ್ಮಾಣದಲ್ಲಿ ಅಂಗನವಾಡಿಗಳ ಪಾತ್ರ ಅತ್ಯಂತ ಮಹತ್ವದ್ದಾಗಿದೆ ಎಂದರು. ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಅಕ್ಬರ್ ಸಾಬ್ ಬಬರ್ಜಿ, ಜಿಲ್ಲಾ ಗ್ಯಾರಂಟಿ ಯೋಜನೆ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಬಿ.ಬಿ. ಅಸೂಟಿ, ನಗರಸಭಾ ಸದಸ್ಯೆ ಲಕ್ಷ್ಮವ್ವ ಬಜಂತ್ರಿ, ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ಬಸನಗೌಡ ಕೋಟೂರ, ನಗರಸಭೆ ಪೌರಾಯುಕ್ತ ರಾಜಾರಾಮ್ ಪವಾರ ಇತರರಿದ್ದರು.

> ಮಕ್ಕಳ ಪ್ರಾಥಮಿಕ ಶಿಕ್ಷಣ, ಪೌಷ್ಠಿಕ ಆಹಾರ ಹಾಗೂ ಸಂಸ್ಕಾರಗಳ ಮೊದಲ ಹಂತ ಅಂಗನವಾಡಿಯಲ್ಲಿ ಆರಂಭವಾಗುತ್ತದೆ. ಉತ್ತಮ ಸೌಲಭ್ಯಗಳೊಂದಿಗೆ ಅಂಗನವಾಡಿಗಳು ಮಕ್ಕಳ ಬೆಳವಣಿಗೆಗೆ ಪೂರಕ ವಾತಾವರಣ ಒದಗಿಸಬೇಕು.
> ■ ಎಚ್.ಕೆ.ಪಾಟೀಲ, ಸಚಿವ

ಹಕ್ಕು ಪತ್ರ ವಿತರಣೆ

ವಾರ್ಡ್‌ನ 35 ಫಲಾನುಭವಿಗಳಿಗೆ ಹಕ್ಕುಪತ್ರಗಳನ್ನು ವಿತರಿಸಲಾಯಿತು. ನೀಲವ್ವ ಪರಸಪ್ಪ ಬಜಂತ್ರಿ, ರೇಖವ್ವ ರಾಜಪ್ಪ ಬಜಂತ್ರಿ, ಅನಂತ ಬೋಜಪ್ಪ ಬಜಂತ್ರಿ, ಯಮನವ್ವ ಬಜಂತ್ರಿ, ಮಾಯವ್ವ ಬಜಂತ್ರಿ, ಗವಿಸಿದ್ದಪ್ಪ ಬಜಂತ್ರಿ ಸೇರಿದಂತೆ ಹಲವರು ಸಚಿವರಿಂದ ಹಕ್ಕುಪತ್ರ ಸ್ವೀಕರಿಸಿದರು.

ರಸ್ತೆ ಗುಣಮಟ್ಟ ಉತ್ತಮವಾಗಿರಲಿ

ಗದಗ: ನಗರದ ಕಳಸಾಪುರ ರಸ್ತೆ ಇಂಡಿಯನ್ ಬ್ಯಾಂಕ್ ಹತ್ತಿರದ ವಾರ್ಡ್ ಸಂಖ್ಯೆ 34 ಮತ್ತು 35ರಲ್ಲಿ 1 ಕೋಟಿ ವೆಚ್ಚದಲ್ಲಿ ಕೈಗೆತ್ತಿಕೊಳ್ಳಲಾದ ಸಿ.ಸಿ ರಸ್ತೆ ಹಾಗೂ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ. ಪಾಟೀಲರು ಭೂಮಿಪೂಜೆ ನೆರವೇರಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಸಚಿವರು, ನಗರದ ಅಭಿವೃದ್ಧಿಗೆ ಉತ್ತಮ ಗುಣಮಟ್ಟದ ರಸ್ತೆ ನಿರ್ಮಾಣ ಅಗತ್ಯವಾಗಿದ್ದು, ಕಾಮಗಾರಿ ಯಾವುದೇ ಕಾರಣಕ್ಕೂ ಕಳಪೆಯಾಗಬಾರದು ಎಂದು ಗುತ್ತಿಗೆದಾರರಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು. ರಸ್ತೆ ನಿರ್ಮಾಣದಲ್ಲಿ ಗುಣಮಟ್ಟಕ್ಕೆ ಮೊದಲ ಆದ್ಯತೆ ನೀಡಬೇಕು. ಸಾರ್ವಜನಿಕರು ವರ್ಷಗಳ ಕಾಲ ಸುಗಮವಾಗಿ ಸಂಚಾರ ಮಾಡಲು ಅನುಕೂಲವಾಗುವ ರೀತಿಯಲ್ಲಿ ಕಾಮಗಾರಿ ನಡೆಯಬೇಕು ಎಂದರು. ಸಾರ್ವಜನಿಕ ಉದ್ಯಾನವನದಲ್ಲಿ ಜಿಮ್ ಸಾಮಗ್ರಿಗಳನ್ನು ಖರೀದಿಸಲು 5 ಲಕ್ಷ ಅನುದಾನ ನೀಡುವುದಾಗಿ ಸಚಿವರು ಘೋಷಿಸಿದರು.

ವ್ಯಕ್ತಿ ನಿರ್ಮಾಣ ಕಾರ್ಯ ಅಗತ್ಯ: ಸ್ವಾಮೀಜಿ



ನರಗುಂದ: ಕನಸು ಕಟ್ಟಿಕೊಂಡು ಬಂದ ಪತ್ನಿಗೆ ನಿರಾಸೆ ಮಾಡಬೇಡಿ. ನಿಮ್ಮ ಬಗ್ಗೆ ಏನು ಗೊತ್ತಿಲ್ಲದ ಹೆಣ್ಣುಮಗಳು ನಿಮ್ಮನ್ನೇ ನಂಬಿ ಬಂದಿದ್ದಾಳೆ. ಈಗ ಎಡವಿದಂತೆ ಮತ್ತೆಂದು ಜೀವನದಲ್ಲಿ ಮತ್ತೇ ಎಡವಿ ಬೀಳಬೇಡಿ. ಮನುಷ್ಯತ್ವದಿಂದ ರಾಜ ಮಾರ್ಗದಲ್ಲಿ ಜೀವನ ಸಾಗಿಸಿರೆಂದು ಪತ್ರೀವನಮಠದ ಸಿದ್ಧವೀರ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ಪಟ್ಟಣದ ರೋಟ್ರಾಕ್ಟ್ ಕನ್ನಡ ಮಾಧ್ಯಮ ಪ್ರೌಢಶಾಲೆ ಕಟ್ಟಡದಲ್ಲಿ ಡಾ. ಡಿ. ವೀರೇಂದ್ರ ಹೆಗ್ಗಡೆಯವರ ಹಾಗೂ ಮಾತೃಶ್ರೀ ಡಾ.ಹೇಮಾವತಿ ಹೆಗ್ಗಡೆಯವರ ಮಾರ್ಗದರ್ಶನದೊಂದಿಗೆ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಿಂದ ನಡೆದ ಮದ್ಯವರ್ಜನ ಶಿಬಿರದ ಸಮಾರೋಪ ಸಮಾರಂಭದಲ್ಲಿ ಮಾತನಾಡಿದರು. ದುಶ್ಚಟಮುಕ್ತ ಸಮಾಜ ನಿರ್ಮಾಣಕ್ಕೆ ವ್ಯಕ್ತಿ ನಿರ್ಮಾಣದ ಕಾರ್ಯ ಅವಶ್ಯವಿದೆ ಎಂದರು. ಬೆಳ್ತಂಗಡಿಯ ನಟರಾಜ ಮಾತನಾಡಿ, ಇಲ್ಲಿಯವರೆಗೆ ನಡೆದ 2059 ಶಿಬಿರಗಳಲ್ಲಿ 1 ಲಕ್ಷ 36 ಸಾವಿರಕ್ಕೂ ಹೆಚ್ಚು ಮದ್ಯ ವ್ಯಸನಿಗಳು ಶಿಕ್ಷಣ ಪಡೆದಿದ್ದಾರೆ. ಕುಡಿತದಿಂದ ಬೀದಿಗೆ ಬಂದಿದ್ದ ವ್ಯಕ್ತಿ ಶಿಕ್ಷಣ ಪಡೆದ ನಂತರ ಸಮಾಜದಲ್ಲಿ ಗೌರವದಿಂದ ಜೀವನ ಮಾಡುತ್ತಿದ್ದಾನೆ ಎಂದರು. ಮದ್ಯವರ್ಜನ ಶಿಬಿರದ ವ್ಯವಸ್ಥಾಪನ ಸಮಿತಿ ಅಧ್ಯಕ್ಷ ಮಂಜುನಾಥ ಮೇಣಸಗಿ ಮಾತನಾಡಿ, ಮದ್ಯವರ್ಜನ ಶಿಬಿರದಲ್ಲಿ ಪಡೆದ ಶಿಕ್ಷಣ ವ್ಯರ್ಥ ಆಗಬಾರದು. ಇವತ್ತಿನಿಂದ ನವಜೀವನಕ್ಕೆ ಕಾಲಿಡುತ್ತಿರುವ ತಮ್ಮ ಬದುಕು ಮತ್ತೊಬ್ಬರು ಬೊಟ್ಟು ಮಾಡದಂತಿರಲಿ. ತಂದೆ ತಾಯಿ, ಹೆಂಡತಿ ಮಕ್ಕಳಿಗಿಂತ ಸರಾಯಿ ಮುಖ್ಯ ಅಲ್ಲ ಎಂಬುದನ್ನು ಅರಿತುಕೊಂಡು ಜೀವನ ಸಾಗಿಸಬೇಕು. ಪತ್ನಿಯರು ಗಂಡಂದರಿಗೆ ಹಳೇ ನೆನಪು ತರಬೇಡಿ, ನವಜೀವನದಲ್ಲಿ ಎಲ್ಲವೂ ಹೊಸದಾಗಿರಲಿ ಎಂದರು. ನಾಗೇಶ ವೈ., ಕೇಶವ ದೇವಾಂಗ, ಕೊಪ್ಪಳ ನಿರ್ದೇಶಕ ಚಂದ್ರಶೇಖರ ಜೆ., ಶಿವಾನಂದ ಬೆಂತೂರು, ಗೌರವಾಧ್ಯಕ್ಷ ರಾಜು ಕಲಾಲ ಮಾತನಾಡಿದರು. ಶಿಬಿರದ ಕೊನೆಯ ದಿನ 93 ಶಿಬಿರಾರ್ಥಿಗಳನ್ನು ಮತ್ತು ಅವರ ಹೆಂಡತಿಯೊಂದಿಗೆ ಮರುಮದುವೆ ಮಾಡಿಸಿ, ನವಜೀವನಕ್ಕೆಕಾಲಿಡಿಸಲಾಯಿತು. ಯಲ್ಲಪ್ಪಗೌಡ್ರ ನಾಯ್ಕರ, ಶಿವಾನಂದ ಬೆಂತೂರ, ಎಚ್.ಬಿ. ಅಸೂಟಿ, ನೀಲಪ್ಪ ಗುಡದನ್ನವರ, ಸಂಗಮೇಶ ಕೊಳ್ಳಿಯವರ, ಉಮಾ ದ್ಯಾವನೂರ, ಜೆ. ಚಂದ್ರಶೇಖರ, ವಿ.ಎನ್. ಕೊಳ್ಳಿಯವರ, ಚನ್ನಪ್ಪ ಕಂತಿ, ಯೋಜನಾಧಿಕಾರಿ ಮಾಲತಿ ದಿನೇಶ, ಶಂಕರಗೌಡ ಪಾಟೀಲ, ರಾಜೇಸಾಬ ತಹಶೀಲ್ದಾರ್ ವಂದಿಸಿದರು, ಆನಂದ ಗೌಳಿ ನಿರೂಪಿಸಿದರು. ನವಜೀವನ ಸಮಿತಿ ಹಾಗೂ ಶೌರ್ಯ ವಿಪತ್ತು ನಿರ್ವಹಣಾ ಸಮಿತಿಯವರು ಇದ್ದರು.

ವಿದ್ಯಾರ್ಥಿಗಳು ಕೇವಲ ಪಠ್ಯಕ್ಕೆ ಸೀಮಿತವಾಗದಿರಲಿ

ಗಜೇಂದ್ರಗಡ: ನಗರದ ಶ್ರೀ ಬೆನಕಪ್ಪ ಶಂಕ್ರಪ್ಪ ಸಿಂಹಾಸನದ ಸರ್ಕಾರಿ ಪ್ರಥಮ ದರ್ಜೆ ಕಾಲೇಜುನಲ್ಲಿ 2025-26ನೇ ಸಾಲಿನ ಶೈಕ್ಷಣಿಕ ವರ್ಷದ ಸಾಂಸ್ಕೃತಿಕ, ಕ್ರೀಡಾ, ಯುವ ರೆಡ್ ಕ್ರಾಸ್, ಸ್ಕೌಟ್ಸ್ ಮತ್ತು ಗೈಡ್ಸ್, ಉದ್ಯೋಗ ಮಾಹಿತಿ ಘಟಕ, ಎನ್.ಎಸ್.ಎಸ್ ಘಟಕ ಹಾಗೂ ವಿವಿಧ ಘಟಕಗಳ ಚಟುವಟಿಕೆಗಳ ಸಮಾರೋಪ ಸಮಾರಂಭ ಹಾಗೂ ಅಂತಿಮ ವರ್ಷದ ಬಿ.ಎ/ಬಿ.ಎಸ್ಸಿ/ಬಿ.ಕಾಂ ವಿದ್ಯಾರ್ಥಿಗಳ ಬೀಳ್ಕೊಡುಗೆ ಸಮಾರಂಭ ಬುಧುವಾರ ನಡೆಯಿತು.

ಕಾರ್ಯಕ್ರಮವನ್ನು ಸಾವಿತ್ರಿ. ಬಿ. ಕಡಿ, ಕೆ.ಎ.ಎಸ್ (ಹಿರಿಯ ಶ್ರೇಣಿ), ವ್ಯವಸ್ಥಾಪಕ ನಿರ್ದೇಶಕ ಬಿ.ಆರ್.ಟಿ.ಸಿ ಹುಬ್ಬಳ್ಳಿ-ಧಾರವಾಡ ಉದ್ಘಾಟಿಸಿ ಮಾತನಾಡಿ, ವಿದ್ಯಾರ್ಥಿಗಳು ಕೇವಲ ಪಠ್ಯಕ್ಕೆ ಸೀಮಿತವಾಗದೆ ಕಾಲೇಜು ದಿನಗಳಲ್ಲಿ ಸಿಗುವ ಎನ್.ಎಸ್.ಎಸ್, ರೆಡ್ ಕ್ರಾಸ್‌ನಂತಹ ವೇದಿಕೆಗಳನ್ನು ಬಳಸಿಕೊಂಡು ತಮ್ಮ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಬೇಕು ಎಂದರು.

ಕಾಲೇಜು ಅಭಿವೃದ್ಧಿ ಸಮಿತಿಯ ಸದಸ್ಯ ಶಿವರಾಜ ಘೋರ್ಪಡೆ ಮಾತನಾಡಿ, ತಾಯಿಯ ತ್ಯಾಗ, ತಂದೆಯ ಬೆವರಿನ ಮಹತ್ವವನ್ನು ಅರಿತ ವಿದ್ಯಾರ್ಥಿಗಳು ಜೀವನದಲ್ಲಿ ಉನ್ನತಿಯ ಶಿಖರವನ್ನು ಏರುತ್ತಾರೆ. ಕನಸನ್ನು ಕಂಡು ಅದನ್ನು ಸಾಕಾರಗೊಳಿಸುವತ್ತ ಪರಿಶ್ರಮ ಪಡಬೇಕು ಎಂದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಬಿ.ಎಸ್.ಎಸ್ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ಬಸವಂತಪ್ಪ. ಕೆ. ಹೊಸಹಳ್ಳಿ ಮಾತನಾಡಿ, ನಮ್ಮ ಕಾಲೇಜಿನ ವಿದ್ಯಾರ್ಥಿಗಳು ಶೈಕ್ಷಣಿಕವಾಗಿ ಮಾತ್ರವಲ್ಲದೆ ಸಾಂಸ್ಕೃತಿಕ ಮತ್ತು ಕ್ರೀಡಾ ರಂಗದಲ್ಲೂ ಉತ್ತಮ ಸಾಧನೆ ಮಾಡಿ ಸಂಸ್ಥೆಗೆ ಕೀರ್ತಿ ತಂದಿದ್ದಾರೆ. ನಿರ್ಗಮಿಸುತ್ತಿರುವ ಅಂತಿಮ ವರ್ಷದ ವಿದ್ಯಾರ್ಥಿಗಳು ಸಮಾಜದಲ್ಲಿ ಜವಾಬ್ದಾರಿಯುತ ನಾಗರಿಕರಾಗಿ ಬೆಳಗಲಿ ಎಂದು ಹಾರೈಸಿದರು. ಅಜಿತ ವಂದಕುದರಿ, ಎಫ್.ಎಸ್ ಕರಿದುರಗಣ್ಣವರ, ಶ್ರೀಕಾಂತ ಅವಧೂತ, ಹನುಮೇಶ, ಸಂಚಾಲಕರು, ಡಾ. ಎಂ.ವೈ. ಚಟ್ಟೇಣ್ಣವರ, ಡಾ. ಪ್ರಶಾಂತ ಹುಲಕುಂದ, ಹಿತೇಶ ಬಿ,ಅಜೀತಕುಮಾರ ಪೂಜಾರ, ಡಾ. ಹೊಸಮನಿ ಮಂಜುನಾಥ, ಡಾ. ವಿಶ್ವನಾಥ ಕೆ.ಎಸ್. ಡಾ. ಕಳಕನಗೌಡ ಪೋ ಪಾಟೀಲ, ಜಗದೀಶಕುಮಾರ ಬೂದಿಹಾಳ. ಆರ್.ವಿ. ಸುಂಕದ , ಶೋಭಾ.ಎಂ, ಕಡಿ. ಸಿದ್ದೇಶ ಕೆ,ಡಾ. ಉಮಾಕಾಂತ ಲಮಾಣಿ, ಡಾ. ಸುನಿತಾ ಎನ್., ರವಿ ಬಿ. ಪರಶುರಾಮ ಕಟ್ಟಿಮನಿ, ಯಮನಪ್ಪ ಮೇಗೂರ, ಕರಿಯಪ್ಪ ಕೊಡವಳ್ಳಿ, ಸದ್ದಾಂ ಹುಸೇನ ನದಾಫ, ಹನುಮಂತ ಪುರ್ತಗೇರಿ, ಶಿವಪ್ರಸಾದ ಜಗಾಪುರ, ಚಂದ್ರಪ್ಪ ಎಚ್., ವಿಶಾಲಪ್ಪ ಭಜಂತ್ರಿ, ಮಹೇಶ್‌ಗೌಡ ಗೌಡರ, ಎಲ್. ಕೆ. ಹಿರೇಮಠ, ಲಿಂಗನಗೌಡ ಪಾಟೀಲ, ಚಂದ್ರಪ್ಪ ಕಲಕೇರಿ, ಬಸವರಾಜ ಬಿನ್ನಾಳ, ಗೀತಾ ಅಂಗಡಿ, ಉಷಾ ರಂಗನ್ನವರ, ಬಸವರಾಜ ಪಟ್ಟದಕಲ್ಲ ಇತರರಿದ್ದರು.



ಅಕ್ರಮ ಮರಳು ಗಣಿಗಾರಿಕೆ, ಸಾಗಾಣಿಕೆ ನಿಲ್ಲಲಿ

ಲಕ್ಷ್ಮೇಶ್ವರ: ತಾಲೂಕಿನಾದ್ಯಂತ ಅಕ್ರಮ ಮರಳು ಗಣಿಗಾರಿಕೆ ಮತ್ತು ಸಾಗಾಣಿಕೆ ಅವ್ಯಾಹತವಾಗಿ ನಡೆದಿದ್ದು, ಇದಕ್ಕೆ ಅಧಿಕಾರಿಗಳ ಪರೋಕ್ಷ ಬೆಂಬಲವಿದೆ. ಇದಕ್ಕೆ ಕಡಿವಾಣ ಹಾಕಬೇಕು. ಇಲ್ಲದಿದ್ದಲ್ಲಿ ಕರವೇ ಸ್ವಾಭಿಮಾನಿ ಸೇನೆ ಹೋರಾಟಕ್ಕಿಳಿಯಲಿದೆ ಎಂದು ಕರವೇ ಸ್ವಾಭಿಮಾನಿ ಸೇನೆಯ ಜಿಲ್ಲಾಧ್ಯಕ್ಷ ಶರಣು ಗೋಡಿ ಎಚ್ಚರಿಸಿದರು.

ಅವರು ಬುಧವಾರ ತಹಶೀಲ್ದಾರ್ ಕಚೇರಿಯಲ್ಲಿ ಲಕ್ಷ್ಮೇಶ್ವರ ತಾಲೂಕಿನಲ್ಲಿ ಅಕ್ರಮ ಮರಳು ದಂಧೆಯ ಕುರಿತು ಕರ್ನಾಟಕ ರಕ್ಷಣಾ ವೇದಿಕೆ ಸ್ವಾಭಿಮಾನಿ ಸೇನೆ ವತಿಯಿಂದ ತಹಶೀಲ್ದಾರ್ ಮೂಲಕ ಜಿಲ್ಲಾಧಿಕಾರಿಗಳಿಗೆ ಮನವಿ ಅರ್ಪಿಸಿ ಮಾತನಾಡಿದರು. ತಾಲೂಕಿನ ಅಕ್ಕಿಗುಂದ, ಬಟ್ಟೂರ, ಅಮರಾಪೂರ, ಹುಲ್ಲೂರು, ಹಿರೇಮಲ್ಲಾಪುರ, ನೇಲೋಗಲ್, ಆದರಹಳ್ಳಿ, ಬಡ್ನಿ ಹಾಗೂ ಮಾಡಳ್ಳಿ ಗ್ರಾಮಗಳಲ್ಲಿ ಅಕ್ರಮ ಮರಳು ಗಣಿಗಾರಿಕೆ ಮತ್ತು ಸಾಗಾಣಿಕೆ ದಂಧೆ ನಿರಂತರವಾಗಿ ನಡೆಯುತ್ತಿದ್ದು, ಕೆಲವು ಟಿಪ್ಪರ್ ಹಾಗೂ ಲಾರಿಗಳು ಬೇರೆ ತಾಲೂಕುಗಳಿಗೆ ನೀಡಲಾಗಿರುವ ಪಾಸ್‌ಗಳನ್ನು ದುರುಪಯೋಗಪಡಿಸಿಕೊಂಡು ಒಂದೇ ಪಾಸ್‌ನಲ್ಲಿ 4-5 ಟ್ರಿಪ್‌ಗಳನ್ನು ಮರಳು ಸಾಗಾಣಿಕೆ ನಡೆಸುತ್ತಿವೆ ಎಂದು ಆರೋಪಿಸಿದರು.



ತಾಲೂಕು ಅಧ್ಯಕ್ಷ ನಾಗೇಶ ಅಮರಾಪೂರ, ಮಾತೇಂಶ ಮಣಕವಾಡ, ಪ್ರವೀಣ ಆಚಾರಿ, ಮಹಾಂತೇಶ ಉಮಚಗಿ, ಕೈಸರ್ ಮೊಹಮ್ಮದಲಿ, ಸುಲೇಮಾನ್ ಅಡೂರ, ಮಲಿಕ್ ಕಡಕೋಳ, ಬಸವರಾಜ ಅಮರಾಪುರ, ರಾಜು ಅಮರಾಪುರ, ಅಯ್ಯಪ್ಪ ಪಾಟೀಲ್ ಅಶೋಕ ಕುರಿ ಖಾದರಬಾಷಾ ಶಿರಹಟ್ಟಿ ಜಿಲಾನಿ ಸಿದ್ದಿ ಇತರರಿದ್ದರು.

ಪಡಿತರ ಅಕ್ಕಿ ಅಕ್ರಮ ಮಾರಾಟ ತಡೆಯಿರಿ



ಲಕ್ಷ್ಮೇಶ್ವರ: ತಾಲೂಕು ವ್ಯಾಪ್ತಿಯಲ್ಲಿ ಪಡಿತರ ಅಕ್ಕಿಯ ಅಕ್ರಮ ಮಾರಾಟ ವಹಿವಾಟು ದೊಡ್ಡ ಮಟ್ಟದಲ್ಲಿ ನಡೆಯುತ್ತಿದ್ದು, ಕೂಡಲೇ ಅಕ್ರಮ ಅಕ್ಕಿ ದಂದೆಕೋರರ ಮೇಲೆ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿ ಜಯಕರ್ನಾಟಕ ಸಂಘಟನೆಯವರು ಗ್ರೇಡ್ -2 ತಹಸೀಲ್ದಾರ ಮಂಜುನಾಥ ಅಮಾಸಿ ಅವರಿಗೆ ಮನವಿ ಅರ್ಪಿಸಿದರು.

ಜಯಕರ್ನಾಟಕ ಸಂಘಟನೆಯ ತಾಲೂಕು ಅಧ್ಯಕ್ಷ ಇಸ್ಮಾಯಿಲ್ ಆಡೂರ ಹಾಗೂ ಮುಖಂಡ ರಮೇಶ ಹಂಗನಕಟ್ಟಿ ಮಾತನಾಡಿ, ಅಕ್ರಮ ಅಕ್ಕಿ ದಂಧೆಕೋರರು ಗ್ರಾಮಗಳಿಗೆ ಹಾಗೂ ನಗರ ಪ್ರದೇಶಗಳ ಮನೆ ಮನೆಗಳಿಗೆ ತೆರಳಿ ಬಡ ಕುಟುಂಬಗಳಿಂದ ಪ್ರತಿ ಕೆ.ಜಿ. ಅಕ್ಕಿಯನ್ನು 12 ರಿಂದ 15 ರೂಪಾಯಿ ಕೆಜಿ ಖರೀದಿಸಿ ಅದನ್ನು ಹೆಚ್ಚಿನ ದರಕ್ಕೆ ದೊಡ್ಡ ಮಟ್ಟದ ಸಂಗ್ರಹಕಾರರಿಗೆ ಮಾರಾಟ ಮಾಡುತ್ತಿದ್ದಾರೆ. ಬಳಿಕ ಆ ಅಕ್ರಮ ಪಡಿತರ ಅಕ್ಕಿಯನ್ನು ಲಾರಿಗಳ ಮೂಲಕ ವಿವಿಧ ಜಿಲ್ಲೆಗಳು ಹಾಗೂ ಹೊರರಾಜ್ಯಗಳಿಗೆ ಅಕ್ರಮವಾಗಿ ಸಾಗಾಟ ಮಾಡಲಾಗುತ್ತಿದೆ ಎಂದು ಆರೋಪಿಸಿದರು. ಇಸಾಕಭಾಷಾ ಹರಪನಹಳ್ಳಿ, ಸದಾನಂದ ನಂದೆಣ್ಣವರ, ಶರಣಪ್ಪ ಬಸಾಪುರ, ಪೀರಸಾಬ್ ರಿತ್ತಿ, ಮೈನು ಮೋಮೀನ್, ತನ್ವಿರ ರಿತ್ತಿ, ಕರೀಂಸಾಬ ಶಿರಹಟ್ಟಿ, ಸಿದ್ದಲಿಂಗೇಶ ಮರಳಿಹಟ್ಟಿ ಅನೇಕರು ಇದ್ದರು.

ಮಾಂಸ ಮಾರಾಟದ ಅಂಗಡಿ ತೆರವಾಗಲಿ

ಲಕ್ಷ್ಮೇಶ್ವರ: ಪಟ್ಟಣದ ಸೋಮೇಶ್ವರ ದೇವಸ್ಥಾನದ ಅತಿ ಹತ್ತಿರದಲ್ಲಿರುವ ಮಾಂಸ ಮಾರಾಟದ ಅಂಗಡಿಗಳನ್ನು ಅಲ್ಲಿಂದ ತೆರವುಗೊಳಿಸಬೇಕು ಮತ್ತು ಇಲ್ಲಿ ಮೀನು, ಮಟನ್, ಚಿಕನ್ ಮಾರಾಟವನ್ನು ನಿಲ್ಲಿಸಿ ಮಾಂಸದ ಅಂಗಡಿಗಳನ್ನು ಊರಿನ ಹೊರಭಾಗಕ್ಕೆ ಸ್ಥಳಾಂತರಿಸಬೇಕು ಮತ್ತು ಬಕ್ರೀದ್ ಹಬ್ಬದ ವೇಳೆ ಗೋಹತ್ಯೆ ನಡೆಯದಂತೆ ತಡೆಯಬೇಕು ಎಂದು ಶ್ರೀರಾಮ್ ಸೇನಾ ತಾಲೂಕು ಅಧ್ಯಕ್ಷ ಈರಣ್ಣ ಪೂಜಾರ ಹಾಗೂ ಹಿಂದೂ ಯುವ ಮುಖಂಡ ಗಂಗಾಧರ ಮೆಣಸಿನಕಾಯಿ ಹೇಳಿದರು.

ಅವರು ಬುಧವಾರ ಪಟ್ಟಣದ ತಹಶೀಲ್ದಾರ್ ಕಚೇರಿಯಲ್ಲಿ ಗ್ರೇಡ್-2 ತಹಶೀಲ್ದಾರ್ ಮಂಜುನಾಥ ಅಮಾಸಿ ಅವರಿಗೆ ಶ್ರೀ ರಾಮ್ ಸೇನಾ ಹಾಗೂ ಹಿಂದೂ ರಾಷ್ಟ್ರ ಸಮನ್ವಯ ಸಮಿತಿ ವತಿಯಿಂದ ಈ ಕುರಿತು ಮನವಿ ಸಲ್ಲಿಸಿ ಮಾತನಾಡಿದರು. ಅಂಗಡಿಗಳನ್ನು 15 ದಿನದಲ್ಲಿ ಸ್ಥಳಾಂತರ ಮಾಡಬೇಕು. ಅಕ್ರಮ ಕಸಾಯಿಖಾನೆಗೆ ಅಧಿಕಾರಿಗಳು ಭೇಟಿ ನೀಡಿ ನೋಟಿಸ್ ನೀಡಿ ಅಲ್ಲಿಂದ ತೆರವು ಗೊಳಿಸಬೇಕು ಎಂದರು. ದುಂಡೇಶ ಕೋಟಗಿ, ವಿಜಯ ಕುಂಬಾರ, ಶಕ್ತಿ ಕತ್ತಿ, ವಿಶಾಲ ಬಟಗುರ್ಕಿ, ನವೀನ ಹಿರೇಮಠ, ಮಹಾಂತೇಶ ರಗಟಿ, ಅಮಿತ ಗುಡಗೇರಿ, ಉಳವೇಶಗೌಡ ಪಾಟೀಲ್, ಸಂಗಮೇಶ ಬೆಳವಲಕೊಪ್ಪ, ಪ್ರಶಾಂತ ಗಾಂಜಿ, ಅಕ್ಷಯ ಕುಮಶಿ, ನಾಗರಾಜ ಪಾಟೀಲ, ಯಶವಂತ ಶಿರಹಟ್ಟಿ, ಹನುಮಂತ ರಾಮಗೇರಿ, ಯಶವಂತ ಬಳ್ಳಾರಿ, ಪ್ರವೀಣ್ ಹಗರದ, ಅರುಣಗೌಡ ಪಾಟೀಲ್, ಬಸವರಾಜ ಶಿರಬಡಗಿ, ಆದಿತ್ಯ ನರೇಗಲ್ ಇತರರಿದ್ದರು.



ಸೋಲು-ಗೆಲುವು ಕ್ರೀಡೆಯಲ್ಲಿ ಸಹಜ



ಗಜೇಂದ್ರಗಡ: ನಗರದಲ್ಲಿ ಒಂದು ವಾರ ಎಸ್.ಎಮ್.ಭೂಮರೆಡ್ಡಿ ಮೈದಾನದಲ್ಲಿ ದಿ.ಈಶ್ವರಪ್ಪ ರೇವಡಿ ಸ್ಮರಣಾರ್ಥಕವಾಗಿ ಕೋಟೆನಾಡು ಗಜೇಂದ್ರಗಡ ಪ್ರೀಮಿಯರ್ ಲೀಗ್ ಸೀಸನ್ 8 ಕ್ರಿಕೆಟ್ ಪಂದ್ಯಾವಳಿಗಳು ನಡೆಯಿತು.

ಫೈನಲ್ ಪಂದ್ಯದಲ್ಲಿ ಪಿಂಕ್ ಹಿಟ್ಟರ್ಸ್ ಹಾಗೂ ಇಂಡಿಯನ್ ವಾರಿಯರ್ಸ ಹಣಾಹಣೆಯಲ್ಲಿ ಪಿಂಕ್ ಹಿಟ್ಟರ್ಸ್ ತಂಡವು ಈ ಬಾರಿಯ ಚಾಂಪಿಯನ್ ಆಗಿ ಹೊರಹೊಮ್ಮಿತ್ತು. ಬಳಿಕ ಬಹುಮಾನ ವಿತರಣಾ ಕಾರ್ಯಕ್ರಮ ನಡೆಯಿತು.

ಪುರಸಭೆಯ ನಿಕಟಪೂರ್ವ ಸದಸ್ಯ ಮುರ್ತುಜಾ ಡಾಲಾಯತ ಮಾತನಾಡಿ, ಸೋಲು-ಗೆಲುವು ಕ್ರೀಡೆಯ ಅವಿಭಾಜ್ಯ ಅಂಗ. ಇಂತಹ ಪ್ರೀಮಿಯರ್ ಲೀಗ್ ಪಂದ್ಯಾವಳಿಗಳು ಸ್ಥಳೀಯ ಯುವ ಪ್ರತಿಭೆಗಳನ್ನು ಗುರುತಿಸಲು ಮತ್ತು ಅವರಿಗೆ ವೇದಿಕೆ ಕಲ್ಪಿಸಲು ಅತ್ಯಗತ್ಯ ಎಂದರು.

ನ್ಯಾಯವಾದಿ ಆರ್. ಎಂ.ರಾಯಬಾಗಿ, ಹಿರಿಯ ಬಿಜೆಪಿ ಮುಖಂಡ ರವಿ ಶಿಂಗ್ರೀ, ಆಯೋಜಕರಾದ ವಿನಾಯಕ ಜರತಾರಿ, ಮಂಜುಳಾ ರೇವಡಿ ಮಾತನಾಡಿದರು. ಆನಂದ ನಂದಿಹಾಳ, ರೋಹನ್ ಮಾಳಗಿಮನಿ , ಹೂವಾಜಿ ಚಂದುಕರ, ರಾಘು ಕೊಣ್ಣೂರ್ ಕರ್, ರವಿ ಭಜಂತ್ರಿ, ಬಸವರಾಜ ನಿಡಗುಂದಿ, ರಾಕೇಶ್ ಮಾರನಬಸರಿ, ರಾಘು ಚೌಹಾಣ್, ಅಮರೇಶ್ ಬಂಡಿ ವಡ್ಡರ್, ಅಂಬರೀಶ ಚವಡಿ, ಗೋಪಾಲ್ ಮುನ್ನೆರಾಳ್ ಸೇರಿದಂತೆ ಅನೇಕ ಕ್ರೀಡಾಪಟುಗಳು ಇದ್ದರು.

ಸತೀಶ ಬೆಳ್ಳಕ್ಕಿ ದಂಪತಿಗೆ ಬೀಳ್ಕೊಡುಗೆ

ಗದಗ: ಗದಗ ಜಿಲ್ಲಾ ಹಿರಿಯ ವರದಿಗಾರ ಹಾಗೂ ಕಾನಿಪ ಸದಸ್ಯ ಸತೀಶ ಬೆಳ್ಳಕ್ಕಿ ಅವರು ತುಮಕೂರ ಜಿಲ್ಲೆಗೆ ವರ್ಗಾವಣೆಗೊಂಡ ಹಿನ್ನೆಲೆಯಲ್ಲಿ ನಗರದ ಪತ್ರಿಕಾ ಭವನದಲ್ಲಿ ಜಿಲ್ಲಾ ಕಾರ್ಯನಿತರ ಪತ್ರಕರ್ತರ ಸಂಘದದಿಂದ ಸತೀಶ ಬೆಳ್ಳಕ್ಕಿ ದಂಪತಿಗೆ ಬೀಳ್ಕೊಡುಗೆ ಸಮಾರಂಭ ಹಮ್ಮಿಕೊಳ್ಳಲಾಗಿತ್ತು. ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ರಾಜು ಎಂ. ಹೆಬ್ಬಳ್ಳಿ , ಕಾನಿಪ ರಾಜ್ಯ ಕಾರ್ಯಕಾರಿ ಸಮಿತಿ ಸದಸ್ಯ ಅರುಣಕುಮಾರ ಹಿರೇಮಠ, ಜಿಲ್ಲಾ ಕಾರ್ಯಕಾರಿ ಸಮಿತಿ ಸದಸ್ಯರಾದ ವೆಂಕಟೇಶ ಇಮರಾಪೂರ, ರುದ್ರಗೌಡ ಪಾಟೀಲ, ಗಿರೀಶ ಕಮ್ಮಾರ, ಹಿರಿಯ ಪತ್ರಕರ್ತ, ವರದಿಗಾರರಾದ ಬಸವರಾಜ ದಂಡಿನ, ಶಿವಾನಂದ ಹಿರೇಮಠ, ಶಿವಕುಮಾರ ಕುಷ್ಟಗಿ, ಸಲೀಂ ಬಳಬಟ್ಟಿ, ಸುರೇಶ ಕಡ್ಲಿಮಟ್ಟಿ, ಕಾಶೀನಾಥ ಬಿಳಿಮಗ್ಗದ ಅಭಿಪ್ರಾಯ ಹಂಚಿಕೊಂಡರು. ಜಿಲ್ಲಾ ಪ್ರಧಾನ ಕಾರ್ಯದರ್ಶಿ ಶರಣು ದೊಡ್ಡೂರ, ಖಜಾಂಚಿ ರಾಮು ವಗ್ಗಿ, ಕಾರ್ಯದರ್ಶಿ ಬನೇಶ ಕುಲಕರ್ಣಿ, ಜಿಲ್ಲಾ ಕಾರ್ಯಕಾರಿ ಸಮಿತಿ ಸದಸ್ಯರಾದ ಸಂತೋಷ ಕೊಣ್ಣೂರ, ವರದಿಗಾರ ಮಾಳಿಂಗರಾಯ ಪೂಜಾರ, ನಾಗರಾಜ ಹಣಗಿ, ಚಂದ್ರು ಭಜಂತ್ರಿ, ಚಂದ್ರು ರಾಠೋಡ, ಶ್ರೀಶೈಲ ಕುಂಬಾರ, ನಿಂಗಪ್ಪ ಹಮ್ಮಗಿ, ಛಾಯಾಗ್ರಾಹಕ ಶಂಕರ ಗುರಿಕಾರ, ಮಹಾಂತೇಶ ಹೂಗಾರ, ಲಿಂಗರಾಜ ಎಂ.ಆರ್., ಶರಣು ಮೆಣಸಿನಕಾಯಿ, ದೊಡ್ಡೇಶ, ಪತ್ರಿಕಾ ಭವನದ ಪರಶು ಹಳ್ಳದ ಇದ್ದರು.



ತೇಜೋಮಯಿ ಗದ್ದಿಗೆ ಆರ್ಯಭಟ್ ಪ್ರಶಸ್ತಿ



ಲಕ್ಷ್ಮೇಶ್ವರ: ಪಟ್ಟಣದ ಯುವ ಭರತನಾಟ್ಯ ಕಲಾವಿದೆ ತೇಜೋಮಯಿ ಗದ್ದಿ ಸದ್ಯ ಬೆಂಗಳೂರನಲ್ಲಿ ಶಿಕ್ಷಣ ಹಾಗೂ ಭರತನಾಟ್ಯ ತರಬೇತಿ ಪಡೆಯುತ್ತಿದ್ದು ಇವಳ ಸಾಧನೆಗೆ ಇತ್ತೀಚಿಗೆ ಬೆಂಗಳೂರಿನ ಜೆ.ಸಿ. ರಸ್ತೆಯಲ್ಲಿರುವ ರವೀಂದ್ರ ಕಲಾಕ್ಷೇತ್ರದಲ್ಲಿ ನಡೆದ ಆರ್ಯಭಟ್ ಸಾಸ್ಕೃತಿಕ ಸಂಸ್ಥೆ ಕೊಡಮಾಡುವ ಆರ್ಯಭಟ್ ಪ್ರಶಸ್ತಿಯನ್ನು ಸಂಸ್ಥೆಯ 51ನೇ ವಾರ್ಷಿಕೋತ್ಸವ ಆರ್ಯಭಟ್ ಅಂತಾರಾಷ್ಟ್ರೀಯ ಪ್ರಶಸ್ತಿ ಸಮಾರಂಭ ಕಾರ್ಯಕ್ರಮದಲ್ಲಿ ಗಣ್ಯಮಾನರಿಂದ ಪ್ರಶಸ್ತಿ ಸ್ವೀಕರಿಸಿದಳು.

ಈ ವೇಳೆ ದೂರದರ್ಶನ ವಿಶ್ರಾಂತ ಮಹಾ ನಿರ್ದೇಶಕ ಡಾ. ಮಹೇಶ ಜೋಶಿ, ಖ್ಯಾತ ವಿಶ್ವಾಂಸ ಡಾ. ಅರಳುಮಲ್ಲಿಗೆ ಪಾರ್ಥಸಾರಥಿ, ಆರ್ಯಭಟ್ ಸಾಂಸ್ಕೃತಿಕ ಸಂಸ್ಥೆ ಸಂಸ್ಥಾಪಕ ಅಧ್ಯಕ್ಷ ಡಾ. ಎಚ್‌ಎಲ್ ಎನ್ ರಾವ್ ಇದ್ದರು.

ಲಿಂಬು ಪಾನಕ ಪಾನೀಯ ವಿತರಣೆ

ಮುಂಡರಗಿ: ನಗರದ ಹೊಸ ಬಸ್ ನಿಲ್ದಾಣನಲ್ಲಿ ಈಶ್ವರಿ ಮಹಿಳಾ ಫೌಂಡೇಶನ್ ವತಿಯಿಂದ ಬಿಸಿಲು ಬೇಗೆಗೆ ತತ್ತಿರಿಸಿದ ಸಾರ್ವಜನಿಕರಿಗೆ ಲಿಂಬು ಪಾನಕ ಪಾನೀಯ ವಿತರಣೆ ಅಭಿಯಾನ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು.

ಬಿಜೆಪಿ ಮುಂಡರಗಿ ಮಂಡಲದ ಅಧ್ಯಕ್ಷ ಡಾ.ಕುಮಾರಸ್ವಾಮಿ ಹಿರೇಮಠ ಹಂಚಿಕೆ ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿ, ಶುಚಿರುಚಿಯ ರಾಸಾಯನಿಕ ರಹಿತ ಶುದ್ಧ ಲಿಂಬು ಪಾನೀಯ ಈಶ್ವರಿ ಮಹಿಳಾ ಫೌಂಡೇಶನ್ ವತಿಯಿಂದ ವಿತರಿಸುತ್ತಿರುವುದು ಶ್ಲಾಘನೀಯವಾಗಿದೆ. ಇಂತಹ ಅನೇಕ ಸಮಾಜಮುಖಿ ಕಾರ್ಯಗಳನ್ನು ಈ ಸಂಸ್ಥೆಯಿಂದ ಇನ್ನೂ ಹೆಚ್ಚೆಚ್ಚು ಹಮ್ಮಿಕೊಳ್ಳುವಂತಾಗಲಿ ಎಂದರು.

ಈಶ್ವರಿ ಮಹಿಳಾ ಫೌಂಡೇಶನ್ ಸಂಸ್ಥಾಪಕ ಪ್ರಭಾವತಿ ಹೊಸಳ್ಳಿಹಿರೇಮಠ ಅವರು ನೇತೃತ್ವ ವಹಿಸಿದ್ದರು. ರವಿ ಲಮಾಣಿ, ದೇವಪ್ಪ ಇಟಗಿ, ಚಂದ್ರಕಾಂತ ಮಟ್ಟಿ, ಪವನ್ ಮೇಟಿ, ನಾಗರಾಜ ಮುರುಡಿ, ದೇವು ಹಡಪದ, ಶಾಂತಾ ಇಮ್ರಾಪುರ, ಪುಷ್ಪಾವತಿ ಹೊಸಳ್ಳಿ ಹಿರೇಮಠ, ಸಾವಿತ್ರಿ ಲಮಾಣಿ, ಶೋಭಾ ಜೋಶಿ, ಕಾಶೀನಾಥ ಹಮ್ಮಗಿಮಠ, ಸಿದ್ದು ಹಳಕಣ್ಣವರ್, ಕಾಶೀಮಸಾಬ ಒಂಟಿ ಉಪಸ್ಥಿತರಿದ್ದರು.



ದೀನ್‌ದಯಾಳ್ ಉಪಾಧ್ಯಾಯ ಪ್ರಶಿಕ್ಷಣ ವರ್ಗಕ್ಕೆ ಚಾಲನೆ

ಕಾರ್ಯಕರ್ತರಲ್ಲಿ ವೈಚಾರಿಕ ಬದ್ಧತೆ ಅಗತ್ಯ: ನವೀನ್ ಕುಮಾರ್



ಕಾರ್ಯಕರ್ತರು ರಾಷ್ಟ್ರ ಹಾಗೂ ಸಮಾಜದ ಹೊಣೆಗಾರಿಕೆಗಳ ಬಗ್ಗೆ ಹೆಚ್ಚಿನ ಕಾಳಜಿ ವಹಿಸಬೇಕು. ಪಕ್ಷ ನೀಡುವ ಪ್ರತಿಯೊಂದು ಜವಾಬ್ದಾರಿಯನ್ನು ಅತ್ಯಂತ ಶಿಸ್ತಿನಿಂದ ನಿರ್ವಹಿಸಿದಾಗ ಮಾತ್ರ ಪಕ್ಷ ಯಶಸ್ಸು ಕಾಣಲು ಸಾಧ್ಯ.
■ **ನವೀನ್ ಕುಮಾರ್,** ವಿಧಾನ ಪರಿಷತ್ ಸದಸ್ಯ

ವಿಜಯನಗರ: ಬಿಜೆಪಿ ಕಾರ್ಯಕರ್ತರು ಕೇವಲ ತತ್ತ್ವ ಸಿದ್ಧಾಂತಗಳಿಗಷ್ಟೇ ಸೀಮಿತವಾಗದೇ, ರಾಷ್ಟ್ರ ನಿರ್ಮಾಣ, ವ್ಯಕ್ತಿತ್ವ ವಿಕಸನ ಹಾಗೂ ವೈಚಾರಿಕ ಬದ್ಧತೆಯನ್ನು ಮೈಗೂಡಿಸಿಕೊಳ್ಳಬೇಕು. ಈ ನಿಟ್ಟಿನಲ್ಲಿ ಕಾರ್ಯಕರ್ತರನ್ನು ಪರಿಪೂರ್ಣರನ್ನಾಗಿಸುವಲ್ಲಿ ದೀನ್ ದಯಾಳ್ ಉಪಾಧ್ಯಾಯ ನಡೆಸುವ ಪ್ರಶಿಕ್ಷಣ ವರ್ಗ ಸಹಕಾರಿಯಾಗಲಿದೆ ಎಂದು ಚಿತ್ರದುರ್ಗದ ವಿಧಾನ ಪರಿಷತ್ ಸದಸ್ಯ ನವೀನ್ ಕುಮಾರ್ ಹೇಳಿದರು.

ಜಿಲ್ಲಾ ಬಿಜೆಪಿ ವತಿಯಿಂದ ಸಮೀಪದ ಕಮಲಾಪುರದಲ್ಲಿರುವ ಹೋಟೆಲ್ ಮಯೂರ ಭುವನೇಶ್ವರಿ ಆವರಣದಲ್ಲಿ ಆಯೋಜಿಸಿರುವ ಎರಡು ದಿನಗಳ ದೀನ ದಯಾಳು ಉಪಾಧ್ಯಾಯ ಪ್ರಶಿಕ್ಷಣ ವರ್ಗವನ್ನು ಬುಧವಾರ ಉದ್ಘಾಟಿಸಿ ಅವರು ಮಾತನಾಡಿದರು.

ಈ ಎರಡು ದಿನಗಳ ತರಬೇತಿ ಶಿಬಿರದಲ್ಲಿ ಪಾಲ್ಗೊಳ್ಳುವ ಅನೇಕ ಹಿರಿಯರ ಮತ್ತು ವಿಷಯ ಪರಿಣಿತರ ಅನುಭವದ ನುಡಿಗಳು, ಮುಂಬರುವ ದಿನಗಳಲ್ಲಿ ಕಾರ್ಯಕರ್ತರನ್ನು ಪಕ್ಷ ಸಂಘಟನಾ ಕಾರ್ಯದಲ್ಲಿ ತೊಡಗಿಸಿಕೊಳ್ಳಲು ಸನ್ನದ್ಧರನ್ನಾಗಿ ಮಾಡಲಿವೆ ಎಂದು ಆಶಯ ವ್ಯಕ್ತಪಡಿಸಿದರು.

ವೇದಿಕೆಯಲ್ಲಿ ಬಿಜೆಪಿ ವಿಜಯನಗರ ಜಿಲ್ಲಾಧ್ಯಕ್ಷ ಸಂಜೀವ ರೆಡ್ಡಿ, ವಿಭಾಗ ಪ್ರಭಾರಿ ಅಮರನಾಥ್ ಪಾಟೀಲ್, ಸಹಪ್ರಭಾರಿ ಚನ್ನಬಸವನಗೌಡ ಪಾಟೀಲ್, ಹಡಗಲಿ ಶಾಸಕ ಕೃಷ್ಣ ನಾಯಕ್, ಮಾಜಿ ಸಚಿವ ಕರುಣಾಕರ ರೆಡ್ಡಿ, ಮಾಜಿ ವಿಧಾನ ಪರಿಷತ್ ಸದಸ್ಯ ಶಂಕರಪ್ಪ, ಸಹಕಾರ ಸೌಧ ಫೆಡರೇಶನ್ ರಾಜ್ಯಾಧ್ಯಕ್ಷ ನಂಜನಗೌಡರು, ಒಬಿಸಿ ಮೋರ್ಚಾ ರಾಜ್ಯ ಉಪಾಧ್ಯಕ್ಷ ಅಯ್ಯಾಳಿ ತಿಮ್ಮಪ್ಪ, ಹಗರಿಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರದ ಪರಾಜಿತ ಅಭ್ಯರ್ಥಿ ಬಲ್ಲಾಹುಣಸಿ ರಾಮಣ್ಣ, ಎಸ್‌ಟಿ ಮೋರ್ಚಾ ರಾಜ್ಯಾಧ್ಯಕ್ಷ ಬಂಗಾರ ಹನುಮಂತು, ವಿಜಯನಗರ ಪ್ರಕೋಷ್ಠ ಪ್ರಭಾರಿ ಸಿಂಗನಹಳ್ಳಿ ವಿರೂಪಾಕ್ಷಪ್ಪ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕೆ.ಎಸ್. ರಾಘವೇಂದ್ರ ಉಪಸ್ಥಿತರಿದ್ದರು.

ಕಟ್ಟೆ ಧ್ವಂಸ ಮಾಡಿರುವುದು ಕಾನೂನು ಬಾಹಿರ: ಸಂಸದ ಕಾಗೇರಿ

ಭಟ್ಕಳ: ಮುರಿನಕಟ್ಟೆ ಪ್ರದೇಶದಲ್ಲಿ ಹೊಸದಾಗಿ ನಿರ್ಮಿಸಲಾದ ಕಟ್ಟೆಯನ್ನು ಮುಸ್ಲಿಮರು ಧ್ವಂಸ ಮಾಡಿರುವುದು ಕಾನೂನು ಬಾಹಿರ ಕೃತ್ಯವಾಗಿದೆ. ಧ್ವಂಸ ಮಾಡಿದ ಸ್ಥಳದಲ್ಲೇ ಕಟ್ಟೆ ನಿರ್ಮಿಸಲಾಗುವುದು ಎಂದು ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಹೇಳಿದರು.

ಅವರು ಬಿಜೆಪಿ ಕಚೇರಿಯಲ್ಲಿ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಹೆದ್ದಾರಿ ಅಗಲೀಕರಣಕ್ಕೆ ಮಾರಿ ಹೊರೆ ಇಟ್ಟು ಪೂಜಿಸುವ ಮುರಿನಕಟ್ಟೆ ಸ್ಥಳಾಂತರ ಮಾಡಬೇಕಾಗಿದ್ದರಿಂದ ಸನಿಹದಲ್ಲೇ ಇರುವ ಹೆದ್ದಾರಿ ಪ್ರಾಧಿಕಾರದ ಜಾಗದಲ್ಲಿ ಕಟ್ಟೆ ನಿರ್ಮಿಸಲಾಗಿತ್ತು. ಕಟ್ಟೆ ನಿರ್ಮಿಸುವ ಸಂದರ್ಭದಲ್ಲಿ ಯಾವುದೇ ವಿರೋಧ ಇಲ್ಲದಿದ್ದರೂ ರಾತ್ರಿ ಸಾವಿರಾರು ಮುಸ್ಲಿಮರು ಆಗಮಿಸಿ ಪೊಲೀಸರಿಗೆ ಹಲ್ಲೆ ಮಾಡಿ ಕಟ್ಟೆಯನ್ನು ಧ್ವಂಸ ಮಾಡಿರುವುದು ಖಂಡನೀಯ. ಸಮಾಜದಲ್ಲಿ ಅಶಾಂತಿ, ದ್ವೇಷ ಮೂಡಿಸಿ ಶಾಂತಿಯ ವಾತಾವರಣ ಹಾಳು ಮಾಡುವ ಉದ್ದೇಶದಿಂದಲೇ ಇಂತಹ ಕೃತ್ಯ ಎಸಗಲಾಗಿದೆ. ಕಟ್ಟೆ ಧ್ವಂಸದಿಂದ ಹಿಂದೂಗಳ ಭಾವನೆಗೆ ಧಕ್ಕೆ ತಂದಿದೆ. ಕಟ್ಟೆ ನಿರ್ಮಾಣದಿಂದ ಮುಸ್ಲಿಮರ ಭಾವನೆಗೆ ಧಕ್ಕೆ ಆಗಿದೆಯೇ ಎಂದು ಪ್ರಶ್ನಿಸಿದರು.

ಕಟ್ಟೆಯ ಬಗ್ಗೆ ಮುಸ್ಲಿಮರದ್ದು ವಿರೋಧ ಇದ್ದಿದ್ದರೆ ಜಿಲ್ಲಾಧಿಕಾರಿಗೆ, ಎಸ್ಪಿ ಅವರಿಗೆ ದೂರು ಸಲ್ಲಿಸಬಹುದಿತ್ತು. ಅದನ್ನು ಬಿಟ್ಟು ಕಾನೂನು ಕೈಗೆ ತೆಗೆದುಕೊಂಡು ಪೊಲೀಸರಿಗೆ ಹಲ್ಲೆ ಮಾಡಿ ಪೊಲೀಸರ ಎದುರಿನಲ್ಲೇ ಕಟ್ಟೆ ಧ್ವಂಸ ಮಾಡಿರುವುದು ಕಾನೂನು ಬಾಹಿರ ಕೃತ್ಯವಾಗಿದೆ. ಯಾರೇ ಆಗಲಿ ಕಾನೂನನ್ನು ಕೈಗೆ ತೆಗೆದುಕೊಳ್ಳುವುದು ಶೋಭೆ ಅಲ್ಲ ಎಂದರು.



ಸಂಸದ ಕಾಗೇರಿಯಿಂದ ಮುರಿನಕಟ್ಟೆ ಪ್ರದೇಶ ವೀಕ್ಷಣೆ

ಭಟ್ಕಳ: ಉತ್ತರ ಕನ್ನಡ ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಅವರು ಬುಧವಾರ ಬೆಳಿಗ್ಗೆ ಪಟ್ಟಣದ ಮುರಿನಕಟ್ಟೆ ಪ್ರದೇಶಕ್ಕೆ ಭೇಟಿ ನೀಡಿ ಪರಿಶೀಲಿಸಿದರು. ಸಂಸದರು ಮುರಿನಕಟ್ಟೆಯ ಪ್ರದೇಶ, ಇತ್ತೀಚಿಗೆ ನಿರ್ಮಿಸಿದ ಕಟ್ಟೆಯ ಸ್ಥಳ ಮತ್ತು ಕಟ್ಟೆ ಧ್ವಂಸ ಮಾಡಿರುವುದನ್ನು ವೀಕ್ಷಿಸಿದರು. ಮಾಜಿ ಶಾಸಕ ಸುನೀಲ ನಾಯ್ಕ ಮತ್ತು ಮುಖಂಡ ಶ್ರೀಕಾಂತ ನಾಯ್ಕ ಅವರು ಸಂಸದರಿಗೆ ಮುರಿನಕಟ್ಟೆಯ ಬಗ್ಗೆ ಮಾಹಿತಿ ನೀಡಿ ಮೊನ್ನೆ ನಡೆದ ಘಟನೆ ಬಗ್ಗೆ ವಿವರಿಸಿದರು. ಕಾಗೇರಿಯವರು ಮಾರಿಯಮ್ಮನ ಹೊರೆ ಇಟ್ಟ ಸ್ಥಳವನ್ನೂ ಕೂಡ ವೀಕ್ಷಿಸಿದರು. ಈ ಸಂದರ್ಭದಲ್ಲಿ ಮಾಜಿ ಸಚಿವ ಶಿವಾನಂದ ನಾಯ್ಕ, ಬಿಜೆಪಿ ಜಿಲ್ಲಾಧ್ಯಕ್ಷ ಎನ್. ಎಸ್. ಹೆಗಡೆ, ಬಿಜೆಪಿ ಮಂಡಲಾಧ್ಯಕ್ಷ ಲಕ್ಷ್ಮೀನಾರಾಯಣ ಮುಂತಾದ ಮುಖಂಡರು ಇದ್ದರು.

ಕಟ್ಟೆ ಪುನರ್ ನಿರ್ಮಾಣ ಮಾಡಬೇಕು. ಧ್ವಂಸ ಮಾಡಿದ ಪ್ರಮುಖ ವ್ಯಕ್ತಿಗಳನ್ನು ಬಂಧಿಸಬೇಕು. ಹಿಂದೂ ಕಾರ್ಯಕರ್ತರ ಮೇಲಿನ ಕೇಸನ್ನು ವಾಪಾಸ್ ಪಡೆಯಬೇಕೆಂದು ಆಗ್ರಹಿಸಿ ಮೇ 29 ರಂದು ಬಿಜೆಪಿ ರಾಜ್ಯಾಧ್ಯಕ್ಷರ ನೇತೃತ್ವದಲ್ಲಿ ಬೃಹತ್ ಪ್ರತಿಭಟನೆ ನಡೆಸುತ್ತೇವೆ ಎಂದರು.

ಮುರಿನಕಟ್ಟೆ ವಿಚಾರ ಎನ್ ಎಚ್ ಎಐ, ಅಧಿಕಾರಿಗಳು ಹಾಗೂ ಹಿಂದೂಗಳಿಗೆ ಸಂಬಂಧಪಟ್ಟ ವಿಚಾರ. ಆದರೆ, ತಮಗೆ ಸಂಬಂಧ ಇಲ್ಲದಿದ್ದರೂ ಅನ್ಯಕೋಮಿನ ಮುಸ್ಲಿಮರು ತಲೆ ಹಾಕಿದ್ದು ಏಕೆ? ಧ್ವಂಸ ಮಾಡಿದಲ್ಲೇ ಕಟ್ಟೆ ನಿರ್ಮಾಣ ಮಾಡುತ್ತೇವೆ. ಇದರಲ್ಲಿ ಯಾವುದೇ ಸಂಶಯ ಬೇಡ ಎಂದರು.

ಈ ಸಂದರ್ಭದಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷ ಎನ್ ಎಸ್ ಹೆಗಡೆ, ಮಾಜಿ ಸಚಿವ ಶಿವಾನಂದ ನಾಯ್ಕ,ಮಾಜಿ ಶಾಸಕ ಸುನೀಲ ನಾಯ್ಕ, ಬಿಜೆಪಿ ಮಂಡಲಾಧ್ಯಕ್ಷ ಲಕ್ಷ್ಮೀನಾರಾಯಣ ನಾಯ್ಕ, ಜಿಲ್ಲಾ ಬಿಜೆಪಿ ಮಹಿಳಾ ಮೋರ್ಚಾ ಅಧ್ಯಕ್ಷೆ ಶಿವಾನಿ ಶಾಂತರಾಮ, ಪ್ರಮುಖರಾದ ಶ್ರೀಕಾಂತ ನಾಯ್ಕ, ಖೇದಾರ ಕೊಲ್ಲೆ, ಶ್ರೀಧರ ನಾಯ್ಕ, ಭಾಸ್ಕರ ದೈಮನೆ ಮುಂತಾದವರಿದ್ದರು.

ಸಮಾಜ ಘಾತುಕರಿಗೆ ಕಾಂಗ್ರೆಸ್ ಬೆಂಬಲ

ರಾಜ್ಯದ ಕಾಂಗ್ರೆಸ್ ಸರ್ಕಾರ ಸಮಾಜ ಘಾತುಕರಿಗೆ, ದೇಶದ್ರೋಹಿಗಳಿಗೆ , ಭ್ರಷ್ಟರಿಗೆ ಕುಮ್ಮಕ್ಕು ನೀಡುತ್ತಿದೆ. ಮೊನ್ನೆ ದಿನ ರಾಜ್ಯದಲ್ಲಿ ನಡೆದ ಹಲವು ಗಲಭೆಗಳ ಕೇಸುಗಳನ್ನು ವಾಪಾಸ್ ಪಡೆದಿದ್ದರಿಂದ ಕಾಂಗ್ರೆಸ್ ಸರ್ಕಾರದಲ್ಲಿ ಕೆಲವರು ತಾವು ಏನು ಮಾಡಿದರೂ ನಡೆಯುತ್ತದೆ ಎಂದು ತಿಳಿದುಕೊಂಡು ಇಂತಹ ಕೃತ್ಯ ಎಸಗುತ್ತಿದ್ದಾರೆ. ಇವರು ಇಂತಹ ಕೃತ್ಯ ಎಸಗಲು ರಾಜ್ಯದ ಕಾಂಗ್ರೆಸ್ ಸರ್ಕಾರವೇ ಕಾರಣ ಎಂದರು.ಜಿಲ್ಲಾ ಉಸ್ತುವಾರಿ ಸಚಿವರ ಕ್ಷೇತ್ರದಲ್ಲಿ ಇಂತಹ ಘಟನೆ ನಡೆದಿದೆ. ಸಚಿವರು ಮುರಿನಕಟ್ಟೆ ವಿಚಾರದಲ್ಲಿ ಸೂಕ್ತ ನಿಗಾ ಇಟ್ಟಿದ್ದರೆ ಮತ್ತು ಸಮರ್ಪಕ ಸೂಚನೆ ಅಧಿಕಾರಿಗಳಿಗೆ ನೀಡಿದ್ದರೆ ಇಂತಹ ಕೃತ್ಯ ಆಗುತ್ತಿರಲಿಲ್ಲ ಎಂದರು. ರಾಜ್ಯದಲ್ಲಿ ಮತ್ತು ಜಿಲ್ಲೆಯಲ್ಲಿ ಆಡಳಿತ ಯಂತ್ರ ಸಂಪೂರ್ಣ ಕುಸಿದಿದೆ. ಯಾವುದೇ ಅಭಿವೃದ್ಧಿ ಕೆಲಸ ಆಗುತ್ತಿಲ್ಲ, ಸಿಎಂ, ಡಿಸಿಎಂರ ಖುರ್ಚಿ ಕಾದಾಟವೇ ಮುಗಿದಿಲ್ಲ. ಜಿಲ್ಲೆಯಲ್ಲಿ ಅಭಿವೃದ್ಧಿ ಶೂನ್ಯವಾಗಿದೆ ಎಂದರು.

ಕಿರುಸುದ್ದಿ

ಆಯುರ್ವೇದ ವ್ಯಾಪಾರಿಗೆ 20 ಲಕ್ಷ ರೂ. ಸುಲಿಗೆ ಬೆದರಿಕೆ

ಬೆಳಗಾವಿ: ನಗರದಲ್ಲಿ ಮತ್ತೆ ಸುಲಿಗೆ ಬೆದರಿಕೆ ಪ್ರಕರಣ ಬೆಳಕಿಗೆ ಬಂದಿದ್ದು, ಆಯುರ್ವೇದ ಔಷಧ ವ್ಯಾಪಾರಿಯೊಬ್ಬರಿಗೆ 20 ಲಕ್ಷ ರೂ. ನೀಡದಿದ್ದರೆ ಗಂಭೀರ ಪರಿಣಾಮ ಎದುರಿಸಬೇಕಾಗುತ್ತದೆ ಎಂದು ಬೆದರಿಕೆ ಹಾಕಿರುವ ಘಟನೆ ನಡೆದಿದೆ. ಪ್ರಕರಣ ಸಂಬಂಧ ಮೂವರು ಅಪರಿಚಿತರ ವಿರುದ್ಧ ಖಡೇಬಜಾರ್ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ. ನಗರದ ರಾಮಲಿಂಗ್ ಖಿಂಡ್ ಗಲಿ ಪ್ರದೇಶದ ನಿವಾಸಿ ಹಾಗೂ ಖೂಟ್ ಪ್ರದೇಶದಲ್ಲಿ ಜನತಾ ಆಯುರ್ವೇದ ಔಷಧ ಅಂಗಡಿ' ನಡೆಸುತ್ತಿರುವ ದುರ್ಗ ರಾಜ್ ವೈದ್ಯ (51) ಅವರು ಈ ಕುರಿತು ಪೊಲೀಸರಿಗೆ ದೂರು ನೀಡಿದ್ದಾರೆ. ಮೇ 19ರ ರಾತ್ರಿ ದುರ್ಗರಾಜ್ ವೈದ್ಯ ಅವರು ತಮ್ಮ ಕಾರಿನಲ್ಲಿ ತೆರಳುತ್ತಿದ್ದ ವೇಳೆ ಮೂವರು ಅಪರಿಚಿತರು ಅವರ ಕಾರನ್ನು ಅಡ್ಡಗಟ್ಟಿದ್ದಾರೆ. ಬಳಿಕ ಅವಾಚ್ಯ ಶಬ್ದಗಳಿಂದ ನಿಂದಿಸಿ, 20 ಲಕ್ಷ ರೂ. ನೀಡದಿದ್ದರೆ ಪರಿಣಾಮ ಗಂಭೀರವಾಗಿರುತ್ತದೆ ಎಂದು ಜೀವ ಬೆದರಿಕೆ ಹಾಕಿದ್ದಾರೆ. ಪ್ರಕರಣದ ತನಿಖೆಯನ್ನು ಖಡೇಬಜಾರ್ ಠಾಣೆ ಪೊಲೀಸರು ಮುಂದುವರಿಸಿದ್ದಾರೆ.

ಹಾವು ಕಡಿದು ಮಹಿಳೆ ಸಾವು

ಹಾವೇರಿ: ಅಡಕೆ ತೋಟದಲ್ಲಿ ಅಳಡಿಸಿದ್ದ ಡ್ರಿಪ್ ಪೈಪ್‌ಗಳನ್ನು ತೆಗೆಯುವಾಗ ಹಾವು ಕಡಿದು ಮಹಿಳೆಯೊಬ್ಬರು ಮೃತಪಟ್ಟಿರುವ ಘಟನೆ ರಟ್ಟೆಹಳ್ಳಿ ತಾಲೂಕು ಚಿಕ್ಕ ಕಬ್ಬಾರ ಗ್ರಾಮದಲ್ಲಿ ನಡೆದಿದೆ. ದಾವಣಗೆರೆ ಜಿಲ್ಲೆ ಹೊನ್ನಾಳಿ ತಾಲೂಕು ಕೂಲಂಬಿ ಗ್ರಾಮದ ಮಮತಾ ಚಂದ್ರಶೇಖರಪ್ಪ ರಡ್ಡೇರ (35) ಮೃತ ದುರ್ದೈವಿ. ಇವರು ತನ್ನ ತಾಯಿಯೊಂದಿಗೆ ಚಿಕ್ಕಕಬ್ಬಾರ ಗ್ರಾಮದ ಮನೆ ಹತ್ತಿರವಿರುವ ಅಡಕೆ ತೋಟದಲ್ಲಿ ಕೆಲಸ ಮಾಡುತ್ತಿದ್ದಾಗ ಘಟನೆ ಸಂಭವಿಸಿದೆ. ಅಡಕೆ ತೋಟದಲ್ಲಿ ಅಳವಡಿಸಿದ್ದ ಡ್ರಿಪ್ ಪೈಪ್‌ಗಳನ್ನು ತೆಗೆಯುವಾಗ, ಪೈಪ್‌ನಲ್ಲಿದ್ದ ವಿಷಕಾರಕ ಹಾವು ಮೃತಳ ಕಾಲಿಗೆ ಕಚ್ಚಿದೆ. ಕೂಡಲೇ ಸಮೀಪದ ಹಳ್ಳೂರ ಸರ್ಕಾರಿ ಆಸ್ಪತ್ರೆಗೆ ದಾಖಲಿಸಿ, ಹೆಚ್ಚಿನ ಚಿಕಿತ್ಸೆಗೆ ಹೊನ್ನಾಳಿ ಸರಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದಾಗ ವೈದ್ಯರು ಪರೀಕ್ಷಿಸಿ ಮೃತಪಟ್ಟಿರುವ ಬಗ್ಗೆ ಖಚಿತ ಪಡಿಸಿದ್ದಾರೆಂದು ಮೃತಳ ಸಂಬಂಧ ಮಂಜುನಾಥ ಕೋಟಿಹಾಳ ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಿದ್ದಾರೆ. ರಟ್ಟೆಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸಚಿವ ಸತೀಶ ಜಾರಕಿಹೊಳಿ ಕೆಪಿಸಿಸಿ ಅಧ್ಯಕ್ಷರಾಗಲಿ

ಬೆಳಗಾವಿ: ಸಚಿವ ಸತೀಶ ಜಾರಕಿಹೊಳಿ ಅವರಿಗೆ ಕೆಪಿಸಿಸಿ ಅಧ್ಯಕ್ಷ ಸ್ಥಾನ ನೀಡಿದರೆ ಅತ್ಯಂತ ಸೂಕ್ತ ಎಂದು ಶಾಸಕ ವಿಶ್ವಾಸ ವೈದ್ಯ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಶೀಘ್ರದಲ್ಲೇ ನಡೆಯಲಿದೆ ಎನ್ನಲಾದ ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆಯ ಕುರಿತು ತಮಗೆ ಯಾವುದೇ ಮಾಹಿತಿ ಇಲ್ಲ ಎಂದು ಅವರು ಸ್ಪಷ್ಟಪಡಿಸಿದ್ದಾರೆ. ರಾಜ್ಯ ಕಾಂಗ್ರೆಸ್‌ನಲ್ಲಿ ನಾಯಕತ್ವ ಬದಲಾವಣೆ ಹಾಗೂ ಕೆಪಿಸಿಸಿ ಅಧ್ಯಕ್ಷ ಗಾದಿಯ ಕುರಿತು ಚರ್ಚೆಗಳು ತೀವ್ರಗೊಂಡಿರುವ ಬೆನ್ನಲ್ಲೇ ಮಾಧ್ಯಮಗಳೊಂದಿಗೆ ಮಾತನಾಡಿದ ಶಾಸಕ ವಿಶ್ವಾಸ ವೈದ್ಯ ಅವರು, ಸಚಿವ ಸತೀಶ ಜಾರಕಿಹೊಳಿ ಅವರು ಪಕ್ಷದ ಅತ್ಯಂತ ಹಿರಿಯ, ಅನುಭವಿ ಮತ್ತು ಪ್ರಭಾವಿ ನಾಯಕರಾಗಿದ್ದಾರೆ. ಪ್ರಸ್ತುತ ರಾಜಕೀಯ ಪರಿಸ್ಥಿತಿಯಲ್ಲಿ ಅವರಿಗೆ ಕೆಪಿಸಿಸಿ ಸಾರಥ್ಯ ನೀಡಿದರೆ ಪಕ್ಷದ ಸಂಘಟನೆಗೆ ದೊಡ್ಡ ಬಲ ಸಿಗಲಿದೆ ಎಂದು ಬೆಂಬಲ ಸೂಚಿಸಿದರು.

ಸಿಎಲ್ಪಿ ಸಭೆಯ ಬಗ್ಗೆ ಅಸ್ಪಷ್ಟತೆ: ಬೆಂಗಳೂರಿನಲ್ಲಿ ಕಾಂಗ್ರೆಸ್ ಶಾಸಕಾಂಗ ಪಕ್ಷದ ತುರ್ತು ಸಭೆ ಕರೆಯಲಾಗಿದೆ ಎಂಬ ವದಂತಿಗಳ ಕುರಿತು ಉತ್ತರಿಸಿದ ಶಾಸಕರು, ಈ ಸಭೆಯ ಬಗ್ಗೆ ನನಗೆ ಯಾವುದೇ ಅಧಿಕೃತ ಮಾಹಿತಿ ಇಲ್ಲ, ಸಭೆಯ ನೋಟಿಸ್ ಅಥವಾ ಆಮಂತ್ರಣ ನಮಗೆ ಇನ್ನು ತಲುಪಿಲ್ಲ ಎಂದು ಸ್ಪಷ್ಟನೆ ನೀಡಿದರು.

ಹೈಕಮಾಂಡ್ ನಿರ್ಧಾರವೇ ಅಂತಿಮ:





ಕೆಪಿಸಿಸಿ ಅಧ್ಯಕ್ಷ ಸ್ಥಾನದ ಆಯ್ಕೆ ಹಾಗೂ ಸಚಿವ ಸಂಪುಟ ಪುನಾರಚನೆಯಂತಹ ಪ್ರಮುಖ ರಾಜಕೀಯ ತೀರ್ಮಾನಗಳನ್ನು ಎಐಸಿಸಿ ವರಿಷ್ಠರು ತೆಗೆದುಕೊಳ್ಳಲಿದ್ದಾರೆ. ಪಕ್ಷದ ಹೈಕಮಾಂಡ್ ತೆಗೆದುಕೊಳ್ಳುವ ಯಾವುದೇ ನಿರ್ಧಾರಕ್ಕೆ ನಾವೆಲ್ಲರೂ ಬದ್ಧರಾಗಿರುತ್ತೇವೆ ಎಂದು ಅವರು ಹೇಳಿದರು.

ಇನ್ನು ಈ ಕುರಿತು ಪ್ರತಿಕ್ರಿಯಿಸಿದ ಶಾಸಕ ಆಸಿಫ್ ಸೇಠ್, ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಅವರು ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಸ್ಥಾನ ವಹಿಸಿಕೊಂಡರೆ ರಾಜ್ಯದಲ್ಲಿ ಪಕ್ಷದ ಸಂಘಟನೆಗೆ ಮತ್ತಷ್ಟು ವೇಗ ಸಿಗಲಿದೆ. ಸತೀಶ್ ಜಾರಕಿಹೊಳಿ ಅವರು ತಳಮಟ್ಟದಿಂದ ಪಕ್ಷವನ್ನು ಬಲಪಡಿಸಿದ ಅನುಭವ ಹೊಂದಿದ್ದಾರೆ. ಅವರು ಪೂರ್ಣಾವಧಿ ಅಧ್ಯಕ್ಷರಾದರೆ ಮುಂಬರುವ ದಿನಗಳಲ್ಲಿ ಕಾಂಗ್ರೆಸ್ ಪಕ್ಷವನ್ನು ಮತ್ತಷ್ಟು ಕ್ರಿಯಾತ್ಮಕವಾಗಿ ಮುನ್ನಡೆಸಬಹುದು ಎಂದು ಶಾಸಕರು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ತಡಸಿನಕೊಪ್ಪ ಫೈರಿಂಗ್ ಘಟನೆ ಖಂಡನೆ | ಶಶಿಕುಮಾರ್ ಅಮಾನತಿಗೆ ಆಗ್ರಹ

ಬಿಜೆಪಿ ಕಾರ್ಯಕರ್ತರ ಪ್ರತಿಭಟನೆ

ಧಾರವಾಡ: ತಡಸಿನಕೊಪ್ಪ ಗ್ರಾಮದ ಜಮೀನು ವಿವಾದ ಹಿನ್ನಲೆಯಲ್ಲಿ ಫೈರಿಂಗ್ ಘಟನೆ ಖಂಡಿಸಿ ಧಾರವಾಡ 71 ಹಾಗೂ 74ನೇ ಯುವ ಮೋರ್ಚಾ ವತಿಯಿಂದ ಕಾರ್ಯಕರ್ತರು ನಗರದ ಜಿಲ್ಲಾಧಿಕಾರಿ ಕಚೇರಿ ಮುಂಭಾಗ ಬುಧವಾರ ಪ್ರತಿಭಟನೆ ನಡೆಸಿದರು.

ಸುಮಾರು ಒಂದು ಗಂಟೆಗೂ ಅಧಿಕ ಹೊತ್ತು ಪ್ರತಿಭಟನೆ ನಡೆಸಿರುವ ಬಿಜೆಪಿಯ ಹಲವಾರು ಕಾರ್ಯಕರ್ತರು, ರಾಜ್ಯ ಸರ್ಕಾರ ಹಾಗೂ ಪೊಲೀಸ್ ಇಲಾಖೆಯ ವಿರುದ್ಧ ವಿವಿಧ ಘೋಷಣೆಗಳನ್ನು ಕೂಗುವುದರ ಮೂಲಕ ಆಕ್ರೋಶ ವ್ಯಕ್ತಪಡಿಸಿದರು.

ಮಾಜಿ ಮೇಯರ್ ಈರೇಶ ಅಂಚಟಗೇರಿ ಮಾತನಾಡಿ, ಕಾಂಗ್ರೆಸ್ ಸರ್ಕಾರವು ಅಧಿಕಾರಕ್ಕೆ ಬಂದ ನಂತರ ರಾಜ್ಯದಲ್ಲಿ ಇಡೀ ಕಾನೂನು ಸುವ್ಯವಸ್ಥೆ ಸಂಪೂರ್ಣ ಹದಗೆಟ್ಟಿದೆ. ಸಾರ್ವಜನಿಕರು ಭೀತಿ, ಆತಂಕದಲ್ಲಿ ಬದುಕುತ್ತಿದ್ದಾರೆ ಎಂದು ಆರೋಪ ಮಾಡಿದರು.

ಹುಬ್ಬಳ್ಳಿ-ಧಾರವಾಡ ಅವಳಿನಗರದಲ್ಲಿ ಕೊಲೆ, ಸುಲಿಗೆಯೂ ಹೆಚ್ಚಿದೆ. ಅಪರಾಧ ಚಟುವಟಿಕೆಗಳು ಹೆಚ್ಚಿವೆ. ಸಾಂಸ್ಕೃತಿಕ ನಗರಿ ಇದೀಗ ಅಶಾಂತಿ



ನಗರಿಯಾಗಿ ಮಾರ್ಪಟ್ಟಿದೆ. ಇದರಿಂದ ಧಾರವಾಡದ ಹೆಸರು ಹಾಳಾಗುತ್ತಿದೆ ಎಂದು ಬೇಸರ ವ್ಯಕ್ತಪಡಿಸಿದರು.

ತಡಿಸಿಕೊಪ್ಪ ಗ್ರಾಮದ ಫೈರಿಂಗ್ ಪ್ರಕರದಲ್ಲಿ ನಿರ್ಲಕ್ಷ್ಯ ತೋರುವುದರ ಜೊತೆಗೆ ವಿವಾದಾತ್ಮಕವಾಗಿ ನಡೆದುಕೊಂಡು ಪೊಲೀಸ್ ಆಯುಕ್ತರಾದ ಶಶಿಕುಮಾರ್ ಅವರನ್ನು ಅಮಾನತ್ತು ಮಾಡಿ, ಅವರ ವಿರುದ್ಧ ಇಲಾಖೆ ತನಿಖೆ ಕೈಗೊಳ್ಳುವಂತೆ ಆಗ್ರಹಿಸಿದರು.

ಅಮಾಯಕ ರೈತರ ಮೇಲೆ ಹಲ್ಲೆ ನಡೆಸಿದವರ ವಿರುದ್ಧ ಕ್ರಮ ಕೈಗೊಳ್ಳಬೇಕಿದೆ. ತಪಿತಸ್ಥರಿಗೆ ರಾಜಕೀಯ ರಕ್ಷಣೆ ನೀಡುವ ಕಾರ್ಯವನ್ನು ಸರ್ಕಾರವು ತಕ್ಷಣವೇ ನಿಲ್ಲಿಸಬೇಕು. ಇಲ್ಲವಾದಲ್ಲಿ ಉಗ್ರ ಹೋರಾಟ ಮಾಡುವುದಾಗಿಯೂ ಸಹ ಎಚ್ಚರಿಕೆ ನೀಡಿದರು.

ಪ್ರತಿಭಟನೆಯಲ್ಲಿ ಪಾಲಿಕೆ ಸದಸ್ಯರಾದ ಶಂಕರ ಶೇಳಕೆ, ಸುರೇಶ ಬೇದರೆ, ರೈತ ಮುಖಂಡರಾದ ಮಾರುತಿ ಹಿಂಡಸಗೇರಿ, ಪುಂಡಲಿಕ ತಳವಾರ, ಪುಂಡಲಿಕ ದೊಡ್ಡಮನಿ, ಶಕ್ತಿ ಹಿರೇಮಠ, ಪ್ರಣೀತ ರಾಮನಗೌಡರ, ಸಂಕಲ್ಪ ಕಲ್ಯಾಣಶೆಟ್ಟಿ ಇದ್ದರು.

ಅವೈಜ್ಞಾನಿಕ ಅಂಡರ್ ಪಾಸ್

ಸ್ಮಶಾನಕ್ಕೆ ತೆರಳಲು ಗ್ರಾಮಸ್ಥರ ಹರಸಾಹಸ

ಕೊಟ್ಟೂರು: ಪಟ್ಟಣದಿಂದ ಕೂಗಳತೆ ದೂರದಲ್ಲಿ ರುವ ಚಪ್ಪರದಹಳ್ಳಿ ಗ್ರಾಮಸ್ಥರು ಹಲವಾರು ವರ್ಷಗಳಿಂ ದಲೂ ಸ್ಮಶಾನದ ಸಮಸ್ಯೆ ಎದುರಿಸುತ್ತಿದ್ದಾರೆ. ಇದಕ್ಕೆ ಪರಿಹಾರವಾಗಿ ಸರ್ಕಾರ ನಿಗದಿತ ಸ್ಥಳವನ್ನು ಮಂಜೂರು ಮಾಡಿ ಸ್ಮಶಾನಕ್ಕೆ ಜಾಗ ಗೊತ್ತು ಮಾಡಿದೆ. ಆದರೆ ಸ್ಮಶಾನಕ್ಕೆ ಹೋಗುವ ದಾರಿ ಮಾತ್ರ ಸುಲಭವಾಗಿಲ್ಲ.

ರೈಲ್ವೆ ಅಂಡರ್ ಪಾಸ್‌ನಲ್ಲಿ ನೀರು ನಿಲ್ಲುವುದರಿಂದ ಮೃತ ಶರೀರವನ್ನು ಒಯ್ಯುವುದು ಸವಾಲಿನ ಕೆಲಸವಾಗಿದೆ. ಶವ ಹೊತ್ತು ಒಯ್ಯಲು ಅಂಡರ್ ಪಾಸ್ ಅತ್ಯಂತ ಕಡಿಮೆ ಎತ್ತರ ಹೊಂದಿರುವುದು ಕೂಡ ಸಮಸ್ಯೆಯಾಗುತ್ತಿದೆ. ಗ್ರಾಮ ಪಂಚಾಯಿತಿ ಇದಕ್ಕೊಂದು ಶಾಶ್ವತ ಪರಿಹಾರ ಕಂಡುಕೊಳ್ಳಬೇಕಿದೆ. ಇತ್ತೀಚಿಗೆ ಮೃತ ವ್ಯಕ್ತಿಯನ್ನು ಒಂದು ತಳ್ಳುಗಾಡಿಯಲ್ಲಿ ಒಯ್ಯುತ್ತಿರುವುದು ಕೂಡ ಎಲ್ಲರ ಬೇಸರಕ್ಕೆ ಕಾರಣವಾಗಿತ್ತು. ಗೌರವದಿಂದ ಆತನ ಸಂಸ್ಕಾರವಾಗಬೇಕಿದೆ,

ಇಂತಹ ಪರಿಸ್ಥಿತಿಗಳಲ್ಲಿ ಮೃತ ಶರೀರವನ್ನು ಒಯ್ಯಲು ಇಂತಹ ತೊಂದರೆಗಳು ಎದುರುಗಾಣು ತ್ತಿರುವುದು ಆಡಳಿತದ ಸ್ಪಷ್ಟ ವೈಫಲ್ಯವೇ ಕಾರಣ ಎಂದು ಸಾರ್ವಜನಿಕರು ಆರೋಪಿಸುತ್ತಿದ್ದಾರೆ.



ಕೆ ಅಯ್ಯನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಒಳಪಡುವ ಚಪ್ಪರದ ಹಳ್ಳಿಯ ಸ್ಮಶಾನಕ್ಕೆ ಹೋಗುವ ರಸ್ತೆಯನ್ನು ಸಿಸಿ ರಸ್ತೆಯನ್ನಾಗಿ ಅಭಿವೃದ್ಧಿಪಡಿಸಲಾಗಿದ್ದು, ಆದರೆ ರೈಲ್ವೆ ಅಂಡರ್ ಬ್ರಿಡ್ಜ್ ಅಡಿಯಲ್ಲಿ ನೀರು ನಿಲ್ಲುತ್ತಿದ್ದು ಅದು ನಮ್ಮ ವ್ಯಾಪ್ತಿಗೆ ಒಳಪಡುವುದಿಲ್ಲ ಅದಕ್ಕೆ ಸಂಬಂಧಪಟ್ಟಂತೆ ರೈಲ್ವೆ ಇಲಾಖೆ ಅಧಿಕಾರಿಗಳೇ ಕ್ರಮ ಕೈಗೊಳ್ಳಬೇಕು
■ **ರಾಘವೇಂದ್ರ, ಕೆ.ಅಯ್ಯನಹಳ್ಳಿ ಪಿಡಿಒ**

ರಾಷ್ಟ್ರೋತ್ಥಾನ ಶಾಲಾ ಕಟ್ಟಡ ಮೇ 31ಕ್ಕೆ ಲೋಕಾರ್ಪಣೆ

ಹಾವೇರಿ: ರಾಷ್ಟ್ರೋತ್ಥಾನ ಪರಿಷತ್ ವತಿಯಿಂದ ನಡೆಸಲ್ಪಡುವ ರಾಷ್ಟ್ರೋತ್ಥಾನ ವಿದ್ಯಾಕೇಂದ್ರದ ಶಾಲಾ ಕಟ್ಟಡದ ಲೋಕಾರ್ಪಣೆ, ಅಕ್ಷರಾಭ್ಯಾಸ ಹಾಗೂ ವಿದ್ಯಾರಂಭ ಕಾರ್ಯಕ್ರಮ ಮೇ 31ರಂದು ಬೆಳಗ್ಗೆ 11 ಗಂಟೆಗೆ ದೇವಿಹೊಸೂರ ಗ್ರಾಮದ ರಸ್ತೆಯಲ್ಲಿ ನಿರ್ಮಾಣವಾಗಿರುವ ನೂತನ ರಾಷ್ಟ್ರೋತ್ಥಾನ ಶಾಲಾ ಆವರಣದಲ್ಲಿ ಜರುಗಲಿದೆ.

ಸಾನ್ನಿಧ್ಯವನ್ನು ಹುಕ್ಕೇರಿಮಠದ ಡಾ.ಸದಾಶಿವ ಮಹಾಸ್ವಾಮಿಗಳು ವಹಿಸಲಿದ್ದು, ರಾಷ್ಟ್ರೀಯ ಸ್ವಯಂಸೇವಕ ಸಂಘದ ಉತ್ತರ ಕರ್ನಾಟಕ ಪ್ರಾಂತ ಕಾರ್ಯವಾಹರಾದ ರಾಘವೇಂದ್ರ ಕಾಗವಾಡ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ. ರಾಷ್ಟ್ರೋತ್ಥಾನ ಪರಿಷತ್‌ನ ಪ್ರಧಾನ ಕಾರ್ಯದರ್ಶಿ ನಾ.ದಿನೇಶ ಹೆಗ್ಡೆ ಉಪಸ್ಥಿತರಿರುವರು ಎಂದು ರಾಷ್ಟ್ರೋತ್ಥಾನ ಪರಿಷತ್‌ನ ಪ್ರಕಟಣೆ ತಿಳಿಸಿದೆ.

ಬೈಕ್ ಡಿಕ್ಕಿ: ಚಿಕಿತ್ಸೆ ಫಲಿಸದೇ ಸಾವು

ಹಾವೇರಿ: ರಸ್ತೆ ದಾಟಿಕೊಂಡು ಹೋಗುತ್ತಿದ್ದ ಟಾಟಾಏಸ್ ವಾಹನದ ಚಾಲಕರೊಬ್ಬರಿಗೆ ಬೈಕ್ ಡಿಕ್ಕಿ ಹೊಡೆದ ಪರಿಣಾಮ, ಗಂಭೀರ ಗಾಯಗೊಂಡಿದ್ದ ಟಾಟಾಏಸ್ ಚಾಲಕ ಚಿಕಿತ್ಸೆ ಫಲಿಸದೆ ಮೃತಪಟ್ಟಿರುವ ಘಟನೆ ನಡೆದಿದೆ.

ಯಳ್ಳೂರಿನ ಮಹದೇವಗೌಡ ಕರಬಸಗೌಡ ಪಾಟೀಲ ಎಂಬುವವರೇ ಸಾವನ್ನಪ್ಪಿದ ಟಾಟಾಏಸ್ ವಾಹನದ ಚಾಲಕರಾಗಿದ್ದಾರೆ. ಹಾನಗಲ್ ನವನಗರದ ಬೈಕ್ ಸವಾರ ಸೈಯದ್‌ಬೇಗ್ ಗಫಾರ್ ಬೇಗ್ ಸವಣೂರ (23) ಎಂಬಾತನ ವಿರುದ್ಧ ದೂರು ದಾಖಲಿಸಲಾಗಿದೆ. ಮೃತ ಮಹದೇವಗೌಡ ಅಕ್ಕಿಆಲೂರಿನಲ್ಲಿ ಬೀಜಗೊಬ್ಬರ ತೆಗೆದುಕೊಂಡು ಹಾನಗಲ್ ಮಾರ್ಗವಾಗಿ ಯಳ್ಳೂರಿಗೆ ಹೋಗುವಾಗ ಈ ಘಟನೆ ನಡೆದಿದೆ. ಮಹದೇವಗೌಡ ತಡಸ-ಗೊಂದಿ ರಸ್ತೆ ಬಳಿ ಇದ್ದ ಚಹಾದ ಅಂಗಡಿಯಲ್ಲಿ ಚಹಾ ಕುಡಿದು ವಾಪಾಸ್ ರಸ್ತೆ ದಾಟಿಕೊಂಡು ಹೋಗುತ್ತಿದ್ದಾಗ ಹಾನಗಲ್ ಕಡೆಯಿಂದ ವೇಗವಾಗಿ ಬಂದ ಬೈಕ್ ಡಿಕ್ಕಿ ಹೊಡೆದು ಅಪಘಾತ ಪಡಿಸಿದೆ. ಅಪಘಾತದಲ್ಲಿ ಗಂಭೀರ ಗಾಯಗೊಂಡಿದ್ದ ಚಾಲಕನನ್ನು ಹಾನಗಲ್ ಹಾಗೂ ಹುಬ್ಬಳ್ಳಿ ಕಿಮ್ಸ್‌ಗೆ ದಾಖಲಿಸಿ, ಹೆಚ್ಚಿನ ಚಿಕಿತ್ಸೆಗೆ ಖಾಸಗಿ ಆಸ್ಪತ್ರೆಗೆ ದಾಖಲಿಸಿದ್ದಾಗ ಚಿಕಿತ್ಸೆ ಫಲಿಸದೆ ಮೃತಪಟ್ಟಿದ್ದಾರೆ ಎಂದು ಮೃತರ ಸಂಬಂಧ ನೀಲಕಂಠಗೌಡ ಪಾಟೀಲ ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಿದ್ದಾರೆ. ಹಾನಗಲ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸಿಎಂ ಸಿದ್ದರಾಮಯ್ಯ ಮುಂದುವರಿಸಲು

ಇಂದು ಹುಬ್ಬಳ್ಳಿಯಲ್ಲಿ ಪ್ರತಿಭಟನೆ

ಹುಬ್ಬಳ್ಳಿ: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಂದ ತರಾತುರಿಯಲ್ಲಿ ರಾಜೀನಾಮೆ ಪಡೆಯುತ್ತಿರುವುದು ನೋವಿನ ಸಂಗತಿ. ಅವರನ್ನು ಸಿಎಂ ಸ್ಥಾನದಲ್ಲಿ ಮುಂದುವರಿಸಬೇಕು ಎಂದು ಆಗ್ರಹಿಸಿ ಮೇ 28 ರಂದು ಸಂಜೆ 4ಗಂಟೆಗೆ ನಗರದ ಸಂಗೊಳ್ಳಿ ರಾಯಣ್ಣ ವೃತ್ತದಲ್ಲಿ ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗುವುದು ಎಂದು ಅಹಿಂದ ಕರ್ನಾಟಕ ರಾಜ್ಯ ಒಕ್ಕೂಟ ಅಧ್ಯಕ್ಷ ಸಿದ್ದು ತೇಜಿ ತಿಳಿಸಿದರು.

ನಗರದಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಯಾವ ಕಾರಣಕ್ಕೆ, ಯಾವ ಹಗರಣದಲ್ಲಿ ಭಾಗಿಯಾಗಿದ್ದಾರೆ ಎಂದು ಸಿಎಂ ಸ್ಥಾನದಿಂದ ಕೆಳಗಿಳಿಸಲಾಗುತ್ತಿದೆ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಸ್ಪಷ್ಟನೆ ನೀಡಬೇಕು ಎಂದು ಆಗ್ರಹಿಸಿದರು.

ಚುನಾವಣೆ ಪೂರ್ವದಲ್ಲಿ ಅಹಿಂದ ಒಟ್ಟುಗೂಡಿ ಕಾಂಗ್ರೆಸ್‌ಗೆ ಮತದಾನ ಮಾಡಿದರೆ ಹಿಂದೂಳಿದ ವರ್ಗದ ಆಯೋಗ ವರದಿ ಜಾರಿಗೆ ಮಾಡುವುದಾಗಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಹಾಗೂ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಭರವಸೆ ನೀಡಿದ್ದರು. ಸರ್ಕಾರ ಅಧಿಕಾರಕ್ಕೆ ಬಂದು ಮೂರು ವರ್ಷ ಕಳೆದರೂ ಸಹ ವರದಿ ಜಾರಿಗೆ ಆಗಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ರಾಜ್ಯದಲ್ಲಿ ಅಹಿಂದ ಪರವಾಗಿರುವ ಸಿದ್ದರಾಮಯ್ಯ ಅವರು ವರದಿ ಜಾರಿಗೆ ಮಾಡುತ್ತಾರೆ ಎಂಬ ಭರವಸೆ ಇತ್ತು. ಈಗ ಅವರಿಂದ ರಾಜೀನಾಮೆ ಪಡೆಯುತ್ತಿರುವುದು ಬೇಸರ ಸಂಗತಿ. ಒಂದು ವೇಳೆ ಸಿದ್ದರಾಮಯ್ಯ ಅವರನ್ನು ಸಿಎಂ ಸ್ಥಾನದಿಂದ ಕೆಳಗಿಳಿಸಿದರೆ ಕಾಂಗ್ರೆಸ್ ವಿರುದ್ಧ ಹೋರಾಟ ಮಾಡುತ್ತೇವೆ. ಡಿಸಿಎಂ ಡಿ.ಕೆ. ಶಿವಕುಮಾರ ಅವರು ಹಿಂದೂಳಿದ ವರ್ಗದ ಆಯೋಗ ವರದಿಗೆ ವಿರೋಧ ಮಾಡಿದ್ದು, ಅವರು ಜಾರಿಗೆ ತರುವುದು ಅಸಾಧ್ಯ ಎಂದು ತಿಳಿಸಿದರು.

ಅಹಿಂದ ಮುಖಂಡರಾದ ನಿಂಗಪ್ಪ ಜಕ್ಕಲಿ, ಎಸ್.ಎಫ್ ಇಬ್ರಾಹಿಂಪೂರ, ಸುಜಾತ ಸನದಿ, ಬಸವರಾಜ ಹೊರಕೇರಿ, ಸಂಜೀವ ದುಮಕನಾಳ, ಎಂ.ಎಸ್ ಕರಿಯೂರ, ಹನುಮಂತಪ್ಪ ಬ್ಯಾಹಟ್ಟಿ, ಎಚ್.ಬಿ. ಕೌಜಗೇರಿ ಇದ್ದರು.

ಸಿದ್ದರಾಮಯ್ಯ ರಾಜೀನಾಮೆ ನೀಡಿದರೆ ಕಾಂಗ್ರೆಸ್ ಧೂಳಿಪಟ

ಗೋಕಾಕ: ಸಿದ್ದರಾಮಯ್ಯ ಅವರು ಸಿಎಂ ಸ್ಥಾನಕ್ಕೆ ರಾಜೀನಾಮೆ ನೀಡಿ, ಬೇರೆಯವರು ಯಾರಾದರೂ ಮುಖ್ಯಮಂತ್ರಿಯಾದರೆ ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷ ಧೂಳಿಪಟವಾಗಲಿದೆ ಎಂದು ವಿಧಾನ ಪರಿಷತ್ ಸದಸ್ಯ ಲಖನ್ ಜಾರಕಿಹೊಳಿ ಹೇಳಿದರು.



ಗೋಕಾಕನಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿ, ಕಾಂಗ್ರೆಸ್ ಪಕ್ಷದ ಅಸ್ತಿತ್ವಕ್ಕೆ ಅಹಿಂದ ಮತಗಳೇ ಜೀವಾಳ. 2023ರ ಸಾರ್ವತ್ರಿಕ ಚುನಾವಣೆ ಹಾಗೂ ಇತ್ತೀಚಿನ ಉಪಚುನಾವಣೆಗಳಲ್ಲಿ ಕಾಂಗ್ರೆಸ್ ಪಕ್ಷ ಭರ್ಜರಿ ಜಯ ಸಾಧಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನಾಯಕತ್ವ ಮತ್ತು ಅಹಿಂದ ಮತಗಳೇ ಮೂಲ ಕಾರಣ. ಒಂದು ವೇಳೆ ಪ್ರಸ್ತುತ ರಾಜಕೀಯ ವಿದ್ಯಮಾನಗಳ ಹಿನ್ನೆಲೆಯಲ್ಲಿ ಸಿದ್ದರಾಮಯ್ಯ ಸಿಎಂ ಸ್ಥಾನಕ್ಕೆ ರಾಜೀನಾಮೆ ನೀಡಿದರೆ ಕಾಂಗ್ರೆಸ್ ಪಕ್ಷಕ್ಕೆ ತುಂಬಲಾರದ ನಷ್ಟವಾಗಲಿದೆ ಎಂದರು. ಸಿದ್ದರಾಮಯ್ಯ ಬದಲಾವಣೆಯಿಂದ ಅಹಿಂದ ಸಮುದಾಯದ ಬೆಂಬಲ ಕೈತಪ್ಪಿದರೆ, ಮುಂದಿನ 2028ರ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಕನಿಷ್ಠ 40 ಸ್ಥಾನಗಳನ್ನು ಗೆಲ್ಲಲು ಸಹ ತೀವ್ರ ಹೋರಾಟ ನಡೆಸಬೇಕಾಗುತ್ತದೆ ಎಂದರು.

ಅಕಾಲಿಕ ಮಳೆ: ಉಪ್ಪಿನ ಉತ್ಪಾದನೆಗೆ ಹೊಡೆತ



ಗೋಕರ್ಣ: ಅಕಾಲಿಕ ಮಳೆಯ ಪರಿಣಾಮ ಇಲ್ಲಿನ ಸಾಣಿಕಟ್ಟಾದಲ್ಲಿನ ಈ ವರ್ಷದ ಉಪ್ಪಿನ ಬೆಳೆಯ ಹಂಗಾಮ ಮುಕ್ತಾಯಗೊಂಡಿದ್ದು, ಉತ್ಪಾದನೆಯಲ್ಲಿ ಗಣನೀಯ ಇಳಿಯಾಗಿದೆ.

ಡಿಸೆಂಬರ್ ತಿಂಗಳಿಂದ ಮೇ ತಿಂಗಳ ಪೂರ್ತಿ ಬಿಸಿಲಿನ ವಾತವರಣವಿದ್ದರೆ ಮಾತ್ರ ಇಲ್ಲಿನ ನಾಗರಬೈಲ್ ಉಪ್ಪಿನ ಮಾಲಕರ ಸಹಕಾರ ಸಂಘದ ಒಡೆತನದ ಉಪ್ಪಿನ ಆಗರ ಹಾಗೂ ಅಂಕೋಲಾ ಮಂಜುಗುಣಿಯ ಖಾಸಗಿ ಒಡೆತನದ ಶಿಂಗನಮಕ್ಕಿ ಉಪ್ಪಿನ ಆಗರದಲ್ಲಿ ಉಪ್ಪು ಅಧಿಕವಾಗಿ ದೊರೆಯುತ್ತಿತ್ತು.

ಆದರೆ ಈ ವರ್ಷ ತಾಪಮಾನ ನಿಗದಿತ ಪ್ರಮಾಣಕ್ಕಿಂತ ಅತಿ ಹೆಚ್ಚು ಆಗಿರುವುದರಿಂದ ಬಿಸಿಲಿನ ವಾತಾವರಣವಿದ್ದರೂ ಬೆಳೆ ಇಳಿಮುಖ ಗೊಂಡಿತ್ತು, ಇನ್ನೇನು ಉಷ್ಣಾಂಶ ತುಸು ಕಡಿಮೆಯಾಗುತ್ತಿದೆ ಎನ್ನುವಷ್ಟರಲ್ಲಿ ಹವಾಮಾನ ವೈಪರೀತ್ಯದಿಂದ ಉಂಟಾದ ಮಳೆಯ ಅಬ್ಬರಕ್ಕೆ ಉಪ್ಪು ಬೆಳೆಯುವ ಪ್ರದೇಶಕ್ಕೆ ಸಿಹಿ ನೀರು ತುಂಬಿ ಸಂಪೂರ್ಣ ಹಾನಿಯಾಗಿದೆ.

21 ದಿನ ಮುಂಚಿತವಾಗಿ ಮುಗಿದ ಉತ್ಪಾದನೆ

ಮೇ 13 ಕ್ಕೆ ಈ ವರ್ಷದ ಉಪ್ಪಿನ ಬೆಳೆ ನಿಂತಿದ್ದು, ಕಳೆದ ವರ್ಷಕ್ಕಿಂತ 21 ದಿನ ಮುಂಚಿತವಾಗಿ ನಿಂತಿದ್ದರಿಂದ ಮೂರು ಸಾವಿರ ಟನ್ ಉಪ್ಪು ಈ ವರ್ಷ ಕಡಿಮೆಯಾಗಿದೆ ಎಂದು ನಾಗರಬೈಲ್ ಉಪ್ಪು ಮಾಲಕರ ಸಹಕಾರಿ ಸಂಘದ ಅಧ್ಯಕ್ಷ ಅರುಣ ನಾಡ್ಕರ್ಣಿ ತಿಳಿಸಿದ್ದಾರೆ.

ಕಿರುಸುದ್ದಿ

ರವೀಂದ್ರ ಶೆಟ್ಟಿಗೆ ಸನ್ಮಾನ

ಅಂಕೋಲಾ: ಇಲ್ಲಿಯ ಕನ್ನಡ ವೈಶ್ಯ ವಿದ್ಯಾನಿಧಿಯ 109ನೇ ವರ್ಷದ ಅಧಿವೇಶನ ಹಾಗೂ ಕನ್ನಡ ವೈಶ್ಯ ವೆಲ್ಫೇರ್ ಟ್ರಸ್ಟಿನ ದಶಮಾನೋತ್ಸವ ಕಾರ್ಯಕ್ರಮ ಯಶಸ್ವಿಯಾಗಿ ನಡೆಯಿತು.

ಈ ಸಂದರ್ಭದಲ್ಲಿ ರವೀಂದ್ರ ಎನ್ ಶೆಟ್ಟಿಯವರನ್ನು ಗೌರವಿಸಿ ಸನ್ಮಾನಿಸಲಾಯಿತು. ಶ್ರೀಯುತರು ನಾಲ್ಕು ದಶಕಗಳಿಂದ ಗ್ರಾಮೀಣಾಭಿವೃದ್ಧಿ, ಪರಿಸರ ಸಂರಕ್ಷಣೆ, ವೈದ್ಯಕೀಯ ಸೇವೆ, ಸಂಸ್ಕೃತಿಕ ರಂಗ, ಹಾಗೂ ಸಮಾಜ ಸೇವೆಯಲ್ಲಿ ಗಣನೀಯ ಸೇವೆ ಸಲ್ಲಿಸಿರುತ್ತಾರೆ.

ಈ ಸನ್ಮಾನ ಪ್ರಕ್ರಿಯೆಯಲ್ಲಿ ವಿದ್ಯಾನಿಧಿಯ ಅಧ್ಯಕ್ಷರಾದ ಸಂಜೀವ್ ಕುಮಾರ್ ಹೊಸ್ಕೆರಿ, ಸರ್ವೋಚ್ಚ ನ್ಯಾಯಾಲಯದ ನ್ಯಾಯವಾದಿಗಳಾದ ಗುರುದತ್ ಅಂಕೋಲೆಕ, ನಾಗರಾಜ್ ಹೊಸ್ಕೆರಿ ಉಚ್ಚ ನ್ಯಾಯಾಲಯ ಮುಂಬೈ. ಕನ್ನಡ ವೈಶ್ಯ ವೆಲ್ಫೇರ್ ಟ್ರಸ್ಟಿನ ಜಗನ್ನಾಥ್ ನಾಗೇಶ್ ಶೆಟ್ಟಿ ಕಡಮೆ, ಕೆ. ವಿ ಶೆಟ್ಟಿ, ಪ್ರದೀಪ್ ಎಚ್ ಶೆಟ್ಟಿ, ಹಾಗೂ ಟ್ರಸ್ಟಿನ ವಿಶ್ವಸ್ಥರು ಉಪಸ್ಥಿತರಿದ್ದರು.

ಶಿಂಧೆ ನಿಲೇಶ ದೇವ್ರೋಬಾ ವರ್ಗಾವಣೆ ರದ್ದು

ದಾಂಡೇಲಿ: ಕಾಳಿ ಹುಲಿ ಸಂರಕ್ಷಿತ ಪ್ರದೇಶದ ಉಪ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ನಿರ್ದೇಶಕರಾದ ಶಿಂಧೆ ನಿಲೇಶ ದೇವ್ರೋಬಾ



ಅವರನ್ನು ಕಲ್ಬುರ್ಗಿ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿಯಾಗಿ ವರ್ಗಾವಣೆ ಮಾಡಿರುವುದನ್ನು ರದ್ದುಗೊಳಿಸಲಾಗಿದೆ ಮಾಧ್ಯಮಕ್ಕೆ ಮಾಹಿತಿ ಲಭ್ಯವಾಗಿದೆ.ರಾಜ್ಯಪಾಲರ ಆದೇಶದ ಮೇರೆಗೆ ಸರ್ಕಾರದ ಅಧೀನ ಕಾರ್ಯದರ್ಶಿ ವಿ. ಪ್ರಸನ್ನ ಕುಮಾರ್ ಅವರು ವರ್ಗಾವಣೆ ರದ್ದುಪಡಿಸಲಾದ ಅಧಿಕೃತ ಅಧಿಸೂಚನೆಗೆ ಸಹಿ ಮಾಡಿದ್ದಾರೆ ಎಂದು ತಿಳಿದು ಬಂದಿದೆ.

ನಾಳೆ ವಿದ್ಯುತ್ ವ್ಯತ್ಯಯ

ಅಂಕೋಲಾ: ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ ಅಂಕೋಲಾ ಉಪ ವಿಭಾಗದ ಬಾಳೆಗುಳಿಯ 110/33/11 ಕೆ.ವಿ ವಿದ್ಯುತ್ ವಿತರಣಾ ಕೇಂದ್ರದಲ್ಲಿ ಜಿ.ಓ ಎಸ್ ನಿರ್ವಹಣಾ ಕಾರ್ಯ ಇರುವುದರಿಂದ 11 ಕೆ.ವಿ ಅಂಕೋಲಾ, ಅಂಬಾರಕೊಡ್ಲ, ವಂದಿಗೆ, ಗುಂಡಬಾಳ,ಅಗ್ರಗೋಣ ಫೀಡರುಗಳಿಗೆ ಬೆಲೇಕೇರಿ, ಅಗಸೂರು, ನವಗದ್ದೆ, ವೋಡಾಫೋನ್ ಫೀಡರುಗಳಿಗೆ ಹಾಗೂ ಮಾಸ್ತಿಕಟ್ಟಾದ 33/11 ಕೆವಿ ವಿದ್ಯುತ್ ವಿತರಣಾ ಕೇಂದ್ರದಿಂದ ಹೊರಡುವ ಹೊನ್ನಳ್ಳಿ,ಶಿರಗುಂಜಿ ಮಾಸ್ತಿಕಟ್ಟಾ,ರಾಮನಗುಳಿ, ಹಡಿನಗದ್ದೆ, ಹಳವಳ್ಳಿ ಹಾಗೂ ಮಾರುಗದ್ದೆ ಫೀಡರುಗಳ ವ್ಯಾಪ್ತಿಯಲ್ಲಿ ಮೇ 29ರಂದು ಶುಕ್ರವಾರ ಬೆಳಿಗ್ಗೆ 9.30 ಗಂಟೆಯಿಂದ ಸಂಜೆ 5.30ಗಂಟೆವರೆಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಬಹುದು ಸಾರ್ವಜನಿಕರು ಸಹಕರಿಸಬೇಕು ಎಂದು ಹೆಸ್ಕಾಂ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಮುಖ್ಯೋಪಾಧ್ಯಾಯರ ಸಭೆ



ಮುಂಡಗೋಡ: ಪ್ರಸ್ತುತ ಶೈಕ್ಷಣಿಕ ವರ್ಷ ಮೇ 29 ರಿಂದ ಪ್ರಾರಂಭವಾಗುವ ಹಿನ್ನೆಲೆಯಲ್ಲಿ ಬುಧವಾರ ಬಿಇಓ ಸುಮಾ ಜಿ. ನೇತೃತ್ವದಲ್ಲಿ ತಾಲೂಕಿನ ಮುಖ್ಯೋಪಾಧ್ಯಾಯರ ಜತೆ ಸಭೆ ನಡೆಸಿದರು. ಎರಡು ದಿನದಲ್ಲಿ ಶಾಲೆಗಳು ಪ್ರಾರಂಭವಾಗುತ್ತಿದ್ದು ಮುನ್ನೆಚ್ಚರಿಕೆ ಕ್ರಮವಾಗಿ ಕೈಗೊಳ್ಳುವ ಕ್ರಮವಹಿಸುವಂತೆ ಸೂಚಿಸಲಾಯಿತು. ಪಿಎಲ್ಎನ್, ಪ್ರವೇಶ, ಲ್ಯಾಬ್, ಶೀತಲ ವ್ಯವಸ್ಥೆ ಯಲ್ಲಿರುವ ಕೊಠಡಿ, ರಿಪೇರಿಯಲ್ಲಿರುವ ಕೊಠಡಿ, ಮಕ್ಕಳ ಅಗತ್ಯ ದಾಖಲೆ, ಹಾಜರಾತಿ, ಕ್ರಿಯಾಯೋಜನೆ, ಬೇರೆ ಇಲಾಖೆಯ ಸಹಭಾಗಿತ್ವ, ಶಾಲೆ ಪ್ರಾರಂಭೋತ್ಸವ ಸೇರಿದಂತೆ ಇನ್ನ ಹಲವಾರು ವಿಷಯಗಳ ಬಗ್ಗೆ ಬಿಇಓ ಅವರು ಸಲಹೆ ಸೂಚನೆ ನೀಡಿದರು. ಸಭೆಯಲ್ಲ ತಾಲೂಕಿನ ಕಿರಿಯ ಹಿರಿಯ ಮತ್ತು ಪ್ರೌಢ ಶಾಲೆಯ ಮುಖ್ಯೋಪಾಧ್ಯಾಯರ ಹಾಜರಿದ್ದರು.

ಎಪಿಎಂಸಿ ಕೃಷಿ ಧಾರಣೆ

ಶಿರಸಿ	ಕನಿಷ್ಠ	ಗರಿಷ್ಠ
ಕಾಳುಮೆಣಸು	60009	68889
ಬಿಳಿಗೋಟು	23009	35500
ಕೆಂಪುಗೋಟು	29300	35699
ಬೆಟ್ಟೆ	40799	46500
ರಾಶಿ	50500	53100
ಚಾಲಿ	43099	46701
ಬಿ.ಕಾಳುಮೆಣಸು	70399	72899



ಅಂಕೋಲಾ: ಇಲ್ಲಿಯ ಕನ್ನಡ ವೈಶ್ಯ ವಿದ್ಯಾನಿಧಿಯ 109ನೇ ವರ್ಷದ ಅಧಿವೇಶನ ಹಾಗೂ ಕನ್ನಡ ವೈಶ್ಯ ವೆಲ್ಫೇರ್ ಟ್ರಸ್ಟಿನ ದಶಮಾನೋತ್ಸವ ಕಾರ್ಯಕ್ರಮದಲ್ಲಿ ರವೀಂದ್ರ ಎನ್ ಶೆಟ್ಟಿಯವರನ್ನು ಗೌರವಿಸಿ ಸನ್ಮಾನಿಸಲಾಯಿತು.ವಿದ್ಯಾನಿಧಿಯ ಅಧ್ಯಕ್ಷರಾದ ಸಂಜೀವ್ ಕುಮಾರ್ ಹೊಸ್ಕೆರಿ, ಸರ್ವೋಚ್ಚ ನ್ಯಾಯಾಲಯದ ನ್ಯಾಯವಾದಿಗಳಾದ ಗುರುದತ್ ಅಂಕೋಲಿಕ, ನಾಗರಾಜ್ ಹೊಸ್ಕೆರಿ ಉಚ್ಚ ನ್ಯಾಯಾಲಯ ಮುಂಬೈ. ಕನ್ನಡ ವೈಶ್ಯ ವೆಲ್ಫೇರ್ ಟ್ರಸ್ಟಿನ ಜಗನ್ನಾಥ್ ನಾಗೇಶ್ ಶೆಟ್ಟಿ ಕಡಮೆ, ಕೆ. ವಿ ಶೆಟ್ಟಿ, ಪ್ರದೀಪ್ ಎಚ್ ಶೆಟ್ಟಿ, ಹಾಗೂ ಟ್ರಸ್ಟಿನ ವಿಶ್ವಸ್ಥರು ಉಪಸ್ಥಿತರಿದ್ದರು.

ಬೆಲೆ ಏರಿಕೆ ವಾಪಸಾತಿಗೆ ಆಗ್ರಹಿಸಿ ಮನವಿ

ಅಂಕೋಲಾ: ಕೇಂದ್ರ ಸರ್ಕಾರ ಏರಿಸಿರುವ ಪೆಟ್ರೋಲ್, ಡೀಸೆಲ್, ಅಡುಗೆ ಅನಿಲ ಮತ್ತಿತರ ಪೆಟ್ರೋಲಿಯಂ ಉತ್ಪನ್ನಗಳ ಬೆಲೆ ಏರಿಕೆಯನ್ನು ವಾಪಸ್ಸು ಪಡೆಯಬೇಕು ಎಂದು ಆಗ್ರಹಿಸಿ ಪ್ರಾಂತ ರೈತ ಸಂಘದ ಉತ್ತರ ಕನ್ನಡ ಜಿಲ್ಲಾ ಸಮಿತಿಯ ವತಿಯಿಂದ ಅಂಕೋಲಾ ತಹಶೀಲ್ದಾರರ ಮೂಲಕ ಪ್ರಧಾನ ಮಂತ್ರಿಗಳಿಗೆ ಮನವಿ ನೀಡಿದರು.

ಪೆಟ್ರೋಲಿಯಂ ಉತ್ಪನ್ನಗಳ ಬೆಲೆ ಏರಿಕೆ ರೈತರು ಸೇರಿದಂತೆ ಜನಸಾಮಾನ್ಯರಿಗೆ ತೀವ್ರ ಸಂಕಷ್ಟ ತಂದೊಡ್ಡಿದೆ, ವಿಶ್ವದ ಹಲವು ದೇಶಗಳು ಪೆಟ್ರೋಲಿಯಂ ಉತ್ಪನ್ನಗಳ ಬೆಲೆ ನಿಯಂತ್ರಣಕ್ಕೆ ಕ್ರಮಗಳನ್ನು ಕೈಗೊಂಡಿರುವಾಗ ಭಾರತ ಸರ್ಕಾರ ಜನಸಾಮಾನ್ಯರ ಬದುಕಿನ ರಕ್ಷಣೆಗೆ ಮುಂದಾಗದಿರುವುದು ಖಂಡನೀಯ ಎಂದು ಮನವಿಯಲ್ಲಿ ತಿಳಿಸಲಾಗಿದೆ.

ದರ ಏರಿಕೆಯ ಬದಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ವಿಧಿಸುವ ತೆರಿಗೆಗಳನ್ನು ಕಡಿತಗೊಳಿಸಬೇಕು,ಜನರ ಸಂಕಷ್ಟದ ಸಮಯದಲ್ಲಿ ಹೆಚ್ಚುವರಿ ಹೊರೆ ಹೇರುವುದು ಸರಿಯಲ್ಲ ಎಂದು ಮನವಿಯಲ್ಲಿ ಹೇಳಲಾಗಿದ್ದು ರಸಗೊಬ್ಬರಗಳ ದಾಸ್ತಾನು ಖಚಿತಪಡಿಸಿಕೊಳ್ಳಲು ಸರ್ಕಾರ ವಿಫಲವಾದ ಕಾರಣ ರೈತರು ರಸಗೊಬ್ಬರದ ಕೊರತೆ ಮತ್ತು ವೆಚ್ಚಗಳಲ್ಲಿ ಏರಿಕೆ ಎದುರಿಸುವಂತಾಗಿದ್ದು ಅಗತ್ಯ ಪ್ರಮಾಣದಲ್ಲಿ ರಸಗೊಬ್ಬರ ಪೂರೈಕೆಗೆ ಸರ್ಕಾರಗಳು ಕ್ರಮಗಳನ್ನು ಕೈಗೊಂಡು ಬೆಲೆ ಏರಿಕೆಯನ್ನು ಕೈಬಿಡಬೇಕು ಎಂದು ಮನವಿ ಮೂಲಕ ಒತ್ತಾಯಿಸಲಾಗಿದೆ. ಪ್ರಾಂತ ರೈತ ಸಂಘದ ಜಿಲ್ಲಾಧ್ಯಕ್ಷ ಶಾಂತಾರಾಮ ನಾಯಕ, ಉಪಾಧ್ಯಕ್ಷ ತಿಮ್ಮಪ್ಪ ಗೌಡ, ಗೌರೀಶ ನಾಯಕ, ಕಾರ್ಯದರ್ಶಿ ಸಂತೋಷ ನಾಯ್ಕ, ಸದಸ್ಯರುಗಳಾದ ಬುಜಂಗ ಚಿಬ್ಲುಕರ್, ಬಾಬು ಹನ್ಗೇಕರ್, ಗಣಪತಿ ಸಿದ್ದಿ, ಉದಯ ನಾಯ್ಕ, ನಿತ್ಯಾನಂದ ಸಿದ್ದಿ,ವಿನೋದ ನಾಯ್ಕ ಉಪಸ್ಥಿತರಿದ್ದರು.



ಅಂಕೋಲಾ: ಕೇಂದ್ರ ಸರ್ಕಾರ ಏರಿಸಿರುವ ಪೆಟ್ರೋಲ್, ಡೀಸೆಲ್, ಅಡುಗೆ ಅನಿಲ ಮತ್ತಿತರ ಪೆಟ್ರೋಲಿಯಂ ಉತ್ಪನ್ನಗಳ ಬೆಲೆ ಏರಿಕೆಯನ್ನು ವಾಪಸ್ಸು ಪಡೆಯಬೇಕು ಎಂದು ಆಗ್ರಹಿಸಿ ಪ್ರಾಂತ ರೈತ ಸಂಘದ ಉತ್ತರ ಕನ್ನಡ ಜಿಲ್ಲಾ ಸಮಿತಿಯ ವತಿಯಿಂದ ಅಂಕೋಲಾ ತಹಶೀಲ್ದಾರರ ಮೂಲಕ ಪ್ರಧಾನ ಮಂತ್ರಿಗಳಿಗೆ ಮನವಿ ನೀಡಿದರು.

ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಹೇಳಿಕೆ

11 ಸಾವಿನ ಬಗ್ಗೆ ಸೂಕ್ತ ತನಿಖೆ ನಡೆಯಲಿ

ಭಟ್ಕಳ: ಶಿರಾಲಿಯ ತಟ್ಟಿಹಕ್ಲ ಹೊಳೆಯಲ್ಲಿ ಕಪ್ಪೆ ಚಿಪ್ಪು ಸಂಗ್ರಹದ ಸಂದರ್ಭದಲ್ಲಿ ನಡೆದ ದುರಂತದಲ್ಲಿ 11 ಮಂದಿ ಅಸುನೀಗಿದ ಘಟನೆಗೆ ಸಂಬಂಧಿಸಿದಂತೆ ಜಿಲ್ಲಾಡಳಿತ ಸೂಕ್ತ ತನಿಖೆ ನಡೆಸಿ ಜನತೆಗೆ ಮಾಹಿತಿ ನೀಡಬೇಕೆಂದು ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಹೇಳಿದರು.

ಅವರು ಬಿಜೆಪಿ ಕಚೇರಿಯಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ತಟ್ಟಿಹಕ್ಲ ದುರಂತದಿಂದ ಆದ 11 ಜನರ ಸಾವಿನ ಬಗ್ಗೆ ಸಾರ್ವಜನಿಕ ವಲಯದಲ್ಲಿ ನಾನಾ ರೀತಿಯ ಅಭಿಪ್ರಾಯ ಕೇಳಿ ಬಂದಿದೆ.

ಈ ದುರಂತ ಅದೇ ದಿನ ಬೆಳಗಿನ ಜಾವ ಭಾರೀ ಪ್ರಮಾಣದಲ್ಲಿ ಮಳೆ ಸುರಿದು ಹೊಳೆಯಲ್ಲಿ ಕೆಸರಿನಿಂದ ಆಗಿದೆಯೋ, ರೆಸಾರ್ಟ ಮಾಡಲು ಸೇತುವೆಗಾಗಿ ಮಣ್ಣು ತುಂಬಿದ್ದರಿಂದ ನೀರು ಒಂದು ಕಡೆಯಲ್ಲಿ ನಿಂತ ಪರಿಣಾಮದಿಂದ ಆಗಿದೆಯೋ ಅಥವಾ ಸಹಜವಾಗಿಯೇ ಆಗಿದೆಯೋ ಎನ್ನುವುದರ ಬಗ್ಗೆ ಕೂಲಂಕುಶವಾದ ತನಿಖೆ ನಡೆಸುವ ಅಗತ್ಯವಿದೆ. ಈ ಬಗ್ಗೆ ಜಿಲ್ಲಾಡಳಿತವನ್ನು ಒತ್ತಾಯಿಸಲಿದ್ದೇನೆ ಎಂದ ಜನರಿಗೆ ದುರ್ಘಟನೆ ಅವರು ಮೃತರ ಕುಟುಂಬದವರಿಗೆ ಸರಕಾರದಿಂದ ಏನೇನು ಸೌಲಭ್ಯ ಸಿಗಬೇಕೋ ಮತ್ತು ಸಾಮಾಜಿಕವಾಗಿ ಏನು ಸಹಾಯ ಮಾಡಬೇಕೋ ಅದನ್ನು ಮಾಡುವ ಕೆಲಸ ಮಾಡುತ್ತೇವೆ ಎಂದರು.

ಇಂತಹ ದುರಂತದಿಂದ ನೋವಾಗಿದೆ. ಮೃತರ ಮನೆಗಳಿಗೆ ಖುದ್ದು ಭೇಟಿ ನೀಡಿದ್ದೇನೆ. ನಮ್ಮಿಂದ ಆಗುವ ಸಹಾಯ ಖಂಡಿತ ಮಾಡುತ್ತೇವೆ ಎಂದರು.



ಪ್ರಮೋದ ಮಧ್ವರಾಜರಿಂದ ಭೇಟಿ

ಭಟ್ಕಳ: ಕಪ್ಪೆ ಚಿಪ್ಪು ಸಂಗ್ರಹ ವೇಳೆ ನಡೆದ ದುರಂತದಲ್ಲಿ ಅಸುನೀಗಿದವರ ಮನೆಗೆ ಮಾಜಿ ಸಚಿವ ಹಾಗೂ ಬಿಜೆಪಿ ಮುಖಂಡ ಪ್ರಮೋದ ಮಧ್ವರಾಜ್ ಅವರು ಬುಧವಾರ ಭೇಟಿ ನೀಡಿ ಕುಟುಂಬದ ಸದಸ್ಯರಿಗೆ ಸಾಂತ್ವನ ಹೇಳಿದರು. ಮೃತರ ಎಲ್ಲಾ ಕುಟುಂಬಕ್ಕೂ ಭೇಟಿ ನೀಡಿದ ಅವರು ಪ್ರತ್ಯೇಕ ಧನಸಹಾಯ ಕೂಡ ಮಾಡಿ ಮಾನವೀಯತೆ ಮೆರೆದರು. ದುರ್ಘಟನೆಯಿಂದ ಬಹಳ ನೋವಾಗಿದೆ ಎಂದರು. ಈ ಸಂದರ್ಭದಲ್ಲಿ ಬಿಜೆಪಿ ಮಂಡಲ ಪ್ರಧಾನ ಕಾರ್ಯದರ್ಶಿ ಶ್ರೀನಿವಾಸ ನಾಯ್ಕ, ಮುಖಂಡರಾದ ನಾಗಪ್ಪ ನಾಯ್ಕ, ರಾಜು ನಾಯ್ಕ ಮತ್ತು ಗ್ರಾಮಸ್ಥರಿದ್ದರು.



ಮೃತರ ಕುಟುಂಬ ವರ್ಗಕ್ಕೆ ಸಾಂತ್ವನ

ಭಟ್ಕಳ: ಶಿರಾಲಿಯ ತಟ್ಟಿಹಕ್ಲು ಹೊಳೆಯಲ್ಲಿ ಕಪ್ಪೆ ಚಿಪ್ಪು ಸಂಗ್ರಹಿಸುವಾಗ ನಡೆದ ದುರಂತದಿಂದ ಮೃತಪಟ್ಟವರ ಮನೆಗೆ ಬುಧವಾರ ಬೆಳಿಗ್ಗೆ ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಅವರು ಭೇಟಿ ನೀಡಿ ಕುಟುಂಬದ ಸದಸ್ಯರಿಗೆ ಸಾಂತ್ವನ ಹೇಳಿದರು. ಸಂಸದರು ಮೃತಪಟ್ಟವರ ಕುಟುಂಬದ ಸದಸ್ಯರೊಂದಿಗೆ ಮಾತನಾಡಿ, ದುರಂತದಿಂದ ಎಲ್ಲರಿಗೂ ನೋವಾಗಿದೆ. ಕೇಂದ್ರ ಸರ್ಕಾರದಿಂದ ಈಗಾಗಲೇ ಪರಿಹಾರ ಘೋಷಣೆ ಆಗಿದ್ದು, ಸರ್ಕಾರದಿಂದ ಮತ್ತಷ್ಟು ಸೌಲಭ್ಯ ಒದಗಿಸಲು ಪ್ರಯತ್ನಿಸಲಾಗುವುದು. ಮೃತಪಟ್ಟವರ ಮನೆಯವರು ದುಃಖ ದಲ್ಲಿದ್ದಾರೆ. ಕೆಲವವರು ಆಹಾರವನ್ನೂ ಸರಿಯಾಗಿ ಸೇವಿಸದ ಹಿನ್ನೆಲೆಯಲ್ಲಿ ಸಂಸದರು ಕುಟುಂಬದ ಸದಸ್ಯರ ಆರೋಗ್ಯದ ಹಿತದೃಷ್ಟಿಯಿಂದ ಈ ಭಾಗಕ್ಕೆ ವೈದ್ಯರನ್ನು ಕರೆಯಿಸಿ ತಪಾಸಣೆ ನಡೆಸುವಂತೆ ಸೂಚಿಸಿದರು. ಈ ಸಂದರ್ಭದಲ್ಲಿ ಮಾಜಿ ಸಚಿವ ಶಿವಾನಂದ ನಾಯ್ಕ, ಮಾಜಿ ಶಾಸಕ ಸುನೀಲ ನಾಯ್ಕ, ಬಿಜೆಪಿ ಮಂಡಲಾಧ್ಯಕ್ಷ ಲಕ್ಷ್ಮೀನಾರಾಯಣ ನಾಯ್ಕ, ಊರ ಪ್ರಮುಖರಾದ ಕೃಷ್ಣಾ ನಾಯ್ಕ ಪೃಥ್ವಿ ಸೇರಿದಂತೆ ಹಲವು ಮುಖಂಡರು ಇದ್ದರು.

ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮವಾಗಲಿ

ಹಳಿಯಾಳ: ಭಟ್ಕಳ ಪಟ್ಟಣದ ಐತಿಹಾಸಿಕ ಮತ್ತು ಪವಿತ್ರ ಮುರುವಿನ ಕಟ್ಟೆಗೆ ಧ್ವಂಸ ಮಾಡಿರುವವರ ವಿರುದ್ಧ ಕೂಡಲೇ ಕಠಿಣ ಕಾನೂನುಕ್ರಮಜರುಗಿಸಬೇಕೆಂದು ಹಳಿಯಾಳ ಬಿಜೆಪಿ ಮಾಜಿ ಶಾಸಕ ಸುನಿಲ್ ಹೆಗಡೆ ಆಗ್ರಹಿಸಿದ್ದಾರೆ.



ಈ ಕುರಿತು ಅವರು ಹಳಿಯಾಳ ಮಾಧ್ಯಮಗಳಿಗೆ ಪತ್ರಿಕಾ ಹೇಳಿಕೆ ನೀಡಿದ್ದು, ಭಟ್ಕಳ ವಿಷಯದಲ್ಲಿ ರಾಜ್ಯ ಸರ್ಕಾರದ ನಡೆಯನ್ನು ಪ್ರಶ್ನಿಸಿ, ಕೂಡಲೇ ಮಧ್ಯಪ್ರವೇಶಿಸುವಂತೆ ಒತ್ತಾಯಿಸಿದ್ದಾರೆ.

''ಭಟ್ಕಳದ ಮುರುವಿನ ಕಟ್ಟೆ ಕೇವಲ ಕಲ್ಲಿನ ರಚನೆಯಲ್ಲ, ಇದು ನೂರಾರು ವರ್ಷಗಳಿಂದ ಉತ್ತರ ಕನ್ನಡ ಜಿಲ್ಲೆಯ ಹಿಂದೂ ಸಮಾಜದ ನಂಬಿಕೆ, ಸಂಸ್ಕೃತಿ ಮತ್ತು ಅಸ್ಮಿತೆಯ ಪ್ರತೀಕ. ಇಂತಹ ಪವಿತ್ರ ಸ್ಥಳದ ಮೇಲೆ ಕಣ್ಣು ಹಾಕಿ, ಗೊಂದಲ ಸೃಷ್ಟಿಸಿ ಹಿಂದೂಗಳ ಧಾರ್ಮಿಕ ಭಾವನೆಗೆ ಧಕ್ಕೆ ತರುವ ಹುನ್ನಾರವನ್ನು ರಾಜ್ಯ ಸರ್ಕಾರದ ಪರೋಕ್ಷ ಕುಮ್ಮಕ್ಕಿನಿಂದಲೇ ನಡೆಸಲಾಗುತ್ತಿದೆ.

ಇದು ಕಾಂಗ್ರೆಸ್ ಸರ್ಕಾರದ ತುಷ್ಟೀಕರಣ ರಾಜಕಾರಣಕ್ಕೆ ಮತ್ತೊಂದು ನಿದರ್ಶನ. ಅಲ್ಪಸಂಖ್ಯಾತರ ಓಲೈಕೆಗಾಗಿ ಬಹುಸಂಖ್ಯಾತ ಹಿಂದೂಗಳ ಶ್ರದ್ಧಾ ಕೇಂದ್ರಗಳನ್ನು ಗುರಿಯಾಗಿಸಲಾಗುತ್ತಿದೆ. ಅಧಿಕಾರಿಗಳನ್ನು ದುರ್ಬಳಕೆ ಮಾಡಿಕೊಂಡು ಸುಳ್ಳು ವರದಿ ತಯಾರಿಸಿ, ವಿವಾದ ಎಬ್ಬಿಸಿ ಕಾಲಹರಣ ಮಾಡುವುದು ಈ ಸರ್ಕಾರದ ಚಾಳಿಯಾಗಿದೆ ಎಂದು ಕಿಡಿ ಕಾರಿದ್ದಾರೆ.

ಮುರುವಿನ ಕಟ್ಟೆ ವಿವಾದ ನೋಡಿದರೆ ರಾಜ್ಯ ಸರ್ಕಾರಕ್ಕೆ ಹಿಂದೂಗಳ ಆಚರಣೆ, ನಂಬಿಕೆ ಕಂಡರೆ ಆಗದೇ ಇರುವಂತೆ ಕಾಣುತ್ತದೆ. ಕಾಂಗ್ರೆಸ್ ಸರ್ಕಾರದ ಒಂದು ಕೋಮಿನ ಓಲೈಕೆ ರಾಜಕಾರಣದಿಂದ ಮತ್ತು ಆಕೋಮಿನವರು ನಡೆಸಿದ ದೊಂಬೀ, ಗಲಾಟೆ, ಗಂಭೀರ ಕ್ರಿಮಿನಲ್ ಪ್ರಕರಣಗಳನ್ನು ಹಿಂಪಡೆದಿರುವುದರಿಂದ, ಅವರು ಇಂದು ಪದೇ ಪದೇ ಅದೇ ರೀತಿಯ ಗಂಭೀರ ವಿವಾದಗಳನ್ನು ಸೃಷ್ಟಿಸುವ ಹಿಂದುಗಳ ಧಾರ್ಮಿಕ ಭಾವನೆಗೆ ಧಕ್ಕೆ ತರುವ ಅಪರಾಧ ಎಸಗುತ್ತಿದ್ದಾರೆ ಎಂದು ಹೆಗಡೆ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಜಿಲ್ಲಾಡಳಿತ ಕೂಡಲೇ ಸತ್ಯಾಸತ್ಯತೆ ಬಹಿರಂಗಪಡಿಸಿ, ಮುರುವಿನ ಕಟ್ಟೆಯ ಧಾರ್ಮಿಕ ಪರಂಪರೆಗೆ ಧಕ್ಕೆ ಬಾರದಂತೆ ಕಠಿಣ ಕ್ರಮ ಕೈಗೊಳ್ಳಬೇಕು. ಹಿಂದೂಗಳ ಸಹನೆಯನ್ನು ಪರೀಕ್ಷೆಗೆ ಒಡ್ಡಬೇಡಿ. ಇಲ್ಲದಿದ್ದರೆ ಬಿಜೆಪಿ ಹಿಂದೂ ಸಮಾಜದ ಜೊತೆಗೂಡಿ ಬೀದಿಗಿಳಿದು ಉಗ್ರ ಹೋರಾಟ ಮಾಡಲಿದೆ. ರಾಜ್ಯ ಸರ್ಕಾರ ಇದರ ಪರಿಣಾಮ ಎದುರಿಸಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದ್ದಾರೆ.

ಹಿಂದೂ ಸಮಾಜದ ತಾಳ್ಮೆಗೆ ಒಂದು ಮಿತಿ ಇದೆ. ಮುರುವಿನ ಕಟ್ಟೆಯ ರಕ್ಷಣೆಗೆ ನಾವು ಯಾವ ಹಂತದ ಹೋರಾಟಕ್ಕೂ ಸಿದ್ಧ. ರಾಜ್ಯ ಸರ್ಕಾರ ಕೂಡಲೇ ಈ ಷಡ್ಯಂತ್ರಕ್ಕೆ ತೆರೆ ಎಳೆದು, ಹಿಂದೂಗಳ ಭಾವನೆಗೆ ಗೌರವ ಕೊಡಬೇಕು. ಒಂದು ವೇಳೆ ಕಟ್ಟೆಯ ಪಾವಿತ್ರ್ಯತೆಗೆ ಧಕ್ಕೆ ಬಂದರೆ ಅದರ ಸಂಪೂರ್ಣ ಹೊಣೆ ಸರ್ಕಾರವೇ ಹೊರಬೇಕಾಗುತ್ತದೆ ಎಂದು ಕೂಡ ಅವರು ಖಡಕ್ ಎಚ್ಚರಿಕೆ ನೀಡಿದ್ದಾರೆ. ಕೂಡಲೇ ಈ ಪವಿತ್ರ ಸ್ಥಳ ಮುರುವಿನ ಕಟ್ಟೆಯನ್ನು ಶಾಸ್ತ್ರೋಕ್ತವಾಗಿ ಮರು ನಿರ್ಮಾಣ ಮಾಡಿ ಇದಕ್ಕೆ ರಕ್ಷಣೆ ನೀಡಬೇಕೆಂದು ಸುನಿಲ್ ಹೆಗಡೆ ಆಗ್ರಹಿಸಿದ್ದಾರೆ.

ಕಣ್ಣಿನ ತಪಾಸಣಾ ಉಚಿತ ಶಿಬಿರ



ಸಿದ್ದಾಪುರ: ಪ್ರಸ್ತುತ ದಿನಗಳಲ್ಲಿ ತೀವ್ರ ರೋಗಬಾಧೆಯಿಂದ ಕಂಗಾಲಾಗಿರುವ ಅಡಿಕೆ ಬೆಳೆಗಾರರ ರಕ್ಷಣೆಗೆ ಸಹಕಾರಿ ಸಂಸ್ಥೆಗಳು ಮುಂದಾಗಬೇಕು ಎಂದು ಶಾಸಕ ಭೀಮಣ್ಣ ಟಿ. ನಾಯ್ಕ ಸಲಹೆ ನೀಡಿದರು.

ಸ್ಥಳೀಯ ತಾಲೂಕಾ ಮಾರ್ಕೆಟಿಂಗ್ ಸೊಸೈಟಿ ಹಾಗೂ ಎಂ.ಎಂ.ಜೋಶಿ ಗಣೇಶ ನೇತ್ರಾಲಯದ ಸಂಯುಕ್ತ ಆಶ್ರಯದಲ್ಲಿ ಟಿಎಂಎಸ್ ಸಭಾಭವನದಲ್ಲಿ ಹಮ್ಮಿಕೊಳ್ಳಲಾಗಿದ್ದ ಉಚಿತ ಕಣ್ಣಿನ ತಪಾಸಣಾ ಶಿಬಿರವನ್ನು ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು. ತಾಲೂಕಿನ ಪ್ರಮುಖ ವಾಣಿಜ್ಯ ಬೆಳೆಯಾದ ಅಡಿಕೆಗೆ ತಗುಲಿರುವ ರೋಗಗಳ ಬಗ್ಗೆ ತೀವ್ರ ಕಳವಳ ವ್ಯಕ್ತಪಡಿಸಿದ ಶಾಸಕರು ಎಲೆಚುಕ್ಕಿ ಮತ್ತು ಹಳದಿ ರೋಗದ ಭೀತಿಯಿಂದಾಗಿ ರೈತರು ನಿರೀಕ್ಷಿತ ಇಳುವರಿ ಹಾಗೂ ಆದಾಯ ಪಡೆಯಲಾಗದೆ ತೀವ್ರ ಆರ್ಥಿಕ ಸಂಕಷ್ಟ ಎದುರಿಸುತ್ತಿದ್ದಾರೆ. ಇಂತಹ ಕಠಿಣ ಪರಿಸ್ಥಿತಿಯಲ್ಲಿ ಟಿ.ಎಂ.ಎಸ್ ನಂತಹ ಸಹಕಾರಿ ಸಂಸ್ಥೆಗಳು ರೈತರನ್ನು ಕೈಬಿಡಬಾರದು. ಅವರಿಗೆ ಅಗತ್ಯ ಸಾಲ ಸೌಲಭ್ಯಗಳನ್ನು ಉದಾರವಾಗಿ ಒದಗಿಸುವ ಮೂಲಕ ಆರ್ಥಿಕ ಬೆನ್ನೆಲುಬಾಗಿ ನಿಲ್ಲಬೇಕು ಎಂದು ಮನವಿ ಮಾಡಿದರು. ಗ್ರಾಮೀಣ ಭಾಗದ ಜನರಿಗಾಗಿ ಉಚಿತ ಕಣ್ಣಿನ ತಪಾಸಣಾ ಶಿಬಿರವನ್ನು ಎಂ.ಎಂ.ಜೋಶಿ ನೇತ್ರಾಲಯ ಹಾಗೂ ಟಿ.ಎಂ.ಎಸ್. ಸಂಸ್ಥೆಯು ಆಯೋಜಿಸುವ ಮೂಲಕ ತನ್ನ ಸಾಮಾಜಿಕ ಕಳಕಳಿಯನ್ನು ತೋರಿದೆ ಎಂದು ಶಾಸಕರು ಶ್ಲಾಘಿಸಿದರು.

ಟಿಎಂಎಸ್ ಅಧ್ಯಕ್ಷ ಆರ್.ಎಂ.ಹೆಗಡೆ ಬಾಳೇಸರ ಮಾತನಾಡಿದರು.

ತಜ್ಞ ವೈದ್ಯರಾದ ಡಾ.ವಿಶ್ವನಾಥ ಅಂಕದ್, ನ್ಯಾಯವಾದಿ ಡಾ.ರವಿ ಹೆಗಡೆ ಹೂವಿನಮನೆ, ಕೆಡಿಸಿಸಿ ಬ್ಯಾಂಕ್ ನಿರ್ದೇಶಕ ರಾಘವೇಂದ್ರ ಶಾಸ್ತ್ರಿ, ಗ್ಯಾರಂಟಿ ಅನುಷ್ಠಾನ ಸಮಿತಿಯ ತಾಲೂಕಾ ಅಧ್ಯಕ್ಷ ಕೆ.ಜಿ.ನಾಗರಾಜ, ತಹಶೀಲ್ದಾರ ಎಂ.ಆರ್.ಕುಲಕರ್ಣಿ, ಲಯನ್ಸ ಅಧ್ಯಕ್ಷ ರಾಘವೇಂದ್ರ ಭಟ್ಟ, ಎಸ್.ಕೆ.ಭಾಗವತ ಇತರರು ಅತಿಥಿಗಳಾಗಿ ಉಪಸ್ಥಿತರಿದ್ದು ಮಾತನಾಡಿದರು. ಸಂಸ್ಥೆಯ ಉಪಾಧ್ಯಕ್ಷ ಎಮ್.ಜಿ.ನಾಯ್ಕ ಹಾದ್ರಿಮನೆ ಸ್ವಾಗತಿಸಿದರು. ವ್ಯವಸ್ಥಾಪಕ ಸತೀಶ ಹೆಗಡೆ ಪಾಲ್ಗೊಂಡಿದ್ದರು. ಜಿ.ಜಿ.ಹೆಗಡೆ ಬಾಳಗೋಡ ನಿರ್ವಹಿಸಿದರು. ನಿರ್ದೇಶಕ ಸುಬ್ರಹ್ಮಣ್ಯ ಭಟ್ಟ ವಂದಿಸಿದರು.

ಬಕ್ರೀದ್ ಹಬ್ಬ: ಪಥ ಸಂಚಲನ

ಬನವಾಸಿ: ಬಕ್ರೀದ್ ಹಬ್ಬದ ಪ್ರಯುಕ್ತ ಬನವಾಸಿ ಪಟ್ಟಣದಲ್ಲಿ ಬುಧವಾರ ಸಂಜೆ ಪಿಎಸ್ಐ ರವೀಂದ್ರ ಬಿರಾದಾರ ನೇತೃತ್ವದಲ್ಲಿ ಪೊಲೀಸ್ ಸಿಬ್ಬಂದಿ ಇಲ್ಲಿಯ ಪ್ರಮುಖ ರಸ್ತೆಗಳಲ್ಲಿ ಪಥ ಸಂಚಲನ ನಡೆಸಿದರು.

ಪೊಲೀಸ್ ಠಾಣೆಯಿಂದ ಆರಂಭವಾದ ಪಥ ಸಂಚಲನ ಸಂತೆ ಪೇಟೆ ರಸ್ತೆ, ರಥಬೀದಿ, ಬನವಾಸಿ ಮುಖ್ಯರಸ್ತೆ, ಕದಂಬ ವೃತ್ತ, ಶಿರಸಿ ರಸ್ತೆ, ಶಿವಾಜಿ ವೃತ್ತದಲ್ಲಿ ಪಥ ಸಂಚಲನ ನಡೆಸಿ ಸಾರ್ವಜನಿಕರ ರಕ್ಷಣೆಯಲ್ಲಿ ಪೊಲೀಸರು ಸದಾ ಇರುತ್ತಾರೆಂದು ಸಾರಿದರು.

ಬಕ್ರೀದ್ ಹಬ್ಬ ಆಚರಣೆಯ ಸಂದರ್ಭದಲ್ಲಿ ಶಾಂತಿ ಸುವ್ಯವಸ್ಥೆ ಕಾಪಾಡುವುದರ ಜೊತೆಗೆ ಧಾರ್ಮಿಕ ಕೋಮುಗಲಭೆ ಉಂಟಾಗುವಂತೆ ವರ್ತಿಸಬಾರದು. ಸಾರ್ವಜನಿಕ ಆಸ್ತಿ ಪಾಸ್ತಿಗಳಿಗೆ ಹಾನಿ ಉಂಟು ಮಾಡಬಾರದು. ಇತರರಿಗೆ ತೊಂದರೆ ಆಗುವಂತೆ ವರ್ತಿಸಬಾರದು. ಕರ್ಕಶ ಶಬ್ದ ಮಾಡಬಾರದು ಎಂದು ತಿಳಿಸಿದರು. ಎಎಸ್ಐ ಮಣಿಮಾಲನ್ ಸೇರಿದಂತೆ ಬನವಾಸಿ ಪೊಲೀಸ್ ಠಾಣೆಯ ಸಿಬ್ಬಂದಿ ಇದ್ದರು.



ಮೃತರ ಕುಟುಂಬಕ್ಕೆ ಹೆಚ್ಚಿನ ಪರಿಹಾರ ನೀಡಿ



ಶಿರಸಿ: ಭಟ್ಕಳದ ಕಳಿನಕಟ್ಟೆ ನದಿಯಲ್ಲಿ ಮೀನುಗಾರಿಕೆಗಾಗಿ ತೆರಳಿದವರು ಮುಳುಗಿ ದುರ್ಮರಣಕ್ಕಿಡಾದ ಎಲ್ಲಾ ಸಂತ್ರಸ್ತ ಕುಟುಂಬಕ್ಕೆ ಜಿಲ್ಲಾ ಆಡಳಿತವು ಸಂಕಷ್ಟ ಪರಿಹಾರ ನಿಧಿ ಅಡಿ ರೂ. 15 ಲಕ್ಷಕ್ಕೂ ಹೆಚ್ಚಿನ ಪರಿಹಾರ ನೀಡುವ ರೀತಿಯಲ್ಲಿಯೇ ಪರಿಗಣಿಸಿ ಹೆಚ್ಚಿನ ಮೊತ್ತವನ್ನು ನೀಡಬೇಕೆಂದು ಮುಖ್ಯಮಂತ್ರಿಗಳಿಗೆ ಆಗ್ರಹಿಸಿ ಜಿಲ್ಲಾ ಜನಪರ ಸಂಘಟನೆಗಳ ಒಕ್ಕೂಟದಿಂದ ಉಪ ವಿಭಾಗಾಧಿಕಾರಿಗಳ ಮೂಲಕ ಮನವಿ ಸಲ್ಲಿಸಲಾಯಿತು.

ಎಸಿ ಚಂದ್ರಶೇಖರ ಆರ್.ಜಿ. ಮನವಿ ಸ್ವೀಕರಿಸಿದರು. ಮನವಿ ನೀಡುವ ಸಂದರ್ಭದಲ್ಲಿ ಸಂಘಟನೆಯ ಜಿಲ್ಲಾಧ್ಯಕ್ಷ ಡಾ. ನಾಗೇಶ ನಾಯ್ಕ ಕಾಗಾಲ, ಪ್ರಮುಖರಾದ ವಿಶ್ವನಾಥ ಎಸ್. ಗೌಡ, ರಾಜೇಶ ದೇಶಭಾಗ್, ಶಿವರಾಜ ಎಸ್. ದೇಸಾಯಿ, ಶಿವಾನಂದ ಪುಟ್ಟಪ್ಪ ನಾಯ್ಕ, ಮಾಲ್ತೇಶ ಕನಕಪ್ಪನವರ್, ಕುಶಾಲ ಟಿ. ನಾಯ್ಕ, ಗಣಪತಿ ಟಿ. ನಾಯ್ಕ ಕಲ್ಕರಡಿ, ವಿಶ್ವನಾಥ್ ಗೌಡ ಹುಲೇಕಲ್ ಮುಂತಾದವರು ಉಪಸ್ಥಿತರಿದ್ದರು.

ಶಿರಸಿ: ಬಕ್ರೀದ್ ಹಬ್ಬದ ನಿಮಿತ್ತ ಕಾನೂನು ಸುವ್ಯವಸ್ಥೆ ಕಾಪಾಡುವ ದೃಷ್ಟಿಯಿಂದ ಶಿರಸಿ ನಗರ ವ್ಯಾಪ್ತಿಯಲ್ಲಿ ರೂಟ್ ಮಾರ್ಚ ಕೈಗೊಳ್ಳಲಾಯಿತು. ಡಿಎಸ್ಪಿ ಗೀತಾ ಪಾಟೀಲ್ ನೇತೃತ್ವದಲ್ಲಿ ನಗರದ ಅಂಚೆ ವೃತ್ತ ಬಿಡಕಿ ಬೈಲ್ ಸೇರಿದಂತೆ ಪ್ರಮುಖ ಬೀದಿಗಳಲ್ಲಿ ರೂಟ್ ಮಾರ್ಚ್ ನಡೆಸಲಾಯಿತು. ಸಿಪಿಐ ಸಂಪತ್ ಕುಮಾರ್ ಹಾಗೂ ವಿವಿಧ ಠಾಣೆಗಳ ಪಿಎಸ್ಐ, ಸಿಬ್ಬಂದಿಗಳು ಇದ್ದರು.



ಬೇಜವಾಬ್ದಾರಿ ತೋರಿದವರನ್ನು ಬ್ಲಾಕ್ ಲಿಸ್ಟ್‌ಗೆ ಸೇರಿಸಿ: ವೈದ್ಯ

ಹೊನ್ನಾವರ: ಕುಡಿಯುವ ನೀರಿನ ಯೋಜನೆಗಳಿಗೆ ಸಾಕಷ್ಟು ಅವಕಾಶ ಹಾಗೂ ಅನುದಾನವಿದ್ದರೂ ಇನ್ನೂ 9 ಗ್ರಾಪಂಗಳಿಗೆ ಟ್ಯಾಂಕರ್ ಮೂಲಕ ನೀರು ಸರಬರಾಜು ಮಾಡುತ್ತಿರುವುದಕ್ಕೆ ಸಚಿವ ಮಂಕಾಳ ವೈದ್ಯ ಅವರು ಅಧಿಕಾರಿಗಳ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದರು.



ತಾಪಂ ಸಭಾಭವನದಲ್ಲಿ ನಡೆದ ತ್ರೈಮಾಸಿಕ ಕೆಡಿಪಿ ಪ್ರಗತಿ ಪರಿಶೀಲನಾ ಸಭೆ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಬಳಕೂರು ರಸ್ತೆ ಕಾಮಗಾರಿ ಅತ್ಯಂತ ನಿಧಾನಗತಿಯಲ್ಲಿ ಸಾಗುತ್ತಿರುವುದಕ್ಕೆ ಸಾರ್ವಜನಿಕ ವಲಯದಿಂದ ಕೇಳಿಬಂದ ದೂರುಗಳಿಗೆ ತಕ್ಷಣ ಸ್ಪಂದಿಸಿದ ಸಚಿವರು, ಬೇಜವಾಬ್ದಾರಿ ತೋರಿದ ಗುತ್ತಿಗೆ ಕಂಪನಿಯನ್ನು ಬ್ಲಾಕ್ ಲಿಸ್ಟ್ ಗೆ ಸೇರಿಸಲು ಲೋಕೋಪಯೋಗಿ ಅಧಿಕಾರಿಗಳಿಗೆಸೂಚಿಸಿದರು. ಈರಸ್ತೆಯನ್ನು ರಾಜ್ಯ ಹೆದ್ದಾರಿಯನ್ನಾಗಿ ಮೇಲ್ದರ್ಜೆಗೇರಿಸಲು ಅಗತ್ಯ ಕ್ರಮ ಕೈಗೊಳ್ಳಲು ಸೂಚಿಸಿದರು. ಮೀನುಗಾರಿಕೆಗೆ ತೆರಳಿದಾಗ ಮೃತಪಟ್ಟ ಪ್ರಕರಣಗಳಿಗೆ ಒಟ್ಟು 1 ಕೋಟಿ 10 ಲಕ್ಷ ರೂ. ಪರಿಹಾರ ಧನ ವಿತರಿಸಲಾಗಿದೆ. 10 ಕೋಟಿ ರೂಪಾಯಿ ವೆಚ್ಚದಲ್ಲಿ ಪ್ರತಿಯೊಬ್ಬ ಮೀನುಗಾರನಿಗೂ ಲೈಫ್ ಜಾಕೆಟ್ ನೀಡಲಾಗುವುದು. ಆಮೆ ಸಂತತಿ ಉಳಿಸುವ ನಿಟ್ಟಿನಲ್ಲಿ ಮೂರು ಜಿಲ್ಲೆಗಳಿಗೆ 5 ಕೋಟಿ ರೂ. ಮೌಲ್ಯದ ಸಾಮಗ್ರಿಗಳು ಬಂದಿದ್ದು, ಸುಮಾರು 200 ಬೋಟ್‌ಗಳಿಗೆ ಇವುಗಳನ್ನು ವಿತರಿಸಲಾಗುವುದು ಎಂದರು.

ಹೊನ್ನಾವರ ಬಂದರಿನಲ್ಲಿ ಮೀನುಗಾರಿಗಾಗಿ 45 ಲಕ್ಷ ರೂ. ವೆಚ್ಚದಲ್ಲಿ ಹೊಸ ಮೀನು ಮಾರುಕಟ್ಟೆ ಹಾಗೂ ವಾಣಿಜ್ಯ ಮಳಿಗೆಗಳನ್ನು ನಿರ್ಮಿಸಲಾಗುತ್ತಿದೆ. ಇಲ್ಲಿ ಈಗಾಗಲೇ ವ್ಯಾಪಾರ ಮಾಡುತ್ತಿರುವ 81 ಕುಟುಂಬಗಳ ಜೀವನೋಪಾಯಕ್ಕೆ ಧಕ್ಕೆಯಾಗದಂತೆ ಅವರಿಗೆ ಮಳಿಗೆಯಲ್ಲಿ ಅವಕಾಶ ಕಲ್ಪಿಸಿ ಎಂದರು. ಮಂಕಿ ಭಾಗದಲ್ಲಿ ಸಣ್ಣ ನೀರಾವರಿ ಇಲಾಖೆಯಡಿ ತಲಾ 10 ಕೋಟಿ ರೂ.ಗಳ ಎರಡು ಕಾಮಗಾರಿಗಳು ಹಾಗೂ 6.50 ಕೋಟಿ ಮತ್ತು 6.18 ಕೋಟಿ ರೂ. ವೆಚ್ಚದ ಕಾಮಗಾರಿಗಳು ಈಗಾಗಲೇ ಆರಂಭಗೊಂಡಿವೆ ಎಂದು ಚಿಕ್ಕ ನೀರಾವರಿ ಇಲಾಖೆ ಅಧಿಕಾರಿ ತಿಳಿಸಿದರು. ಶಾಲೆ-ಕಾಲೇಜುಗಳು ಪುನಾರಂಭಗೊಳ್ಳುತ್ತಿರುವ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳಿಗೆ ಮತ್ತು ಸಾರ್ವಜನಿಕರಿಗೆ ಬಸ್‌ಗಳ ಕೊರತೆಯಾಗದಂತೆ ಬಸ್ ಬಿಡಿ ಎಂದು ಸಾರಿಗೆ ಅಧಿಕಾರಿಗಳಿಗೆ ಸಚಿವರು ಸೂಚಿಸಿದರು. ಬೆಳಗ್ಗೆ 7.30 ರಿಂದ 9ಗಂಟೆಯ ಅವಧಿಯಲ್ಲಿ ಯಾವುದೇ ಮಾರ್ಗದಲ್ಲೂ ಬಸ್‌ಗಳ ಕೊರತೆ ಇರಬಾರದು ಎಂದರು. ತಾಲೂಕಿನಲ್ಲಿ ಮಂಗನ ಕಾಯಿಲೆಯಿಂದ ಒಂದು ಮರಣ ಸಂಭವಿಸಿರುವುದನ್ನು ಸಭೆಯಲ್ಲಿ ಅಧಿಕಾರಿಗಳು ವರದಿ ನೀಡಿದರು. ಹಡಿನಬಾಳದಲ್ಲಿ ರೈತಸಂಪರ್ಕ ಕೇಂದ್ರಕ್ಕೆ ಜಾಗ ಮಂಜೂರು ಮಾಡಿಸಿ ಕೊಡಬೇಕೆಂದು ಕೃಷಿ ಇಲಾಖೆ ಅಧಿಕಾರಿಗಳು ಸಚಿವರಲ್ಲಿ ವಿನಂತಿಸಿದರು.

ಅಮೃತ ಯೋಜನೆಯಡಿ ಮಂಕಿಯಲ್ಲಿ ಶಂಕುಸ್ಥಾಪನೆ ನೆರವೇರಿಸಿದಾಗ ಸಂಸದರು ಬೇಸರ ವ್ಯಕ್ತಪಡಿಸಿರುವುದಕ್ಕೆ ಸಚಿವರು ಸಭೆಯಲ್ಲಿ ಮಾತನಾಡಿ, ಸಂಸದರ ಪಕ್ಷದ ತಾಲೂಕಿನಲ್ಲೇ ಈ ಯೋಜನೆಗೆ ಚಾಲನೆ ನೀಡಿದಾಗ ಬೇಸರಿಸದ ಅವರು, ಇಲ್ಲಿಯಾಕೆ ಬೇಸರ ಮಾಡಿಕೊಂಡಿದ್ದಾರೆ? ಸಂಸದರು ಕ್ಷೇತ್ರಕ್ಕೆ ಹೊಸ ಯೋಜನೆಗಳನ್ನು ತಂದರೆ ನಾವು ಖಂಡಿತ ಅಭಿನಂದಿಸುತ್ತೇವೆ ಎಂದರು.

ನನ್ನ ಕ್ಷೇತ್ರದಲ್ಲಿ ಸದ್ಯ 100 ಕೋಟಿ ರೂ. ವೆಚ್ಚದ ಕಾಮಗಾರಿಗಳು ಬಂದಿವೆ. ಕೇವಲ ಗುದ್ದಲಿ ಪೂಜೆ ಮಾಡಿದರಷ್ಟೇ ಅಭಿವೃದ್ಧಿ ಅಲ್ಲ, ಗುಣಮಟ್ಟದ ಕೆಲಸವಾಗಬೇಕು. ಎಲ್ಲಾ ಕಾಮಗಾರಿಗಳಿಗೂ ಸೇರಿಸಿ ಒಂದೇ ಕಡೆ ಶಂಕುಸ್ಥಾಪನೆ ನೆರವೇರಿಸಲಾಗುವುದು ಎಂದರು. ತಹಶೀಲ್ದಾರ್ ಪ್ರವೀಣ ಕರಾಂಡೆ, ತಾಪಂ ಇಒ ಪುಟ್ಟೇಗೌಡ, ಆಡಳಿತಾಧಿಕಾರಿ ಎನ್.ಆರ್. ಹೆಗಡೆ, ಗ್ಯಾರಂಟಿ ಯೋಜನೆ ತಾಲೂಕಾಧ್ಯಕ್ಷ ಅಣ್ಣಪ್ಪ ನಾಯ್ಕ ಇತರರಿದ್ದರು.

ಮೀನುಗಾರಿಕೆಗೆ ತೆರಳಿದ ವೇಳೆ ಸಿಡಿಲು ಬಡಿದು ಮೃತಪಟ್ಟ ವಿನಾಯಕ ಗಣೇಶ ಖಾರ್ವಿ ಅವರ ಪತ್ನಿಗೆ ಹತ್ತು ಲಕ್ಷದ ಪರಿಹಾರ ವಿತರಿಸಿದರು. ಆಮೆರಕ್ಷಣೆ ಪರಿಕರವನ್ನು 48 ಫಲಾನುಭಾವಿಗಳಿಗೆ ವಿತರಿಸಿದರು.

ಜೇನು ಸಾಕಾಣಿಕೆಯಿಂದ ಆರ್ಥಿಕ ಮಟ್ಟ ಸುಧಾರಣೆ

ಮುಂಡಗೋಡ: ಜೇನು ಸಾಕಾಣಿಕೆಯಿಂದ ರೈತರ ಆರ್ಥಿಕ ಮಟ್ಟ ಸುಧಾರಣೆಯಾಗುತ್ತದೆ ಎಂದು ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕ ಕೃಷ್ಣ ಕುಳ್ಳೂರ ಹೇಳಿದರು.



ವಿಶ್ವ ಜೇನು ದುಂಬಿ ದಿನದ ಅಂಗವಾಗಿ ಇಲ್ಲಿನ ಕೆನರಾ ಬ್ಯಾಂಕ್ ದೇಶಪಾಂಡೆ ಆರ್ ಸೆಟಿ ಸಭಾಭವನದಲ್ಲಿ ವೈಜ್ಞಾನಿಕ ಜೇನು ಬೇಸಾಯ ಪದ್ಧತಿಯ ಕುರಿತು ಜೇನುಕೃಷಿ ಆಸಕ್ತ ರೈತರಿಗೆ ಬುಧವಾರ ಆಯೋಜಿಸಿದ್ದ ತರಬೇತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ತೋಟಗಾರಿಕೆ ಇಲಾಖೆಯಿಂದ ಜೇನು ಸಾಕಾಣಿಕೆಗೆ ಸಬ್ಸಿಡಿ ರೂಪದಲ್ಲಿ ಆರ್ಥಿಕ ಸಹಾಯ ನೀಡಲಾಗುತ್ತದೆ ಎಂದರು.

ಸಂಪನ್ಮೂಲ ವ್ಯಕ್ತಿ ಯಲ್ಲಾಪುರದ ತಿಮ್ಮಣ್ಣ ಭಟ್ ಜೇನುಕೃಷಿಯ ಕುರಿತು ರೈತರಿಗೆ ಸಂಪೂರ್ಣವಾದ ಮಾಹಿತಿ ನೀಡಿದರು. ವಕೀಲ ಸಂಗಮೇಶ ಕೊಳ್ಳಾನವರ ಜೇನು ಕೃಷಿಕರಾಗಿದ್ದು ಜೇನು ಕೃಷಿಯಲ್ಲಿನ ತಮ್ಮ ಸುದೀರ್ಘ ಅನುಭವ, ಅಧ್ಯಯನ ಹಾಗೂ ಜೇನು ಕೃಷಿಯ ಲಾಭಗಳ ಕುರಿತು ರೈತರಿಗೆ ಸವಿವರವಾದ ಮಾಹಿತಿ ನೀಡಿದರು. ಜಿಲ್ಲಾ ನಾರಿಶಕ್ತಿ ಪ್ರಶಸ್ತಿ ವಿಜೇತೆ ಪುಷ್ಪಾ ಗುಲ್ಯಾನವರ ಜೇನು ಕೃಷಿಯಲ್ಲಿನ ತಮ್ಮ ಅನುಭವ ಹಂಚಿಕೊಂಡರು.

ವಾಲ್ಮೀಕಿ ಸಮಾಜದ ತಾಲೂಕು ಅಧ್ಯಕ್ಷ ಸುರೇಶ ಕಲ್ಲೋಳ್ಳಿ ಪರಿಶಿಷ್ಟ ಪಂಗಡದ ಅರಣ್ಯ ಭೂಮಿ ಹಕ್ಕು ಪತ್ರ ಹೊಂದಿರುವ ರೈತರಿಗೆ ತೋಟಗಾರಿಕೆ ಇಲಾಖೆಯಿಂದ ನೀಡಲಾದ ಜೇನು ಪೆಟ್ಟಿಗೆ ಸಹಾಯಧನದ ಕುರಿತು ಹರ್ಷ ವ್ಯಕ್ತಪಡಿಸಿದರು.

ತಾಲೂಕಿನ ಕೃಷಿ ಸಖಿಯರು, ಸಹಾಯಕ ತೋಟಗಾರಿಕೆ ಅಧಿಕಾರಿಗಳಾದ ರಮೇಶ ಜಮಖಂಡಿ ಹಾಗೂ ರಾಮಪ್ಪ ನಡುವಿನಮನಿ, ಕೆನರಾ ಬ್ಯಾಂಕ್ ದೇಶಪಾಂಡೆ ಆರ್.ಸೆಟಿ (ರಿ.)ಕ್ಷೇತ್ರಾಧಿಕಾರಿ ಶಾಂತಕುಮಾರ ಹಾಗೂ ಜೇನು ಕೃಷಿ ಆಸಕ್ತ ಸುಮಾರು 50ಕ್ಕೂ ಅಧಿಕ ರೈತರು ಪಾಲ್ಗೊಂಡಿದ್ದರು.

ಕಿರುಸುದ್ದಿ

ನಗರದಲ್ಲಿ ಸಂಚಾರಿ ಬಸ್ ಪ್ರಾರಂಭಿಸಲು ಮನವಿ

ಬ್ಯಾಡಗಿ: ಪಟ್ಟಣದಲ್ಲಿ ನಗರ ಸಂಚಾರಿ ಬಸ್ಸನ್ನು ನಗರದಿಂದ ನಗರಕ್ಕೆ ಹಾಗೂ ರೈಲ್ವೆ ಸ್ಟೇಷನ್ ತಾಲೂಕು ಆಸ್ಪತ್ರೆ ವಿವಿಧ ಸರ್ಕಾರಿ ಇಲಾಖೆಗಳಿಗೆ ಸಾರ್ವಜನಿಕರು ಸಂಚರಿಸಲು ನಗರ ಸಂಚಾರಿ ಬಸ್ಸುಗಳನ್ನು ಪ್ರಾರಂಭಿಸಲು ಆಗ್ರಹಿಸಿ ಕೆಇಬಿ ವಿದ್ಯುತ್ ನಗರ ಸಲಹಾ ಸಮಿತಿ ಸದಸ್ಯರು ಬುಧವಾರ ತಾಲೂಕು ಕರ್ನಾಟಕ ವಾಯುವ್ಯ ರಸ್ತೆ ಸಾರಿಗೆ ನಿಗಮ ಸಂಸ್ಥೆ ಹಾವೇರಿ ವಿಭಾಗ ಬ್ಯಾಡಗಿ ಘಟಕ ವ್ಯವಸ್ಥಾಪಕರಿಗೆ ಮನವಿ ಪತ್ರ ನೀಡುವ ಮೂಲಕ ಮಾತನಾಡಿದವರು. ಈ ವೇಳೆ ಸದಸ್ಯ ಹೈದರಲಿ ಬೆಂಗಳೂರಿ ಮಾತನಾಡಿ, ಪಟ್ಟಣದಲ್ಲಿ ಸುಮಾರು 40 ಸಾವಿರಕ್ಕಿಂತ ಹೆಚ್ಚು ಜನಸಂಖ್ಯೆ ಹೊಂದಿದ್ದು ಮತ್ತು ಪಟ್ಟಣದಲ್ಲಿ ಮುಖ್ಯ ರಸ್ತೆಯ ಅಗಲೀಕರಣ ಪ್ರಾರಂಭವಾಗಿದ್ದು ಮತ್ತು ಪರ ಸ್ಥಳದ ಜನರು ಪಟ್ಟಣಕ್ಕೆ ಆಗಮಿಸುತ್ತಿರುವುದರಿಂದ ಮತ್ತು ವಯಸ್ಸಾದ ಜೀವಿಗಳು ಶಾಲಾ-ಕಾಲೇಜು ವಿದ್ಯಾರ್ಥಿಗಳು ಮತ್ತು ಅನಾರೋಗ್ಯ ಹೊಂದಿರುವ ಜನಗಳ ಹಿತದೃಷ್ಟಿಯಿಂದ ನಗರದಿಂದ ನಗರಕ್ಕೆ ಸಂಚಾರಿ ಬಸನ್ನು ಬಿಡುವಂತೆ ಆಗ್ರಹಿಸಿ ಮನವಿ ಪತ್ರವನ್ನು ನೀಡಿದರು.ಈ ಸಂದರ್ಭದಲ್ಲಿ ಸಮಿತಿಯ ಸದಸ್ಯರಾದ ಮಂಜುನಾಥ ಹಂಜಗಿ. ಮಾಲತೇಶ್ ಆಡಿನವರ. ಮಾಲತೇಶ್ ಶಿಡ್ಲನ್ನವರ್. ಹಾಗೂ ಸಾರಿಗೆ ಸಂಸ್ಥೆಯ ವ್ಯವಸ್ಥಾಪಕರು ಸಿಬ್ಬಂದಿಗಳು ಉಪಸ್ಥಿತರಿದ್ದರು.

ಸೋಯಾಬೀನ್ ಬಿತ್ತನೆಗೆ ಸಲಹೆ

ಬ್ಯಾಡಗಿ: ತಾಲೂಕಿನಲ್ಲಿ ಮೇ ತಿಂಗಳಲ್ಲಿ ಇಲ್ಲಿಯವರೆಗೆ 117.7 ಮೀ ಮೀ ಮಳೆಯಾಗಿದ್ದು ವಾಡಿಕೆ ಮಳೆ (56.9 ಮೀ ಮೀ)ಗಿಂತ ಶೇ 107 ಹೆಚ್ಚಾಗಿದೆ. ತಾಲೂಕಿನಲ್ಲಿ ಮೇ ತಿಂಗಳಲ್ಲಿ ವಾಡಿಕೆಗಿಂತ ಹೆಚ್ಚು ಮಳೆಯಾದರೂ, ಮುಂಗಾರು ಇನ್ನೂ ಸ್ಥಿರವಾಗಿಲ್ಲ. ಮೇ 31ರ ವರೆಗೂ ಮಳೆಯ ಅವಕಾಶ ಕಡಿಮೆ ಇದೆ ಎಂದು ಹವಾಮಾನ ಇಲಾಖೆ ತಿಳಿಸಿದೆ. ಮುಂಗಾರು ಪೂರ್ವ



ಉತ್ತಮ ಮಳೆಯಾದ ಕಡೆಗಳಲ್ಲಿ ರೈತರು ಬಿತ್ತನೆಗೆ ಮುನ್ನ ಭೂಮಿಯನ್ನು ಸಿದ್ಧಪಡಿಸಿಕೊಳ್ಳಬೇಕು ಎಂದು ಸಹಾಯಕ ಕೃಷಿ ನಿರ್ದೇಶಕ ಗಣೇಶ ಕಮ್ಮಾರ ಸಲಹೆ ನೀಡಿದ್ದಾರೆ.

ತಾಲೂಕಿನಲ್ಲಿ ಕಳೆದ ವರ್ಷ ಸೋಯಾಬೀನ್ ಕೃಷಿ ಇಲಾಖೆಯಿಂದ 240 ಕ್ವಿಂಟಾಲ್ ವಿತರಣೆಯಾಗಿ, 101 ಹೆಕ್ಟೇರ್ ಪ್ರದೇಶದಲ್ಲಿ ಆವರಿಸಿತ್ತು. ಈ ಬಾರಿ 480 ಕ್ವಿಂಟಾಲ್ ವಿತರಣೆಯಾಗಿದೆ ಹಾಗೂ ಕಳೆದ ವರ್ಷಕ್ಕಿಂತ ಹೆಚ್ಚಿನ ಪ್ರದೇಶದಲ್ಲಿ ಬೆಳೆಯುವ ಸಾಧ್ಯತೆ ಇದೆ. ರೈತರು ಮೊದಲ ಮಳೆಯನ್ನೇ ಆಧರಿಸಿ ಬಿತ್ತನೆ ಮಾಡಬಾರದು. ಒಂದು ಅಥವಾ ಎರಡು ಮಳೆಯ ಬಳಿಕ ಮಳೆ ಬಾರದೆ ಇದ್ದರೆ ಬೀಜ ಮೊಳಕೆಯೊಡೆಯುವಿಕೆಯಲ್ಲಿ ಸಮಸ್ಯೆ ಉಂಟಾಗುವ ಸಾಧ್ಯತೆ ಇದೆ. ಸೋಯಾಬೀನ್ ಬಿತ್ತನೆಗೆ ಮಣ್ಣಿನಲ್ಲಿ 3-5 ಸೆಂ.ಮೀ ಆಳದವರೆಗೆ ಸಮರ್ಪಕ ತೇವಾಂಶ ಮತ್ತು ತಂಪಾದ ವಾತಾವರಣ ಇರುವುದು ಅತ್ಯಗತ್ಯ. ಆದ್ದರಿಂದ ಸಾಕಷ್ಟು ಮಳೆಯಾದ ನಂತರವಷ್ಟೇ ಬಿತ್ತನೆ ಕೈಗೊಳ್ಳಬೇಕು. ಪ್ರಸ್ತುತ ತಾಲೂಕಿನಲ್ಲಿ ಚದುರಿದ ಮಳೆ ಹಾಗೂ ಗುಡುಗು ಮಿಂಚಿನ ಸಾಧ್ಯತೆ ಕಂಡುಬರುತ್ತಿದ್ದು, ಮುಂಗಾರು ಇನ್ನೂ ಸ್ಥಿರವಾಗದ ಹಿನ್ನೆಲೆ ರೈತರು ಆತುರದಲ್ಲಿ ಸೋಯಾಬೀನ್ ಬಿತ್ತನೆ ಮಾಡದೆ, ಸುಮಾರು 50-75 ಮೀ.ಮೀ ಪ್ರಮಾಣದ ಪರಿಣಾಮಕಾರಿ ಮಳೆ ಹಾಗೂ ಸಮರ್ಪಕ ಮಣ್ಣಿನ ತೇವಾಂಶ ಲಭ್ಯವಾದ ನಂತರ ಬಿತ್ತನೆ ಕೈಗೊಳ್ಳುವುದು ಸೂಕ್ತ. ರೈತರು ರಸಗೊಬ್ಬರ ಖರೀದಿಸುವಾಗ ಒಂದೇ ಸಂಸ್ಥೆ ಅಥವಾ ಒಂದೇ ರಸಗೊಬ್ಬರಕ್ಕೆ ಆದ್ಯತೆ ನೀಡದೇ ಡಿ.ಎ.ಪಿ ರಸಗೊಬ್ಬರಕ್ಕೆ ಪರ್ಯಾಯವಾಗಿ ಗಂಧಕ ಹಾಗೂ ಪೋಟ್ಯಾಸಿಯಂ ಒದಗಿಸುವ ಇತರೆ ಸಂಯುಕ್ತ ರಸಗೊಬ್ಬರಗಳನ್ನು ಬಳಸಬೇಕು ಎಂದು ಸಲಹೆ ನೀಡಿದ್ದಾರೆ.

ಜಿಲ್ಲಾಧ್ಯಕ್ಷರಾಗಿ ಜೋಗಿಹಳ್ಳಿ ಆಯ್ಕೆ

ಹಾವೇರಿ: ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಹಾವೇರಿ ಜಿಲ್ಲಾ ಘಟಕದ ನೂತನ ಅಧ್ಯಕ್ಷರಾಗಿ ಹಿರೇಕೆರೂರಿನ ಜಗದೀಶ ಜೋಗಿಹಳ್ಳಿ, ಪ್ರಧಾನ ಕಾರ್ಯದರ್ಶಿಯಾಗಿ ಎಂ.ಎಚ್. ಕಂತಿ ಆಯ್ಕೆಯಾಗಿದ್ದಾರೆ.





ಇತ್ತೀಚೆಗೆ ಪದಾಧಿಕಾರಿಗಳ ಆಯ್ಕೆ ಪ್ರಕ್ರಿಯೆಗೆ ಚುನಾವಣೆ ನಡೆದಿದ್ದು, ಉಪಾಧ್ಯಕ್ಷರಾಗಿ ಎಫ್.ಸಿ. ಕಾಡಪ್ಪಗೌಡ್ರ, ಮಹಿಳಾ ಉಪಾಧ್ಯಕ್ಷರಾಗಿ ಅನ್ನಪೂರ್ಣ ಬಣಕಾರ, ಖಜಾಂಚಿಯಾಗಿ ಈಶಪ್ಪ ಜ್ಯೋತಿ, ಸಹ ಕಾರ್ಯದರ್ಶಿಗಳಾಗಿ ಸುಮಾ ಆರ್., ಗಂಗಪ್ಪ ವಡ್ಡರ, ಜಿಲ್ಲಾ ಸಂಘಟನಾ ಕಾರ್ಯದರ್ಶಿಯಾಗಿ ಶಿವಯೋಗಿ ಆಲದಕಟ್ಟಿ, ಮಹಿಳಾ ಸಂಘಟನಾ ಕಾರ್ಯದರ್ಶಿಯಾಗಿ ಸುನಿತಾ ಪೂಜಾರ ಆಯ್ಕೆಯಾಗಿದ್ದಾರೆ.



ಬ್ಯಾಡಗಿ: ಪಟ್ಟಣದಲ್ಲಿ ನಗರ ಸಂಚಾರಿ ಬಸ್ಸನ್ನು ನಗರದಿಂದ ನಗರಕ್ಕೆ ಹಾಗೂ ರೈಲ್ವೆ ಸ್ಟೇಷನ್ ತಾಲೂಕು ಆಸ್ಪತ್ರೆ ವಿವಿಧ ಸರ್ಕಾರಿ ಇಲಾಖೆಗಳಿಗೆ ಸಾರ್ವಜನಿಕರು ಸಂಚರಿಸಲು ನಗರ ಸಂಚಾರಿ ಬಸ್ಸುಗಳನ್ನು ಪ್ರಾರಂಭಿಸಲು ಆಗ್ರಹಿಸಿ ಕೆಇಬಿ ವಿದ್ಯುತ್ ನಗರ ಸಲಹಾ ಸಮಿತಿ ಸದಸ್ಯರು ಬುಧವಾರ ತಾಲೂಕು ಕರ್ನಾಟಕ ವಾಯುವ್ಯ ರಸ್ತೆ ಸಾರಿಗೆ ನಿಗಮ ಸಂಸ್ಥೆ ಹಾವೇರಿ ವಿಭಾಗ ಬ್ಯಾಡಗಿ ಘಟಕ ವ್ಯವಸ್ಥಾಪಕರಿಗೆ ಮನವಿ ಪತ್ರ ಸಲ್ಲಿಸಲಾಯಿತು.

ಬಿತ್ತನೆ ಬೀಜ ವಿತರಣೆಗೆ ಕೆ.ಟಿ.ಕಲ್ಲಗೌಡ್ರ ಚಾಲನೆ

ಹಾನಗಲ್ಲ: ಕೃಷಿ ಇಲಾಖೆಯ ರೈತ ಸಂಪರ್ಕ ಕೇಂದ್ರದಲ್ಲಿ ಸೋಮವಾರ ರಿಯಾಯಿತಿ ದರದಲ್ಲಿ ಬಿತ್ತನೆ ಬೀಜ ವಿತರಣೆಗೆ ಕೃಷಿಕ ಸಮಾಜ ಅಧ್ಯಕ್ಷ ಕೆ.ಟಿ.ಕಲ್ಲಗೌಡ್ರ ಚಾಲನೆ ನೀಡಿದರು.

ತಾಲೂಕಿನ 3 ರೈತ ಸಂಪರ್ಕ ಕೇಂದ್ರಗಳು ಮತ್ತು6 ಉಪ ಕೇಂದ್ರಗಳ ಮೂಲಕ ಸೋಮವಾರದಿಂದ ಬಿತ್ತನೆ ಬೀಜ ವಿತರಣೆ ಕಾರ್ಯಾರಂಭಗೊಂಡಿದೆ ಆಧಾರ ಕಾರ್ಡ್ ಕಡ್ಡಾಯ. ಕೆ ಕಿಸಾನ್ ಆಪ್ ಮೂಲಕ ಬೀಜ ವಿತರಣೆ ಮಾಡಲಾಗುತ್ತದೆ ಎಂದು ಸಹಾಯಕ ಕೃಷಿ ನಿರ್ದೇಶಕ ಸುರೇಶ ಸಿ.ಟಿ ಮಾತನಾಡಿದರು.

ಕೆಲವು ದಿನಗಳಿಂದ ಉತ್ತಮ ಮಳೆಯಾಗಿದೆ. ಬಿತ್ತನೆಗೆ ಪೂರಕ ವಾತಾವರಣ ಸಿಕ್ಕಿದೆ. ನಮ್ಮಲ್ಲಿ ಬಿತ್ತನೆ ಬೀಜ ಸೋಯಾ,ಭತ್ತ, ಶೇಂಗಾ ,ಅವರೆ ದಾಸ್ತಾನು ತೃಪ್ತಿದಾಯವಾಗಿದೆ. ಮತ್ತು ತಾಲೂಕಿನಲ್ಲಿ ಯಾವುದೇ ರಸಗೊಬ್ಬರ ಕೊರತೆಯಿಲ್ಲ ಎಂದರು. ರೈತರ ಶಿಫಾರಸ್ಸಿನ ಮೇರೆಗೆ ರೈತರು ನ್ಯಾನೋ ಡಿಎಪಿ ಜೊತೆಗೆ ಇತರೆ ಕಾಂಪ್ಲೆಕ್ಸ್ ಗೊಬ್ಬರವನ್ನೂ ಬಳಸಬೇಕು ಎಂದರು.ಈ ಸಂದರ್ಭದಲ್ಲಿ ರೈತ ಸಂಘದ ಅಧ್ಯಕ್ಷ ಮರಿಗೌಡ ಪಾಟೀಲ ಮಾತನಾಡಿ, ಕೃಷಿ ಅಧಿಕಾರಿಗಳ ಸಲಹೆ ಮೇರೆಗೆ ರೈತರು ಬಿತ್ತನೆ ಬೀಜಗಳನ್ನು ಖರೀದಿಸಬೇಕು.ಕಳಪೆ ಬೀಜ ವಿತರಣೆಗೆ ಅವಕಾಶ ನೀಡಬಾರದು ಎಂದರು. ಕೃಷಿ ಅಧಿಕಾರಿಗಳಾದ ಸಂಗಮೇಶ ಹಕ್ಕಪ್ಪನವರ, ಶಾಮ್ ಗೌಡ ಪಾಟೀಲ, ಕೃಷಿಕ ಸಮಾಜ ಜಿಲ್ಲಾ ರೈತ ಸಂಘದ ಉಪಾಧ್ಯಕ್ಷ ಅಡಿವೆಪ್ಪ ಆಲದಕಟ್ಟಿ, ಪ್ರಮುಖರಾದ ಸೋಮಶೇಖರ ಕೊತಂಬರಿ, ಮಖಬೂಲ್ ಅಹ್ಮದ್ ಮಾಸನಕಟ್ಟಿ ಇತರರು ಉಪಸ್ಥಿತರಿದ್ದರು.



ಹಾನಗಲ್ಲ: ಕೃಷಿ ಇಲಾಖೆಯ ರೈತ ಸಂಪರ್ಕ ಕೇಂದ್ರದಲ್ಲಿ ಸೋಮವಾರ ರಿಯಾಯಿತಿ ದರದಲ್ಲಿ ಬಿತ್ತನೆ ಬೀಜ ವಿತರಣೆಗೆ ಕೃಷಿಕ ಸಮಾಜ ಅಧ್ಯಕ್ಷ ಕೆ.ಟಿ.ಕಲ್ಲಗೌಡ್ರ ಚಾಲನೆ ನೀಡಿದರು.ಹಾಯಕ ಕೃಷಿ ನಿರ್ದೇಶಕ ಸುರೇಶ ಸಿ.ಟಿ, ರೈತ ಸಂಘದ ಅಧ್ಯಕ್ಷ ಮರಿಗೌಡ ಪಾಟೀಲ, ಕೃಷಿ ಅಧಿಕಾರಿಗಳಾದ ಸಂಗಮೇಶ ಹಕ್ಕಪ್ಪನವರ, ಶಾಮ್ ಗೌಡ ಪಾಟೀಲ, ಕೃಷಿಕ ಸಮಾಜ ಜಿಲ್ಲಾ ರೈತ ಸಂಘದ ಉಪಾಧ್ಯಕ್ಷ ಅಡಿವೆಪ್ಪ ಆಲದಕಟ್ಟಿ, ಪ್ರಮುಖರಾದ ಸೋಮಶೇಖರ ಕೊತಂಬರಿ, ಮಖಬೂಲ್ ಅಹ್ಮದ್ ಮಾಸನಕಟ್ಟಿ ಇತರರು ಉಪಸ್ಥಿತರಿದ್ದರು.

ಡೀಸೆಲ್ ಅಭಾವ, ಹೆಚ್ಚಿದ ದರ | ಕೂಲಿ ಕಾರ್ಮಿಕರ ಕೊರತೆ

ಹೆಚ್ಚಿದ ಯಂತ್ರೋಪಕರಣ ಬಾಡಿಗೆ

ಕಿರಣ ಮಾಸಣಗಿ

ಹಾವೇರಿ: ಕಳೆದೊಂದು ವಾರದಿಂದ ಜಿಲ್ಲೆಯಲ್ಲಿ ಆಗಾಗ್ಗೆ ಸುರಿದ ಮಳೆ ಹಿನ್ನೆಲೆಯಲ್ಲಿ ಕೃಷಿ ಚಟುವಟಿಕೆಗಳು ಗರಿಗೆದರಿವೆ. ರೈತರು ಭೂಮಿಯನ್ನು ಹದಗೊಳಿಸುವ ಕೆಲಸ ಭರದಿಂದ ಸಾಗಿದೆ. ಆದರೆ ಬಹುತೇಕ ಅಂದರೆ ಶೇ.70ರಷ್ಟು ರೈತರು ಕೂಲಿ ಕಾರ್ಮಿಕರ ಕೊರತೆ ಹಿನ್ನೆಲೆಯಲ್ಲಿ ಯಾಂತ್ರೀಕೃತ ಕೃಷಿಗೆ ಮುಂದಾಗಿದ್ದು, ಇದರ ಪರಿಣಾಮ ಇದೀಗ ನೇರವಾಗಿ ರೈತರನ್ನು ತಟ್ಟುತ್ತಿದೆ. ಸಮರ್ಪಕ ಡೀಸೆಲ್ ಸಿಗದ ಕಾರಣ ಹಾಗೂ ಡೀಸೆಲ್ ದರ ಏರಿಕೆಯಿಂದ ರಂಟೆ, ಕುಂಟೆ, ಟಿಲ್ಲರ್, ಪಟ್ಲರ್ ಹೀಗೆ ಕೃಷಿ ಕಾರ್ಯಗಳಿಗೆ ಅಗತ್ಯವಿರುವ ಟ್ರ್ಯಾಕ್ಟರ್‌ಗಳ ಬಾಡಿಗೆ ಮಾತ್ರ ಬಲು ದುಬಾರಿಯಾಗಿ, ರೈತ ಹೈರಾಣಾಗುವಂತೆ ಮಾಡಿದೆ.

ಮೇ ಮೂರನೇ ವಾರದಿಂದ ಮುಂಗಾರು ಹಂಗಾಮು ಆರಂಭಗೊಳ್ಳಲಿದ್ದು, ರೈತರು ತಮ್ಮ ಜಮೀನುಗಳಲ್ಲಿ ಕಸ ಸ್ವಚ್ಛಗೊಳಿಸುವುದು, ಸಾವಯವ (ಸಗಣಿ) ಕೊಟ್ಟಿಗೆ ಗೊಬ್ಬರ ಹರಡುವುದು ಸೇರಿದಂತೆ ಕೃಷಿ ಕಾರ್ಯಗಳಿಗೆ ಮುಂದಾಗಿದ್ದಾರೆ. ಎತ್ತುಗಳಿದ್ದ ರೈತರು ಭೂಮಿಯನ್ನು ಹದಗೊಳಿಸಲು ಮುಂದಾಗುತ್ತಿದ್ದಾರೆ. ಆದರೆ ಎತ್ತುಗಳಿಲ್ಲದ ಹಲವು ರೈತರು ಟ್ರ್ಯಾಕ್ಟರ್ ಸೇರಿ ಕೃಷಿ ಯಂತ್ರೋಪಕರಣಗಳ ಮೊರೆ ಹೋಗಿದ್ದಾರೆ. ಆದರೆ ಡೀಸೆಲ್ ಬೆಲೆ ಏರಿಕೆ ಹಾಗೂ ಅಭಾವದಿಂದ ಟ್ರ್ಯಾಕ್ಟರ್‌ಗಳ ಬಾಡಿಗೆ ದುಬಾರಿಯಾಗಿ ಆತಂಕಕ್ಕೀಡಾಗಿದ್ದಾರೆ. ಕೆಲ ರೈತರು ಕೃಷಿ ಯಂತ್ರಧಾರೆ ಯೋಜನೆಯನ್ನು ಚಾಲ್ತಿಯಲ್ಲಿ ತರಬೇಕೆಂಬ ಒತ್ತಾಯ ಮಾಡುತ್ತಿರುವುದು ಕೂಡ ಜಿಲ್ಲೆಯ ಗ್ರಾಮೀಣ ಭಾಗದಲ್ಲಿ ಕಂಡುಬರುತ್ತಿದೆ.

ಹೆಚ್ಚಿದ ಬಾಡಿಗೆ: ಟ್ರ್ಯಾಕ್ಟರ್ ಸೇರಿ ಕೃಷಿ ಯಂತ್ರೋಪಕರಣಗಳ ಮೂಲಕ ಜಮೀನಿನಲ್ಲಿ ಕೃಷಿ ಕೆಲಸ ಮಾಡುವವರ ಬಾಡಿಗೆ ಹೆಚ್ಚಳವಾಗಿದೆ. ಪಲ್ಟಿ ರಂಟೆ ಪ್ರತಿ ಎಕರೆಗೆ ರೂ.2,800-3,000, ಸಾದಾ (ಜೋಡಿ) ರಂಟೆ ರೂ.2,000-2,200, ಕುಂಟೆ ಹೊಡೆಯುವುದು 1,500-1,800, ಕಲ್ಟಿವೇಟರ್ ಹಾಗೂ ದಿಂಡಿನಕುಂಟೆ 1000-1,300ರೂ., ಹಾಗೂ ರೂಟಾವೇಟರ್‌ಗೆ 1,600 -1,800ರೂ., ಬಲರಾಮ ರಂಟೆ 1,600-1,800 ಹೀಗೆ ಪ್ರತಿ ಎಕರೆಗೆ ಸುಮಾರು 200-400 ರೂ.ದರ ಹೆಚ್ಚಳವಾಗಿದೆ.



> ಬಡ, ಮಧ್ಯಮ ರೈತರಿಗೆ 'ಕೃಷಿ ಯಂತ್ರಧಾರೆ' ಅನುಕೂಲವಾಗಿತ್ತು. ಆದರೆ ಯೋಜನೆ ಸ್ಥಗಿತಗೊಂಡಿದ್ದು ದುರ್ದೈವದ ಸಂಗತಿ. ಸರ್ಕಾರ ಮರು ಜಾರಿಗೊಳಿಸಿದ್ದಲ್ಲಿ ಬಡ ರೈತರಿಗೆ ಹೆಚ್ಚಿನ ರೀತಿಯಲ್ಲಿ ಸಹಾಯಕವಾಗಲಿದೆ.
>
> ■ ರಾಮಣ್ಣ ಕೆಂಚಳ್ಳೇರ, ಜಿಲ್ಲಾಧ್ಯಕ್ಷರು, ರೈತ ಸಂಘ ಹಾಗೂ ಹಸಿರು ಸೇನೆ

ಕೃಷಿ ಯಂತ್ರಧಾರೆಗೆ ಬೇಡಿಕೆ: ರೈತರ ಕೃಷಿ ಕಾರ್ಯಕ್ಕೆ ನೆರವಾಗಲು ಕೆಲ ಸಂಘಸಂಸ್ಥೆಗಳ ಮೂಲಕ ಕೃಷಿ ಯಂತ್ರೋಪಕರಣಗಳನ್ನು 'ಕೃಷಿ ಯಂತ್ರಧಾರೆ ಯೋಜನೆ'ಯಡಿ ಕಡಿಮೆ ಬಾಡಿಗೆ ದರದಲ್ಲಿ ರೈತರಿಗೆ ಪೂರೈಸುತ್ತಿದ್ದವು. ಇದರಿಂದ ಬಡ ಹಾಗೂ ಮಧ್ಯಮ ವರ್ಗದ ರೈತರಿಗೆ ಸಾಕಷ್ಟು ಅನುಕೂಲವಾಗಿತ್ತು. ಆದರೆ ಇತ್ತೀಚಿನ ದಿನಗಳಲ್ಲಿ ಈ ಯೋಜನೆ ಸ್ಥಗಿತಗೊಂಡು ರೈತರು ಅನಿವಾರ್ಯವಾಗಿ ಖಾಸಗಿ ನಿವಾಸಿಗಳ ಟ್ರ್ಯಾಕ್ಟರ್‌ಗಳ ಮೊರೆ ಹೋಗುವಂತಹ ಸ್ಥಿತಿ ಎದುರಾಗಿದೆ.

> ಕಳೆದೊಂದು ವಾರದಿಂದ ಒಳ್ಳೆಯ ಮಳೆಯಾಗುತ್ತಿದ್ದು, ಜಮೀನು ಹಸನು ಮಾಡಬೇಕಿದೆ. ಆದರೆ ಟ್ರ್ಯಾಕ್ಟರ್ ಸೇರಿ ಕೃಷಿ ಯಂತ್ರೋಪಕರಣಗಳ ಬಾಡಿಗೆ ದುಬಾರಿ ಆಗಿದ್ದು, ಡೀಸೆಲ್ ಕೊರತೆ ಮತ್ತು ರೇಟು ಹೆಚ್ಚಳದ ಕಾರಣ ನೀಡುತ್ತಿದ್ದಾರೆ. ಅವರು ಹೇಳಿದ ದರಕ್ಕೆ ಹೊಲ ಹಸನಾಗಿಸುವ ಅನಿವಾರ್ಯ ಎದುರಾಗಿದೆ.
>
> ■ ಸಿದ್ದಪ್ಪ ಅಂಗರಗಟ್ಟಿ, ರೈತರು.

> ಡೀಸೆಲ್ ಬೆಲೆ ದುಬಾರಿಯಾಗಿದೆ, ಸಕಾಲಕ್ಕೆ ಡೀಸೆಲ್ ಸಿಗುತ್ತಿಲ್ಲ. ಅನಿವಾರ್ಯವಾಗಿ ಟ್ರ್ಯಾಕ್ಟರ್ ಸೇರಿ ಕೃಷಿ ಯಂತ್ರೋಪಕರಣಗಳ ಬಾಡಿಗೆ ಹೆಚ್ಚಳ ಮಾಡಬೇಕಾಗಿದೆ. ಸದ್ಯ ರೈತರ ಕೈಯಲ್ಲಿ ಬಿತ್ತನೆ ಬೀಜ, ಗೊಬ್ಬರಕ್ಕೆ ಅಷ್ಟಿಷ್ಟು ಹಣ ಇಟ್ಟುಕೊಂಡಿದ್ದಾರೆ. ಅರ್ಧ ಬಾಡಿಗೆ ನೀಡಿ ಮುಂದಿನ ದಿನಗಳಲ್ಲಿ ಕೊಡುವ ಭರವಸೆ ನೀಡುತ್ತಾರೆ. ನಾವೂ ರೈತರೇ ಆಗಿದ್ದು, ಪರಸ್ಪರ ವಿಶ್ವಾಸದಿಂದ ಕೆಲಸ ಮಾಡಿಕೊಡುತ್ತಿದ್ದೇವೆ.
>
> ■ ಶಿವಬಸಪ್ಪ ಗೊಂದಿ, ಟ್ರ್ಯಾಕ್ಟರ್ ಮಾಲೀಕರು.

ಹದವರಿತ ಮಳೆ ಬೇಕು: ಜಿಲ್ಲೆಯಲ್ಲಿ ಕಳೆದೊಂದು ವಾರದಿಂದ ಆಗಾಗ್ಗೆ ಮಳೆ ಸುರಿಯುತ್ತಿದೆ. ಆದಾಗ್ಯೂ ಹಲವೆಡೆ ಇನ್ನೂ ಹದವರಿತ ಮಳೆಯ ಅಗತ್ಯವಿದೆ. ಸಮರ್ಪಕ ಮಳೆ ಜತೆಗೆ ಜಮೀನು ಹಸನುಗೊಂಡಲ್ಲಿ, ಈ ವಾರವೇ ಮುಂಗಾರು ಬಿತ್ತನೆ ನಡೆಯಲಿದೆ. ಒಂದು ವೇಳೆ ಇದಕ್ಕೆ ಅಗತ್ಯ ಮಳೆ ಸುರಿದಲ್ಲಿ ಬಿತ್ತನೆಗೆ ಬಹುತೇಕ ರೈತರು ಸಿದ್ಧಗೊಂಡು ಮಳೆಗಾಗಿ ಕಾದಿದ್ದಾರೆ.

ವಿವಿಧ ಬೆಳೆಗಳಿಗೆ ಕಳೆನಾಶಕ ಬಳಕೆಗೆ ಸಲಹೆ

ಹಾವೇರಿ: ಕಳೆನಾಶಕ ಮಿಶ್ರಿತ ಯೂರಿಯಾ ಹರಳುಗಳು ಬಿದ್ದ ಜಾಗದಲ್ಲಿ ಮಾತ್ರ ಕಳೆಗಳು ನಿಯಂತ್ರಣವಾಗಿ ಉಳಿದ ಜಾಗಗಳಲ್ಲಿ ಕಳೆಗಳು ಬೆಳೆಯುತ್ತವೆ ಹಾಗೂ ಅನಾವಶ್ಯಕವಾಗಿ ಯೂರಿಯಾ ರಸಗೊಬ್ಬರ ಪೋಲಾಗುತ್ತದೆ. ಸಾರಜನಕದ ಪ್ರಮಾಣ ಹೆಚ್ಚಾಗಿ ಗೋವಿನಜೋಳಕ್ಕೆ ಲದ್ದಿ ಹುಳು, ಕಾಂಡಕೊರಕ ಹಾಗೂ ಇನ್ನಿತರೆ ರೋಗ ಕೀಟಗಳ ಬಾಧೆ ಹೆಚ್ಚಾಗುತ್ತದೆ. ಈ ಕಾರಣದಿಂದ ಕಳೆನಾಶಕಗಳನ್ನು ಯೂರಿಯಾ ರಸಗೊಬ್ಬರಗಳಲ್ಲಿ ಮಿಶ್ರಣ ಮಾಡಿ ಜಮೀನಿನಲ್ಲಿ ಎರಚಬಾರದು ಎಂದು ಸಹಾಯಕ ಕೃಷಿ ನಿರ್ದೇಶಕ ವೀರಭದ್ರಪ್ಪ ಬಿ.ಎಚ್. ಸಲಹೆ ನೀಡಿದ್ದಾರೆ.

ಹಾವೇರಿ ತಾಲೂಕಿನಲ್ಲಿ ರೈತರು ಮುಂಗಾರು ಬೆಳೆಗಳ ಬಿತ್ತನೆ ಚುರುಕುಗೊಳಿಸಿದ್ದು, ಮುಸುಕಿನಜೋಳ ಮತ್ತು ಸೋಯಾಅವರೆ ಬೆಳೆಗಳಲ್ಲಿ ಬಿತ್ತನೆ ನಂತರ ಅಟ್ರಾಜಿನ್ ಅಥವಾ ಪೆಂಡಿಮಿಥಲಿನ್ ಕಳೆನಾಶಕಗಳನ್ನು ಯೂರಿಯಾ ರಸಗೊಬ್ಬರದಲ್ಲಿ ಮಿಶ್ರಣ ಮಾಡಿ ಜಮೀನಿನಲ್ಲಿ ಎರಚುತ್ತಿರುವುದು ಕಂಡುಬರುತ್ತಿದೆ. ಈ ರೀತಿ ಮಾಡುವುದರಿಂದ ಕಳೆಗಳು ಸಂಪೂರ್ಣವಾಗಿ ನಿಯಂತ್ರಣ ವಾಗುವುದಿಲ್ಲ.

ಗೋವಿನಜೋಳದಲ್ಲಿ ಕಳೆನಾಶಕ ಬಳಕೆ: ಎಕರೆಗೆ ಒಂದು ಕಿ.ಗ್ರಾಂ ಅಟ್ರಾಜಿನ್ 50 ಡಬ್ಲ್ಯೂ.ಪಿ ಅಥವಾ ಅಟ್ರಾಜಿನ್ 50 ಡಬ್ಲ್ಯೂ.ಪಿ ಜೊತೆಗೆ ಒಂದು ಲೀಟರ್ ಪೆಂಡಿಮಿಥಾಲಿನ್ 30 ಇ.ಸಿ ಕಳೆನಾಶಕವನ್ನು (ಟ್ಯಾಂಕ್ ಮಿಶ್ರಣ ಮಾಡಿ) 300 ಲೀಟರ್ ನಲ್ಲಿ ಕರಗಿಸಿ, ಬಿತ್ತನೆ ಆದ ದಿನ ಅಥವಾ ಮರುದಿನ ಮಣ್ಣಿನ ಮೇಲೆ ಸಿಂಪಡಿಸಬೇಕು. 20-25 ದಿನಗಳ ನಂತರ (ಕಳೆಗಳು 2-3 ಎಲೆಗಳ ಹಂತದಲ್ಲಿ) ಟೆಂಬೂಟ್ರೆಯಾನ್ 34.4% ಎಸ್.ಸಿ 114 ಮೀ.ಲೀ ಅಥವಾ 140 ಮೀ.ಲೀ ಮಿಸೋಟ್ರಿಯೋನ್ 40% ಎಸ್.ಸಿ ಕಳೆನಾಶಕಗಳನ್ನು ಪ್ರತಿ ಎಕರೆ 300 ಲೀಟರ್ ನೀರನ್ನು ಉಪಯೋಗಿಸಿ ಸಿಂಪರಣೆ ಮಾಡುವುದರಿಂದ ಕಳೆಗಳ ಹತೋಟಿ ಸಾಧ್ಯ.

ಸೋಯಾಅವರೆ ಬೆಳೆಯಲ್ಲಿ ಕಳನಾಶಕ ಬಳಕೆ: ಬಿತ್ತನೆಯಾದ ದಿನ ಅಥವಾ ಮರುದಿನ 1.6 ಲೀಟರ್ ಅಲಾಕ್ಲೋರ್ 50 ಇ.ಸಿ ಅಥವಾ 1.3 ಲೀಟರ್ ಪೆಂಡಿಮಿಥಾಲಿನ್ 30 ಇ.ಸಿ ಅನ್ನು 300 ಲೀಟರ್ ನೀರಿನಲ್ಲಿ ಒಂದು ಎಕರೆ ಪ್ರದೇಶಕ್ಕೆ ಮಣ್ಣಿನ ಮೇಲೆ ಸಿಂಪಡಿಸಬೇಕು. ಕ್ಲೋರಿಮ್ಯೂರಾನ್ ಕಳೆನಾಶಕವನ್ನು ಬಿತ್ತಿದ 15 ದಿವಸಗಳ ವರೆಗೆ ಸಿಂಪರಣೆ ಮಾಡಬಹುದು.

20 ರಿಂದ 25 ದಿನಗಳ ಅವಧಿಯಲ್ಲಿ ಅಂತರ ಬೇಸಾಯ ಮಾಡುವುದರಿಂದ ಕಳೆಗಳನ್ನು ನಿಯಂತ್ರಿಸಿ ಮಣ್ಣು ಏರಿಸಲು ಅನುಕೂಲವಾಗುತ್ತದೆ. ಕಳೆನಾಶಕಗಳನ್ನು ಯೂರಿಯಾ ರಸಗೊಬ್ಬರದಲ್ಲಿ ಮಿಶ್ರಣ ಮಾಡಿ ಎರಚುವುದರ ಬದಲಾಗಿ ಸಿಂಪರಣೆ ಮಾಡುವುದರಿಂದ ಕಳೆಗಳನ್ನು ಹತೋಟಿಗೆ ತರಬಹುದು. ಸಿಂಪರಣೆ ಮಾಡಿದ ಜಾಗವನ್ನು ಕಾಲ್ ತುಳಿತ ಮಾಡದೇ ಹಿಮ್ಮುಖವಾಗಿ ನಡೆಯುತ್ತಾ ಸಿಂಪರಣೆ ಮಾಡುವುದರಿಂದ ಸಿಂಪರಣೆ ಮಾಡಿದ ಜಾಗದಲ್ಲಿ ಕಳೆಗಳು ಮರು ಹುಟ್ಟುವುದಿಲ್ಲ ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬಕ್ರೀದ್‌ಗೆ ಪ್ರಾಣಿ ವಧೆ ಮಾಡುವುದಿಲ್ಲ: ಸವಣೂರ

ಹಾನಗಲ್ಲ: ಬಕ್ರೀದ್ ಸಂಪ್ರದಾಯದ ನಿಯಮದಲ್ಲಿ ಬದಲಾವಣೆ ಮಾಡಿಕೊಳ್ಳಲಾಗಿದ್ದು, ಇನ್ನೂ ಮುಂದೆ ತಾಲೂಕಿನಲ್ಲಿ ಪ್ರಾಣಿ ವಧೆ ಮಾಡುವುದಿಲ್ಲ ಎಂದು ಹಾನಗಲ್ಲ ಅಂಜುಮನ್ ಇಸ್ಲಾಂ ಕಮೀಟಿಯ ಅಧ್ಯಕ್ಷ ನಜೀರ್ ಅಹ್ಮದ್ ಸವಣೂರ ತಿಳಿಸಿದರು.

ಪಟ್ಟಣದ ಅವರ ಕಚೇರಿಯಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಈ ದೇಶದ ಬಹುಸಂಖ್ಯಾತ ಹಿಂದೂ ಬಾಂಧವರ ಧಾರ್ಮಿಕ ಭಾವನೆ ಗೌರವಿಸಿ, ಗೋವು ವಧೆಗೆ ನಾವು ವಿರೋಧ ವ್ಯಕ್ತಪಡಿಸಿದ್ದೇವೆ. ಅದೇ ರೀತಿ ತಾಲೂಕಿನಾದ್ಯಂತ ಸಭೆ ಮೂಲಕ ನಮ್ಮ ಸಮುದಾಯಗಳಿಗೆ ಜಾಗೃತಿ ಮಾಡಿದ್ದೇವೆ.ಅಕ್ಕಿಆಲೂರ ಅಂಜುಮನ್ ಇಸ್ಲಾಂ ಕಮಿಟಿಯವರು ಸೇರಿ ಅಕ್ಕಿ ಆಲೂರ ಜಾನುವಾರು ಸಂತೆಗಳಲ್ಲಿ ಬಕ್ರೀದ್ ಹಬ್ಬಕ್ಕೆ ಬಲಿಕೊಡದಂತೆ ಜನರಲ್ಲಿ ಮನವಿ ಮಾಡಿಕೊಂಡಿದ್ದೇವೆ, ಗೋವಿನ ಹೆಸರಿನಲ್ಲಿ ರಾಜಕೀಯ ಬೇಳೆ ಬೇಯಿಸುಕೊಳ್ಳುವ ಕುತಂತ್ರ ನಿಲ್ಲಬೇಕು ಅಷ್ಟೇ ಅಲ್ಲದೆ ಗೋವು ರಾಷ್ಟ್ರೀಯ ಪ್ರಾಣಿ ಎಂದು ಕೇಂದ್ರ ಸರಕಾರ ಘೋಷಣೆ ಮಾಡಬೇಕು ಯಾವ ಪ್ರಾಣಿಯನ್ನು ನಾವು ಆಹಾರವಾಗಿ ಬಳಸಬೇಕು ಎಂಬುದನ್ನು ರಾಜ್ಯ ಸರಕಾರ ಸೂಚಿಸಬೇಕು. ಅದಕ್ಕೆ ತಕ್ಕ ವ್ಯವಸ್ಥೆ ಮಾಡಬೇಕು ಎಂಬ ಬೇಡಿಕೆ ಇಟ್ಟುಕೊಂಡುಜು. 3 ರಂದು ಪಟ್ಟಣದಲ್ಲಿ ಜಾಗೃತಿ ಮೆರವಣಿಗೆ ನಡೆಸಿ ಸರಕಾರಕ್ಕೆ ತಹಸೀಲ್ದಾರ ಮೂಲಕ ಮನವಿ ಸಲ್ಲಿಸಲಾಗುವುದು ಎಂದು ಅವರು ವಿವರ ನೀಡಿದರು.

ಈಸಂದರ್ಭದಲ್ಲಿಅಕ್ಕಿಆಲೂರಅಂಜುಮನ್ ಕಮೀಟಿಯ ಕಾರ್ಯದರ್ಶಿ ಯಾಸೀರ್ ಅರಾಫಾತ ಮಕಾಂದಾರ್ ಮಾತನಾಡಿ, ಸಮಾಜದಲ್ಲಿ ಸಾಮರಸ್ಯ ಮಾಡಬೇಕು "ಪ್ರಾಣಿ ವಧೆ ಮುಂದಿಟ್ಟುಕೊಂಡು ಸಮಾಜಿಕ ಸ್ವಾಸ್ಥ್ಯ ಹದಗೆಡಿಸುವ ಪಟ್ಟಭದ್ರ ಹಿತಾಸಕ್ತಿಗಳ ಪ್ರಯತ್ನಕ್ಕೆ ವಿರೋಧ ವ್ಯಕ್ತಪಡಿಸಿ ಧರ್ಮಗುರುಗಳು ನೀಡಿದ ಸಂದೇಶದಂತೆ

ಮುಸ್ಲಿಂಸಮಯದಾಯದವರುನಿರ್ಣಯ ಕೈಗೊಂಡಿದ್ದಾರೆ ಎಂದು ಹೇಳಿದರು.

ವಿವಿಧ ಮುಸ್ಲಿಂ ಸಮುದಾಯ, ಸಂಘಟನೆಗಳ ಮುಖಂಡರು, ಅಕ್ಕಿಆಲೂರ ಅಂಜುಮನ್ ಇಸ್ಲಾಂ ಕಮಿಟಿ ಅಧ್ಯಕ್ಷ ಮೆಹಬೂಬ ಬ್ಯಾಡಗಿ, ಹಾನಗಲ್ ಅಂಜುಮನ್ ಇಸ್ಲಾಂ ಕಮಿಟಿ ಉಪಾಧ್ಯಕ್ಷ ನಿಸಾರ ಅಹಮದ್ ಗೌಂಡಿ, ಕಾರ್ಯದರ್ಶಿ ನಿಸಾರಹಮದ್ ಖಾಜಿ, ನವೀದ್ ಅಹಮದ್ ಯಾವಗಲ್, ಅಪ್ರೋಜ್ ರಾಣಿಬೆನ್ನೂರ, ನಿಸಾರ ಪಾನವಾಲೆ, ಅಪ್ತರ ಅಹಮ್ಮದ್ ಲೋಹಾರ, ಇರ್ಫಾನ್ ಸೌದಾಗರ, ಫಾರೂಕ ಅಹಮದ್ ಸುತಾರ, ಮುನೀರಅಹಮದ್ ಪಾಳಾ,ಅಬ್ದುಲ್ ಸತ್ತರಸಾಬ್ ಅರಳೇಶ್ವರ, ಖಾಜಾಮೊಹಿದ್ದೀನ್ ಅಣ್ಣಿಗೇರಿ ಇತರರಿದ್ದರು.



ವಿವಿಧ ಅಭಿವೃದ್ಧಿ ಕಾಮಗಾರಿಗೆ ಚಾಲನೆ



ಹಾನಗಲ್ಲ: ತಾಲೂಕಿನ ಕೋಡಿಯಲ್ಲಾಪುರ ಗ್ರಾಮದಲ್ಲಿ 2025-26 ನೇ ಸಾಲಿನ ಮುಖ್ಯಮಂತ್ರಿಗಳ ಮೂಲಸೌಕರ್ಯ ಅಭಿವೃದ್ಧಿ ಕಾರ್ಯಕ್ರಮದಡಿ 10 ಲಕ್ಷ ರೂ. ವೆಚ್ಚದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ಶ್ರೀನಿವಾಸ ಮಾನೆ ಭೂಮಿಪೂಜೆ ನೆರವೇರಿಸಿದರು.

ಮೊದಲೆಲ್ಲ ಎಲ್ಲೋ ಕುಳಿತು ಅನುದಾನ ಹಂಚಿಕೆ ಮಾಡುವ ಪದ್ಧತಿ ಇತ್ತು. ಅದಕ್ಕೆ ತಿಲಾಂಜಲಿ ನೀಡಲಾಗಿದ್ದು ಗ್ರಾಮಸ್ಥರ ಅಭಿಪ್ರಾಯದ ಆಧಾರದಲ್ಲಿ ಅನುದಾನ ಬಿಡುಗಡೆ ಮಾಡಲಾಗುತ್ತಿದೆ. ಮುಖಂಡರು ಪ್ರತಿಯೊಂದು ಗ್ರಾಮಗಳಿಗೆ ಭೇಟಿ ನೀಡಿ ಅಲ್ಲಿ ಗ್ರಾಮಸ್ಥರ ಅಭಿಪ್ರಾಯ ಕೇಳಿ ಆದ್ಯತೆಯ ಸಾರ್ವಜನಿಕ ಕೆಲಸಗಳಿಗೆ ಅನುದಾನ ಒದಗಿಸಲಾಗುತ್ತಿದೆ. ಪ್ರಮುಖವಾಗಿ ಗ್ರಾಮೀಣ ಪ್ರದೇಶಗಳಲ್ಲಿ ಸಿಸಿರಸ್ತೆ, ಸಿಸಿ ಗಟಾರ, ಸಿಡಿ ನಿರ್ಮಾಣದಂಥ ಮೂಲಭೂತ ಸೌಲಭ್ಯಗಳಿಗೆ ಹೆಚ್ಚು ಅನುದಾನ ನೀಡಲಾಗಿದೆ ಎಂದು ಈ ಸಂದರ್ಭದಲ್ಲಿ ಶಾಸಕ ಮಾನೆ ತಿಳಿಸಿದರು.

ಗ್ಯಾರಂಟಿ ಅನುಷ್ಠಾನ ಸಮಿತಿಯ ತಾಲೂಕಾಧ್ಯಕ್ಷ ಈರಪ್ಪ ಬೈಲವಾಳ, ಕೆಪಿಸಿಸಿ ಸದಸ್ಯ ಟಾಕನಗೌಡ ಪಾಟೀಲ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಂಜು ಗೊರಣ್ಣನವರ, ಮುಖಂಡರಾದ ಭರಮಣ್ಣ ಶಿವೂರ, ಉಳಿವೆಪ್ಪ ಮಳೆಣ್ಣನವರ, ಗದಿಗೆಪ್ಪ ತಳವಾರ, ಶಾಂತಕುಮಾರ ಹಿರಳ್ಳಿ, ರಾಜಶೇಖರ ಮಳೆಣ್ಣನವರ, ಬಂಗಾರೆಪ್ಪ ನಡಕಟ್ಟಿನವರ, ಬಸವರಾಜ ತಳವಾರ, ಬಸವಂತಪ್ಪ ಶೀಗಿಹಳ್ಳಿ, ಬಸಪ್ಪ ದಿಡಗೂರ, ಮಾರ್ತಾಂಡಪ್ಪ ಹುಲಗೂರ, ಚನ್ನಬಸಪ್ಪ ಕೋಟಿ, ಸುಭಾಸ್ ದ್ಯಾಮಣ್ಣನವರ, ವಿರುಪಾಕ್ಷಪ್ಪ ಮಳೆಣ್ಣನವರ, ಭರಮಣ್ಣ ಬೆಂಚಿಹಳ್ಳಿ ಸೇರಿದಂತೆ ಇನ್ನೂ ಹಲವರು ಇದ್ದರು.

ನೂತನ ಉಪ ಗ್ರಾಮಗಳ ಉದ್ಘಾಟನೆ

ಹಾನಗಲ್ಲ: ತಾಲೂಕಿನಲ್ಲಿ 11 ಹೊಸ ಕಂದಾಯ ಗ್ರಾಮ, 140 ಉಪ ಗ್ರಾಮಗಳನ್ನು ರಚಿಸುವ ಮೂಲಕ ದಾಖಲೆ ರಹಿತವಾಗಿ ಸರಕಾರಿ ಮತ್ತು ಖಾಸಗಿ ಜಮೀನುಗಳಲ್ಲಿ ವಾಸಿಸುತ್ತಿದ್ದ ಕುಟುಂಬಗಳಿಗೆ ಮಾಲಿಕತ್ವ ನೀಡಲಾಗುತ್ತಿದೆ ಎಂದು ಶಾಸಕ ಶ್ರೀನಿವಾಸ ಮಾನೆ ಹೇಳಿದರು.

ತಾಲೂಕಿನ ಮಕರವಳ್ಳಿ ಗ್ರಾಮದಲ್ಲಿ ಕೃಷ್ಣ ಭೈರೇಗೌಡ ನಗರ ಮತ್ತು ಸಿದ್ಧರಾಮೇಶ್ವರ ಕಾಲೋನಿ ನೂತನ ಉಪ ಗ್ರಾಮಗಳನ್ನು ಉದ್ಘಾಟಿಸಿದ ಅವರು ಸ್ವಾತಂತ್ರ್ಯ ಲಭಿಸಿ ಹಲವು ದಶಕಗಳು ಉರುಳಿದರೂ ಅನೇಕ ಗ್ರಾಮಗಳಿಗೆ ಮಾನ್ಯತೆ ಸಹ ಇರಲಿಲ್ಲ. ರಾಜ್ಯದಲ್ಲಿ ಅನೇಕ ತಾಂಡಾ, ಗೊಲ್ಲರಹಟ್ಟಿ, ಹಾಡಿ, ದೊಡ್ಡಿ, ಮಜರೆ, ಕ್ಯಾಂಪ್, ಕಾಲೋನಿ ಇತ್ಯಾದಿಗಳಿಗೆ ಪ್ರತ್ಯೇಕ ಕಂದಾಯ ದಾಖಲೆಗಳು ಮತ್ತು ಕಂದಾಯ ಸಂಖ್ಯೆ ಇರಲಿಲ್ಲ, ಹಾಗಾಗಿ ಅಲ್ಲಿನ ನಿವಾಸಿಗಳು ಸಾಕಷ್ಟು ಸಮಸ್ಯೆ ಅನುಭವಿಸುವಂತಾಗಿತ್ತು. ಕಂದಾಯ ಇಲಾಖೆಯಲ್ಲಿ ಸಾಕಷ್ಟು ಬದಲಾವಣೆ ತರುವ ಮೂಲಕ ಮನೆ ಮಾತಾಗಿರುವ ಕೃಷ್ಣ ಭೈರೇಗೌಡ ಅವರು ಇಲಾಖೆಯ ಸಾರಥ್ಯ ವಹಿಸಿದ ನಂತರ ಈ ಸಮಸ್ಯೆಗೆ ಶಾಶ್ವತ ಪರಿಹಾರ ದೊರಕಿಸಿದ್ದು, ಲಕ್ಷಾಂತರ ಕುಟುಂಬಗಳಿಗೆ ಮಾಲಿಕತ್ವದ ಹಕ್ಕುಪತ್ರ ಸಹ ಒದಗಿಸಿದ್ದಾರೆ. ಹಾನಗಲ್ ತಾಲೂಕಿನಲ್ಲಿಯೇ ಒಟ್ಟು 151 ಜನವಸತಿ ಪ್ರದೇಶಗಳು ಕಂದಾಯ ಗ್ರಾಮ ಮತ್ತು ಉಪ ಗ್ರಾಮಗಳಾಗಿ ಅಧಿಕೃತ ಸರಕಾರದ ಮಾನ್ಯತೆ ಪಡೆಯುವಂತಾಗಿದೆ ಎಂದರು.

ತಹಶೀಲ್ದಾರ್ ರೇಣುಕಾ ಎಸ್., ಕರ್ನಾಟಕ ಹಾಲು ಉತ್ಪಾದಕ ಮಹಾಮಂಡಳದ ನಿರ್ದೇಶಕ ಚಂದ್ರಪ್ಪ ಜಾಲಗಾರ, ಕೆಪಿಸಿಸಿ ಸದಸ್ಯ ಟಾಕನಗೌಡ ಪಾಟೀಲ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಂಜು ಗೊರಣ್ಣನವರ, ಬಸನಗೌಡ ಪಾಟೀಲ, ಹನುಮಂತಪ್ಪ ಮರಗಡಿ, ಈರಪ್ಪ ಬೈಲವಾಳ, ಫಯಾಜ್ ಲೋಹಾರ, ರಾಮಣ್ಣ ಬುಡ್ಡನವರ, ವಿರುಪಾಕ್ಷಪ್ಪ ದಾಳೇರ, ಮಂಜಪ್ಪ ಮಲಗುಂದ, ಕರಬಸನಗೌಡ ಪಾಟೀಲ, ಪ್ರಕಾಶ ಕೂಸನೂರ, ಶಾರುಖ್ ಗಡದ, ಎಸ್.ಎಂ.ಹಿರೇಮಠ, ಜಯಣ್ಣ ದ್ಯಾವಣ್ಣನವರ ಹಲವರು ಇದ್ದರು.



ಹಾವೇರಿ ಜಿಲ್ಲಾದ್ಯಂತ ಬಿತ್ತನೆ ಬೀಜ ಖರೀದಿಗೆ ಸರದಿ ಸಾಲು

ಹಾವೇರಿ: ಮುಂಗಾರು ಬಿತ್ತನೆಗೆ ಸಿದ್ಧತೆಯಲ್ಲಿ ತೊಡಗಿರುವ ಜಿಲ್ಲೆಯ ರೈತರು ನಗರದ ರೈತ ಸಂಪರ್ಕ ಕೇಂದ್ರದಲ್ಲಿ ಎಂದಿನಂತೆ ಬುಧವಾರ ಸರದಿ ಸಾಲಿನಲ್ಲಿ ನಿಂತುಕೊಂಡು ಸೋಯಾಬಿನ್ ಬೀಜ, ಮೆಕ್ಕೆಜೋಳ, ಶೇಂಗಾ, ತೊಗರಿ ಬೀಜಗಳನ್ನು ಖರೀದಿಸಿದರು.



ಹಾವೇರಿ ತಾಲೂಕಿನ ವಿವಿಧ ಗ್ರಾಮೀಣ ಭಾಗಗಳಿಂದ ಬಿತ್ತನೆ ಬೀಜ ಖರೀದಿಗೆ ಆಗಮಿಸಿದ್ದ ರೈತ ಬಾಂಧವರು ಅಗತ್ಯ ಬೀಜಗಳನ್ನು ಖರೀದಿಸಿದರು. ಬೆಳಗ್ಗೆ 10 ಗಂಟೆಯಿಂದ ಮಧ್ಯಾಹ್ನ 1.30ರ ತನಕ ಸೋಯಾಬೀನ್ ಬಿತ್ತನೆ ಬೀಜ ಪೂರೈಸಲಾಗಿದೆ. ತಾಲೂಕಿನ ಕರ್ಜಗಿಯಲ್ಲಿ ಸೋಯಾಬಿನ್ ಖಾಲಿಯಾಗಿದ್ದರಿಂದ, ಹಾವೇರಿ ಕೇಂದ್ರಕ್ಕೆ ರೈತರು ಆಗಮಿಸಿದ್ದರು. ಬೀಜ ತೆಗೆದುಕೊಳ್ಳಲು ಜನರು ಕ್ಯೂನಲ್ಲಿ ನಿಂತುಕೊಂಡಾಗ ಸಣ್ಣ ಪುಟ್ಟ ಗದ್ದಲ ಗಲಾಟೆಗಳು ಮುಂದುವರೆದಿದ್ದರೂ ಸಹ ಪೊಲೀಸರು ಸ್ಥಳದಲ್ಲಿದ್ದು, ಗಲಾಟೆಯಾಗದಂತೆ ನಿಯಂತ್ರಿಸುತ್ತಿದ್ದ ದೃಶ್ಯ ಕಂಡುಬಂತು.

ಪರ್ಯಾಯ ಸೋಯಾಬಿನ್ ಪೂರೈಕೆ: ಕಳೆದೊಂದು ವಾರದಿಂದ ಸೋಯಾಬಿನ್ ಕೆಡಿಎಸ್-753 ಹೆಸರಿನ ಬಿತ್ತನೆ ಬೀಜಕ್ಕೆ ಭಾರಿ ಬೇಡಿಕೆ ಬಂದಿದೆ. ಆದರೀಗ ಈ ತಳಿಯ ಬಿತ್ತನೆ ಬೀಜದ ದಾಸ್ತಾನು ಖಾಲಿಯಾಗಿದ್ದರಿಂದ ರೈತರು ಕೃಷಿ ಇಲಾಖೆ ಅಧಿಕಾರಿಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಸ್ಥಳದಲ್ಲಿದ್ದ ಕೃಷಿ ಇಲಾಖೆ ಸಿಬ್ಬಂದಿಗಳು ತಾಲೂಕಿನ ಭೂಮಿ ಫಲವತ್ತತೆಗೆ ಅನುಗುಣವಾಗಿ ಕೆಡಿಎಸ್‌ಗೆ ಪರ್ಯಾಯವಾಗಿ ಬೇರೆ ತಳಿ ಬೀಜವನ್ನು ಬಿತ್ತನೆಗೆ ಶಿಫಾರಸ್ಸು ಮಾಡಿರುವ ಕುರಿತು ಅರಿವು ಮೂಡಿಸುತ್ತಿದ್ದಾರೆ. ತದನಂತರ ರೈತರು ಅನಿವಾರ್ಯವಾಗಿ ಡಿಎಸ್‌ಬಿ-21, ಡಿಎಸ್‌ಬಿ-34 ಬಿತ್ತನೆ ಬೀಜವನ್ನು ಖರೀದಿಗೆ ಮುಂದಾಗಿದ್ದು, ಬುಧವಾರ ಒಂದೇ ದಿನ 350 ಸೋಯಾಬಿನ್ ಬೀಜದ ಬ್ಯಾಗ್‌ಗಳು ವಿತರಿಸಲಾಗಿದೆ ಎಂದು ಕೃಷಿ ಇಲಾಖೆ ಸಿಬ್ಬಂದಿಗಳು ತಿಳಿಸಿದರು.

2,500 ಕ್ವಿಂಟಾಲ್ ವಿತರಣೆ: ತಾಲೂಕಾ ಸಹಾಯಕ ಕೃಷಿ ನಿರ್ದೇಶಕ ವೀರಭದ್ರಪ್ಪ ಮಾಹಿತಿ ನೀಡಿದ್ದು, ಬುಧವಾರ ಬೆಳಗ್ಗೆ ಬಂದಿದ್ದ ಸೋಯಾಬಿನ್ ಲೋಡ್‌ನ್ನು ಸಮರ್ಪಕವಾಗಿ ರೈತರಿಗೆ ಪೂರೈಕೆ ಮಾಡಲಾಗಿದೆ. ಕರ್ಜಗಿ ಹೋಬಳಿಯಲ್ಲಿ ಬೇಡಿಕೆಗಿಂತ ಹೆಚ್ಚು ವಿತರಣೆ ಮಾಡಲಾಗಿದೆ. ಬುಧವಾರ ಸೋಯಾಬಿನ್ ಹೊರತುಪಡಿಸಿ ಮೆಕ್ಕೆಜೋಳ, ಶೇಂಗಾ, ತೊಗರಿ, ಹೆಸರು ಬೀಜಗಳನ್ನೂ ಸಹ ವಿತರಿಸಲಾಗಿದೆ. ಹಾವೇರಿಯಲ್ಲೂ ಕೂಡ ದಾಸ್ತಾನಿದ್ದ ಸೋಯಾಬಿನ್ ಪೂರ್ತಿ ವಿತರಿಸಿದ್ದು, ಮೆಕ್ಕೆಜೋಳ, ಶೇಂಗಾ, ಹೆಸರು, ತೊಗರಿ ಬೀಜಗಳನ್ನು ವಿತರಿಸಲಾಗುತ್ತಿದೆ ಎಂದರು. ಕಳೆದ ಬಾರಿ ಹಾವೇರಿ ಹೋಬಳಿಯಲ್ಲಿ 950 ಕ್ವಿಂಟಲ್ ಸೋಯಾಬಿನ್ ವಿತರಿಸಿದ್ದರೆ, ಈ ಬಾರಿ 1,400 ಕ್ವಿಂಟಲ್ ವಿತರಿಸಲಾಗಿದೆ. ಅದೇ ರೀತಿ ಒಟ್ಟಾರೆ ಹಾವೇರಿ ತಾಲೂಕಿನಲ್ಲಿ ಕಳೆದ ವರ್ಷ 1,700 ಕ್ವಿಂಟಲ್ ಸೋಯಾಬಿನ್ ಬೀಜ ವಿತರಿಸಿದ್ದರೆ, ಈ ಸಲ 2,500 ಕ್ವಿಂಟಲ್ ವಿತರಿಸಲಾಗಿದೆ ಎಂದು ಮಾಹಿತಿ ನೀಡಿದರು.

ವಾತ್ಸಲ್ಯ ಶಿಶುಪಾಲನಾ ಕೇಂದ್ರದಲ್ಲಿ 'ಗ್ರ್ಯಾಜುಯೇಷನ್ ಡೇ'

ಹಾವೇರಿ: ಇಲ್ಲಿನ ಮಹಿಳಾ ಪೊಲೀಸ್ ಠಾಣೆ ಆವರಣದಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಹಾಗೂ ರೋಶನಿ ಟ್ರಸ್ಟ್ ವತಿಯಿಂದ ನಡೆಯುತ್ತಿರುವ ವಾತ್ಸಲ್ಯ ಶಿಶುಪಾಲನಾ ಕೇಂದ್ರದಲ್ಲಿ ಬುಧವಾರ 'ಗ್ರ್ಯಾಜುಯೇಷನ್ ಡೇ' ನಡೆಯಿತು.

ರೋಶನಿ ಟ್ರಸ್ಟ್ ಹಿರಿಯರಾದ ಸಿಸ್ಟರ್ ಬೆನಿಡಿಕ್ಟ ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಪೊಲೀಸ್ ಇಲಾಖೆಯ ಆಪ್ತ ಸಮಾಲೋಚಕರಾದ ಗ್ರಾಯಿತ್ರಿ ಹೆಗಡೆ ಭಾಗವಹಿಸಿದ್ದರು. ಕಾರ್ಯಕ್ರಮದಲ್ಲಿ ಮಕ್ಕಳ ಪಾಲಕರಿಗೆ ಮಕ್ಕಳ ಆರೈಕೆ ಮತ್ತು ಪೋಷಣೆಯ ಕುರಿತು ಮಾಹಿತಿ ನೀಡಲಾಯಿತು. ನಾಲ್ಕು ವರ್ಷ ಪೂರೈಸಿದ ಮಕ್ಕಳಿಗೆ ಅಭಿನಂದನಾ ಪತ್ರಗಳನ್ನು ಕೊಡುವುದರ ಮೂಲಕ ಅವರ ಮುಂದಿನ ಶೈಕ್ಷಣಿಕ ಭವಿಷ್ಯಕ್ಕೆ ಶುಭ ಹಾರೈಸಲಾಯಿತು. ಸಮಾರಂಭದಲ್ಲಿ ಪುಟಾಣಿ ಮಕ್ಕಳು, ಪಾಲಕರು ಪಾಲ್ಗೊಂಡು ಸಂಭ್ರಮಿಸಿದರು. ಪವಿತ್ರ ನಿರೂಪಿಸಿದರು. ದೀಪಾ ಮಾಸಣಗಿ ಸ್ವಾಗತಿಸಿದರು. ಲಕ್ಷ್ಮೀ ಜಕ್ಕಣ್ಣನವರ್ ವಂದಿಸಿದರು.



ಕಳಗೊಂಡ ಗ್ರಾಮದಲ್ಲಿ ಹಸು, ಎತ್ತುಗಳ ಕಳ್ಳತನ

ಹಾವೇರಿ: ದನದ ಕೊಟ್ಟಿಗೆಯಲ್ಲಿ ಕಟ್ಟಿದ್ದ ಬೆಲೆಬಾಳುವ ಜೋಡಿ ಎತ್ತುಗಳು ಹಾಗೂ ಒಂದು ಹಸುವನ್ನು ಕಳ್ಳರು ಕಳ್ಳತನ ಮಾಡಿಕೊಂಡು ಪರಾರಿಯಾದ ಘಟನೆ ಹಿರೇಕೆರೂರು ತಾಲೂಕು ಕಳಗೊಂಡ ಗ್ರಾಮದಲ್ಲಿ ನಡೆದಿದೆ. ಕಳಗೊಂಡ ಗ್ರಾಮದ ಸುನೀಲ ಪ್ರಭು ದೊಡ್ಡಮನಿ ಎಂಬುವವರಿಗೆ ಸೇರಿದ ದನದ ಕೊಟ್ಟಿಗೆಯಲ್ಲಿ ಈ ಘಟನೆ ನಡೆದಿದೆ. ರಾತ್ರಿ ವೇಳೆ ಯಾರೋ ಕಳ್ಳರು ದನದ ಕೊಟ್ಟಿಗೆಗೆ ಹಾಕಿದ್ದ ಚೀಲಕ ತೆಗೆದು ಒಳನುಗ್ಗಿ ಸುಮಾರು 80 ಸಾವಿರ ರೂ.ಬೆಲೆಬಾಳುವ ಒಂದು ಜೋಡಿ ಎತ್ತುಗಳು, 50 ಸಾವಿರ ರೂ.ಬೆಲೆಬಾಳುವ ಹಸುವನ್ನು ಕಳ್ಳತನ ಮಾಡಿಕೊಂಡು ಪರಾರಿಯಾಗಿದ್ದಾರೆ. ಹಿರೇಕೆರೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬೈಕ್-ಕಾರು ಡಿಕ್ಕಿ: ಅಜ್ಜ, ಮೊಮ್ಮಗಳಿಗೆ ಗಾಯ

ಹಾವೇರಿ: ಬೈಕ್‌ಗೆ ಕಾರು ಡಿಕ್ಕಿ ಹೊಡೆದ ಪರಿಣಾಮ ಬೈಕ್‌ನಲ್ಲಿದ್ದ ಅಜ್ಜ, ಮೊಮ್ಮಗಳು ಗಾಯಗೊಂಡಿರುವ ಘಟನೆ ಹಂಸಭಾವಿ ರಸ್ತೆಯಲ್ಲಿರುವ ಸುತ್ತಕೋಟಿ ಕ್ರಾಸ್‌ನಲ್ಲಿ ನಡೆದಿದೆ. ಶಿವಮೊಗ್ಗ ಜಿಲ್ಲೆ ಶಿಕಾರಿಪುರ ತಾಲೂಕು ಮುಚುಡಿ ಗ್ರಾಮದ ಬೈಕ್ ಸವಾರ ರಾಮನಗೌಡಪ್ಪ ಮುಚಡೇರ, ಹಿಂಬದಿ ಸವಾರಳಾದ ಭೂಮಿಕಾ ಪರಮೇಶಪ್ಪ ಮುಚಡೇರ ಗಾಯಗೊಂಡವರು. ಗಾಯಾಳು ರಾಮನಗೌಡಪ್ಪ ತನ್ನ ಮೊಮ್ಮಗಳನ್ನು ಬೈಕ್‌ನಲ್ಲಿ ಕೂರಿಸಿಕೊಂಡು ಅಗ್ರಹಾರ ಮುಚುಡಿಯಿಂದ ಬೈಕ್ ಚಲಾಯಿಸಿಕೊಂಡು ಸುತ್ತಕೋಟಿ ಗ್ರಾಮದ ಕಡೆಗೆ ಹೋಗುವಾಗ, ಅದೇ ರಸ್ತೆಯಲ್ಲಿ ಕೋಡ ಕಡೆಯಿಂದ ಹಂಸಭಾವಿ ಕಡೆಗೆ ಬರುತ್ತಿದ್ದ ಕಾರು ಡಿಕ್ಕಿ ಹೊಡೆದು ಅಪಘಾತ ಪಡಿಸಿದೆ. ಕಾರಿನ ಚಾಲಕನ ಹೆಸರು ವಿಳಾಸ ಪತ್ತೆಯಾಗಿಲ್ಲ. ಅಪಘಾತದ ಪರಿಣಾಮ ಬೈಕ್‌ನಲ್ಲಿದ್ದರಿಗೆ ಗಂಭೀರ ಗಾಯಗಳಾಗಿವೆ ಎಂದು ಶಿಲ್ಪಾ ಮುಚಡೇರ ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಿದ್ದಾರೆ. ಹಂಸಭಾವಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕಿರುಸುದ್ದಿ

ವಿದ್ಯುತ್ ವ್ಯತ್ಯಯ ನಾಳೆ

ಕುಡಚಿ: ರಾಯಬಾಗ ತಾಲೂಕಿನ ಮೊರಬ ಕವಿಪ್ರನಿನಿ 110/11ಕೆ.ವಿ ವಿದ್ಯುತ್ ವಿತರಣಾ ಕೇಂದ್ರದಲ್ಲಿ ತ್ರೈಮಾಸಿಕ ನಿರ್ವಹಣೆ ಕೈಗೊಂಡ ಹಿನ್ನೆಲೆಯಲ್ಲಿ ಮೇ 29ರಂದು ಬೆಳಗ್ಗೆ 9 ರಿಂದ 6 ರವರೆಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಲಿದೆ. 110ಕೆ. ವಿಜಿ.ಓ.ಎಸ್, ಸಿಟಿ, ಪಿಟಿ, ಪರಿವರ್ತಕಗಳು ಮತ್ತು ಎಲ್ಲ 11ಕೆವಿ ಜಿಓಎಸ್‌ಗಳ ನಿರ್ವಹಣೆ ಅತೀ ಅವಶ್ಯವಾಗಿರುವುದರಿಂದ ಮೊರಬ ವಿವಿ ಕೇಂದ್ರದ 11ಕೆವಿ ಎಫ್-1 ಭಿರಡಿ ತೋಟ, ಎಫ್-2 ಪಡಲಾಳೆ ತೋಟ, ಎಫ್-3 ಬಾನೆ ಸರ್ಕಾರ ತೋಟ, ಎಫ್-4 ಪಟ್ಟಣದಾರ ತೋಟ, ಎಫ್-5 ಬಂತೆ ತೋಟ, ಎಫ್-6 ಮಗದುಮ್ ತೋಟ, ಎಫ್-7 ಧುಮಾಳೆ ತೋಟ, ಎಫ್-8 ದೇವರಸಿ ತೋಟ, ಎಫ್-9 ಶಾಂಡಗೆ ತೋಟ, ಎಫ್-10 ಸಪ್ತಸಾಗರ ತೋಟ, ಎಫ್-11 ಮೊರಬ ಎನ್.ಜೆ.ವಾಯ್. ಎಫ್-12 ಕದಮವಾಡಿ ಈ ಪೀಡರ್‌ಗಳಲ್ಲಿ ವಿದ್ಯುತ್ ವ್ಯತ್ಯಯ ಉಂಟಾಗಲಿದ್ದು, ರೈತರು ಸಾರ್ವಜನಿಕರು ಸಹಕರಿಸಬೇಕೆಂದು ಮೊರಬ ವಿವಿ ಕೇಂದ್ರದ ಎಸ್‌ಓ ಸೋಮಶೇಖರ ಕಾಂಬಳೆ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಾರ್ಮಿಕ ಕಿಟ್‌ಗಳಿಗೆ ಅರ್ಜಿ ಅಹ್ವಾನ

ಹುಕ್ಕೇರಿ: ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯಿಂದ ಹುಕ್ಕೇರಿ ತಾಲೂಕಿನ ನೋಂದಾಯಿತ ಅರ್ಹ ಕಾರ್ಮಿಕರಿಗೆ ಮೇಸನ್ (ಗೌಂಡಿ)ಇಲೆಕ್ಟ್ರಿಶಿಯನ್, ವೇಲ್ಡರ್, ಕಾರ್ಪೆಂಟರ್, ಪೆಂಟರ್, ಮತ್ತು ಪ್ಲಂಬರ್, ವೃತ್ತಿಯ ಸುರಕ್ಷತಾ ಕಿಟ್ ವಿತರಿಸಲು ಅರ್ಜಿ ಆಹ್ವಾನಿಸಲಾಗಿದೆ. ಕಿಟ್‌ಗಳನ್ನು ಪಡೆಯಲು 15 ದಿನದೊಳಗೆ ಅರ್ಜಿ ಸಲ್ಲಿಸಬೇಕು. ನಂತರ ಬರುವ ಅರ್ಜಿಗಳನ್ನು ಸ್ವೀಕರಿಸುವುದಿಲ್ಲ.ಒಂದು ವೇಳೆ ತಪ್ಪು ಮಾಹಿತಿ ನೀಡಿ ಕಿಟ್‌ಗಳನ್ನು ಪಡೆದುಕೊಂಡಿರುವುದು ಕಂಡುಬಂದಲ್ಲಿ ಅಂಥವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುವುದು. ತಾಲೂಕಿನ ಅರ್ಹ ಕಟ್ಟಡ ಕಾರ್ಮಿಕರು ಈ ಯೋಜನೆಯ ಸದುಪಯೋಗ ಪಡೆದುಕೊಳ್ಳಬೇಕು ಎಂದು ಉಪವಿಭಾಗ -1ಕಾರ್ಮಿಕ ಅಧಿಕಾರಿ ಮಲ್ಲಿಕಾರ್ಜುನ ಜೋಗುರ ಹಾಗೂ ಹುಕ್ಕೇರಿ ವೃತ್ತ ಕಾರ್ಮಿಕ ನಿರೀಕ್ಷಕರು ಮಹಾಂತೇಶ ಹಿರೇಮಠ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

8ನೇ ತರಗತಿ ಆಂಗ್ಲ ಮಾಧ್ಯಮ ಉಚಿತ ಪ್ರವೇಶಾತಿ

ರಾಯಬಾಗ: ಕರ್ನಾಟಕ ಪಬ್ಲಿಕ್ ಶಾಲೆ,(ಪ್ರೌಢ ವಿಭಾಗ) 26.ರಾಯಬಾಗ, ಬಿಇಓ ಕಚೇರಿ ಹತ್ತಿರ ಡಿಗ್ಗೆವಾಡಿ ರಸ್ತೆ ಇಲ್ಲಿ ಕರ್ನಾಟಕ ಸರ್ಕಾರದ ಮಹತ್ವಾಕಾಂಕ್ಷೆ ಯೋಜನೆಯಾದ ಕೆಪಿಎಸ್ ಅಡಿಯಲ್ಲಿ ಇದೇ ಶೈಕ್ಷಣಿಕ ಸಾಲಿನಿಂದ 8ನೇ ತರಗತಿ ಆಂಗ್ಲ ಮಾಧ್ಯಮ ಉಚಿತ ಪ್ರವೇಶ ಪ್ರಾರಂಭವಾಗಿವೆ. 8 ರಿಂದ 10ನೇ ತರಗತಿ ಕನ್ನಡ ಮಾಧ್ಯಮ ಪ್ರವೇಶಗಳು ಕೂಡ ಪ್ರಾರಂಭವಾಗಿವೆ.ಆಸಕ್ತ ಪಾಲಕರು ಇದರ ಪ್ರಯೋಜನ ಪಡೆದುಕೊಳ್ಳಬಹುದು. ಹೆಚ್ಚಿನ ಮಾಹಿತಿಗೆ ದೂ: 8861856261 ಗೆ ಸಂಪರ್ಕಿಸಲು ಉಪ ಪ್ರಾಚಾರ್ಯ ಬಿ.ಎಂ.ಮಾಳಿ ಕೋರಿರುತ್ತಾರೆ.

ಮೆಟ್ರಿಕ್ ನಂತರದ ವಸತಿ ನಿಲಯಕ್ಕೆ ಅರ್ಜಿ ಆಹ್ವಾನ

ಬೆಳಗಾವಿ: 2026-27 ನೇ ಸಾಲಿಗೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬೆಳಗಾವಿ ತಾಲೂಕಿನ ಮೆಟ್ರಿಕ್ ನಂತರದ ಬಾಲಕರ, ಬಾಲಕಿಯರ ವಿದ್ಯಾರ್ಥಿ ನಿಲಯಗಳಲ್ಲಿ ಹೊಸದಾಗಿ ಪ್ರವೇಶ ಬಯಸುವ ಪ್ರವರ್ಗ -1, 2ಎ, 2ಬಿ, 3ಎ, 3ಬಿ, ಪ.ಜಾತಿ ಮತ್ತು ಪ.ವರ್ಗದ ಪಿಯುಸಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಆನ್ ಲೈನ್ ಮೂಲಕ ಅರ್ಜಿಯನ್ನು ಸಲ್ಲಿಸಬಹುದು.

ಆಸಕ್ತರು ಜೂನ್ 15ರೊಳಗಾಗಿ https://shp.karnataka.gov.in/bcwd ಮೂಲಕ ಸಲ್ಲಿಸಬಹುದಾಗಿದೆ. ತಾಲೂಕಾವಾರು ವಿದ್ಯಾರ್ಥಿ ನಿಲಯಗಳ ವಿವರ ಹಾಗೂ ವಿದ್ಯಾರ್ಥಿ ನಿಲಯದ ಪ್ರವೇಶಕ್ಕೆ ಇರಬೇಕಾದ ಅರ್ಹತೆ, ಸಲ್ಲಿಸಬೇಕಾದ ದಾಖಲೆಗಳ ವಿವರ ಮತ್ತು ಸರ್ಕಾರದ ಆದೇಶಕ್ಕಾಗಿ ಇಲಾಖೆ ವೆಬ್‌ಸೈಟ್ https://bcwd.karnataka.gov.in/ ನ್ನು ನೋಡಬಹುದು.

ಅರ್ಜಿ ಸಲ್ಲಿಸಲು ತಾಂತ್ರಿಕ ತೊಂದರೆಗಳಾದಲ್ಲಿ bcwdhelpline@gmail.com ಇ-ಮೇಲ್ ಮುಖಾಂತರ ಅಥವಾ ಜಿಲಾ/ತಾಲೂಕು ಅಧಿಕಾರಿಗಳು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬೆಳಗಾವಿ ಇವರನ್ನು ಕಚೇರಿ ವೇಳೆಯಲ್ಲಿ ಅಗತ್ಯ ದಾಖಲೆಗಳೊಂದಿಗೆ ಸಂಪರ್ಕಿಸುವುದು. ಹೆಚ್ಚಿನ ಮಾಹಿತಿಗೆ ಸಹಾಯವಾಣಿ ಸಂಖ್ಯೆ 8050770004, ದೂ: 0831-2405692 ಗೆ ಸಂಪರ್ಕಿಸಬಹುದಾಗಿದೆ ಎಂದು ಬೆಳಗಾವಿ ತಾಲೂಕಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಬೆಳಗಾವಿ: ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಅವರು ಬುಧವಾರ ನವದೆಹಲಿಯಲ್ಲಿ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಸೌಹಾರ್ದಯುತವಾಗಿ ಭೇಟಿಯಾದರು. ಬಳಿಕ ರಾಜ್ಯದಲ್ಲಿ ನಡೆಯುತ್ತಿರುವ ಕಾಂಗ್ರೆಸ್ ಸರ್ಕಾರದಲ್ಲಿನ ವಿಷಯಗಳ ಬಗ್ಗೆ ಮಲ್ಲಿಕಾರ್ಜುನ ಖರ್ಗೆ ಅವರೊಂದಿಗೆ ಚರ್ಚಿಸಿದರು.

ಯಲ್ಲಮ್ಮನ ಕ್ಷೇತ್ರಕ್ಕೆ ₹215ಕೋಟಿ ಮಂಜೂರು

ಬೆಳಗಾವಿ: ವಿಶ್ವಪ್ರಸಿದ್ಧಸವದತ್ತಿಶ್ರೀರೇಣುಕಾಯಲ್ಲಮ್ಮಕ್ಷೇತ್ರದಸಮಗ್ರ ಅಭಿವೃದ್ಧಿಗಾಗಿ ರಾಜ್ಯ ಸರ್ಕಾರ 215 ಕೋಟಿ ರೂ. ಅನುದಾನ ಮಂಜೂರು ಮಾಡಿದೆ. ಬೃಹತ್ ಕಾಮಗಾರಿಗಳ ಶಂಕುಸ್ಥಾಪನೆಗೆ ಮುಖ್ಯಮಂತ್ರಿ ಹಾಗೂ ಉಪಮುಖ್ಯಮಂತ್ರಿಗಳನ್ನು ಆಹ್ವಾನಿಸುವ ಕುರಿತು ಬುಧವಾರ ಬೆಳಗಾವಿಯಲ್ಲಿ ಜಿಲ್ಲಾಧಿಕಾರಿಗಳೊಂದಿಗೆ ಮಹತ್ವದ ಸಭೆ ನಡೆಸಲಾಗಿದೆ. ಬೆಳಗಾವಿಯಲ್ಲಿ ಮಾಧ್ಯಮಗಳೊಂದಿಗೆ ಶಾಸಕ ವಿಶ್ವಾಸ ವೈದ್ಯ ಮಾತನಾಡಿ, ಸವದತ್ತಿ ಕ್ಷೇತ್ರದ ಅಭಿವೃದ್ಧಿಗೆ ಅನುದಾನ ಮಂಜೂರು ಮಾಡಿದ್ದು, ಸಿಎಂ, ಡಿಸಿಎಂ ಮತ್ತು ಜಿಲ್ಲಾ ಉಸ್ತುವಾರಿಗಳನ್ನು ಆಹ್ವಾನಿಸಲು ಒಂದು ದಿನಾಂಕ ನಿಗದಿ ಪಡಿಸಿ ಕಾಮಗಾರಿಗೆ ಶಂಕು ಸ್ಥಾಪನೆ ಮಾಡಲು ಇಂದು ಜಿಲ್ಲಾಧಿಕಾರಿಗಳೊಟ್ಟಿಗೆ ಸಭೆ ನಡೆಸಲಾಗಿದೆ ಎಂದರು. ಈಗಾಗಲೇ ತೆರವು ಕಾರ್ಯಾಚರಣೆ ಯೋಜನೆ ಸಿದ್ಧಪಡಿಸಲಾಗುತ್ತಿದೆ. ಕ್ಯೂ ಕಾಂಪ್ಲೆಕ್ಸ್ ಅನ್ನ ದಾಸೋಹ ಭವನ, ಆಡಳಿತ ಕಚೇರಿ, ವಾಕರ್ಸ್‌ನ್ ಇನ್ನುಳಿದ ಕಾಮಗಾರಿಗಳಿಗೆ 180 ಕೋಟಿ ಟೆಂಡರ್ ಆಗಿದ್ದು, ಇನ್ನು 30 ಕೋಟಿ ರೂ. ಕಾಮಗಾರಿ ಕುರಿತು ಕ್ರಿಯಾ ಯೋಜನೆ ರೂಪಿಸಲಾಗುತ್ತಿದೆ ಎಂದರು. ಇನ್ನು ಯಲ್ಲಮ್ಮನಗುಡ್ಡದಲ್ಲಿನ ಮಳಿಗೆಗಳನ್ನು ಈಗೀರುವ ಅಂಗಡಿಕಾರರಿಗೆ ಹರಾಜಿನ ಮೂಲಕ ಒದಗಿಸಲಾಗುತ್ತಿದೆ. ಮತ್ತೊಂದು ಹಳೆ ಕಾಂಪ್ಲೆಕ್ಸ್ ತೆರವುಗೊಳಿಸಬೇಕಾಗಿದ್ದು, ಪರ್ಯಾಯ ವ್ಯವಸ್ಥೆ ಮಾಡಿಕೊಡಲಾಗುವುದು. ಮಳೆಗಾಲದಲ್ಲಿ ಗರ್ಭಗುಡಿಗೆ ನೀರು ನುಗ್ಗುವುದನ್ನು ತಪ್ಪಿಸಲು ಅತಿಕ್ರಮಣ ತೆರವುಗೊಳಿಸಲಾಗುತ್ತಿದೆ ಎಂದರು.



ಮೂಡಲಗಿ: ಎಸ್ಸೆಸ್ಸೆಲ್ಸಿ ಮರು ಮೌಲ್ಯಮಾಪನದಲ್ಲಿ ಇಂಗ್ಲೀಷ್ ಮಾಧ್ಯಮದಲ್ಲಿ ಅಧಿಕ ಅಂಕ ಗಳಿಸಿ ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆದ ವಿವೇಕ ಸುಳ್ಳನ್ನವರಗೆ ಪಟ್ಟಣದ ಸಿಂಧೂರ ಕೋ ಆಪರೇಟಿವ್ ಸೊಸೈಟಿ ವತಿಯಿಂದ ಸನ್ಮಾನಿಸಿ ಗೌರವಿಸಲಾಯಿತು. ಸೊಸೈಟಿ ಅಧ್ಯಕ್ಷ ಡಾ.ಸಂಜಯ ಶಿಂದಿಹಟ್ಟಿ, ನಿರ್ದೇಶಕ ಮಹಾನಂದ ಕೊಣ್ಣೂರ, ಚಂದ್ರಶೇಖರ ತೇಲಿ, ವಿಠ್ಠಲ ಸಂಕಣ್ಣವರ್, ರಾಮಚಂದ್ರ ದೇವಾಡಿಗ, ಪ್ರಕಾಶ ಕಾಳಪ್ಪಗೊಳ, ಕಾರ್ಯದರ್ಶಿ ವಿನಾಯಕ ನಾಯ್ಕ್, ಸಖಾರಾಮ ನಿಂಬಾಲ್ಕರ, ರಮೇಶ ಜಂಜರವಾದ ಇದ್ದರು.

ಗ್ರಾಮಸ್ಥರಿಗೆ ಕೆರೆ ಹಸ್ತಾಂತರ

ಬೆಳಗಾವಿ: ತಾಲೂಕು ವ್ಯಾಪ್ತಿಯ ಬಸ್ತವಾಡ ಗ್ರಾಮದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳದ ನಮ್ಮೂರು ನಮ್ಮ ಕೆರೆ ಕಾರ್ಯಕ್ರಮದ ಅನುದಾನದಲ್ಲಿ ಪುನಶ್ಚೇತನಗೊಳಿಸಲಾದ 945 ನೇ ನಮ್ಮೂರು ನಮ್ಮ ಕೆರೆ ಹಸ್ತಾಂತರ ಕಾರ್ಯಕ್ರಮವನ್ನು ಮನೋಹರ ಮುಚ್ಚಂಡಿ ನಾಮಫಲಕ ಅನಾವರಣ ಮಾಡುವ ಮೂಲಕ ಚಾಲನೆ ನೀಡಿದರು.

ಜಿಲ್ಲಾನಿರ್ದೇಶಕರುಸತೀಶನಾಯ್ಕ್‌ಮಾತನಾಡಿ, ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಹಲವಾರು ಕಾರ್ಯಕ್ರಮಗಳನ್ನು ಮಾಡುತ್ತಿದೆ. ಅದರಲ್ಲಿ ನಮ್ಮೂರು ನಮ್ಮ ಕೆರೆ ಕಾರ್ಯಕ್ರಮವು ಅತೀ ಪ್ರಮುಖವಾಗಿದೆ. ಗ್ರಾಮೀಣ ಭಾಗದಲ್ಲಿ ಬಿಸಿಲಿನ ತಾಪ, ಬರಪೀಡಿತ ಪ್ರದೇಶಗಳಲ್ಲಿ ನೀರಿನ ಸಮಸ್ಯೆಯಿಂದಾಗಿ ಹೆಣ್ಣುಮಕ್ಕಳು ತುಂಬಾ ಕಷ್ಟ ಪಡುತ್ತಾರೆ. ಜಾನುವಾರುಗಳು, ಪ್ರಾಣಿ , ಪಕ್ಷಿಗಳಿಗೆ ನೀರಿನಸೌಲಭ್ಯ ಇಲ್ಲದೆ ಪರಿಸರ ನಶಿಸಿ ಹೋಗುತ್ತಿದೆ. ಈ ಸಮಸ್ಯೆ ಮನಗಂಡಿರುವ ಧರ್ಮಸ್ಥಳದ ಧರ್ಮಾಧಿಕಾರಿಗಳು ಡಾ.ಡಿ.ವೀರೇಂದ್ರ ಹೆಗ್ಗಡೆ ಮತ್ತು ಮಾತೃಶ್ರೀ ಹೇಮಾವತಿ ಹೆಗ್ಗಡೆ ಗ್ರಾಮೀಣ ಭಾಗದ ಈ ಸಮಸ್ಯೆಗೆ ಪರಿಹಾರ ನೀಡುವ ದೃಷ್ಟಿ ಕೋನದಿಂದ ಕೆರೆ ಪುನಃಶ್ಚೇತನ ಗೊಳಿಸುವ ಕಾರ್ಯಕ್ರಮ ಅನುಷ್ಠಾನ ಮಾಡುವುದರ ಮೂಲಕ ಇವತ್ತಿನ ದಿನಕರ್ನಾಟಕ ರಾಜ್ಯದಾದ್ಯಂತ ಸುಮಾರು 1000 ಕೆರೆಗಳ ಪುನಃಶ್ಚೇತನಗೊಳಿಸಿರುತ್ತಾರೆ. ಈ ಕಾರ್ಯಕ್ರಮದಿಂದ ಇವತ್ತಿನ ದಿನ ಅಂತರ್ಜಲ ಮಟ್ಟ ಹೆಚ್ಚಳವಾಗಿದೆ ಎಂದರು.

ಪದ್ಮಕಾಂತ ಪಾಟೀಲ ಅಧ್ಯಕ್ಷತೆ ವಹಿಸಿದರು. ಬಸೀರ್ ಅಹ್ಮದ್ ಕಿಲ್ಲೆವಾಲೆ ಉದ್ಘಾಟಿಸಿದರು.

ಪ್ರಾಣಿ ಪಕ್ಷಿಗಳಿಗೆ ಕುಡಿಯಲು ನೀರಿನ ವ್ಯವಸ್ಥೆ ಆಗಿದೆ. ಇದರಿಂದಾಗಿ ಸಮಾಜ ಸಂಕುಲಕ್ಕೆ ಒಳಿತು ಆಗಿದೆ. ಆದ್ದರಿಂದ ಜೀವ ಜಲ ಉಳಿಸಿ ಮುಂದಿನ ಪೀಳಿಗೆಗೆ ವರ್ಗಾಯಿಸಿ ಎಂದು ಮಾಹಿತಿ ನೀಡುವ ಮೂಲಕ ಕಲ್ಮೇಶ್ವರ ಕೆರೆ ಗ್ರಾಪಂ, ಕಲ್ಮೇಶ್ವರ ಕೆರೆ ಸಮಿತಿ ಅವರಿಗೆ ಹಸ್ತಾಂತರ ಮಾಡಿದರು.



> ಪ್ರಾಣಿ, ಪಕ್ಷಿಗಳಿಗೆ ನೀರಿನ ಸೌಲಭ್ಯ ಇಲ್ಲದೆ ಪರಿಸರ ನಶಿಸಿ ಹೋಗುತ್ತಿದೆ. ಈ ಸಮಸ್ಯೆಯನ್ನು ಮನಗಂಡಿರುವ ಧರ್ಮಸ್ಥಳದ ಧರ್ಮಾಧಿಕಾರಿಗಳು ಡಾ.ಡಿ.ವೀರೇಂದ್ರ ಹೆಗ್ಗಡೆ ಮತ್ತು ಮಾತೃಶ್ರೀ ಹೇಮಾವತಿ ವೀ.ಹೆಗ್ಗಡೆ ಗ್ರಾಮೀಣ ಭಾಗದ ಈ ಸಮಸ್ಯೆಗೆ ಪರಿಹಾರ ನೀಡುವ ದೃಷ್ಟಿ ಕೋನದಿಂದ ಕೆರೆ ಪುನಃಶ್ಚೇತನ ಗೊಳಿಸುವ ಕಾರ್ಯಕ್ರಮವನ್ನು ಅನುಷ್ಠಾನ ಮಾಡುವುದರ ಮೂಲಕ ಇವತ್ತಿನ ದಿನ ಕರ್ನಾಟಕ ರಾಜ್ಯದಾದ್ಯಂತ ಸುಮಾರು 1000 ಕೆರೆಗಳನ್ನು ಪುನಃಶ್ಚೇತನಗೊಳಿಸಿರುತ್ತಾರೆ.
>
> ■ **ಸತೀಶ ನಾಯ್ಕ್, ಜಿಲ್ಲಾ ನಿರ್ದೇಶಕರು**

ಗ್ರಾಪಂ ಅಭಿವೃದ್ಧಿ ಅಧಿಕಾರಿಗಳು ಆಶಾ ಮಾತನಾಡಿ, ಕೆರೆ ಪುನಶ್ಚೇತನಗೊಂಡಿರುವ ಬಗ್ಗೆ ಅಭಿಪ್ರಾಯ ವ್ಯಕ್ತಪಡಿಸಿದರು. ಕರ್ನಾಟಕಕ್ಕೆ ಈ ಕೆರೆ ಮಾದರಿ ಆಗುವಂತೆ ಇನ್ನೂ ಅಭಿವೃದ್ಧಿ ಪಡಿಸಲಾಗುವುದು ಎಂದರು.

ಈ ವೇಳೆ ಅಕಜಾವೇ ನಿಕಟ ಪೂರ್ವ ಅಧ್ಯಕ್ಷರು ಚಾರು ಕೀರ್ತಿ, ಧಾರವಾಡ ಪ್ರಾದೇಶಿಕ ವಿಭಾಗದ ಕೆರೆ ಅಭಿಯಂತರರು ನಿಂಗರಾಜ, ಕ್ಷೇತ್ರ ಯೋಜನಾಧಿಕಾರಿಗಳು ಪಾರ್ವತಿ ಸ್ವಾಗತಿಸಿದರು. ರಾಜೇಂದ್ರ ಪಾಟೀಲ, ರಾಜು ಪಾಟೀಲ, ಬಸೀರ್ ಅಹ್ಮದ್ ಕಿಲ್ಲೆವಾಲೆ, ಮನೋಹರ ಮುಚ್ಚಂಡಿ, ಚಂದ್ರಕಾಂತ ಪಾಟೀಲ, ಭರಮಪ್ಪ , ಗೌಡ ಕೆಂಚಗೊಳ, ಗುಂಡು ಬಡವಣ್ಣವರ, ಕೃಷಿ ಮೇಲ್ವಿಚಾರಕ ಮಹಾಂತೇಶ ನಿರೂಪಿಸಿದರು. ಮೇಲ್ವಿಚಾರಕಿ ಕಮಲ ವಂದಿಸಿದರು.

ವಿದ್ಯುತ್ ಸಂಪರ್ಕ ಒದಗಿಸಲು ಡಿಸಿಗೆ ಮನವಿ

ಬೆಳಗಾವಿ: ಇಲ್ಲಿನ ವಿವಿಧ ಕಾಲೊನಿಗಳಲ್ಲಿ ಬಾಂಡ್ ಆಧಾರದ ಮೇಲೆ ಮನೆ ನಿರ್ಮಿಸಿಕೊಂಡಿರುವ ಬಡ ಕುಟುಂಬಗಳಿಗೆ ತಕ್ಷಣವೇ ವಿದ್ಯುತ್ ಮೀಟರ್ ಒದಗಿಸುವಂತೆ ಆಗ್ರಹಿಸಿ ಜಿಲ್ಲಾಧಿಕಾರಿಗಳ ಮೂಲಕ ರಾಜ್ಯ ಸರ್ಕಾರಕ್ಕೆ ಮನವಿ ಸಲ್ಲಿಸಿದರು.

ಬುಧವಾರ ಬೆಳಗಾವಿ ನಗರದ ವಿವಿಧ ಕಾಲೊನಿಗಳಿಂದ ಆಗಮಿಸಿದ ಸಾರ್ವಜನಿಕರು, ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಜಮಾವಣೆಗೊಂಡು, ಕಳೆದ ಒಂದು ವರ್ಷದಿಂದ ಕರೆಂಟ್ ಇಲ್ಲದೆ ನರಕ ಯಾತನೆ ಅನುಭವಿಸುತ್ತಿರುವುದನ್ನು ಖಂಡಿಸಿ ಆಕ್ರೋಶವನ್ನು ಹೋರ ಹಾಕಿ ಪ್ರತಿಭಟಿಸಿದರು.

ಬೆಳಗಾವಿಯ ಅಮನ್ ನಗರ, ಉಜ್ವಲ್ ನಗರ, ಸಮರ್ಥ ನಗರ, ವೈಭವ ನಗರದ ಜಟಪಟ್ ಕಾಲೊನಿಗಳಲ್ಲಿ ಬಡವರು ವಾಸಿಸುತ್ತಿದ್ದು, ಬಾಂಡ್ ಆಧಾರದ ಮೇಲೆ ಮನೆಗಳನ್ನು ನಿರ್ಮಿಸಿದ್ದಾರೆ. ಆದರೆ, ಕಳೆದ 1 ವರ್ಷದಿಂದ ವಿದ್ಯುತ್ ಮೀಟರ್ ನೀಡದ ಹಿನ್ನೆಲೆ ಜನರು ತೊಂದರೆಗಿಡಾಗಿದ್ದಾರೆ. ಕಳೆದ ಚಳಿಗಾಲದ ಅಧಿವೇಶನದ ವೇಳೆ ಸಚಿವರು ಶಾಸಕರಿಗೆ ಮನವಿ ಸಲ್ಲಿಸಿದರೂ ಯಾವುದೇ ಪ್ರಯೋಜನವಾಗಿಲ್ಲ. ಬಾಂಡ್ ಇದ್ದವರೂ ಬಿ-ಖಾತಾ ಪಡೆದವರಿಗೂ ನಿರ್ಲಕ್ಷ್ಯ ವಹಿಸಲಾಗುತ್ತಿದೆಬೆಂಗಳೂರಿಗೆ ಒಂದು ನೀಡಿ ಬೆಳಗಾವಿಗೆ ಒಂದು ನೀತಿ ಎನ್ನುವಂತಾಗಿದೆ. ಜಿಲ್ಲಾಧಿಕಾರಿಗಳು, ಬಡಜನರಿಗೆ ವಿದ್ಯುತ್ ಮೀಟರ್ ಒದಗಿಸಿಕೊಡಬೇಕು. ಮಳೆಗಾಲದ ಅಧಿವೇಶನದಲ್ಲಿ ಈ ಕುರಿತು ಸರ್ಕಾರ ಘೋಷಣೆ ಮಾಡಬೇಕೆಂದು ಅಂಜುಮನ್ ಸಂಸ್ಥೆಯ ಉತ್ತರ ಕರ್ನಾಟಕ ಪ್ರಮುಖರಾದ ಜಾವೀದ್ ನೇಗಿನಹಾಳ ಅವರು ಆಗ್ರಹಿಸಿದರು.

ಬೆಳಗಾವಿಯ ಅಮನ್ ನಗರ, ಉಜ್ವಲ್ ನಗರ, ಸಮರ್ಥ ನಗರ, ಬೈಭವ ನಗರದ ಜಟಪಟ್ ಕಾಲನಿಗಳಲ್ಲಿ ಬಡವರು ವಾಸಿಸುತ್ತಿದ್ದು, ಕಳೆದ 1 ವರ್ಷದಿಂದ ವಿದ್ಯುತ್ ಮೀಟರ್ ನೀಡದ ಹಿನ್ನೆಲೆ ಜನರು ತೊಂದರೆಗಿಡಾಗಿದ್ದಾರೆ. ಕಳೆದ ಚಳಿಗಾಲದ ಅಧಿವೇಶನದ ವೇಳೆ ಸಚಿವರು ಶಾಸಕರಿಗೆ ಮನವಿ ಸಲ್ಲಿಸಿದರೂ ಯಾವುದೇ ಪ್ರಯೋಜನವಾಗಿಲ್ಲ. ಬಾಂಡ್ ಇದ್ದವರೂ ಬಿ-ಖಾತಾ ಪಡೆದವರಿಗೂ ನಿರ್ಲಕ್ಷ್ಯ ವಹಿಸಲಾಗುತ್ತಿದೆ. ಬೆಂಗಳೂರಿಗೆ ಒಂದು ನೀಡಿ ಬೆಳಗಾವಿಗೆ ಒಂದು ನೀತಿ ಎನ್ನುವಂತಾಗಿದೆ.

ಜಿಲ್ಲಾಧಿಕಾರಿಗಳು, ಬಡಜನರಿಗೆ ವಿದ್ಯುತ್ ಮೀಟರ್ ಒದಗಿಸಿಕೊಡಬೇಕು. ಮಳೆಗಾಲದ ಅಧಿವೇಶನದಲ್ಲಿ ಈ ಕುರಿತು ಸರ್ಕಾರ ಘೋಷಣೆ ಮಾಡಬೇಕೆಂದು ಅಂಜುಮನ್ ಸಂಸ್ಥೆಯ ಉತ್ತರ ಕರ್ನಾಟಕ ಪ್ರಮುಖರಾದ ಜಾವೀದ್ ನೇಗಿನಹಾಳ ಅವರು ಆಗ್ರಹಿಸಿದರು.



ಅಭಿವೃದ್ಧಿ ಕಾಮಗಾರಿಗೆ ಶಾಸಕ ಭೂಮಿಪೂಜೆ

ಯರಗಟ್ಟಿ: ಕ್ಷೇತ್ರಾದ್ಯಂತ ಪ್ರಗತಿಯ ಪಥ ಎಂಬ ಯೋಜನೆಯಲ್ಲಿ 4 ಗ್ರಾಮಗಳ ಎಸ್‌ಟಿ ಕಾಲೋನಿಗಳ ಮೂಲಸೌಕರ್ಯ ಅಭಿವೃದ್ಧಿಗೆ ಒಟ್ಟು 90 ಲಕ್ಷ ವೆಚ್ಚದ ಕಾಮಗಾರಿಗಳಿಗೆ ಶಾಸಕ ವಿಶ್ವಾಸ ವೈದ್ಯ ಭೂಮಿಪೂಜೆ ನೆರವೇರಿಸಿದರು.

ಬಳಿಕ ಮಾತನಾಡಿದ ಅವರು, ಇವತ್ತಿನ ಪ್ರಮುಖ ಪ್ರಗತಿ ನಮ್ಮ ಸವದತ್ತಿ ಯಲ್ಲಮ್ಮ ಮತಕ್ಷೇತ್ರದ ಗ್ರಾಮೀಣ ಭಾಗದ ಪ್ರತಿಯೊಂದು ಸಮಾಜದ ಬಂಧುಗಳಿಗೂ ಸುಸಜ್ಜಿತ ರಸ್ತೆ ಮತ್ತು ಚರಂಡಿ ವ್ಯವಸ್ಥೆಯನ್ನು ಕಲ್ಪಿಸುವುದು ನಮ್ಮ ಪ್ರಮುಖ ಸಂಕಲ್ಪವಾಗಿದೆ. ಈ ನಿಟ್ಟಿನಲ್ಲಿ ಕ್ಷೇತ್ರದ ವಿವಿಧ 4 ಗ್ರಾಮಗಳ ಪರಿಶಿಷ್ಟ ಪಂಗಡ ಕಾಲೋನಿಗಳಲ್ಲಿ ಒಟ್ಟು 90 ಲಕ್ಷ ಅಂದಾಜು ಮೊತ್ತದ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಅಧಿಕೃತವಾಗಿ ಭೂಮಿಪೂಜೆ ನೆರವೇರಿಸಿ ಚಾಲನೆ ನೀಡಲಾಯಿತು.

ಆಲದಕಟ್ಟಿ ಕೆ.ಎಂ., ಯರಗಣವಿ, ಮಾಡಮಗೇರಿ, ತಾವಲಗೇರಿ ಗ್ರಾಮದ ಎಸ್‌ಟಿ ಕಾಲೋನಿಯಲ್ಲಿ ಸಿಸಿ ರಸ್ತೆ ನಿರ್ಮಾಣ ಕಾಮಗಾರಿ ಗುಣಮಟ್ಟದೊಂದಿಗೆ ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸಿ ಸಾರ್ವಜನಿಕರ ಬಳಕೆಗೆ ಮುಕ್ತಗೊಳಿಸಲು ಅಧಿಕಾರಿಗಳಿಗೆ ಮತ್ತು ಗುತ್ತಿಗೆದಾರರಿಗೆ ಸೂಚನೆ ನೀಡಿದರು.

ಎಪಿಎಂಸಿ ಅಧ್ಯಕ್ಷ ನೀಲಕಂಠ ಸಿದ್ದಬಸನ್ನವರ, ಕೆಎಂಎಫ್ ನಿರ್ದೇಶಕ ಶಂಕರ ಇಟ್ನಾಳ, ಪ್ರಕಾಶ ವಾಲಿ, ಮಲಿಕಸಾಬ ಬಾಗವಾನ, ಬಂಗಾರೆಪ್ಪ ಹರಳಿ, ಮಲಕಯ್ಯ ಹಿರೇಮಠ, ಸುರೇಶ ಭಜಂತ್ರಿ, ಗ್ರಾಪಂ ಸದಸ್ಯ ಅಶೋಕ ಚಿಕ್ಕೊಪ್ಪ, ಪಿಕೆಪಿಎಸ್ ಅಧ್ಯಕ್ಷ ಶಿವಯೋಗಿ ಹೊನ್ನಾಳ, ಸೋಮಲಿಂಗ ಚವಡಪ್ಪನವರ, ಶಿವಪ್ಪ ಗುರನಗೌಡ್ರ, ಗುರುನಾಥ ಬಿರಾಜನವರ, ಶಿವಾಯ್ಯ ಸತ್ಯನಾಯ್ಕರ, ಬಾಬು ದಾಗನಾಯ್ಕರ, ಬಸವರಾಜ ಕುರಗುಂದ, ವಿಠ್ಠಲ ಹಲಗಲಿ, ಶಿವಪ್ಪ ನಂಜಣ್ಣವರ, ಶಿದ್ರಾಮ ಪವಾಡೆಪ್ಪನವರ, ಬಸಲಿಂಗಪ್ಪ ಚಿಕ್ಕೋಪ್ಪ, ಪ್ರಕಾಶ ತಳವಾರ, ಮಲ್ಲಿಕಾರ್ಜುನ ಮಾದರ, ಗಿಡ್ಡಪ್ಪ ಖಂಡ್ರಿ, ಪರಮೇಶ ಚತ್ರಕೋಟಿ, ಪತೆಪ್ಪ ಬಾಗಿಲದ, ಸೋಮನಿಂಗ ಬಾಗಿಲದ, ಭೀಮಪ್ಪ ಬಾಗಿಲದ, ಹೊಳೆಪ್ಪ ಸಾಂಗ್ಲಿ, ಅಣ್ಣಪ್ಪ ಹಾಲಗಿ, ದ್ಯಾಮಣ್ಣಾ ಬಂಡಿವಡ್ಡರ, ಸಿದ್ದಪ್ಪ ಬುರ್ಲಿ, ಬರಣ್ಣಾ ಕುರಿ, ಭರಮಪ್ಪ ಅಕ್ಕಿ, ಬಾಳೇಶ ಅಜ್ಜನಕಟ್ಟಿ, ಅಡಿವೆಪ್ಪ ಪಾಟೀಲ, ಯಲ್ಲಪ್ಪ ನಾವಿ, ನಾಗಪ್ಪ ಹರಿಜ, ಶಂಕರಗೌಡ ಪಾಟೀಲ, ಪಾಂಡು ಹೊಸಟ್ಟಿ, ಭೀರಪ್ಪ ಗುಣಿ ಗ್ರಾಮಗಳ ಹಿರಿಯರು, ಸ್ಥಳೀಯ ಜನಪ್ರತಿನಿಧಿಗಳು, ವಿವಿಧ ಇಲಾಖೆಯ ಅಧಿಕಾರಿಗಳು ಹಾಗೂ ಪಕ್ಷದ ಆತ್ಮೀಯ ಮುಖಂಡರು ಇದ್ದರು.



ಠಾಣೆಗೆ ಬರುವ ಜನತೆ ಜೊತೆ ಸೌಜನ್ಯದಿಂದ ವರ್ತಿಸಿ: ಗುಡಗನಟ್ಟಿ

ಚನ್ನಮ್ಮನ ಕಿತ್ತೂರು: ಪೊಲೀಸ್ ಠಾಣೆಗೆ ಯಾರೇ ಬಂದರೂ ಅವರ ಜೊತೆಗೆ ಸೌಜನ್ಯದಿಂದ ವರ್ತಿಸಿ ಅವರ ಸಮಸ್ಯೆ ಆಲಿಸುವದು ಮುಖ್ಯವಾಗಿದೆ ಎಂದು ಪಿಎಸ್‌ಐ ಶಿವಾನಂದ ಗುಡಗನಟ್ಟಿ ತಮ್ಮ ಸಿಬ್ಬಂದಿಗೆ ಹೇಳಿದರು.

ಸ್ಥಳೀಯ ರಾಜಗುರು ಸಂಸ್ಥಾನ ಕಲ್ಮಠದಲ್ಲಿ ಕಿತ್ತೂರು ಪೊಲೀಸ್ ಠಾಣೆಯಿಂದ ವರ್ಗಾವಣೆಗೊಂಡ ಪಿಎಸ್‌ಐ ಪ್ರವೀಣ ಗಂಗೋಳ ಬೀಳ್ಕೊಡುಗೆ ಹಾಗೂ ನೂತನವಾಗಿ ಆಗಮಿಸಿದ ಭರತ ಎಸ್. ಅವರನ್ನು ಸ್ವಾಗತಿಸುವ ಕಾರ್ಯಕ್ರಮದಲ್ಲಿ ಮಾತನಾಡಿ, ವರ್ಗಾವಣೆಗೊಂಡ ಗಂಗೋಳ ಎಲ್ಲರೊಂದಿಗೆ ಉತ್ತಮ ಕೆಲಸ ನಿರ್ವಹಿಸಿದವರು. ಕಾನೂನು ಪಾಲನೆಗೆ ಎಲ್ಲರೂ ಸಹಕಾರ ನೀಡುತ್ತಿದ್ದಾರೆ. ಮುಂದೆಯು ನಿಮ್ಮ ಸಹಕಾರ ಹೀಗೆ ಮುಂದುವರೆಯಲಿ ಎಂದರು.



ಪಿಎಸ್‌ಐ ಪ್ರವೀಣ ಬೀಳ್ಕೊಡುಗೆ

ಕಲ್ಮಠದ ಮಡಿವಾಳ ರಾಜಯೋಗಿಂದ್ರ ಸ್ವಾಮೀಜಿ ಮಾತನಾಡಿ, ಪೋಲಿಸರು ಮತ್ತು ಸಾರ್ವಜನಿಕರ ಸಂಭಂದ ಉತ್ತಮವಾಗಿದ್ದು, ಇಲ್ಲಿನ ಅಧಿಕಾರಿಗಳು ಉತ್ತಮ ಕಾರ್ಯ ನಿರ್ವಹಿಸಿ ಕಾನೂನು ಪಾಲನೆ ಮಾಡುತ್ತಿದ್ದಾರೆ. ಇದು ಶಾಂತಿಯ ನಾಡಾಗಿದ್ದು ವರ್ಗಾವಣೆ ಗೊಂಡ ಗಂಗೋಳ ಇವರು ಇನ್ನೂ ಹೆಚ್ಚಿನ ಹುದ್ದೆ ಪಡೆದು ಮತ್ತೆ ಕಿತ್ತೂರಿಗೆ ಸೇವೆ ಸಲ್ಲಿಸುವಂತಾಗಲಿ ಎಂದರು.

ನೂತನ ಪಿಎಸ್‌ಐ ಭರತ ಎಸ್, ದೊಡವಾಡ ಪಿಎಸ್‌ಐ ಎಚ್. ಕೆ. ಪಾಟೀಲ, ಕೆ.ಸಮಾಜ ಸೇವಕ ಹಬೀಬ ಶಿಲೇದಾರ, ಕೆ ಎಂ ಎಫ್ ನಿರ್ದೇಶಕ ಡಾ. ಬಸವರಾಜ ಪರವಣ್ಣವರ, ಬಿಷ್ಟಪ್ಪ ಶಿಂದೆ, ಚಂದ್ರಗೌಡ ಪಾಟೀಲ, ಅನೀಲ ಎಮ್ಮಿ ಮುಂತಾದವರು ಮಾತನಾಡಿದರು. ನಾಡಿನ ವಿವಿಧ ಸಂಘಟನೆ ಗಳವರು ಮುಖಂಡರು ನೂತನ ಪಿಎಸ್‌ಐ ಭರತ ಎಸ್ ಅವರನ್ನು ಸನ್ಮಾನಿಸಿ ಸ್ವಾಗತಿಸಿಕೊಂಡರು. ಪೊಲೀಸ್ ಸಿಬ್ಬಂದಗಳು, ಕಿತ್ತೂರು ಹಾಗೂ ಸುತ್ತಮುತ್ತಲಿನ ಗ್ರಾಮಗಳ ಸಾರ್ವಜನಿಕರು ಉಪಸ್ಥಿತರಿದ್ದರು.ಶಿಕ್ಷಕ ವಿವೇಕ ಕುರ ಗುಂದ ನಿರೂಪಿ ಸಿದರು. ಶಾಂತಿನಾಥ ಪಾಟೀಲ ಸ್ವಾಗತಿಸಿದರು. ಮಡಿವಾಳಪ್ಪ ಕೋಟಿ ವಚನ ಆಡಿದರು.

ಬಿತ್ತನೆ ಬೀಜ ವಿತರಣೆಗೆ ಶಾಸಕ ಮಹಾಂತೇಶ ಕೌಜಲಗಿ ಚಾಲನೆ

ಬೈಲಹೊಂಗಲ: ತಾಲೂಕಿನಲ್ಲಿ ಮಳೆಆರಂಭವಾಗಿದ್ದು, ಮುಂಗಾರು ಬಿತ್ತನೆಗೆ ಕೃಷಿ ಇಲಾಖೆ ಅಧಿಕಾರಿಗಳ ಮಾರ್ಗದರ್ಶನದಡಿ ರೈತರು ಬಿತ್ತನೆ ಕಾರ್ಯ ಆರಂಭಿಸಬೇಕೆಂದು ಶಾಸಕ ಮಹಾಂತೇಶ ಕೌಜಲಗಿ ಹೇಳಿದರು.

ನಗರದ ಟಿಎಪಿಸಿಎಂಎಸ್ ಆವರಣದಲ್ಲಿ ಬುಧವಾರ ತಾಲ್ಲೂಕಿನ ರೈತರಿಗೆ ಕೃಷಿ ಇಲಾಖೆಯಿಂದ 2026-27ನೇ ಸಾಲಿನ ಮುಂಗಾರು ಹಂಗಾಮಿನ ಬೀಜ ವಿತರಣೆ ಕಾರ್ಯಕ್ರಮಕ್ಕೆ ಚಾಲನೆ ಅವರು ಮಾತನಾಡಿದರು.

ಕೃಷಿ ಇಲಾಖೆಯಿಂದ ಬೈಲಹೊಂಗಲ ಹೋಬಳಿಯಲ್ಲಿ ವಿವಿಧ ಕೇಂದ್ರ ಬೀಜ ವಿತರಣಾ ಕೇಂದ್ರಗಳನ್ನು ತೆರೆಯಲಾಗಿದ್ದು, ಅವಶ್ಯಕತೆಗೆ ಅನುಗುಣವಾಗಿ ಬೀಜ ದಾಸ್ತಾನು ಇದ್ದು, ಯಾವುದೇ ಕೊರತೆ ಇರುವದಿಲ್ಲ. ರೈತರು ಇಲಾಖೆ ಕೋರಿದ ದಾಖಲಾತಿಗಳನ್ನು ಸಲ್ಲಿಸಿ ವಿತರಣಾ ಸಿಬ್ಬಂದಿಗಳೊಂದಿಗೆ ಸಹಕರಿಸಿ ಶಾಂತಿಯುತವಾಗಿ ಬಂದು ಬೀಜಗಳನ್ನು ಪಡೆದು ಸದುಪಯೋಗ ಪಡೆಯಬೇಕು ಎಂದರು.



ಮುಖ್ಯ ಅತಿಥಿ, ಜಂಟಿ ಕೃಷಿ ನಿರ್ದೇಶಕ ಹೆಚ್.ಡಿ. ಕೊಳೇಕರ, ತಹಶೀಲ್ದಾರ್ ಎಚ್.ಎನ್.ಶಿರಹಟ್ಟಿ, ಉಪ ಕೃಷಿ ನಿರ್ದೇಶಕ ಸಲೀಮ ಸಂಗತ್ರಾಸ, ಸಹಾಯಕ ಕೃಷಿ ನಿರ್ದೇಶಕ ಬಸವರಾಜ ದಳವಾಯಿ ಮಾತನಾಡಿದರು.

ಗ್ಯಾರೆಂಟಿ ಅನುಷ್ಠಾನ ಕಮಿಟಿ ಅಧ್ಯಕ್ಷ ಮಹಾಂತೇಶ ಕಳ್ಳಿಬುಡ್ಡಿ, ಟಿಎಪಿಸಿಎಂಎಸ್ ಈಶ್ವರ ಉಳ್ಳಾಗಡಿ, ಪುರಸಭೆ ಮಾಜಿ ಅಧ್ಯಕ್ಷ ಬಸವರಾಜ ಜನ್ಮಟ್ಟಿ, ಕೃಷಿ ಸಮಾಜ ಜಿಲ್ಲಾ ಪ್ರತಿನಿಧಿ ನಾಗನಗೌಡ ಭರಮಗೌಡರ, ಖಜಾಂಚಿ ಶಿವಪುತ್ರಪ್ಪ ತಟವಟಿ, ಸದಸ್ಯರಾದ ಶರಣಬಸಪ್ಪ ಮೆಟ್ಟಗುಡ, ಬಸವರಾಜ ಶಿಂತ್ರಿ, ಅನೇಕರು ಇದ್ದರು. ಎಂ.ಎಸ್.ಬಿಸಗುಪ್ಪಿ ನಿರೂಪಿಸಿದರು. ಯಮನಪ್ಪ ಮಾದಿಗರ ವಂದಿಸಿದರು.

ನ್ಯಾಯಬೆಲೆ ಅಂಗಡಿಯಲ್ಲಿ ಸರ್ವರ್ ಸಮಸ್ಯೆ: ಜನರ ಪರದಾಟ

▸ **ಎಸ್.ಆರ್.ಗುರುಬಸಣ್ಣವರ**

ಸುರೇಬಾನ: ಮನಿಹಾಳ ಪಿಕೆಪಿಎಸ್ ಸೊಸೈಟಿಯಲ್ಲಿ ಸರ್ವರ್ ಸಮಸ್ಯೆ ಉಂಟಾದ ಹಿನ್ನೆಲೆಯಲ್ಲಿ ನ್ಯಾಯಬೆಲೆ ಅಂಗಡಿಯಲ್ಲಿ ಪಡಿತರ ವಿತರಣೆ ಕಾರ್ಯ ಅಸ್ತವ್ಯಸ್ತಗೊಂಡಿದೆ.

ಪಡಿತರ ಪಡೆಯಲು ಬಂದ ಸಾರ್ವಜನಿಕರು ಗಂಟೆಗಟ್ಟಲೆ ಕಾಯುವ ಪರಿಸ್ಥಿತಿ ನಿರ್ಮಾಣವಾಗಿದ್ದು, ಮಹಿಳೆಯರು, ವೃದ್ಧರು, ನೇಕಾರರು ಹಾಗೂ ರೈತರು ಪರದಾಡುವಂತಾಗಿದೆ.

ದಿಗಂತ ವಿಶೇಷ

ಸರ್ವರ್ ಸಂಪರ್ಕ ಕಡಿತ, ಬೆರಳಚ್ಚು ಯಂತ್ರ ಕಾರ್ಯನಿರ್ವಹಿಸದಿರುವುದು. ಓಟಿಪಿ ಸಮಸ್ಯೆಯಿಂದ ಪಡಿತರ ವಿತರಣೆ ವಿಳಂಬವಾಗುತ್ತಿದೆ ಎಂದು ಸಾರ್ವಜನಿಕರು ಆರೋಪಿಸಿದ್ದಾರೆ. ಬೆಳಗ್ಗೆಯಿಂದಲೇ ಸರದಿಯಲ್ಲಿ ನಿಂತರೂ ಪಡಿತರ ಸಿಗದೆ ಜನರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ತಿಂಗಳು ಮುಗಿಯುತ್ತಾ ಬಂದರು ಪಡಿತರ ದೊರೆಯುತ್ತಿಲ್ಲ, ಬರೀ ಸರ್ವರ ಬ್ಯೂಜಿ ಎಂದು ಸೊಸೈಟಿ ಸಿಬ್ಬಂದಿ ಹೇಳುತ್ತಿರುವುದನ್ನು ಕೇಳಿ ಕೇಳಿ ಬೇಜಾರಾಗಿದೆ ಎಂದು ಗ್ರಾಹಕರು ತಮ್ಮ ಅಳಲನ್ನು ತೋಡಿಕೊಳ್ಳುತ್ತಿದ್ದಾರೆ. ಇಂತಹ ಸಮಸ್ಯೆ ಬಗೆಹರಿಸಲು ಅಧಿಕಾರಿಗಳು ಶಾಶ್ವತ ಪರಿಹಾರ ಕಲ್ಪಿಸಬೇಕು ಎಂದು ಗ್ರಾಮಸ್ಥರು ಆಗ್ರಹಿಸಿದ್ದಾರೆ.



> ಮೇ ತಿಂಗಳಿನಿಂದ ಸರ್ವರ್ ಸಮಸ್ಯೆ ಆಗುತ್ತಿದೆ. ಇದರ ಬಗ್ಗೆ ಆಹಾರ ಇಲಾಖೆ ಅಧಿಕಾರಿಗಳ ಗಮನಕ್ಕೆ ತಂದಿದ್ದೇವೆ. ಇಂದು ನಾಳೆ ಎನ್ನುತ್ತಾ ಬಂದಿದ್ದಾರೆ. ಇದರಿಂದ ನಮ್ಮ ಗ್ರಾಹಕರಿಗೆ ಬಹಳ ತೊಂದರೆ ಆಗುತ್ತಿದೆ.
>
> ■ **ಸುನೀಲ ಮೇಟಿ, ಮನಿಹಾಳ ಪಿಕೆಪಿಎಸ್ ಸೊಸೈಟಿ ಕಾರ್ಯದರ್ಶಿ.**

ತಾಂತ್ರಿಕ ದೋಷದಿಂದ ಸಾರ್ವಜನಿಕರಿಗೆ ಆಗುತ್ತಿರುವ ತೊಂದರೆಯನ್ನು ಗಮನಿಸಿ ಆಹಾರ ಇಲಾಖೆ ಅಧಿಕಾರಿಗಳು ತಕ್ಷಣ ಕ್ರಮ ಕೈಗೊಳ್ಳಬೇಕೆಂಬ ಒತ್ತಾಯಕೇಳಿಬಂದಿದೆ. ಸಾವಿರಕ್ಕೂ ಅಧಿಕ ಗ್ರಾಹಕರನ್ನು ಹೊಂದಿದ ಸೊಸೈಟಿ, ದಿನಕ್ಕೆ ಐವತ್ತು ಗ್ರಾಹಕರು ಪಡಿತರ ಪಡೆಯಲು ಹೆಣಗಾಡಬೇಕಾಗಿದೆ.

> ಈಗ ಎರಡು ಬಾರಿ ಬಯೋ ಮ್ಯಾಟ್ರಿಕ್ ತಗೆದುಕೊಳ್ಳುವುದರಿಂದ ರಾಜ್ಯಾದ್ಯಂತ ಈ ಸಮಸ್ಯೆ ಇದೆ. ನಾಳೆಯಿಂದ ಸರ್ವರ್ ಸಮಸ್ಯೆ ಸರಿಯಾಗುತ್ತಿದೆ.
>
> ■ **ಸಂಜೀವ ಹಮ್ಮನವರ, ರಾಮದುರ್ಗ ಆಹಾರ ನಿರೀಕ್ಷಕ**

> ಈ ಬಾರಿ ಕೇಂದ್ರ ಸರ್ಕಾರ ಎರಡು ತಿಂಗಳುಗಳ ಆಹಾರ ಧಾನ್ಯವನ್ನು ಪೂರೈಸುತ್ತಿದೆ. ರಾಜ್ಯ ಸರ್ಕಾರದ ಅನ್ನಭಾಗ್ಯದ ಪಡಿತರ ಈ ತಿಂಗಳು ನೀಡಿರುವುದಿಲ್ಲ. ಅದಕ್ಕೆ ಈಗ ಎರಡು ಬಾರಿ ಬಯ್ಯೊಮೆಟ್ರಿಕ್ ನೀಡಬೇಕಾಗುತ್ತಿದೆ. ನಮ್ಮ ಜನಕ್ಕೆ ನಿತ್ಯ ಕೂಲಿ-ನಾಲಿ ಮಾಡಿಕೊಂಡು ಜೀವನ ನಡೆಸುವುದು ಕಷ್ಟಸಾಧ್ಯವಾಗುತ್ತದೆ. ಕೂಡಲೇ ಸರ್ವರ್ ಸಮಸ್ಯೆ ಬಗೆಹರಿಸಬೇಕು.
>
> ■ **ಗೋಪಾಲ ಪಾತಾಳಿ, ಮನಿಹಾಳ ಪಿಕೆಪಿಎಸ್ ಸೊಸೈಟಿ ನಿರ್ದೇಶಕ**

ಕಿತ್ತೂರು ಕರ್ನಾಟಕ ರೈತ ಜಾಗೃತಿ ಸಂಘಕ್ಕೆ ನೇಮಕ

ಚನ್ನಮ್ಮನ ಕಿತ್ತೂರು: ಕಿತ್ತೂರು ಕರ್ನಾಟಕ ರೈತ ಜಾಗೃತಿ ಸಂಘಕ್ಕೆ ಬೆಳಗಾವಿ ಜಿಲ್ಲಾ ಅಲ್ಪಸಂಖ್ಯಾತ ಘಟಕದ ಅಧ್ಯಕ್ಷರನ್ನಾಗಿ ಅಬ್ದುಲ್ ರಜಾಕ್ ಗಡಕರಿ ಹಾಗೂ ಕಿತ್ತೂರ ತಾಲೂಕಾ ಅಲ್ಪಸಂಖ್ಯಾತ ಘಟಕದ ತಾಲೂಕಾಧ್ಯಕ್ಷರನ್ನಾಗಿ ಕಾಶೀಮ ನೇಸರಗಿ ನೇಮಿಸಿ ನೇಮಕಾತಿ ಆದೇಶ ಪತ್ರವನ್ನು ನೀಡಲಾಯಿತು. ಪಟ್ಟಣದಲ್ಲಿ ನಡೆದ ಸಭೆಯಲ್ಲಿ ಕಿತ್ತೂರು ಕರ್ನಾಟಕ ರೈತ ಜಾಗೃತಿ ಸಂಘದ ರಾಜ್ಯಾಧ್ಯಕ್ಷ ಎಂ.ಎಫ್.ಜಕಾತಿ, ಪ್ರಧಾನ ಕಾರ್ಯದರ್ಶಿ ಅಪ್ಪೇಶ ದಳವಾಯಿ, ಮಹಿಳಾ ಜಿಲ್ಲಾಧ್ಯಕ್ಷೆ ನಾಗರತ್ನಾ ಪಾಟೀಲ, ಎಂ.ಬಿ.ವರಗನ್ನವರ, ಜಿ.ಎಸ್.ಹಿರೇಮಠ, ಶಿವಪ್ಪ ಚಿನ್ನನ್ನವರ ಮುಂತಾದವರು ಇದ್ದರು.



ಮಬನೂರಿನಲ್ಲಿ ಬಿಜೆಪಿ ಸಂಘಟನಾತ್ಮಕ ಸಭೆ



ಯರಗಟ್ಟಿ: ಸಮೀಪದ ಮಬನೂರ ಗ್ರಾಮದ ಬಿಜೆಪಿ ಮುಖಂಡ ಸಿದ್ದಪ್ಪ ನರಿ ಅವರ ನಿವಾಸದಲ್ಲಿ ಜರುಗಿದ ಭಾರತೀಯ ಜನತಾ ಪಾರ್ಟಿ ಸಂಘಟನಾತ್ಮಕ ಸಭೆಯಲ್ಲಿ ಬಿಜೆಪಿ ಮಂಡಳ ಅಧ್ಯಕ್ಷ ವಿರೂಪಾಕ್ಷಣ್ಣಾ ಮಾಮನಿಯವರು ಪಾಲ್ಗೊಂಡು, ಸಭೆಯನ್ನು ಉದ್ದೇಶಿಸಿ ಮಾತನಾಡಿದರು.

ಪಕ್ಷದ ಸಂಘಟನೆ ಬಲವರ್ಧನೆ, ಸದಸ್ಯತ್ವ ಅಭಿಯಾನ, ಬೂತ್ ಮಟ್ಟದ ಕಾರ್ಯಕರ್ತರ ಸಕ್ರಿಯ ಭಾಗವಹಿಸುವಿಕೆ ಹಾಗೂ ಮುಂಬರುವ ದಿನಗಳಲ್ಲಿ ಪಕ್ಷವನ್ನು ಇನ್ನಷ್ಟು ಸದೃಢಗೊಳಿಸುವ ಕುರಿತು ಚರ್ಚಿಸಿದರು.

ಪಕ್ಷದ ತತ್ವ, ಸಿದ್ಧಾಂತ ಜನರಿಗೆ ತಲುಪಿಸಿ ಸಂಘಟನೆ ಮತ್ತಷ್ಟು ಬಲಿಷ್ಠಗೊಳಿಸಲು ಕಾರ್ಯಕರ್ತರಿಗೆ ಹೇಳಿದರು.

ಈ ವೇಳೆ ಮಾಜಿ ಪುರಸಭೆ ಅಧ್ಯಕ್ಷ ಶೇಖರ ಕಾರದಗಿ, ಮಾಜಿ ಎಪಿಎಂಸಿ ಅಧ್ಯಕ್ಷ ಪ್ರಕಾಶ ನರಿ, ಮಾರುತಿ ನೇಗಿನಹಾಳ, ವಿಠ್ಠಲ ನರಿ, ಪುಂಡಲೀಕ ಚುಂಚನೂರ, ಶಿವಾನಂದ ನರಿ, ಜಗದೀಶ ಕೌಜಗೇರಿ, ಮಲ್ಲೇಶಪ್ಪ ಕಲಕುಟ್ರಿ, ಡಾ.ರವಿ ಹನಸಿ, ಮಹಾದೇವ ಮುರಗೋಡ, ಬಸನಗೌಡ ಪಾಟೀಲ, ಮಂಜು ನರಿ, ಹಣಮಂತ ಹೊನಕುಪ್ಪಿ, ದೊಡ್ಡಕಲ್ಲೋಲೆಪ್ಪ ನರಿ, ಹಸನಸಾಬ ದಂಡಿನ, ಶ್ರೇಯಸ್ ಮಾಮನಿ, ಪುರಸಭೆ ಸದಸ್ಯರಾದ ಸುಭಾಸ ಗಿದ್ದಿಗೌಡ್ರ, ಶ್ರೀಕಾಂತ ಮಲ್ಲಗೌಡ್ರ, ರಮೇಶ ಗಂಗಣ್ಣವರ, ಪರಶುರಾಮ ಘಂಟಿ, ಪುಂಡಲೀಕ ಮಾದರ, ಗದಿಗೆಪ್ಪ ಹೊನಕುಪ್ಪಿ, ಸಿದ್ದು ಮುರನಾಳ, ಬಸವರಾಜ ಇಂಚಲ, ಸಂತೋಷ ಹೊಂಗಲ, ಬಸವರಾಜ ಶಿಗ್ಗಾಂವಿ, ವಿನೋದ ಪಡಶ್ಯಾವಂಗಿ, ಆನಂದ ಕಾಮಣ್ಣವರ, ಚೇತನ ಚಿಕ್ಕುಂಬಿ, ಸಂಜಯ ಉಡಕೇರಿ ಸೇರಿದಂತೆ ಪಕ್ಷದ ಮುಖಂಡರು, ಕಾರ್ಯಕರ್ತರು ಹಾಗೂ ಗ್ರಾಮಸ್ಥರು, ಯುವಕರು ಉಪಸ್ಥಿತರಿದ್ದರು.



ಬೆಳಗಾವಿ: ಜಿಲ್ಲಾ ಕಾಂಗ್ರೆಸ್ ಸಮಿತಿ ವತಿಯಿಂದ ಜವಾಹರ್‌ಲಾಲ್ ನೆಹರು ಅವರ ಪುಣ್ಯ ಸ್ಮರಣೆ ಜರುಗಿತು. ಜಿ.ಕಾಂಗ್ರೆಸ್ ಅಧ್ಯಕ್ಷ ವಿನಯ ನಾವಲಗಟ್ಟಿ, ರಾಜಾ ಸಲೀಂ ಕಾಸಿಂ, ಮೋಹನ ರೆಡ್ಡಿ, ಬಸವರಾಜ ಶಿಗ್ಗಾವಿ, ಪ್ರದೀಪ, ಅಶ್ವಿನಿ ಬೆಳವಡಿ, ರೋಹಿಣಿ ಬಾಬಸೆಟ, ಕಾರ್ತಿಕ್ ಪಾಟೀಲ, ಇಮ್ರಾನ್ ತಪಕೀರ, ವಿಜಯ ಗೆಜ್ಜಿ, ಜಗದೀಶ ಸಾವಂತ, ಸುಭಾಷ ಪೂಜಾರಿ, ಸಂತೋಷ ಹಂಜಿ, ಬಾಳೇಶ ದಾಸನಟ್ಟಿ, ಮಂಜುನಾಥ ತಡಸಲುರ, ಮಂಜುನಾಥ ಕಾಂಬಳೆ, ಮುಂತಾದ ಮುಖಂಡರು ಇದ್ದರು.

ರಾಜ್ಯಸಭೆಗೆ ಡಾ.ಅಂಜಲಿ ಹೆಸರು ಅಂತಿಮಗೊಳಿಸಲು ಆಗ್ರಹ

ಖಾನಾಪುರ: ರಾಜ್ಯಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಹಿರಿಯ ನಾಯಕಿ, ಮಾಜಿ ಶಾಸಕಿ ಹಾಗೂ ಎಐಸಿಸಿ ಕಾರ್ಯದರ್ಶಿ ಡಾ.ಅಂಜಲಿ ನಿಂಬಾಳಕರ ಹೆಸರನ್ನು ಅಂತಿಮಗೊಳಿಸುವ ಮೂಲಕ ಉತ್ತರ ಕರ್ನಾಟಕಕ್ಕೆ ಮೊದಲ ಆದ್ಯತೆ ನೀಡುವಂತೆ ಕಾಂಗ್ರೆಸ್ ಪಕ್ಷದ ವರಿಷ್ಠರನ್ನು ಆಗ್ರಹಿಸುತ್ತಿದ್ದೇವೆ ಎಂದು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಹಾಂತೇಶ



ರಾಹೂತ ಹೇಳಿದರು. ಪಟ್ಟಣದಲ್ಲಿ ಬುಧವಾರ ಸುದ್ದಿಗಾರರಿಗೆ ಈ ವಿಷಯ ತಿಳಿಸಿದ ಅವರು, ಡಾ.ಅಂಜಲಿ 2018–2023ರ ಅವಧಿಯಲ್ಲಿ ಶಾಸಕರಾಗಿ ಬಹುಮತದಿಂದ ಆಯ್ಕೆಯಾಗಿ ತಾಲೂಕಿನ ಇತಿಹಾಸದಲ್ಲಿ ಕಾಂಗ್ರೆಸ್ ಪಕ್ಷ ಮೊದಲ ಸಲ ಅಧಿಕಾರಕ್ಕೆ ತಂದು ವಿಶೇಷ ಸಾಧನೆ ಮಾಡಿದ್ದಾರೆ. ಶಾಸಕರಾಗಿದ್ದ ಅವಧಿಯಲ್ಲಿ ತಾಲೂಕಿನ ಅಭಿವೃದ್ಧಿಗೆ ಶ್ರಮಿಸಿದ್ದಾರೆ. ರಾಜ್ಯ ಮಟ್ಟದಲ್ಲಿ ಬಾಲಭವನ ಅಧ್ಯಕ್ಷೆಯಾಗಿಯೂ ಗುರುತಿಸಿಕೊಂಡು ಉತ್ತಮವಾಗಿ ಕಾಯನಿರ್ವಹಿಸಿದ್ದಾರೆ. ಡಾ.ಅಂಜಲಿ ಉತ್ತಮ ಸಂಘಟನಾ ಚತುರರು, ವಿದ್ಯಾವಂತರು, ರಾಜಕೀಯ ಕುಟುಂಬದ ಹಿನ್ನೆಲೆ ಉಳ್ಳವರು, ಬೆಳಗಾವಿ ಹಾಗೂ ಉತ್ತರ ಕನ್ನಡ ಜಿಲ್ಲೆಗಳ ಜನರೊಂದಿಗೆ ಉತ್ತಮ ಒಡನಾಟ ಹೊಂದಿದವರು, ಉತ್ತಮ ವಾಗ್ಮಿಗಳು ಮತ್ತು ಐದು ಭಾಷೆಗಳನ್ನು ಬಲ್ಲವರಾಗಿದ್ದಾರೆ. ಇವರಿಗೆ ಆದ್ಯತೆ ನೀಡುವ ಮೂಲಕ ಓರ್ವ ಮಹಿಳಾ ಅಭ್ಯರ್ಥಿಗೆ, ಮರಾಠಾ ಸಮುದಾಯಕ್ಕೆ ಮತ್ತು ಹಿಂದುಳಿದ ಕ್ಷೇತ್ರ ಎಂಬ ಹಣೆಪಟ್ಟಿ ಹೊತ್ತಿರುವ ಖಾನಾಪುರಕ್ಕೆ ನ್ಯಾಯ ಒದಗಿಸಿಕೊಡಬೇಕು ಎಂದು ಪಕ್ಷದ ಮುಖಂಡರನ್ನು ಕೋರುತ್ತಿದ್ದೇವೆ ಎಂದು ವಿವರಿಸಿದರು.



ರಾಯಬಾಗ: ವಿಧಾನ ಪರಿಷತ್ ಸದಸ್ಯ ಲಖನ್ ಜಾರಕಿಹೊಳಿ ಇತ್ತೀಚೆಗೆ ಚಿಂಚಲಿ ಶ್ರೀ ಮಾಯಕ್ಕಾದೇವಿ ದರ್ಶನ ಪಡೆದು ದೇವಸ್ಥಾನಕ್ಕೆ 10 ಲಕ್ಷ ರೂ.ಗಳನ್ನು ದೇವಸ್ಥಾನದ ಅಭಿವೃದ್ಧಿಗಾಗಿ ಮಂಜೂರು ಮಾಡುವುದಾಗಿ ಹೇಳಿದರು. ಈ ಸಮಯದಲ್ಲಿ ಬಿಮ್ಸ್ ನಿರ್ದೇಶಕ ರಾಜು ಶಿರಗಾಂವೆ ಡಿಸಿಸಿ ಬ್ಯಾಂಕ್ ನಿರ್ದೇಶಕ ಅಪ್ಪಾಸಾಹೇಬ್ ಕುಲಗುಡೆ ಮತ್ತು ಆಪ್ತರಾದ ಸದಾಶಿವ ಕಲಾಲ್ ಉಪಸ್ಥಿತರಿದ್ದರು.

ಕಿರುಸುದ್ದಿ

ಅಗ್ನಿವೀರ ಸಾಮಾನ್ಯ ಪ್ರವೇಶ ಪರೀಕ್ಷೆ

ಬೆಳಗಾವಿ: ಭಾರತೀಯ ಸೇನಾ ನೇಮಕಾತಿಯ (ಅಗ್ನಿಪಥ್) 2026ನೇ ಸಾಲಿನ ಸಾಮಾನ್ಯ ಪ್ರವೇಶ ಪರೀಕ್ಷೆಗಳು ಆನ್‌ಲೈನ್ ಮೂಲಕ ಜೂನ್ 1 ರಿಂದ ಜೂನ್ 12 ರವರೆಗೆ ಜರುಗಲಿವೆ.

ಪರೀಕ್ಷೆಗೆ ನೋಂದಾಯಿಸಿಕೊಂಡಿರುವ ಅಭ್ಯರ್ಥಿಗಳು ತಮ್ಮ ಪ್ರವೇಶ ಪತ್ರಗಳನ್ನು (Admit Card) ಜಾಯಿನ್ ಇಂಡಿಯನ್ ಆರ್ಮಿ ಅಧಿಕೃತ ವೆಬ್‌ಸೈನಿಂದ (www.joinindianarmy.nic.in) ಡೌನ್ಲೋಡ್ ಮಾಡಿಕೊಳ್ಳಬಹುದು. ಅಭ್ಯರ್ಥಿಗಳು ಪರೀಕ್ಷಾ ಕೇಂದ್ರಕ್ಕೆ ಪ್ರವೇಶ ಪತ್ರದೊಂದಿಗೆ ಮಾನ್ಯತೆ ಪಡೆದ ಗುರುತಿನ ಚೀಟಿಯನ್ನು ಕಡ್ಡಾಯವಾಗಿ ತರಬೇಕೆಂದು ಸೇನಾ ನೇಮಕಾತಿ ಕಚೇರಿ ಪ್ರಕಟಣೆಯಲ್ಲಿ ತಿಳಿಸಿದೆ.

ಅರ್ಜಿ ಆಹ್ವಾನ

ಬೆಳಗಾವಿ: ಜಿಲ್ಲೆಯ ಬೈಲಹೊಂಗಲ ತಾಲೂಕಿನ 5 ಮತ್ತು ಸವದತ್ತಿ ತಾಲೂಕಿನ 1 ಗ್ರಾಮ ಪಂಚಾಯತಿಗಳಲ್ಲಿ ಖಾಲಿ ಇರುವ ಗ್ರಾಮೀಣ ಪುನರ್ವಸತಿ ಕಾರ್ಯಕರ್ತರ ಹುದ್ದೆಗಳನ್ನು ಇಲಾಖೆ ಗ್ರಾಮೀಣ ಪುನರ್ವಸತಿ ಯೋಜನೆಯಡಿ ಮಾಸಿಕ ರೂ.10,000 ಗಳ ಗೌರವ ಧನದ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲು ಸಂಬಂಧಪಟ್ಟ ಗ್ರಾಮ ಪಂಚಾಯತಿ ವ್ಯಾಪ್ತಿಯ ಅರ್ಹ ವಿಕಲಚೇತನ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಈ ಹಿಂದೆ ಹೆಚ್ಚಿನ ಸಂಖ್ಯೆಯಲ್ಲಿ ಅರ್ಜಿಗಳು ಬರದೇ ಇರುವುದರಿಂದ ಮರು ಅರ್ಜಿ ಆಹ್ವಾನಿಸಲಾಗಿದೆ. ಮರಡಿನಾಗಲಾಪೂರ 1, ಬೆಳವಡಿ 1, ಮಲ್ಲಾಪೂರ ಕೆ.ಎನ್. 1, ನಾಗನೂರ 1, ಮುರಕಿಭಾಂವಿ 1, ಮುರಗೋಡ 1. ಒಟ್ಟು 6 ಗ್ರಾಮ ಪಂಚಾಯತಿಗಳಲ್ಲಿ ನೇಮಕಾತಿ ನಡೆಯಲಿದೆ. ಆಸಕ್ತ ಅಭ್ಯರ್ಥಿಗಳು ಜೂನ್ 25 ರೊಳಗಾಗಿ ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲೂಕು ಪಂಚಾಯತ ಕಾರ್ಯಾಲಯ, ಬೈಲಹೊಂಗಲ ಮತ್ತು ಸವದತ್ತಿ ಇಲ್ಲಿಗೆ ಅಗತ್ಯ ದಾಖಲಾತಿಗಳೊಂದಿಗೆ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ಸಂಬಂಧಪಟ್ಟ ತಾಲೂಕಿನ ಎಂ.ಆರ್.ಡಬ್ಲ್ಯೂ ಇವರನ್ನು ಸಂಪರ್ಕಿಸಬಹುದು ಎಂದು ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ದಾಸವಾಣಿ ಕಾರ್ಯಕ್ರಮ

ಹುಬ್ಬಳ್ಳಿ: ಇಲ್ಲಿಯ ಸಂತೋಷ ನಗರದ ರಾಘವೇಂದ್ರ ಸ್ವಾಮಿ ಮಠದಲ್ಲಿ ಮೇ 28 ರಂದು ಸಂಜೆ 6 ಗಂಟೆಗೆ ದಾಸವಾಣಿ ಕಾರ್ಯಕ್ರಮ ನಡೆಯಲಿದೆ. ಚಂದ್ರಕಾಂತ ಇನಾಮ್ದಾರ ನಡೆಸಿಕೊಡಲಿದ್ದು, ಹಾರ್ಮೋನಿಯಂ ಶ್ರೀನಿವಾಸ್ ಇನಾಮ್ದಾರ್, ತಬಲಾದಲ್ಲಿ ಮನುಕುಮಾರ್ ಹಿರೇಮಠ್ ಆಗಮಿಸಲಿದ್ದಾರೆ ಎಂದು ರಾಘವೇಂದ್ರ ಸ್ವಾಮಿ ಮಠದ ಅಧ್ಯಕ್ಷ ಗೋವಿಂದಾಚಾರ್ಯರು ಪ್ರಕಟಿಸಿದ್ದಾರೆ.

ಅರ್ಜಿ ಆಹ್ವಾನ

ಬೆಳಗಾವಿ: 2026 ನೇ ಸಾಲಿನ ಮಾರ್ಚ್ ಮತ್ತು ಏಪ್ರಿಲ್‌ನಲ್ಲಿ ಎಸ್ಸೆಸ್ಸೆಲ್ಸಿ ವಾರ್ಷಿಕ ಪರೀಕ್ಷೆ–1ರಲ್ಲಿ ಪ್ರಥಮ ಪ್ರಯತ್ನದಲ್ಲಿ ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾದ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಿಂದ ಪ್ರೋತ್ಸಾಹ ಧನಕ್ಕಾಗಿ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಅಭ್ಯರ್ಥಿಗಳು https://swdservices.karnataka.gov.in/prizemoneyClientApp/re ವೆಬ್‌ಸೈಟ್ ಮೂಲಕ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ, ಪ್ರಿಂಟ್ ಪಡೆದು ಅಗತ್ಯ ದಾಖಲಾತಿಗಳೊಂದಿಗೆ ಭೌತಿಕ ಅರ್ಜಿ ಸಹಾಯಕ ನಿರ್ದೇಶಕರು ಸಮಾಜ ಕಲ್ಯಾಣ ಇಲಾಖೆ ಸವದತ್ತಿ ಕಛೇರಿಗೆ ನೀಡಬೇಕು. ಅರ್ಜಿ ಸಲ್ಲಿಸಲು ಜೂನ್ 30 ಕೊನೆಯ ದಿನವಾಗಿರುತ್ತದೆ ಎಂದು ಸವದತ್ತಿ ತಾಲೂಕು ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಿಧನ ಸುದ್ದಿ

ಕೃಷ್ಣಾಬಾಯಿ ಮಾನೆ



ರಾಯಬಾಗ: ಪಟ್ಟಣದ ಕೋಳಿಗಲ್ಲಿ ನಿವಾಸಿ ಕೃಷ್ಣಾಬಾಯಿ ಬಾಳಕು ಮಾನೆ(74) ನಿಧನರಾದರು. ಮೃತರು ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ ತಾಲೂಕು ಘಟಕ ರಾಯಬಾಗದ ನಿರ್ದೇಶಕರು ಹಾಗೂ ರಾಯಬಾಗ ಗ್ರಾಮೀಣ ಕುಡಿಯುವ ನೀರು ಉಪವಿಭಾಗದ ಎಸ್‌ಡಿಎ ನೌಕರ ಸುಭಾಷ ಮಾನೆ ಸೇರಿದಂತೆ ಇಬ್ಬರು ಪುತ್ರರರು, ಇಬ್ಬರು ಪುತ್ರಿಯರು, ಅಪಾರ ಬಂಧು ಬಳಗ ಅಗಲಿದ್ದಾರೆ.

ವೀರಭದ್ರ ಪಟ್ಟಣಶೆಟ್ಟಿ



ಬೆಳಗಾವಿ: ನಗರದ ಟಿಳಕವಾಡಿ ನೆಹರು ರೋಡ್ ನಿವಾಸಿ ವೀರಭದ್ರ ಪಟ್ಟಣಶೆಟ್ಟಿ (65) ಬುಧವಾರ ನಿಧನರಾದರು. ಮೃತರು ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧು ಬಳಗ ಅಗಲಿದ್ದಾರೆ.

ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ವಿಶ್ವಾಸ ಭೂಮಿಪೂಜೆ

ಯರಗಟ್ಟಿ: ಸಮಾಜ ಕಲ್ಯಾಣ ಇಲಾಖೆಯಡಿ 3 ಗ್ರಾಮಗಳ ಡಾ.ಬಿ.ಆರ್.ಅಂಬೇಡ್ಕರ್ ಭವನಗಳ ಅಭಿವೃದ್ಧಿಗೆ ಒಟ್ಟು 60 ಲಕ್ಷ ವೆಚ್ಚದ ಕಾಮಗಾರಿಗೆ ಶಾಸಕ ವಿಶ್ವಾಸ ವೈದ್ಯ ಭೂಮಿಪೂಜೆ ನೇರವೇರಿಸಿದರು.



ಸವದತ್ತಿ ಯಲ್ಲಮ್ಮ ಮತಕ್ಷೇತ್ರದ ಗ್ರಾಮೀಣ ಭಾಗಗಳಲ್ಲಿ ಸಮುದಾಯ ಭವನಗಳನ್ನು ಬಲಪಡಿಸುವ ಹಾಗೂ ಸಾರ್ವಜನಿಕರಿಗೆ ಸುಸಜ್ಜಿತ ಮೂಲ ಸೌಕರ್ಯಗಳನ್ನು ಕಲ್ಪಿಸುವ ನಿಟ್ಟಿನಲ್ಲಿ ಮತ್ತೊಂದು ಪ್ರಮುಖ ಹೆಜ್ಜೆ ಇಡಲಾಗಿದೆ. ಸಮಾಜ ಕಲ್ಯಾಣ ಇಲಾಖೆ 2025–26 ನೇ ಸಾಲಿನ ಯೋಜನೆಯಡಿ, ಯರಗಟ್ಟಿ ತಾಲೂಕಿನ ಪ್ರಮುಖ 3 ಗ್ರಾಮಗಳಾದ ಇಟ್ನಾಳ ದಾಸನಾಳ, ಮಳ್ಳಿಕೇರಿ ಗ್ರಾಮಗಳಲ್ಲಿ ತಲಾ 20 ಲಕ್ಷದಂತೆ ಒಟ್ಟು 60 ಲಕ್ಷ ಅಂದಾಜು ಮೊತ್ತದ ಡಾ.ಬಿ.ಆರ್ ಅಂಬೇಡ್ಕರ್ ಭವನಗಳ ನಿರ್ಮಾಣ ಹಾಗೂ ಮೂಲಭೂತ ಸೌಲಭ್ಯ ಕಲ್ಪಿಸುವ ಕಾಮಗಾರಿಗೆ ಅಧಿಕೃತವಾಗಿ ಚಾಲನೆ ನೀಡಲಾಯಿತು.

ಈ ವೇಳೆ ಎಪಿಎಂಸಿ ಅಧ್ಯಕ್ಷ ನೀಲಕಂಠ ಸಿದ್ದಬಸನ್ನವರ, ಕೆಎಂಎಫ್ ನಿರ್ದೇಶಕ ಶಂಕರ ಇಟ್ನಾಳ, ಪ್ರಕಾಶ ವಾಲಿ, ಮಲಿಕಸಾಬ ಬಾಗವಾನ, ಬಂಗಾರೆಪ್ಪ ಹರಳಿ, ಸುರೇಶ ಭಜಂತ್ರಿ, ಬಸವರಾಜ ಸತ್ತೂರಿ, ಯಂಕಣ್ಣಾ ಕಳ್ಳಿಗುದ್ದಿ, ಸತ್ತಿಗೇರಿ ಗ್ರಾ.ಪಂ. ಪಿಡಿಓ ಎ. ಬಿ ಬಂಗಾರಿ, ಗ್ಯಾರಂಟಿ ಯೋಜನೆ ಅಧ್ಯಕ್ಷ ಗೋಪಾಲ ದಳವಾಯಿ, ಉಮೇಶ ಮಾಗುಂಡನ್ನವರ, ಸಿದ್ದಪ್ಪ ರಂಗರಣ್ಣವರ, ಬನಪ್ಪಗೌಡ ಪಾಟೀಲ, ಮುಗಬಶೀರ ಭಾಗವಾನ, ಜಯವಂತ ಹಾದಿಮನಿ, ಬಸಯ್ಯ ಸಾಲಿಮಠ, ರುದ್ರಪ್ಪ ತುಮಂದಿ, ನಾಗಪ್ಪ ತುರಮಂದಿ, ಶಿವಪ್ಪ ದೇಸಾಯಿ, ಶಿವಾನಂದ ತುರಮಂದಿ, ನಿಂಗಪ್ಪ ನುಗ್ಗಾಟ್ಟಿ, ಚೆನ್ನಪ್ಪ ಹರಳಿ, ದಾಸನಾಳ ಗ್ರಾಮದ ಮುಖಂಡರಾದ ಹನಮಂತ ಪೂಜೇರ, ಈರಣ್ಣಾ ಬಳಿಗಾರ, ಪುಂಡಲೀಕ ತೋಟಗಿ, ರಾಜು ಹರಿಜನ, ಈರಪ್ಪ ಅಂಗಡಿ, ಪಾಂಡಪ್ಪ ಬೀರಕ್ಕನ್ನವರ, ವಿಠ್ಠಲ ಶಿಂತ್ರಿ, ವಿಕ್ರಮ ಇಂಗಳಗಿ, ಉಮೇಶ ಹೊಸೂರ, ಇಟ್ನಾಳ ಗ್ರಾಮದ ಬಾಳಪ್ಪ ಚಂದರಗಿ, ಭೀರಪ್ಪ ಹಂಚಿನಾಳ, ಶಿವು ಚಂದರಗಿ, ಪುಂಡಲೀಕ ಪೂಜೇರ, ಸಂಗಯ್ಯ ಹಿರೇಮಠ, ಪುಂಡಲೀಕ ಮಾದರ, ರಾಂಚಂದ್ರ ಮಾದರ, ತುಕಾರಾಮ ಮಾದರ, ಮೆಳ್ಳಿಕೇರಿ ಗ್ರಾಮದ ನಾಗರಾಜ ದೇಸಾಯಿ, ಲಕ್ಕಪ್ಪ ಪೂಜೇರ, ಲಕ್ಕಪ್ಪ ಬ್ಯಾಕೋಡ, ವಿಠ್ಠಲ ಬಾಚಗೌಡ್ರ, ಲಕ್ಕಪ್ಪ ಕಡಬಿ, ಲಕ್ಕಪ್ಪ ತಳವಾರ, ಹನಮಂತ ತಳವಾರ, ಯಮುನಪ್ಪ ತಳವಾರ, ಕೃಷ್ಣಪ್ಪ ಹೊರಟ್ಟಿ, ಭೀಮಶಿ ಜುಟ್ಟನ್ನವರ, ಜಗದೀಶ ಬಾಚಗೌಡ್ರ, ವಿವಿಧ ಗ್ರಾಮಗಳ ಹಿರಿಯರು, ಸ್ಥಳೀಯ ಜನಪ್ರತಿನಿಧಿಗಳು, ಸಮಾಜ ಕಲ್ಯಾಣ ಇಲಾಖೆ ಅಧಿಕಾರಿಗಳು ಮತ್ತು ಆತ್ಮೀಯ ಕಾರ್ಯಕರ್ತರು ಉಪಸ್ಥಿತರಿದ್ದರು.

ಆರೋಪಿಗಳ ವಿರುದ್ಧ ಕ್ರಮ ಕೈಗೊಳ್ಳಿ: ಟೆಂಗಿನಕಾಯಿ

ಹುಬ್ಬಳ್ಳಿ: ಧಾರವಾಡದಲ್ಲಿ ಫೈರಿಂಗ್ ಸಂಸ್ಕೃತಿ ಆರಂಭವಾಗಿರುವುದನ್ನು ಖಂಡಿಸಿ ಹಾಗೂ ಜಿಲ್ಲೆಯಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟಿದೆಎಂದುಆರೋಪಿಸಿಬಿಜೆಪಿಹು-ಧಾ ಮಹಾನಗರ ಜಿಲ್ಲಾ ಮುಖಂಡರು ಹಾಗೂ ಕಾರ್ಯಕರ್ತರು ನಗರದಲ್ಲಿ ಪ್ರತಿಭಟನೆ ನಡೆಸಿದರು. ಬುಧವಾರ ನಗರದ ಸಂಗೊಳ್ಳಿ ರಾಯಣ್ಣ ವೃತ್ತದಲ್ಲಿ ಸಮಾವೇಶಗೊಂಡ ಪ್ರತಿಭಟನಾಕಾರರು ರಾಜ್ಯ ಸರ್ಕಾರ, ಮುಖ್ಯಮಂತ್ರಿ ಸಿದ್ದರಾಮಯ್ಯ, ಗೃಹ ಸಚಿವ ಜಿ. ಪರಮೇಶ್ವರ ಹಾಗೂ ಪೊಲೀಸ್ ಆಯುಕ್ತ ಎನ್. ಶಶಿಕುಮಾರ ಅವರ ಭಾವಚಿತ್ರ ದಹಿಸಿದರು. ಎನ್.ಶಶಿಕುಮಾರ ಅವರನ್ನು ವರ್ಗಾವಣೆ ಮಾಡಬೇಕು ಎಂದು ಘೋಷಣೆ ಕೂಗಿದರು.

ಶಾಸಕ ಮಹೇಶ ಟೆಂಗಿನಕಾಯಿ ಮಾತನಾಡಿ, ಹುಬ್ಬಳ್ಳಿ–ಧಾರವಾಡದಲ್ಲಿ ಲ್ಯಾಂಡ್ ಮಾಫಿಯಾ ಸೇರಿದಂತೆ ಅನೇಕ ಅಕ್ರಮ ಚಟುವಟಿಕೆಗಳು ನಡೆಯುತ್ತಿವೆ. ಆರೋಪಿಗಳ ವಿರುದ್ಧ ಯಾವುದೇ ಕ್ರಮ ಕೈಗೊಳ್ಳದಿರುವು ನೋಡಿದರೆ ಪೊಲೀಸ್ ಆಯುಕ್ತರೇ ಕೃತ್ಯಗಳಲ್ಲಿ ಭಾಗವಹಿಸುತ್ತಿದ್ದಾರೇ ಎಂಬ ಅನುಮಾನ ಮೂಡುತ್ತಿವೆ ಎಂದರು. ಧಾರವಾಡದಲ್ಲಿ ನಡೆದ ಫೈರಿಂಗ್ ದೇಶಕ್ಕೆ ಗೊತ್ತಿದ್ದರೂ ಸಹ ಪೊಲೀಸ್ ಆಯುಕ್ತ ಎನ್. ಶಶಿಕುಮಾರ ಘಟನೆ ಬಗ್ಗೆ ತಿಳಿದುಕೊಳ್ಳುತ್ತೇವೆ ಹಾಗೂ ತನಿಖೆ ಮಾಡುತ್ತೇವೆ ಎಂದು ಹೇಳುತ್ತಿದ್ದಾರೆ. ಸಾಕ್ಷಿಗಳು ದೊರೆತರೂ ಆರೋಪಿಗಳ ವಿರುದ್ಧ ಕಠಿಣ ಕ್ರಮವಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು. ಬಿಜೆಪಿ ಮುಖಂಡ ಲಿಂಗರಾಜ ಪಾಟೀಲ ಮಾತನಾಡಿ, ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರದ ಬಂದ ಬಳಿಕ ಗೂಂಡಾ ಸಂಸ್ಕೃತಿ ಆರಂಭವಾಗಿದೆ. ಗೃಹಮಂತ್ರಿ ರಾಜ್ಯದಲ್ಲಿ ಇದ್ದಾರೆ ಇಲ್ಲಾ ಎಂಬುವುದು ಗೊತ್ತಾಗುತ್ತಿಲ್ಲ. ವಿವಿಧ ಜಿಲ್ಲೆಯಲ್ಲಿ ಗೂಂಡಾ ವರ್ತನೆ ನಡೆಯುತ್ತಿದ್ದು, ಸ್ವತಃ ಪೊಲೀಸ್ ಇಲಾಖೆ ಕುಮ್ಮಕ್ಕು ಕೊಡುತ್ತಿದೆ. ಹುಬ್ಬಳ್ಳಿ ಧಾರವಾಡ ಜನತೆ ಶಾಂತಿ, ಸುವ್ಯವಸ್ಥೆ ಕಾಪಾಡಿ, ಆರೋಪಿಗಳ ವಿರುದ್ಧ ನಿರ್ದಾಕ್ಷಿಣ್ಯವಾಗಿ ಕ್ರಮಕೈಗೊಳ್ಳಿ ಎಂದು ಆಗ್ರಹಿಸಿದರು.

ಮುಖಂಡ ನಾರಾಯಣ ಜರತಾರಘರ ಮಾತನಾಡಿ, ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಹಾಳಾಗಿದೆ ಎಂಬುವುದಕ್ಕೆ ಇದು ಉದಾಹರಣೆ. ಶಾಂತಿ ಪ್ರದೇಶವಾದ ಹುಬ್ಬಳ್ಳಿ ನಡೆದ ಘಟನೆ ಸಾರ್ವಜನಿಕರಲ್ಲಿ ಆತಂಕ ಮೂಡಿದ್ದು, ಸುರಕ್ಷತೆ ಇಲ್ಲ ಅನಿಸುತ್ತಿದೆ. ಅಮಾಯಕ ರೈತರ ಜಮೀನು ಹೊಡೆಯುವ ಕೆಲಸ ನಡೆಯುತ್ತಿದೆ. ಅಂತವರ ವಿರುದ್ಧ ಕ್ರಮಕೈಗೊಳ್ಳಬೇಕು ಎಂದು ಒತ್ತಾಯಿಸಿದರು. ಪ್ರಧಾನ ಕಾರ್ಯದರ್ಶಿ ವಸಂತ ನಾಡಜೋಶಿ, ಶಿವು ಮೆಣಸಿನಕಾಯಿ, ರೂಪಾ ಶೆಟ್ಟಿ, ಮೀನಾಕ್ಷಿ ವಂಟಮುರಿ, ವೀಣಾ ಭಾರದ್ವಾಡ, ನಾರಾಯಣ ಜರತಾರಘರ, ವೆಂಕಟೇಶ ಕಾಟವೆ, ಭೀರಪ್ಪ ಖಂಡೇಕರ, ದತ್ತಮೂರ್ತಿ ಕುಲಕರ್ಣಿ, ಪ್ರಭು ನವಲಗುಂದಮಠ, ಪ್ರವೀಣ ಹುರಳಿ, ಸಂತೋಷ ಅರಕೇರಿ, ಅನುಪ ಬಿಜವಾಡ, ರಾಜು ಕೋರ್ಯಾಣಮಠ, ಸೀಮಾ ಲದವಾ, ಪ್ರೀತಂ ಅರಕೇರಿ, ಪ್ರವೀಣ ಕುಬಸದ ಇದ್ದರು.



ಸಿಎಂ ಬದಲಾವಣೆ ವಿಚಾರದಲ್ಲಿ ದಲಿತ ಸಮುದಾಯಕ್ಕೆ ಪ್ರಾಶಸ್ತ್ಯ ನೀಡಿ

ಖಾನಾಪುರ: ಸಿಎಂ ಬದಲಾವಣೆ ವಿಚಾರದಲ್ಲಿ ದಲಿತ ಸಮುದಾಯದ ಮುಖಂಡರಿಗೆ ಪ್ರಥಮ ಪ್ರಾಶಸ್ತ್ಯ ನೀಡುವ ಮೂಲಕ ಕಾಂಗ್ರೆಸ್ ಪಕ್ಷದ ಹೈಕಮಾಂಡ್ ಪರಿಶಿಷ್ಟ ಜಾತಿ ಸಮುದಾಯದ ನಾಯಕರು ರಾಜ್ಯದ ಮುಖ್ಯಮಂತ್ರಿಯಾಗುವ ನಿಟ್ಟಿನಲ್ಲಿ ಸಹಕರಿಸಬೇಕು ಎಂದು ಛಲವಾದಿ ಮಹಾಸಭಾ ತಾಲೂಕು ಘಟಕದ ಅಧ್ಯಕ್ಷ ನಾರಾಯಣ ಚಲವಾದಿ ಆಗ್ರಹಿಸಿದರು.



ಪಟ್ಟಣದಲ್ಲಿ ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿ, ರಾಜ್ಯದಲ್ಲಿ ಎಸ್ಸಿ ಸಮುದಾಯವನ್ನು ಪ್ರತಿನಿಧಿಸುತ್ತಿರುವ ಸಚಿವ ಡಾ.ಜಿ.ಪರಮೇಶ್ವರ, ಡಾ.ಎಚ್.ಸಿ ಮಹದೇವಪ್ಪ ಇವರಿಬ್ಬರೂ ದಲಿತ ಸಮುದಾಯದ ಪ್ರಶ್ನಾತೀತ ನಾಯಕರಾಗಿದ್ದಾರೆ. ಇವರಿಬ್ಬರೂ ರಾಜ್ಯ ರಾಜಕಾರಣದಲ್ಲಿ ಬಹಳಷ್ಟು ಅನುಭವ ಹೊಂದಿದ್ದು, ರಾಜ್ಯದ ಮುಖ್ಯಮಂತ್ರಿಯಾಗಿ ಆಡಳಿತ ನಡೆಸುವ ಎಲ್ಲ ಅರ್ಹತೆ ಹೊಂದಿದ್ದಾರೆ. ಇಬ್ಬರೂ ವೃತ್ತಿಯಲ್ಲಿ ವೈದ್ಯರಾಗಿದ್ದು, ಸರಳ–ಸಜ್ಜನ ರಾಜಕಾರಣಿಗಳೆಂದು ರಾಜ್ಯದ ಜನತೆಗೆ ಚಿರಪರಿಚಿತರಾಗಿದ್ದಾರೆ. ಇವರ ಪೈಕಿ ಒಬ್ಬರನ್ನು ಸಿಎಂ ಹುದ್ದೆಗೆ ಆಯ್ಕೆಗೊಳಿಸಿ ರಾಜ್ಯದ ಜನರ ದಲಿತ ಸಿಎಂ ಬೇಡಿಕೆಯನ್ನು ಈಡೇರಿಸಬೇಕು ಎಂದು ಕಾಂಗ್ರೆಸ್ ಪಕ್ಷದ ವರಿಷ್ಠರನ್ನು ಆಗ್ರಹಿಸಿದರು. ಈ ಸಂದರ್ಭದಲ್ಲಿ ಛಲವಾದಿ ಮಹಾಸಭಾ ಮುಖಂಡರು, ಕಾರ್ಯಕರ್ತರು ಇದ್ದರು.

ಬಕ್ರೀದ್; ಪೊಲೀಸ್ ಪಡೆಗಳಿಂದ ಪಥಸಂಚಲನ

ಬೆಳಗಾವಿ: ಇಂದು ಬಕ್ರೀದ್ ಹಬ್ಬವನ್ನು ಆಚರಿಸಲಾಗುತ್ತಿದ್ದು, ಕುಂದಾನಗರಿ ಬೆಳಗಾವಿಯಲ್ಲಿ ಯಾವುದೇ ಅಹಿತಕರ ಘಟನೆ ನಡೆಯದಂತೆ ಪೊಲೀಸ್ ಇಲಾಖೆ ಹದ್ದಿನಕಣ್ಣಿಟ್ಟಿದೆ. ನಗರದಾದ್ಯಂತ ಶಾಂತಿ ಮತ್ತು ಸುವ್ಯವಸ್ಥೆ ಕಾಪಾಡಲು ಪೊಲೀಸ್ ಪಡೆ ಸಂಪೂರ್ಣ ಸಜ್ಜಾಗಿದ್ದು, ಸಾರ್ವಜನಿಕರು ಸೌಹಾರ್ದತೆಯಿಂದ ಹಬ್ಬ ಆಚರಿಸುವಂತೆ ಕರೆ ನೀಡಲಾಗಿದೆ.

ಬಕ್ರೀದ್ ಹಬ್ಬದ ಹಿನ್ನೆಲೆಯಲ್ಲಿ ಬೆಳಗಾವಿ ಮಹಾನಗರದಲ್ಲಿ ಕಮಿಷನರೇಟ್ ವತಿಯಿಂದ ಬಿಗಿ ಪೊಲೀಸ್ ಬಂದೋಬಸ್ತ್ ನಿಯೋಜಿಸಲಾಗಿದೆ. ಮುಂಜಾಗ್ರತಾ ಕ್ರಮವಾಗಿ ನಗರದ ಜಿಲ್ಲಾಧಿಕಾರಿಗಳ ಕಾರ್ಯಾಲಯದಿಂದ ಪಥಸಂಚಲನವು ಚವ್ಹಾಟ್ ಗಲ್ಲಿ, ದರ್ಬಾರ್ ಗಲ್ಲಿ, ಖಡೇಬಝಾರ್, ಟೆಂಗಿನಕೇರಾ ಗಲ್ಲಿ, ಬೇಂಡಿ ಬಝಾರ್ ಗಲ್ಲಿ ಕಾರ್ನರ್, ಸಶಸ್ತ್ರ ಪೊಲೀಸ್ ಪಡೆಗಳಿಂದ ಪಥಸಂಚಲನ ನಡೆಸುವ ಮೂಲಕ ಸಾರ್ವಜನಿಕರಲ್ಲಿ ಧೈರ್ಯ ತುಂಬಲಾಯಿತು.

ಪಥಸಂಚಲನವು ಪೋರ್ಟ್ ರಸ್ತೆಗೆ ತಲುಪಿ ಕೊನೆಗೊಂಡಿತು. ಹಬ್ಬದ ನೆಪದಲ್ಲಿ ಕಾನೂನು ಕೈಗೆತ್ತಿಕೊಳ್ಳುವ ಕಿಡಿಗೇಡಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವುದಾಗಿ ಎಚ್ಚರಿಕೆಯನ್ನು ನೀಡಿದ್ದಾರೆ. ಅತ್ಯಂತ ಶಾಂತಿಯುತ ಹಾಗೂ ಸೌಹಾರ್ದಯುತವಾಗಿ ಬಕ್ರೀದ್ ಆಚರಿಸಬೇಕೆಂದು ಮನವಿ ಮಾಡಲಾಗಿದೆ.

ಸಮರ್ಪಕವಾಗಿ ನೀರು ತಲುಪಿಸುವ ಕಾರ್ಯವಾಗಲಿ: ಶ್ವೇತಾ

ಮುಗಳಖೋಡ: ಘಟಪ್ರಭಾ ಎಡದಂಡೆ ಕಾಲುವೆ ನೀರು ಜನ ಹಾಗೂ ಜಾನುವಾರುಗಳಿಗೆ ರಾಯಬಾಗ ತಾಲೂಕಿನ ಕೆಲ ಹಳ್ಳಿಗಳಿಗೆ ಸೇರಿದಂತೆ ರಬಕವಿ ಬನಹಟ್ಟಿ ಜಮಖಂಡಿ ಮುಧೋಳ ಮತ್ತು ಬೀಳಗಿ ತಾಲೂಕಿನವರೆಗೆ ಸಮರ್ಪಕವಾಗಿ ತಲುಪಬೇಕೆಂದು ಜಮಖಂಡಿ ಉಪ ವಿಭಾಗಾಧಿಕಾರಿ ಶ್ವೇತಾ ಬಿಡಿಕರ ಹೇಳಿದರು.



ಅವರು ಬುಧವಾರ ಘಟಪ್ರಭಾ ಎಡದಂಡೆ ಕಾಲುವೆ ರಬಕವಿ ಬನಹಟ್ಟಿ ತಾಲೂಕಿನ ಚಿಮ್ಮಡ ಚೌಕಿಯಿಂದ, ರಾಯಬಾಗ ತಾಲೂಕಿನ ಮುಗಳಖೋಡ ಚೌಕಿಯವರಿಗೆ ನೀರು ಹರಿವಿನ ಬಗ್ಗೆ ಅಧಿಕಾರಿಗಳ ಜೊತೆಗೆ ಮಾಹಿತಿ ಪಡೆದು ಗೇಟ್ ಗಳನ್ನು ಪರಿಶೀಲಿಸಿ , ಈ ಭಾಗದ ರೈತರಿಗೆ ಅಷ್ಟೇ ಅಲ್ಲದೆ ಜಮಖಂಡಿ ಬೀಳಗಿ ತಾಲೂಕಿನ ರೈತರಿಗೂ ಅನುಕೂಲವಾಗಲಿ ಎಂಬ ಸದುದ್ದೇಶದಿಂದ ನೀರಿನ ಹರಿವು ಅಗತ್ಯವಿದೆ ಎಂದರು. ಸರಿಯಾಗಿ ಕಾಲುವಿಗೆ ನೀರು ಹೋಗದ ಕಾರಣ ಮಹಾಲಿಂಗಪುರ ಪ್ರಭಾರ ಎಇಇಗೆ ಕಾರಣ ಕೇಳಿ ನೋಟಿಸ್ ನೀಡಲಾಗಿದೆ .

ಘಟಪ್ರಭಾ ಎಡದಂಡೆ ಕಾಲುವೆಗೆ ನೀರು ಹರಿಸುವ ಸಂದರ್ಭದಲ್ಲಿ ಪ್ರತಿ ಸಲವೂ ರಾತ್ರಿ ಹಗಲು ಪೊಲೀಸರ ಸರ್ಪಗಾವಲು ಇದ್ದರೂ ಕೂಡ ರೈತರು ಪೊಲೀಸರು ಅಧಿಕಾರಿಗಳ ನಡುವೆ ಸಂಘರ್ಷ ವಾದ ವಿವಾದ ನೂಕಾಟ ತಳ್ಳಾಟ ಇವು ಸರ್ವೇಸಾಮಾನ್ಯ ಆದ್ದರಿಂದ ಗೇಟ್ ಗಳಿಗೆ ಕಟ್ಟುನಿಟ್ಟಾಗಿ ಪೋಲಿಸ್ ಭದ್ರತೆ ಒದಗಿಸಲು ತಿಳಿಸಿದರು.

ಈ ಸಂದರ್ಭದಲ್ಲಿ ಜಮಖಂಡಿ ಉಪ ವಿಭಾಗಾಧಿಕಾರಿ ಶ್ವೇತಾ ಬಿಡಿಕರ , ಜಮಖಂಡಿ ತಹಶೀಲ್ದಾರ್ ಗಿರೀಶ ಸ್ವಾದಿ, ಮುಧೋಳ ತಹಶೀಲ್ದಾರ್ ಅನಿಲ ಬಡಿಗೇರ, ರಬಕವಿ ಜಿಎಲ್ ಬಿಸಿ ಎಇಇ ಶ್ರೀಧರ ನಂದಿಹಾಳ, ಮಹಾಲಿಂಗಪುರದ ಜಿಎಲ್ ಬಿ.ಸಿ.ಪ್ರಭಾರ ಎಇಇ ಮಹಾಂತೇಶ ಯಡಪ್ಪನ್ನವರ, ಜಿಎಲ್‌ಸಿ ಸಿಬ್ಬಂದಿ ವರ್ಗ ಇದ್ದರು.

ಅನುದಾನದ ಕೊರತೆಯಿಲ್ಲ: ಅಬ್ಬಯ್ಯ

ಹುಬ್ಬಳ್ಳಿ: ಪೂರ್ವ ಕ್ಷೇತ್ರದಲ್ಲಿ ಶಿಕ್ಷಣ, ಆರೋಗ್ಯ, ಆಶ್ರಯಕ್ಕೆ ಹೆಚ್ಚಿನ ಒತ್ತು ನೀಡಲಾಗಿದ್ದು, ಇದರ ಜೊತೆಗೆ ಮೂಲಭೂತ ಸೌಕರ್ಯಗಳ ಒದಗಿಸಲು ಅನುದಾನದ ಕೊರತೆ ಇಲ್ಲ ಎಂದು ಸ್ಲಂ ಬೋರ್ಡ್ ಅಧ್ಯಕ್ಷ ಹಾಗೂ ಶಾಸಕ ಪ್ರಸಾದ ಅಬ್ಬಯ್ಯ ಹೇಳಿದರು.



ಇಲ್ಲಿಯ ಸೋನಿಯಾ ಗಾಂಧಿ ನಗರದಲ್ಲಿ ಮುಖ್ಯಮಂತ್ರಿ ವಿಶೇಷ ಅನುದಾನದಡಿಯಲ್ಲಿ 5 ಕೋಟಿ ರೂ ವೆಚ್ಚದ ಕಾಂಕ್ರೀಟ್ ರಸ್ತೆ ಕಾಮಗಾರಿ ಇತ್ತೀಚೆಗೆ ಭೂಮಿಪೂಜೆ ನೆರವೇರಿಸಿ ಮಾತನಾಡಿದರು. ಕ್ಷೇತ್ರದಲ್ಲಿ ಅಭಿವೃದ್ಧಿ ಕಾಣುತ್ತಿದೆ ಎಂದರೆ ಅದು ಕಾಂಗ್ರೆಸ್ ಸರ್ಕಾರವನ್ನು ಮತ್ತೆ ಅಧಿಕಾರದಲ್ಲಿ ತಂದಿದ್ದರ ಫಲ ಎಂಬುದು ಯಾರು ಮರೆಯಬಾರದು. ಬಿಜೆಪಿ ಆಡಳಿತದ ಸಂದರ್ಭದಲ್ಲಿ ಅನುದಾನ ಕೊರತೆಯಿತ್ತು. ಅಭಿವೃದ್ಧಿ ಕಾರ್ಯಗಳು ಕುಂಠಿತಗೊಂಡಿದ್ದವು. ಆದರೆ ಈ ಮೂರು ವರ್ಷದಲ್ಲಿ ನೂರಾರು ಕೋಟಿ ಅನುದಾನ ತಂದು ಮತ್ತಷ್ಟು ಕ್ಷೇತ್ರದ ಅಭಿವೃದ್ಧಿಗೆ ಪ್ರಾಮಾಣಿಕ ಪ್ರಯತ್ನ ಮಾಡುತ್ತಿದ್ದೇನೆ ಎಂದರು.

ಈಗಾಗಲೇ ಪೂರ್ವ ಕ್ಷೇತ್ರದಲ್ಲಿ ಸರ್ಕಾರಿ ಪದವಿಪೂರ್ವ ಕಾಲೇಜ್ ಇರಲಿಲ್ಲ. ಈಗ ನಮ್ಮ ಸರ್ಕಾರ 26–27ನೇ ಸಾಲಿಗೆ ಪದವಿ ಪೂರ್ವ ಕಾಲೇಜ್ ಮಂಜೂರು ಮಾಡಿ ಕೊಟ್ಟಿದೆ. ಕಾಮರ್ಸ್ ವಿಭಾಗವನ್ನು ಪ್ರಾರಂಭ ಮಾಡಲಾಗಿದೆ. ವಿಜ್ಞಾನ ವಿಭಾಗವನ್ನು ಕೂಡ ಪ್ರಾರಂಭಿಸಲು ಮಂಜೂರಾತಿ ಸಿಗಲಿದೆ ಎಂದು ತಿಳಿಸಿದರು.

ಐಎಎಸ್ ಹಾಗೂ ಕೆಎಎಸ್ ಕೋಚಿಂಗ್ ಸೆಂಟರ್ ಕೂಡ ಶೀಘ್ರವೇ ಪ್ರಾರಂಭವಾಗಲಿದೆ. ಈಗಾಗಲೇ ಪೂರ್ವ ಕ್ಷೇತ್ರದಲ್ಲಿ ಆರೋಗ್ಯಕ್ಕೂ ಕೂಡ ಹೆಚ್ಚಿನ ಒತ್ತು ಕೊಡಲಾಗಿದ್ದು, 6 ನಮ್ಮ ಕ್ಲಿನಿಕ್, 4 ನಗರ ಪ್ರಾಥಮಿಕ ಕೇಂದ್ರ, 2 ಪಾಲಿಕೆ ಆಸ್ಪತ್ರೆಗಳು ಕಾರ್ಯನಿರ್ವಹಿಸುತ್ತಿವೆ ಎಂದರು.

ಕಾಂಗ್ರೆಸ್ ಮುಖಂಡ ಮೋಹನ ಅಸುಂಡಿ, ಪಾಲಿಕೆ ಸದಸ್ಯೆ ಲಕ್ಷ್ಮೀಭಾಯಿ ಜಾದವ, ಮಾಜಿ ಪಾಲಿಕೆ ಸದಸ್ಯ ವಿಜನಗೌಡ ಪಾಟೀಲ,ಹಜರತ್ ಮುನಸಿ, ಭಾಸ್ಕರ್, ಅಲ್ತಾಫ್ ಮುಲ್ಲಾ, ಧಾರವಾಡಕರ್, ಶರೀಫ್ ಇದ್ದರು.

ಅಭಿನಂದನಾ ಸಮಾರಂಭ ಇಂದು



ಧಾರವಾಡ: ನಾಡಿನ ವಿಮರ್ಶಕ ಡಾ.ರಾಘವೇಂದ್ರ ಪಾಟೀಲರ ಅಭಿನಂದನೆ ಮತ್ತು ಪಾಟೀಲರ ಬದುಕಿನ ಸುವರ್ಣ ಸಂಭ್ರಮ ಕಾರ್ಯಕ್ರಮ ಮೇ 28ರ ಬೆಳಗ್ಗೆ 10ಕ್ಕೆ ಆಲೂರು ವೆಂಕಟರಾವ್ ಭವನದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಸಮಿತಿಯ ಅಧ್ಯಕ್ಷ ಪ್ರೊ. ಮಲ್ಲಿಕಾರ್ಜುನ ಪಾಟೀಲ ಹೇಳಿದರು.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿ, ರಾಘವೇಂದ್ರ ಪಾಟೀಲ ಅಭಿನಂದನಾ ಸಮಿತಿ, ಸಾಹಿತ್ಯ ವೇದಿಕೆ, ಅಭಿಮಾನಿ ಬಳಗ ಹಮ್ಮಿಕೊಂಡ ಈ ಸಮಾರಂಭದ ಸಾನ್ನಿಧ್ಯ ಚಿತ್ರದುರ್ಗದ ಡಾ.ಬಸವಮೂರ್ತಿ ಮಾದರ ಚನ್ನಯ್ಯ ಶ್ರೀಗಳು ವಹಿಸಲಿದ್ದಾರೆ. ಸಾಹಿತಿ ಡಾ. ಸಿದ್ದಲಿಂಗ ಪಟ್ಟಣಶೆಟ್ಟಿ, ಪ್ರಾಚಾರ್ಯ ಡಾ.ಶಶಿಧರ ತೋಡ್ಕರ, ಡಾ. ಜಿ.ಎಂ.ಹೆಗಡೆ ಮಾತನಾಡಲಿದ್ದು, ರಾಘವೇಂದ್ರ ಪಾಟೀಲರ ಬೆಳ್ಳಿ ಲೋಕದಲ್ಲಿ ಆಯ್ದ ಕಥೆಗಳು, ತೇರು ಕೃತಿಯ 14ನೇ ಆವೃತ್ತಿಯ ಜೀವ ಸ್ಪರ್ಶ ಕೃತಿಗಳು ಬಿಡುಗಡೆಗೊಳ್ಳಲಿವೆ ಎಂದರು. ವಿಮರ್ಶಕ ಟಿ.ಪಿ.ಅಶೋಕ ಅಧ್ಯಕ್ಷತೆಯಲ್ಲಿ ರಾಘವೇಂದ್ರ ಪಾಟೀಲರ ಸಾಹಿತ್ಯದ ವಿಚಾರ ಸಂಕಿರಣ ಜರುಗಲಿದ್ದು, ಡಾ.ವಿನಯಾ ವಕ್ಕುಂದ, ಡಾ. ನಾ.ದಾಮೋದರ ಶೆಟ್ಟಿ, ಡಾ. ಶ್ರೀಕಂಠಮೂರ್ತಿ ಮಾತನಾಡಲಿದ್ದು, ಹರ್ಷ ಡಂಬಳ, ಎಂ.ಸುಬ್ರಹ್ಮಣ್ಯ ಪಾಲ್ಗೊಳ್ಳಲಿದ್ದಾರೆ. ತೀರ್ಥಹಳ್ಳಿಯ ಅರಳಸುರಳಿ ಅವರಿಗೆ ವಿಶ್ರಾಂತ ಕುಲಪತಿ ಡಾ.ತೇಜಸ್ವಿ ಕಟ್ಟಿಮನಿ ಪ್ರಶಸ್ತಿ ಪ್ರದಾನ ಮಾಡಲಿದ್ದು, ವಿಕಾಸ ಹೊಸಮನಿ, ಡಾ.ಸಿ.ಕೆ. ನಾವಲಗಿ, ಡಾ.ಬಿ.ವಿ.ರಾಮಪ್ರಸಾದ, ಡಾ.ಶಶಿಧರ ನರೇಂದ್ರ, ಡಾ. ಶ್ರೀರಾಮ ಭಟ್ಟ, ಅನೇಕರು ಪಾಲ್ಗೊಳ್ಳಲಿದ್ದಾರೆ ಎಂದರು. ರಾಘವೇಂದ್ರ ಪಾಟೀಲ, ಶ್ರೀನಿವಾಸ ವಾಡಪ್ಪಿ, ಪರಮೇಶ್ವರ ಭಟ್, ಲಿಂಗರಾಜ ಅಂಗಡಿ ಇದ್ದರು.

ಹಿರಿಯಕ್ಕನ ಅಕ್ಷರ ಸಂಭ್ರಮ ನಾಳೆ

ಧಾರವಾಡ: ಉತ್ತರ ಕರ್ನಾಟಕದ ಲೇಖಕಿಯರ ಸಂಘದಿಂದ ಹಿರಿಯಕ್ಕನ ಅಕ್ಷರ ಸಂಭ್ರಮ ಎರಡನೇ ಕಾರ್ಯಕ್ರಮ ಮೇ 29ರಂದು ಸಂಜೆ 5ಕ್ಕೆ ವಿದ್ಯಾವರ್ಧಕ ಸಂಘದ ರಾ.ಹ.ದೇಶಪಾಂಡೆ ಭವನದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಅಧ್ಯಕ್ಷೆ ರೂಪಾ ಜೋಶಿ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿ, ಎರಡನೇ ಕಾರ್ಯಕ್ರಮ ಕಥೆಗಾರ್ತಿ ಮಾಲತಿ ಪಟ್ಟಣಶೆಟ್ಟಿ ಅವರ ಅಕ್ಷರ ಸಂಭ್ರಮ ಒಳಗೊಂಡಿದ್ದು, ಕವಿವಿ ಕನ್ನಡ ಅಧ್ಯಯನ ಪೀಠದ ಪ್ರಾಧ್ಯಾಪಕಿ ಡಾ.ಅನಿತಾ ಗುಡಿ ಆಶಯ ನುಡಿಯಲಿದ್ದಾರೆ ಎಂದರು.

ಕಾವ್ಯ ಸಾಹಿತ್ಯ ಹಾಗೂ ಯುವ ವಿಮರ್ಶಕ ಕಥಾ ಸಾಹಿತ್ಯದ ಬಗ್ಗೆ ವಿಮರ್ಶಕ ಡಾ.ಸುಭಾಷ ಕಟ್ಟಾಜೆ ಉಪನ್ಯಾಸ ನೀಡಲಿದ್ದು, ಎಂ.ಎಂ.ಕಲಬುರ್ಗಿ ಪ್ರತಿಷ್ಠಾನದ ಅಧ್ಯಕ್ಷ ಡಾ.ವೀರಣ್ಣ ರಾಜೂರ ಅಧ್ಯಕ್ಷತೆ ವಹಿಸಲಿದ್ದು, ಮಾಲತಿ ಪಟ್ಟಶೆಟ್ಟಿ ಇರಲಿದ್ದಾರೆ ಎಂದರು.

ನಂತರ ನಡೆಯುವ ಸಂವಾದದಲ್ಲಿ ಸಂಧ್ಯಾ ದೀಕ್ಷಿತ್, ಉಮಾ ಅಕ್ಕೂರ, ಶಾಲಿನಿ ರುದ್ರಮನಿ, ಶೈಲಜಾ ಹುಲಮನಿ, ಮಾಲತಿ ಮುದಕವಿ, ಕಸ್ತೂರಿ ಬೀರಪ್ಪನವರ, ಶ್ರದ್ಧಾ ನೀಲಗುಂದ, ವಿನುತಾ ಹಂಚಿಮನಿ ಅನೇಕರು ಭಾಗವಹಿಸಲಿದ್ದಾರೆ ಎಂದರು.

ಸುದ್ದಿಗೋಷ್ಠಿಯಲ್ಲಿ ವಿನುತಾ ಹಂಚಿನಮನಿ, ಮಾಲತಿ ಹೆಗಡೆ, ಸುಮಾ ಹಡಪದ, ಡಾ.ಪ್ರಜ್ಞಾ ಮತ್ತಿಹಳ್ಳಿ, ಮಾಲತಿ ಪಟ್ಟಣಶೆಟ್ಟಿ ಇದ್ದರು.



ಎಲ್ಲರೂ ಸ್ವಚ್ಛ ಸರ್ವೇಕ್ಷಣ ಅಭಿಯಾನದಲ್ಲಿ ಪಾಲ್ಗೊಳ್ಳಿ

ಬೆಳಗಾವಿ: ಭಾರತ ಸರ್ಕಾರದ ಸ್ವಚ್ಛ ಭಾರತ್ ಮಿಷನ್ ಅಡಿಯಲ್ಲಿ ಬೆಳಗಾವಿ ಮಹಾನಗರ ಪಾಲಿಕೆ ವ್ಯಾಪ್ತಿಯ ಸಾರ್ವಜನಿಕರ ಅಭಿಪ್ರಾಯ ಸಂಗ್ರಹಿಸುವ ದಿಸೆಯಲ್ಲಿ ಹಮ್ಮಿಕೊಂಡಿರುವ ಸ್ವಚ್ಛ ಸರ್ವೇಕ್ಷಣ ಅಭಿಯಾನದಲ್ಲಿ ನಗರವಾಸಿಗಳೆಲ್ಲರೂ ಪಾಲ್ಗೊಳ್ಳಬೇಕೆಂದು ಪಾಲಿಕೆ ಆಯುಕ್ತ ಕಾರ್ತಿಕ್ ಎಂ. ಹೇಳಿದರು.



ಬುಧವಾರ ಈ ಕುರಿತು ಪಾಲಿಕೆಯ ಕಚೇರಿ ಯಲ್ಲಿ ಮಾಹಿತಿ ನೀಡಿದ ಅವರು, ಭಾರತ ಸರ್ಕಾರವು 2016 ರಿಂದ ಸ್ವಚ್ಛ ಭಾರತ್ ಮಿಷನ್ ಆರಂಭಿಸಿದ್ದು, ನಗರವಾಸಿಗಳ ಅಭಿಪ್ರಾಯಕ್ಕನುಗುಣವಾಗಿ ಉತ್ತಮ ಪರಿಸರಪೂರಿತ ವಾತಾವರಣ ನಿರ್ಮಿಸುವುದೇ ಇದರ ಮೂಲ ಉದ್ದೇಶವಾಗಿದೆ. ಸ್ವಚ್ಛತೆಗೆ ಪ್ರಥಮ ಆದ್ಯತೆ ನೀಡುವ ನಗರ ಪಾಲಿಕೆಗಳನ್ನು ಉತ್ತೇಜಿಸುವ ನಿಟ್ಟಿನಲ್ಲಿ ಬಹುಮಾನ, ಸ್ಟಾರ್ ರ್ಯಾಂಕಿಂಗ್ ಕೊಡುವ ಸಂಪ್ರದಾಯವನ್ನು ಸಹ ಸರ್ಕಾರ ಹೊಂದಿದೆ ಎಂದರು.

ಇಂತಹ ಉತ್ತಮ ಉದ್ದೇಶ ಹೊಂದಿರುವ ಅಭಿಯಾನದಲ್ಲಿ ಬೆಳಗಾವಿ ಮಹಾನಗರ ಪಾಲಿಕೆಯೂ ಪಾಲ್ಗೊಂಡಿದೆ. ಈಗಾಗಲೇ ಅಭಿಯಾನದಲ್ಲಿ ಪಾಲ್ಗೊಂಡಿರುವ ನಗರದ ಸುಮಾರು 20,339 ಜನ ತಮ್ಮ ಅಭಿಪ್ರಾಯಗಳನ್ನು ತಿಳಿಸಿದ್ದಾರೆ. ಬೆಳಗಾವಿ ನಗರದ ಒಟ್ಟು ಸಂಖ್ಯೆಯಲ್ಲಿ ಶೇ. 5 ರಷ್ಟು ಜನ ತಮ್ಮ ಅಭಿಪ್ರಾಯ ತಿಳಿಸಿದರೆ ನಿಗದಿತ ಗುರಿ ಮುಟ್ಟಬಹುದು. ಕಸ, ಶೌಚಾಲಯ ನಿರ್ವಹಣೆ ಸೇರಿದಂತೆ ಒಟ್ಟು ಐದು ಪ್ರಶ್ನೆಗಳ ಸರಣಿ ಇದ್ದು, ಅಭಿಯಾನದ ಸ್ಕ್ಯಾನರನ್ನು ಸ್ಕ್ಯಾನ್ ಮಾಡಿ ಪ್ರಶ್ನೆಗಳಿಗೆ ಉತ್ತರಿಸಿ ತಮ್ಮ ಅಭಿಪ್ರಾಯ ತಿಳಿಸಬಹುದು.

ಪಾಲಿಕೆಯಿಂದ ಅಭಿಯಾನದ ಪ್ರತಿನಿಧಿಗಳು ಸಹ ವಿವಿಧ ಸಂಸ್ಥೆಗಳಿಗೆ ಹಾಗೂ ಸಾರ್ವಜನಿಕ ಸ್ಥಳಗಳಿಗೆ ಭೇಟಿ ನೀಡುತ್ತಿದ್ದಾರೆ ಅವರೊಂದಿಗೆ ಸಹಕರಿಸಿ ಇಲ್ಲವೇ ಸ್ವತಹ ತಾವೇ ಯಾಪ್ ಮೂಲಕ ಅಭಿಪ್ರಾಯಗಳನ್ನು ತಿಳಿಸಿ ಅಭಿಯಾನ ಯಶಸ್ವಿಗೊಳಿಸಬೇಕೆಂದು ಪಾಲಿಕೆ ಆಯುಕ್ತರಾದ ಕಾರ್ತಿಕ್ ಎಂ ಅವರು ಸಾರ್ವಜನಿಕರಲ್ಲಿ ಕೋರಿದ್ದಾರೆ.

ಆತ್ಮವಿಶ್ವಾಸದಿಂದ ಗುರಿ ಸಾಧಿಸಿ: ಬಸವರಾಜ

ಗೋಕಾಕ: ವಿದ್ಯಾರ್ಥಿಗಳು ಆತ್ಮ ವಿಶ್ವಾಸದಿಂದ ನಿರ್ದಿಷ್ಟ ಗುರಿಯೊಂದಿಗೆ ನಿರಂತರ ಅಧ್ಯಯನ ಶೀಲರಾದರೆ ಯಶಸ್ಸು ನಿಶ್ಚಿತವೆಂದು ಐಎಫ್‌ಎಸ್ ಪರೀಕ್ಷೆಯಲ್ಲಿ ಪ್ರಥಮ ಸ್ಥಾನ ಪಡೆದ ಅಥಣಿ ಬಸವರಾಜ ಕೆಂಪವಾಡ ಹೇಳಿದರು.

ನಗರದ ಕೆಎಲ್‌ಇ ಸಿ ಎಸ್ ಅಂಗಡಿ ಪದವಿ ಪೂರ್ವ ಮಹಾವಿದ್ಯಾಲಯದಲ್ಲಿ ನಡೆದ ಪ್ರೇರಣಾ ಕಾರ್ಯಕ್ರಮದಲ್ಲಿ ಸತ್ಕಾರ ಸ್ವಿಕರೀಸಿ ಮಾತನಾಡಿ, ಈ ಸಂಸ್ಥೆಯವರು ಇಂತಹ ಪರೀಕ್ಷೆಗಳಲ್ಲಿ ಪಾಲ್ಗೊಳ್ಳಲು ಮಾರ್ಗದರ್ಶನ ನೀಡುತ್ತಿರುವದು ಮಾದರಿಯಾಗಿದೆ. ಇದರ ಸದುಪಯೋಗ ಹಾಗೂ ಗುರುಗಳ ಮಾರ್ಗದರ್ಶನದಲ್ಲಿ ಪ್ರಯತ್ನಶೀಲರಾಗಿ ಸಾಧಕರಾಗಿರೆಂದು ಹಾರೈಸಿದರು.

ಕೆಎಲ್‌ಇ ಸಂಸ್ಥೆ ನಿರ್ದೇಶಕ ಜಯಾನಂದ ಮುನವಳ್ಳಿ, ಸ್ಥಳೀಯ ಆಡಳಿತ ಮಂಡಳಿ ಅಧ್ಯಕ್ಷ ಎಂ.ಡಿ.ಚುನಮರಿ, ಆಡಳಿತಾಕಾರಿ ಜಿ.ಎಂ.ಅಂದಾನಿ, ಪ್ರಾಚಾರ್ಯ ಎಂ.ಎ.ಪಾಟೀಲ, ಅಮೃತ ಜಕ್ಕಲಿ, ಎಂ.ಎನ್.ಕೌಜಲಗಿ, ಧಾರವಾಡದ ಜ್ಞಾನಕಾಶಿ ನಿರ್ದೇಶಕ ಮಹಿಪಾಲ ರೆಡ್ಡಿ ಇದ್ದರು.



ಕಿರುಸುದ್ದಿ

ಗೋ ಹತ್ಯೆ ನಿಷೇಧಿಸಿ



ಮುಧೋಳ: ಭಾರತ ದೇಶವು ಎಲ್ಲ ಧರ್ಮಗಳಿಗೆ, ಜಗತ್ತಿಗೆ ಮಾದರಿ ಆಗುವಂತೆ ಒಂದು ಸ್ವರ್ಗದ ರೀತಿಯಲ್ಲಿ ಸೌಹಾರ್ದತೆ ಹಾಗು ಏಕತೆಗೆ ಪ್ರತೀಕವಾಗಿದ್ದು, ಆದರೆ ಕೆಲವು ರಾಜಕೀಯ ಪಕ್ಷಗಳು ಹಾಗು ರಾಜಕಾರಣಿಗಳು ಗೋ ಹತ್ಯೆ ವಿಷಯವನ್ನು ಪದೇ ಪದೇ ತೆಗೆದು ದೇಶದಲ್ಲಿ ಅಶಾಂತಿ ಉಂಟು ಮಾಡಿ ಇಲ್ಲಿರುವ ಆನೇಕ ಧರ್ಮಗಳ ನಡುವೆ ಬಿರುಕು ಮೂಡಿಸುವ ವಾತಾವರಣ ಸೃಷ್ಟಿ ಮಾಡ್ತಾ ಇರೋದು ಅತ್ಯಂತ ದುಃಖದ ಸಂಗತಿ. ಕಾರಣ ಗೋವವನ್ನು ರಾಷ್ಟ್ರೀಯ ಪ್ರಾಣಿ ಅಂತಾ ಘೋಷಿಸಿ ದೇಶದಲ್ಲಿ ಗೋ ಹತ್ಯೆಯನ್ನು ಸಂಪೂರ್ಣವಾಗಿ ನಿಷೇಧಿಸಬೇಕು. ಹಾಗೂ ರಾಜಕೀಯ ಷಡ್ಯಂತ್ರಗಳನ್ನು ಕೊನೆಗೊಳಿಸಲು ಮತ್ತು ಧಾರ್ಮಿಕ ಭಾವನೆಗಳನ್ನು ಗೌರವಿಸಲು ಗೋವವನ್ನು ರಾಷ್ಟ್ರೀಯ ಪ್ರಾಣಿ ಅಂತಾ ಕೇಂದ್ರ ಸರಕಾರ ಘೋಷಣೆ ಮಾಡಬೇಕು ಎಂದು ರಾಷ್ಟ್ರೀಯ ಸೆಕ್ಯುಲರ್ ಹಾಗು ಮಾನವ ಹಕ್ಕುಗಳ ಸಾಮಾಜಿಕ ನ್ಯಾಯ ಮಂಡಳಿಯ ಬಾಗಲಕೋಟೆ ಜಿಲ್ಲಾ ಅಧ್ಯಕ್ಷ ಫಜಲ್ ಮೋಮೀನ ಪತ್ರಿಕೆ ಮೂಲಕ ಆಗ್ರಹಿಸಿದ್ದಾರೆ.

ಇಂದಿನಿಂದ ಜಾತ್ರಾ ಮಹೋತ್ಸವ

ಕಲಾದಗಿ: ಸಮೀಪದ ಖಜ್ಜಿಡೋಣಿ ಗ್ರಾಮದಲ್ಲಿ ಮೇ 28ರಿಂದ 31ರ ವರೆಗೆ ದುರ್ಗಾದೇವಿ ಅಗ್ನಿ ಜಾತ್ರಾ ಮಹೋತ್ಸವ ಜರುಗಲಿದೆ. ಮೇ 28ರಂದು ತಾಯಮ್ಮದೇವಿ ಮತ್ತು ಮಾರುತೇಶ್ವರ ದೇವರಿಗೆ ಪಾದುಕೆ ಸಲ್ಲಿಸುವ ಕಾರ್ಯಕ್ರಮ ನಡೆಯಲಿದ್ದು ವಿವಿಧ ಧಾರ್ಮಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಲಿವೆ ಮಧ್ಯಾಹ್ನ ಅನ್ನ ಪ್ರಸಾದ ನಡೆಯುತ್ತದೆ. ಹೆಲಿಕಾಪ್ಟರ ಬೈಜ್ ಗೆಳೆಯರ ಬಳಗದಿಂದ ಎರಡು ಹಲ್ಲಿನ ಹೋರಿ ಬಂಡಿ ಸ್ಪರ್ಧೆ ನಡೆಯಲಿದೆ. ಮತ್ತು ಎರಡು ಹಲ್ಲಿನ ಟಗರಿನ ಕಾಳಗ, ನಾಲ್ಕು ಹಲ್ಲಿನ ಟಗರಿನ ಕಾಳಗ, ಎಂಟು ಹಲ್ಲಿನ ಟಗರಿನ ಕಾಳಗ ಸ್ಪರ್ಧೆ ಆಯೋಜನೆ ಮಾಡಲಾಗಿದೆ ಎಂದು ಜಾತ್ರಾ ಕಮೀಟಿಯವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಉಚಿತ ಶಿಬಿರ ಇಂದು

ಅಮ್ಮಿನಗಡ: ಸ್ವಾತಂತ್ರ್ಯ ಹೋರಾಟಗಾರ ವೀರ ಸಾವರ್ಕರ್ ಅವರ 143ನೇ ಜಯಂತ್ಯುತ್ಸವ ನಿಮಿತ್ತ 'ವೀರ ಸಾವರ್ಕರ್ ಯುವಸೇನೆ ಸುಳೇಭಾವಿ' ಅವರ ಸಹಯೋಗದೊಂದಿಗೆ ಹಾಗೂ 'ಜಯಪ್ರಿಯಾ ಕಣ್ಣಿನ ಆಸ್ಪತ್ರೆ, ಹುಬ್ಬಳ್ಳಿ' ಜಂಟಿ ಆಶ್ರಯದಲ್ಲಿ ಸಾರ್ವಜನಿಕರಿಗಾಗಿ ಉಚಿತ ಕಣ್ಣಿನ ತಪಾಸಣೆ ಮತ್ತು ಉಚಿತ ಕಣ್ಣಿನ ಶಸ್ತ್ರಚಿಕಿತ್ಸಾ ಶಿಬಿರ ಮೇ 28ರಂದು ಗುರುವಾರ ಬೆಳಗ್ಗೆ 10 ಗಂಟೆಯಿಂದ ಮಧ್ಯಾಹ್ನ 3 ಗಂಟೆಯವರೆಗೆ ಕಾಳಿಕಾಂಬಾ ದೇವಸ್ಥಾನದ ಆವರಣ, ಸುಳೇಭಾವಿಯಲ್ಲಿ ಹಮ್ಮಿಕೊಳ್ಳಲಾಗಿದೆ. ಶಿಬಿರಕ್ಕೆ ಬರುವ ಸಾರ್ವಜನಿಕರು ಹಾಗೂ ರೋಗಿಗಳು ತಮ್ಮೊಂದಿಗೆ ಕಡ್ಡಾಯವಾಗಿ ಆಧಾರ್ ಕಾರ್ಡ್ ಮತ್ತು ರೇಷನ್ ಕಾರ್ಡ್ ಅನ್ನು ತೆಗೆದುಕೊಂಡು ಬರಬೇಕಾಗಿ ವಿನಂತಿಸಲಾಗಿದೆ. ಸುಳೇಭಾವಿ ಹಾಗೂ ಸುತ್ತಮುತ್ತಲಿನ ಗ್ರಾಮಗಳ ಸಾರ್ವಜನಿಕರು ಮತ್ತು ಕಣ್ಣಿನ ಸಮಸ್ಯೆ ಇರುವ ರೋಗಿಗಳು ಈ ಉಚಿತ ಶಿಬಿರದ ಸದುಪಯೋಗ ಪಡೆದುಕೊಳ್ಳಬೇಕಾಗಿ ವೀರ ಸಾವರ್ಕರ್ ಯುವಸೇನೆ ಪದಾಧಿಕಾರಿಗಳು ಪ್ರಕಟಣೆಯಲ್ಲಿ ಕೋರಿದ್ದಾರೆ.

ಮಾವಾ ಅಡ್ಡೆಗಳ ಮೇಲೆ ದಾಳಿ

ಬಾಗಲಕೋಟೆ: ಮಾವ ಅಡ್ಡೆಗಳ ಮೇಲೆ ದಾಳಿ ನಡೆಸಿದ ಬಾಗಲಕೋಟೆ ಗ್ರಾಮೀಣ ಪೊಲೀಸ್ ಠಾಣಾಧಿಕಾರಿಗಳು ಮಾವಾ ತಯಾರಿಸುವ ಇಬ್ಬರು ವಿರುದ್ಧ ಪ್ರಕರಣ ದಾಖಲಿಸಿ, ಮಾವಾ ತಯಾರಾಗುವ ಸಾಮಾಗ್ರಿಗಳನ್ನು ಪೊಲೀಸರು ವಶಕ್ಕೆ ಪಡೆದರು. ತಾಲೂಕಿನ ಮುಚಖಂಡಿ ತಾಂಡಾದ ಎರಡು ಸ್ಥಳಗಳಲ್ಲಿ ದಾಳಿ ನಡೆಸಿದ ಗ್ರಾಮೀಣ ಪೊಲೀಸ್ ಠಾಣಾಧಿಕಾರಿಗಳು 250 ಪ್ಯಾಕೆಟ್ ಮಾವಾ, ಸುಮಾರು 7 ಕೆಜಿ ಮಾವಾ ಹಾಗೂ 15 ಕೆಜಿ ಕಚ್ಚಾ ವಸ್ತುಗಳನ್ನು ವಶಪಡಿಸಿಕೊಂಡಿದ್ದಾರೆ. ಮಾವಾ ತಯಾರಿಸುತ್ತಿದ್ದ ಶ್ರೀನಿವಾಸ ರಾಠೋಡ್ ಮತ್ತು ಶಂಕರ್ ಪವಾರ ವಿರುದ್ಧ ಪ್ರಕರಣಗಳನ್ನು ದಾಖಲಿಸಿಕೊಂಡಿದ್ದಾರೆ. ಮಾವಾ ಎಂಬುದು ಕ್ಯಾನ್ಸರ್ ಸೇರಿದಂತೆ ಗಂಭೀರ ಆರೋಗ್ಯ ಸಮಸ್ಯೆಗಳಿಗೆ ಕಾರಣವಾಗುವ ಹಾಗೂ ಸಾರ್ವಜನಿಕ ಆರೋಗ್ಯಕ್ಕೆ ಹಾನಿಕಾರಕವಾದ ಪದಾರ್ಥವಾಗಿದೆ. ಬಾಗಲಕೋಟೆ ಜಿಲ್ಲಾ ಪೊಲೀಸರು ಮಾವಾ ನಿರ್ಮೂಲನೆಗೆ ಬದ್ಧರಾಗಿದ್ದು, ಮಾವಾ ಮಾರಾಟಗಾರರು ಹಾಗೂ ಸಂಗ್ರಹಿಸುವವರ ವಿರುದ್ಧ ಕಂಖ ಕ್ರಮ, ಬಾಂಡ್ ಜಪ್ತಿ ಸೇರಿದಂತೆ ಕಠಿಣ ಕಾನೂನು ಕ್ರಮಗಳನ್ನು ಮುಂದುವರಿಸಲಾಗುವುದು. ಸಾರ್ವಜನಿಕರು ಮಾವಾ ಹಾಗೂ ಇತರೆ ಅಕ್ರಮ ಚಟುವಟಿಕೆಗಳ ವಿರುದ್ಧ ಬಾಗಲಕೋಟೆ ಜಿಲ್ಲಾ ಪೊಲೀಸರೊಂದಿಗೆ ಕೈಜೋಡಿಸುವಂತೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿದ್ಧಾರ್ಥ ಗೋಯಲ್ ತಿಳಿಸಿದ್ದಾರೆ.



ಕಲಾದಗಿ: ಗ್ರಾಮದ ಹರಣಶಿಕಾರಿ ಕಾಲೋನಿಯ ದಂಡಿನ ದುರ್ಗಾದೇವಿ ಜಾತ್ರಾ ಮಹೋತ್ಸವದ ನಿಮಿತ್ತ ಬುಧವಾರ ಸಂಗ್ರಾಮ ಕಲ್ಲು ಎತ್ತುವ ಸ್ಪರ್ಧೆಗೆ ಚಾಲನೆ ನೀಡಲಾಯಿತು. ತಾಪಂ ಮಾಜಿ ಉಪಾಧ್ಯಕ್ಷ ಸಂಗಣ್ಣ ಮುಧೋಳ, ನಾರಾಯಣ ಹಾದಿಮನಿ, ಬಂದೇನವಾಜ ಸೌದಾಗರ, ಭೀಮಶಿ ಕರಡಿಗುಡ್ಡ, ಮೆಹಬೂಬ ಬನ್ನೂರ, ರಜಾಕ ಗೌಂಡಿ, ಮಸ್ತಾನ ಜಲಗೇರಿ ಸೇರಿದಂತೆ ಅನೇಕರು ಇದ್ದರು.

ಶರಣ ಸಂಸ್ಕೃತಿಯಿಂದ ಜಗದೋದ್ಧಾರ

ವಿಜಯಪುರ: ತಮ್ಮನ್ನು ತಾವು ವಿಮರ್ಶೆಗೆ ಒಳಪಡಿಸಿಕೊಳ್ಳುವ ಆತ್ಮ ಪ್ರಜ್ಞೆಗೆ ಬಸವ ಪ್ರಜ್ಞೆ ಎನ್ನುವರು. ಇದು ವಚನ ಸಾಹಿತ್ಯದಲ್ಲಿ ಅಮೂಲ್ಯ ನಿಧಿಯಾಗಿ ಹರಡಿಕೊಂಡಿದೆ. ಈ ಸಂಪತ್ತಿನಿಂದ ಮನುಷ್ಯ ತನ್ನ ಬದುಕನ್ನು ಶ್ರೀಮಂತ ಗೊಳಿಸಿ ಕೊಂಡು ಪುನೀತನಾಗಬೇಕೆಂದು ಎಸ್.ಎಂ.ಶೇಖ ಹೇಳಿದರು. ಅವರು ಜಿಲ್ಲಾ ವೀರಶೈವ ಲಿಂಗಾಯತ ಮಹಾಸಭೆಯಲ್ಲಿ ಶರಣ ಸಾಹಿತ್ಯ ಪರಿಷತ್ತು ಹಮ್ಮಿಕೊಂಡಿದ್ದ ಲಿಂ.ಅಮರಪ್ಪ ಕುರುಬರ ಅವರ ದತ್ತಿ ಸ್ಮರಣೆ ಕಾರ್ಯಕ್ರಮದಲ್ಲಿ ಉಪನ್ಯಾಸಕರಾಗಿ ಮಾತನಾಡಿದರು. ಬಸವಾದಿ ಶರಣರ ವಚನಗಳಲ್ಲಿ ವಚನಗಳ ಪ್ರಸ್ತುತತೆ ಎಂಬ ವಿಷಯ ಕುರಿತು ವಿದ್ವತ್ಪೂರ್ಣವಾಗಿ ಮಾತನಾಡಿದರು.ವೀರಶೈವ ಲಿಂಗಾಯತ ಮಹಾಸಭೆಯ ಅಧ್ಯಕ್ಷ ವಿ.ಸಿ.ನಾಗಠಾಣ ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿ ಮಕ್ಕಳನ್ನು ಸಚ್ಚಾರಿತ್ರ್ಯವಂತರನ್ನಾಗಿ ಮಾಡುವಲ್ಲಿ ತಾಯಿ-ತಂದೆಯರ ಪಾತ್ರ ಹೆಚ್ಚಿರುತ್ತದೆ ಎಂದು ಹೇಳಿದರು.ಡಾ.ವಿ.ಡಿ.ಐಹೊಳ್ಳಿಯವರು ಸ್ವಾಗತಿಸಿದರು. ಜಂಬುನಾಥ ಕಂಚ್ಯಾಣಿ ಪ್ರಾಸ್ತಾವಿಕವಾಗಿ ಮಾತನಾಡಿದರು. ದತ್ತಿ ದಾಸೋಹಿಗಳಾದ ನಾರಾಯಣಪ್ಪ ಕುರುಬರ ಅವರು ಮಾತನಾಡಿ ಹೆತ್ತವರ ಸ್ಮರಣೆಯನ್ನು ಮಾಡಲು ಅವಕಾಶ ನೀಡಿದ ಶರಣಸಾಹಿತ್ಯ ಪರಿಷತ್ತಿಗೆ ಕೃತಜ್ಞತೆ ಸಲ್ಲಿಸಿದರು. ನಿಕಟಪೂರ್ವ ಅಧ್ಯಕ್ಷ ಮ.ಗು.ಯಾದವಾಡ ವಂದಿಸಿದರು. ಬಿ.ಎಂ.ಪಾಟೀಲ್, ಬಿ.ಟಿ.ಈಶ್ವರಗೊಂಡ, ಜಗದೀಶ್ ಪಟ್ಟಣಶೆಟ್ಟಿ, ಎಸ್.ವೈ. ಗದಗ, ಬಸವರಾಜ ಪಟ್ಟಣಶೆಟ್ಟಿ, ದೇವೇಂದ್ರ ಡಂಬಳ ಇದ್ದರು.



ವಿಜಯಪುರ: ಜಿಲ್ಲಾ ವೀರಶೈವ ಲಿಂಗಾಯತ ಮಹಾಸಭೆಯಲ್ಲಿ ಶರಣ ಸಾಹಿತ್ಯ ಪರಿಷತ್ತು ಹಮ್ಮಿಕೊಂಡಿದ್ದ ಲಿಂ.ಅಮರಪ್ಪ ಕುರುಬರ ಅವರ ದತ್ತಿ ಸ್ಮರಣೆ ಕಾರ್ಯಕ್ರಮ ನಡೆಯಿತು. ಎಸ್.ಎಂ.ಶೇಖ, ಶಕುಂತಲಾ ಮೋಸಲಗಿ, ಕಮಲಾ ಮುರಾಳ, ಎಲ್.ಪಿ.ಬಿರಾದಾರ, ಮಾಧವ ಗುಡಿ, ಅಶೋಕ ಹಂಚಲಿ, ಚೋಳಕೆ, ಬಿ.ಸಿ.ಸಾರವಾಡ, ಬಸವರಾಜ ಗೋಟ್ಯಾಳ, ಆರ್.ಎಸ್.ಬಿರಾದಾರ, ಶಿವಪ್ಪ ಶಿವಣಗಿ, ಸುಭಾಸ ಬೆಟಗೇರಿ, ಎಸ್.ಬಿ.ದೊಡಮನಿ, ಲಕ್ಷ್ಮಿ ಕುರುಬರ ಹಾಗೂ ಯರಗಲ್ಲ ಗ್ರಾಮಸ್ಥರು ಉಪಸ್ಥಿತರಿದ್ದರು.

ಹಿರಿಯ ಸಾಹಿತಿ ಡಾ.ಬಾಳಾಸಾಹೇಬ ಲೋಕಾಪುರ ಸಲಹೆ

ಸಾಹಿತಿಗಳು ಸಮಕಾಲಿನ ಅರಿವು ಹೊಂದಲಿ

ಮುಧೋಳ: ಸಾಹಿತ್ಯ ಸೃಷ್ಟಿಯತ್ತ ಪ್ರತಿಯೊಬ್ಬರೂ ಆಸಕ್ತಿ ಬೆಳೆಸಿಕೊಳ್ಳಬೇಕು. ಸಾಹಿತಿಗಳು ಸಮಾಜದಲ್ಲಿ ಜನ ಓದುವಂತಹ ಕೃತಿಗಳನ್ನು ರಚಿಸಬೇಕೆಂದು ಹಿರಿಯ ಸಾಹಿತಿ ಡಾ.ಬಾಳಾಸಾಹೇಬ ಲೋಕಾಪುರ ಕರೆ ನೀಡಿದರು.

ಸಮೀಪದ ಜೀರಗಾಳ ಗ್ರಾಮದ ಡಾ.ಶಿವಾನಂದ ಕುಬಸದ ಅವರ ಪರ್ಣಕುಟಿ ಆವರಣದಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು, ಬಾಗಲಕೋಟೆ ಹಾಗೂ ಮುಧೋಳ ಅವರ ಸಹಯೋಗದಲ್ಲಿ ವಿಜಯಪುರ ಜಿಲ್ಲಾ 7ನೇ ಕನ್ನಡ ಸಾಹಿತ್ಯ ಸಮ್ಮೇಳನ ಸಮೀರವಾಡಿ, ಬಾಗಲಕೋಟೆ ಜಿಲ್ಲಾ ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನ ಬೀಳಗಿ, ಬೀಳಗಿ ತಾಲೂಕು ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನ ಬೀಳಗಿ, ಪ್ರಮೋದ ಶಂಕರ ತೆಗ್ಗಿ ಸೌಜನ್ಯ ತೆಗ್ಗಿ ಅವರ ಮದುವೆ ಸವಿನೆನಪಿನ ದತ್ತಿ ಪ್ರಶಸ್ತಿ ಪ್ರದಾನ ಸಮಾರಂಭ-2025 ಕಾರ್ಯಕ್ರಮದಲ್ಲಿ ದತ್ತಿ ಪ್ರಶಸಿ ತಪ್ರದಾನ ಮಾಡಿ ಮಾತನಾಡಿದರು.

ಸಾಹಿತ್ಯ ಕ್ಷೇತ್ರದಲ್ಲಿ ನಮ್ಮೆಲ್ಲರ ಮೇಲೆ ಬಹು ದೊಡ್ಡ ಜವಾಬ್ದಾರಿಗಳಿವೆ. ಸಾಹಿತಿಗಳು ಸಮಕಾಲಿನ ಅರಿವು ಹೊಂದಬೇಕು. ಕಾವ್ಯಗಳು ಬರೆಯುವದು ಬಹಳ ಕಷ್ಟದ ಕೆಲಸ, ನಾವು ಪ್ರಶಸ್ತಿಗಳ ಬೆನ್ನು ಹತ್ತದೇ ಅವು ತಾನಾಗಿಯೇ ಬರಬೇಕೆಂದು ಸಾಹಿತಿಗಳಿಗೆ ಕಿವಿಮಾತು ಹೇಳಿದರು.

ಚಿಂತನಸಿರಿ ಅಧ್ಯಕ್ಷ ಡಾ.ಶಿವಾನಂದ ಕುಬಸದ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು ಕನ್ನಡ ಸಾಹಿತ್ಯ ಪರಿಷತ್ತು ತನ್ನದೇ ಆದ ಇತಿಹಾಸ ಹೊಂದಿದೆ. ಕನ್ನಡ ಸೇವೆಯ ಕಾರ್ಯ ನಿರಂತರವಾಗಿ ಮಾಡುತ್ತ ಬಂದಿದೆ. ಲೇಖಕರನ್ನು ಗುರ್ತಿಸಿ ದತ್ತಿ ಪ್ರಶಸ್ತಿಗಳನ್ನು ನೀಡುತ್ತಿರುವ ಕಾರ್ಯ ಶ್ಲಾಘನೀಯ ಎಂದರು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಜಿಲ್ಲಾಧ್ಯಕ್ಷ ಶಿವಾನಂದ ಶೆಲ್ಲಿಕೇರಿ ಅಧ್ಯಕ್ಷತೆ ವಹಿಸಿ ಮಾತನಾಡಿ, ದತ್ತಿ ದಾನಿಗಳ ಆಶಯದಂತೆ ಹಾಗೂ ಹಿರಿಯರ ಮಾರ್ಗದರ್ಶನದೊಂದಿಗೆ ಕನ್ನಡ ಸಾಹಿತ್ಯ ಪರಿಷತ್ತ ಲೇಖಕರಿಗೆ, ಕಲಾವಿದರಿಗೆ ಪ್ರೋತ್ಸಾಹಿಸುವದರ ಜೊತೆಗೆ ಅವರನ್ನು ಪ್ರಶಸ್ತಿಗಳನ್ನು ನೀಡಿ ಗೌರವಿಸಲಾಗುತ್ತಿದೆ. ಸುಮಾರು 150 ಲೇಖಕರಿಗೆ ದತ್ತಿ ಪ್ರಶಸ್ತಿಗಳನ್ನು ನೀಡುತ್ತ ಬಂದಿದೆ. ಹೊಸ ದತ್ತಿ ಸಂಗ್ರಹಿಸುವ ಕಾರ್ಯ ಕಸಾಪ ಮಾಡುತ್ತಿದೆ ಎಂದು ತಿಳಿಸಿದರು.

ಜಿಲ್ಲಾ ತೋಟಗಾರಿಕೆ ವಿಶ್ವ ವಿದ್ಯಾಲಯ ಹಣಕಾಸು ನಿಯಂತ್ರಣಾಧಿಕಾರಿ ಮಲ್ಲಿಕಾರ್ಜುನ ಶೆಲ್ಲಿಕೇರಿ ಅಭಿನಂದನಾ ನುಡಿಗಳನ್ನಾಡಿದರು. ಮುಧೋಳ ತಾಲೂಕು ರನ್ನ ಪ್ರತಿಷ್ಠಾನ ಸದಸ್ಯ ಡಾ.ಕೆ.ಎಲ್.ಉದುಪುಡಿ, ಜಿಲ್ಲಾ ವಾಣಿಜ್ಯತೆರಿಗೆ ಅಧಿಕಾರಿ ಗಿರೀಶ ಮಂಗಳೂರ, ನ್ಯಾಯವಾದಿ ಪ್ರಕಾಶ ವಸ್ತದ, ಕಲಾದಗಿಯ ಹಿರಿಯ ಪತ್ರಕರ್ತ ದ.ರಾ.ಪುರೋಹಿತ, ಸರ್ಕಾರಿ ನೌಕರರ ಸಂಘ, ಬೆಂಗಳೂರು ಸಂಘಟನಾ ಕಾರ್ಯದರ್ಶಿ ರಮೇಶ ನಿಡೋಣಿ, ತಾಲೂಕಾ ಶಶಿ ಟ್ರಸ್ಟ್ ಸಂಚಾಲಕ ಚಂದ್ರಶೇಖರ ದೇಸಾಯಿ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಜಿಲ್ಲಾಧ್ಯಕ್ಷ ಶಿವಾನಂದ ಶೆಲ್ಲಿಕೇರಿ ಅಧ್ಯಕ್ಷತೆ ವಹಿಸಿದ್ದರು. ಜಿಲ್ಲಾ ಕಾರ್ಯದರ್ಶಿ ಸಿ.ಎಸ್. ನಾಗನೂರ, ಮುಧೋಳ ತಾಲೂಕಾ ಕಸಾಪ ಅಧ್ಯಕ್ಷ ಆನಂದ ಪೂಜಾರಿ , ರಬಕವಿ-ಬನಹಟ್ಟಿ ತಾಲೂಕಾ ಕಸಾಪ ಅಧ್ಯಕ್ಷ ಮ. ಕೃ.ಮೇಗಾಡಿ, ಲೋಕಾಪುರ ಕಸಾಪ ವಲಯ ಘಟಕ ಅಧ್ಯಕ್ಷ ಎಸ್.ಎಂ.ರಾಮದುರ್ಗ, ಬೆಳಗಲಿ ಕಸಾಪ ವಲಯ ಘಟಕ ಅಧ್ಯಕ್ಷ ಮಹಾಂತೇಶ ಕುಂಬಾರ, ಗಲಗಲಿ ಕಸಾಪ ವಲಯ ಘಟಕ ಅಧ್ಯಕ್ಷ ಎಂ.ಪಿ.ಕಾಶಿ, ಬಿ.ಎಫ್. ಹೊರಕೇರಿ, ಬಿಆರ್‌ಪಿ ಸಂಗಮೇಶ ನೀಲಗುಂದ, ಎಂ.ಜಿ.ದಾಸರ, ಬಾಹುಬಲಿ ಬಿರಾದಾರ, ಡಾ.ಶಂಕರ ಬೈಚಬಾಳ, ಮಲ್ಲಿಕಾರ್ಜುನ ಹೆಗ್ಗಳಗಿ, ಜಗದೀಶ ಹಾದಿಮನಿ, ಸುರೇಶ ರಾಜಮಾನೆ, ವಿಷ್ಣು ವರ್ಚಗಲ್, ಜಿಲ್ಲಾ ಮಾಧ್ಯಮ ಕಾರ್ಯದರ್ಶಿ ಸಲೀಮ ಕೊಪ್ಪದ, ಕಜಾಪ ಅಧ್ಯಕ್ಷ ರಮೇಶ ಆರಕೇರಿ, ರಾಣಿ ಬಡಗಿ, ವಿರೇಶ ಮಡಿವಾಳರ, ಬಾಪು ಖಾಡೆ, ಹಾಗೂ ಸಾಹಿತಿಗಳು, ಲೇಖಕರು ಇದ್ದರು.



ಬೂತ್‌ಮಟ್ಟದ ಏಜೆಂಟರ್ ನೇಮಕಕ್ಕೆ ಸೂಚನೆ

ಬಾಗಲಕೋಟೆ: ಭಾರತ ಚುನಾವಣೆ ಆಯೋಗದ ನಿರ್ದೇಶನದಂತೆ ಜಿಲ್ಲೆಯಲ್ಲಿ 3 ಹಂತದ ಮತದಾರರ ಪಟ್ಟಿಗಳ ವಿಶೇಷ ಸಮಗ್ರ ಪರಿಷ್ಕರಣೆ ಕೈಗೊಳ್ಳಲಾಗುತ್ತಿದ್ದು, ಮಾನ್ಯತೆ ಪಡೆದ ರಾಷ್ಟ್ರೀಯ ಹಾಗೂ ರಾಜ್ಯ ರಾಜಕೀಯ ಪಕ್ಷಗಳು ಬೂತ್ ಮಟ್ಟದ ಏಜೇಂಟರ್(ಬಿಎಲ್‌ಎ)ಗಳನ್ನು ನೇಮಿಸಿಕೊಳ್ಳಬೇಕು ಎಂದು ಜಿಲ್ಲಾಧಿಕಾರಿ ಸಂಗಪ್ಪ ಸೂಚಿಸಿದರು.

ಜಿಲ್ಲಾಧಿಕಾರಿ ಕಛೇರಿ ಸಭಾಂಗಣದಲ್ಲಿ ಬುಧವಾರ ಮತದಾರರ ಪಟ್ಟಿಗಳ ವಿಶೇಷ-ಸಮಗ್ರ ಪರಿಷ್ಕರಣೆ ಕುರಿತಂತೆ ವಿವಿಧ ರಾಜಕೀಯ ಪಕ್ಷಗಳ ಮುಖಂಡರೊಂದಿಗೆ ಸಭೆ ನಡೆಸಿ ಮಾತನಾಡಿದ ಅವರು, ಮತದಾರರ ಪಟ್ಟಿಗಳ ವಿಶೇಷ ಸಮಗ್ರ ಪರಿಷ್ಕರಣೆಯು, ಮತದಾರರು, ರಾಜಕೀಯ ಪಕ್ಷಗಳು ಮತ್ತು ಚುನಾವಣಾ ಸಿಬ್ಬಂದಿಗಳನ್ನು ಒಳಗೊಂಡಂತಹ ಪಾರದರ್ಶಕ ಹಾಗೂ ಪಾಲ್ಗೊಳ್ಳುವಿಕೆಯ ಪ್ರಕ್ರಿಯೆಯಾಗಿದ್ದು, ಎಲ್ಲರೂ ಸಹಕಾರ ನೀಡಬೇಕು ಎಂದು ಹೇಳಿದರು.

ಜೂನ 30ರಿಂದ ಜು.29ರ ವರೆಗೆ ಒಂದು ತಿಂಗಳು ಅವಧಿಯಲ್ಲಿ ಜಿಲ್ಲೆಯಾದ್ಯಂತ ಬಿ.ಎಲ್.ಒ ಗಳು ಮನೆ ಮನೆಗೆ ಭೇಟಿ ನೀಡುವರು. ಈ ಸಂದರ್ಭದಲ್ಲಿ ಪ್ರತಿ ಮತದಾರರಿಗೂ ಮುದ್ರಿತವಾದ ಗಣತಿ ನಮೂನೆಗಳನ್ನು ನೀಡಿ ಸಂಗ್ರಹಿಸಲಾಗುವುದು. ಗಣತಿ ನಮೂನೆಗಳ ವಿತರಣೆ ಮತ್ತು ಸಂಗ್ರಹಣೆಗಾಗಿ ಮನೆ ಮನೆಗೆ ಭೇಟಿ ನೀಡುವ ಪ್ರಕ್ರಿಯೆಯಲ್ಲಿ ಮತದಾರರು ಸಹ ಬುತ್ ಮಟ್ಟದ ಅಧಿಕಾರಿಗಳಿಗೆ ಸಂಪೂರ್ಣ ಸಹಕಾರ ನೀಡಬೇಕಾಗುತ್ತದೆ ಎಂದು ತಿಳಿಸಿದರು.

ಹೆಚ್ಚುವರಿ ಜಿಲ್ಲಾಧಿಕಾರಿ ಅಶೋಕ ತೇಲಿ ಮಾತನಾಡಿ, ಬಿ ಎಲ್ ಒ ಗಳು ಕನಿಷ್ಠ ಮೂರು ಬಾರಿ ಮನೆ ಮನೆಗೆ ಭೇಟಿ ನೀಡಲಿದ್ದು, ಒಂದು ವೇಳೆ ಮತದಾರರು ಸಿಗದಿದ್ದ ಪಕ್ಷದಲ್ಲಿ ಮಹಜರು ಸಿದ್ಧಪಡಿಸಿ ವರದಿ ನೀಡಲಿದ್ದಾರೆ, ಮತದಾರರ ಪೈಕಿ ಅವರ ಮನೆಯ ಹಿರಿಯ ನಾಗರಿಕರು ಸಹ ಸಹಿ ಮಾಡಲು ಅವಕಾಶ ಕಲ್ಪಿಸಲಾಗಿರುತ್ತದೆ. ಮತದಾರರ ಪಟ್ಟಿಯ ಸಮಗ್ರ ಪರಿಷ್ಕರಣೆಗೆ ಮತದಾರರು ಹಾಗೂ ರಾಜಕೀಯ ಪಕ್ಷಗಳು ಅಧಿಕಾರಿಗಳು ಪರಸ್ಪರ ಸಹಕಾರ ನೀಡುವುದರೊಂದಿಗೆ ಸಮಗ್ರ ಪರಿಷ್ಕರಣೆ ಪ್ರಕ್ರಿಯೆನ್ನು ಯಶಸ್ವಿಗೊಳಿಸಬೇಕು ಎಂದರು.

ಚುನಾವಣಾ ಶಿರೇಸ್ತೆದಾರ್ ಮಹೇಶ ಪಾಂಡವ ಸೇರಿದಂತೆ ವಿವಿಧ ರಾಜಕೀಯ ಪಕ್ಷಗಳ ಮುಖಂಡರು ಇದ್ದರು.



ಮೇ 30ಕ್ಕೆ ಹೇಮರೆಡ್ಡಿ ಮಲ್ಲಮ್ಮ ನಾಟಕ

ಬಾಗಲಕೋಟೆ: ನಗರದ ವಿದ್ಯಾಗಿರಿಯ ಹೇಮರಡ್ಡಿ ಮಲ್ಲಮ್ಮ ಸೇವಾ ಸಂಸ್ಥೆ ಮತ್ತು ರೆಡ್ಡಿ ಸಮಾಜದ ವಿವಿಧ ಸಂಘಟನೆ ಗಳ ಸಹಯೋಗದಲ್ಲಿ ಮೇ 30ರಂದು ನವನಗರದ ಕಲಾಭವನದಲ್ಲಿ ಹೇಮರಡ್ಡಿ ಮಲ್ಲಮ್ಮನ 604ನೇ ಜಯಂತಿ ಕಾರ್ಯಕ್ರಮ ಮತ್ತು ಹೇಮರಡ್ಡಿ ಮಲ್ಲಮ್ಮ ನಾಟಕ ಪ್ರದರ್ಶನವನ್ನು ಹಮ್ಮಿಕೊಳ್ಳಲಾಗಿದೆ ಎಂದು ಹೇಮರಡ್ಡಿ ಮಲ್ಲಮ್ಮ ಸೇವಾ ಸಂಸ್ಥೆ ಅಧ್ಯಕ್ಷ ಮಹೇಶ ಕಕರಡ್ಡಿ ಹೇಳಿದರು.

ನವನಗರದ ಪತ್ರಿಕಾಭವನದಲ್ಲಿ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಹೇಮರಡ್ಡಿ ಮಲ್ಲಮ್ಮನ ಆದರ್ಶಗಳನ್ನು ಪ್ರತಿಯೊಬ್ಬರೂ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎನ್ನುವ ಉದ್ದೇಶದಿಂದ ಕಾರ್ಯಕ್ರಮ ಅರ್ಥಪೂರ್ಣ ವಾಗಿ ಆಚರಿಸಲು ನಿರ್ಧರಿಸಲಾಗಿದೆ ಎಂದು ಹೇಳಿದರು.

ಮೇ 30ರಂದು ಬೆಳಗ್ಗೆ 10 ಗಂಟೆಗೆ ಕಲಾಭವನದಲ್ಲಿ ಎರೆಹೊಸಳ್ಳಿಯ ರಡ್ಡಿ ಗುರುಪೀಠದ ವೇಮನಾನಂದ ಸ್ವಾಮೀಜಿ ದಿವ್ಯ ಸಾನಿಧ್ಯದಲ್ಲಿ ನಡೆಯುವ ಕಾರ್ಯಕ್ರಮವನ್ನು ಮಾಜಿ ಶಾಸಕಿ, ಕೆಪಿಸಿಸಿ ಮಹಿಳಾ ಘಟಕದ ಅಧ್ಯಕ್ಷೆ ಸೌಮ್ಯಾ ರಡ್ಡಿ ಉದ್ಘಾಟಿಸುವರು. ಸಂಸ್ಥೆಯ ಅಧ್ಯಕ್ಷ ಮಹೇಶ ಕಕರಡ್ಡಿ ಅಧ್ಯಕ್ಷತೆ ವಹಿಸಲಿದ್ದು, ಆಧ್ಯಾತ್ಮಿಕ ಚಿಂತಕ ಪ್ರದೀಪ ಗುರೂಜಿ ಸದ್ಬೋಧನೆ ನೀಡುವರು. ಶಾಸಕ ಉಮೇಶ ಮೇಟಿ, ಸಂಸದ ಪಿ.ಸಿ.ಗದ್ದಿಗೌಡರ, ರಾಜ್ಯಸಭಾ ಸದಸ್ಯ ನಾರಾಯಣಸಾ ಭಾಂಡಗೆ, ಶಾಸಕ ಜೆ.ಟಿ.ಪಾಟೀಲ, ವಿಧಾನ ಪರಿಷತ್ ಶಾಸಕ ಪಿ.ಎಚ್.ಪೂಜಾರ, ಪ್ರಕಾಶ ಹುಕ್ಕೇರಿ, ಹನಮಂತ ನಿರಾಣಿ, ಸುನೀಲಗೌಡ ಪಾಟೀಲ, ಬಿಟಿಡಿಎ ಅಧ್ಯಕ್ಷ ಪ್ರಕಾಶ ತಪಶೆಟ್ಟಿ, ಮಾಜಿ ಸಚಿವರಾದ ಎಸ್.ಆರ್.ಪಾಟೀಲ, ಅಜಯಕುಮಾರ ಸರನಾಯಕ, ಮಾಜಿ ಶಾಸಕರಾದ ವೀರಣ್ಣ ಚರಂತಿಮಠ ಹಾಗೂ ದೊಡ್ಡನಗೌಡ ಪಾಟೀಲ, ಜಿಲ್ಲಾಧಿಕಾರಿ ಸಂಗಪ್ಪ ಮತ್ತು ಅಪರ ಜಿಲ್ಲಾಧಿಕಾರಿ ಅಶೋಕ ತೇಲಿ ಮುಖ್ಯ ಅತಿಥಿಗಳಾಗಿ ಆಗಮಿಸುವರು ಎಂದರು. ಆರ್.ಎಲ್.ಕಟಗೇರಿ, ಮಲ್ಲಿಕಾರ್ಜುನ ಮೆಳ್ಳಿಗೇರಿ, ಎಂ.ಎನ್.ಪಾಟೀಲ, ನಕುಲ್ ಬೆಳ್ಳುಬ್ಬಿ, ಎಸ್.ಟಿ.ಬೆಳಕೊಪ್ಪದ, ದಯಾನಂದ ಪಾಟೀಲ, ರಂಗನಾಥ ಸೋನವಾಲ್ಕರ, ಡಿ.ಎಂ.ಫೈಲ್ ಚಂದ್ರಶೇಖರ ಕಾಮಾ, ರಾಮನಗೌಡ ಜಕ್ಕನಗೌಡ್ರ, ಪಂಡಿತ ಮಾಚಾ ನಾರಾಯಣ ಹಾದಿಮನಿ, ವೆಂಕಮ್ಮ ಅಮಾತೆಪ್ಪನವರ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ ಎಂದು ಮಹೇಶ ಕಕರಡ್ಡಿ ತಿಳಿಸಿದರು. ಸಂಸ್ಥೆಯ ಕಾರ್ಯದರ್ಶಿ ಈಶ್ವರ ಕೋನಪ್ಪನವರ, ವೆಂಕಣ್ಣ ಶೇಷಪ್ಪನವರ, ನಕುಲ್ ಬೆಳ್ಳುಬ್ಬಿ, ಎಸ್.ಟಿ.ಬೆಳಕೊಪ್ಪದ ಇದ್ದರು.



ಶಾಂತಿ, ಸೌಹಾರ್ದತೆ ಕಾಪಾಡುವುದು ಪ್ರತಿಯೊಬ್ಬರ ಜವಾಬ್ದಾರಿ

ಲೋಕಾಪುರ: ಬಕ್ರೀದ್ ಹಬ್ಬವನ್ನು ಪಟ್ಟಣ ಹಾಗೂ ಸುತ್ತಮುತ್ತಲಿನ ಗ್ರಾಮಸ್ಥರು ಸೌಹಾರ್ದಯುತ ಹಾಗೂ ಕಾನೂನುಬದ್ಧವಾಗಿ ಆಚರಿಸಬೇಕು ಎಂದು ಪಿಎಸ್ಐ ಕೆ.ಬಿ.ಜಕ್ಕನ್ನವರ ಹೇಳಿದರು.

ಪಟ್ಟಣದ ಪೋಲಿಸ್ ಠಾಣೆಯಲ್ಲಿ ಮಂಗಳವಾರ ಮುಸ್ಲಿಂ ಮುಖಂಡರು ಹಾಗೂ ವಿವಿಧ ಸಮಾಜದ ಗಣ್ಯರೊಂದಿಗೆ ಶಾಂತಿ ಸಭೆಯಲ್ಲಿ ಮಾತನಾಡಿದ ಅವರು, ಬಕ್ರೀದ್ ಹಬ್ಬವು ತ್ಯಾಗ, ಸಹೋದರತ್ವ ಮತ್ತು ಮಾನವೀಯ ಮೌಲ್ಯಗಳ ಸಂಕೇತವಾಗಿದ್ದು ಸಮಾಜದಲ್ಲಿ ಶಾಂತಿ ಮತ್ತು ಸೌಹಾರ್ದತೆ ಮತ್ತಷ್ಟು ಬಲಪಡಿಸುವ ರೀತಿಯಲ್ಲಿ ಆಚರಣೆ ನಡೆಯಬೇಕು ಎಂದರು. ಜಿಲ್ಲಾ ಗ್ಯಾರಂಟಿ ಯೋಜನಾ ಅನುಷ್ಠಾನ ಸಮಿತಿ ಉಪಾಧ್ಯಕ್ಷ ರಫೀಕ ಬೈರಕದಾರ ಮಾತನಾಡಿ, ಪಟ್ಟಣದಲ್ಲಿ ಹಿಂದೂ-ಮುಸ್ಲಿಂ ಬಾಂಧವರು ಅಣ್ಣ ತಮ್ಮಂದಿರಂತೆ ಉತ್ತಮ ಸಂಬಂಧ ಹೊಂದಿದ್ದೇವೆ. ಎಲ್ಲಾ ಹಬ್ಬಗಳನ್ನು ಪ್ರತಿ ವರ್ಷ ಶಾಂತಿ, ಸೌಹಾರ್ದವಾಗಿ ಆಚರಿಸುತ್ತೇವೆ ಎಂದು ತಿಳಿಸಿದರು.



ಎ.ಎಂ.ಯಾದವಾಡ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಅಲ್ಲಾಸಾಬ ಯಾದವಾಡ ಮಾತನಾಡಿ, ಯಾವುದೇ ಧರ್ಮದ ಸಾಮಾಜಿಕ ವ್ಯವಸ್ಥೆಗೆ ಧಕ್ಕೆ ಆಗಬಾರದು ಯಾವುದೇ ಅಹಿತಕರ ಘಟನೆಗಳಿಗೆ ಅವಕಾಶ ಮಾಡಿಕೊಡದಂತೆ ಹಬ್ಬ ಆಚರಿಸಿ ಎಂದರು.

ಅಂಜುಮನ್-ಎ-ಇಸ್ಲಾಂ ಕಮೀಟಿ ಅಧ್ಯಕ್ಷ ಹಸನಡೋಂಗ್ರಿ ಮಹಾಲಿಂಗಪೂರ ಮಾತನಾಡಿ ಮುಂ. 7 ಗಂಟೆಗೆ ಜಾಮೀಯಾ ಮಸಜೀದಗೆ ಹಾಜರಾಗಿ 7.30 ಕ್ಕೆ ರ್‍ಯಾಲಿ ಪ್ರಾರಂಭಗೊಂಡು ಮೇನ ಬಜಾರ, ಬಸವೇಶ್ವರ ವೃತ್ತ, ಜಾಲಿಕಟ್ಟಿಕ್ರಾಸ ಮುಖಾಂತರ ಈದ್ಗಾ ಮೈದಾನ ತಲುಪಿ ಈದ್-ಉಲ್-ಅದಾ ಬಕ್ರೀದ್ ನಮಾಜ ಮಾಡುವ ಕಾರ್ಯಕ್ರಮ ವಿರುತ್ತದೆ ತಿಳಿಸಿದರು.

ಮಹೇಶ ಹುಗ್ಗಿ, ಗೋವಿಂದಪ್ಪ ಕೌಲಗಿ ಮಾತನಾಡಿದರು. ಪಿಕೆಪಿಎಸ್ ಸದಸ್ಯ ಮಾರುತಿ ರಂಗಣ್ಣವರ, ಅಬ್ದುಲ್ ರೆಹೆಮಾನ ತೊರಗಲ್, ಮಾರುತಿ ಕರೆಣ್ಣವರ, ಗೋಪಾಲ ಲಮಾಣಿ, ಸುಲ್ತಾನ ಕಲಾದಗಿ, ದ್ಯಾವಪ್ಪ ನಾಯ್ಕ, ಕುತುಬು ಅತ್ತಾರ, ಶಬ್ಬೀರ ಚೌಧರಿ, ಅಬ್ದುಲ್ ಮುಲ್ಲಾ ವಿವಿಧ ಸಮಾಜ ಹಾಗೂ ಮುಸ್ಲಿಂ ಮುಖಂಡರು ಮತ್ತು ಪೋಲಿಸ್ ಸಿಬ್ಬಂದಿ ಇದ್ದರು.

ಸಮಯಕ್ಕೆ ಸರಿಯಾಗಿ ಸಿಲಿಂಡರ್ ಪೂರೈಸಿ: ಡಿಸಿ ಸಂಗಪ್ಪ

ಬಾಗಲಕೋಟೆ: ಸಾರ್ವಜನಿಕರಿಗೆ ಸಮಯಕ್ಕೆ ಸರಿಯಾಗಿ ಗ್ಯಾಸ ಸಿಲಿಂಡರ್ ಪೂರೈಸಲು ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ವಿತರಕರಿಗೆ ಜಿಲ್ಲಾಧಿಕಾರಿ ಸಂಗಪ್ಪ ಸೂಚಿಸಿದರು.

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಬುಧವಾರ ಗ್ಯಾಸ್ ಮಾರಾಟ ವಿತರಕರ ಕಂಪನಿಗಳು ಹಾಗೂ ಪೆಟ್ರೋಲ್, ಡಿಸೇಲ್ ಬಂಕ್ ಪ್ರತಿನಿಧಿಗಳೊಂದಿಗೆ ಸಭೆ ಜರುಗಿಸಿ ಮಾತನಾಡಿದ ಅವರು, ಸಭೆಯಲ್ಲಿ ಪ್ರತಿನಿಧಿಗಳು ಜನರು ಭಯಬೀತರಾಗಿ (ಪ್ಯಾನಿಕ್) ಅನಗತ್ಯವಾಗಿ ಗ್ಯಾಸ್ ಬುಕ್ ಮಾಡಿ ಗೊಂದಲ ಉಂಟಾಗುತ್ತಿದೆ. ವಾಸ್ತವದಲ್ಲಿ ಗ್ರಾಹಕರು ಗ್ಯಾಸ್ ಬುಕ್ ಮಾಡಿದ ನಂತರ ವಾರ, ತಿಂಗಳಾನುಗಟ್ಟಲೇ ಆದರೂ ಸಿಲಿಂಡರ್ ಪೂರೈಸಿರುವದಿಲ್ಲವೆಂಬ ದೂರುಗಳು ಬರುತ್ತಿವೆ. ಆದ್ದರಿಂದ ಗೃಹಬಳಕೆಯ ಗ್ಯಾಸ್ ಪೂರೈಕೆಯಲ್ಲಿ ಆಗುತ್ತಿರುವ ವಿಳಂಬವನ್ನು ಆಧ್ಯತೆಯ ಮೇರೆಗೆ ಸರಿಪಡಿಸಬೇಕು ಎಂದು ಹೇಳಿದರು.

ಜಿಲ್ಲೆಯ ಕೆಲವು ಪೆಟ್ರೋಲ್ ಬಂಕ್‌ಗಳಲ್ಲಿ ಪೆಟ್ರೋಲ್ ಮತ್ತು ಡಿಸೆಲ್ ಸ್ಟಾಕ್ ಇದ್ದರೂ ಕೂಡ ಪೆಟ್ರೋಲ್ ಲಭ್ಯವಿರುವದಿಲ್ಲ ಎಂಬ ಫಲಕಗಳನ್ನಾಗಿರುವುದಾಗಿ ಜಿಲ್ಲಾಡಳಿತಕ್ಕೆ ಮಾಧ್ಯಮದವರು ತಿಳಿಸುತ್ತಿದ್ದು, ಈ ರೀತಿ ಮಾಡುವುದು ಕಂಡುಬಂದಲ್ಲಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು. ಪ್ರತಿ ದಿನ ಲಭ್ಯವಿರುವ ಇಂದನ ಹಾಗೂ ಆಯಾ ದಿನದ ಇಂದನ ದರವನ್ನು ಪ್ರದರ್ಶಿಸಿರಿ. ತೈಲ್ ಪೂರೈಕೆ ವಿಷಯದಲ್ಲಿ ವಿತರಕರು ಜಾಗುರುಕತೆ ವಹಿಸಿ ಸಮಸ್ಯೆ ಉಲ್ಬಣಿಸದಂತೆ ನೋಡಿಕೊಳ್ಳಬೇಕು.

ಜಿಲ್ಲೆಯಲ್ಲಿ ಮುಂಗಾರು ಆರಂಭವಾಗುತ್ತಿದ್ದು ರೈತರು ಬಿತ್ತನೆಗಾಗಿ ಸಜ್ಜುಗೊಳ್ಳುತ್ತಿದ್ದಾರೆ. ಸಾಕಷ್ಟು ಸಂಖ್ಯೆಯ ರೈತರು ಭೂಮಿ ಉಳುಮೆಗಾಗಿ ಟ್ಯಾಕ್ಟರ್ ಬಳಸುತ್ತಿದ್ದು ರೈತರಿಗೆ ತೊಂದರೆ ಉಂಟು ಮಾಡದೆ ಪೆಟ್ರೋಲ್ ಡಿಸೇಲ್ ನೀಡಿ ಎಂದು ಹೇಳಿದರು.

ಪೊಲೀಸ್ ವರಿಷ್ಠಾಧಿಕಾರಿ ಸಿದ್ಧಾರ್ಥ ಗೋಯಲ್, ಆಹಾರ ಇಲಾಖೆ ಜಂಟಿ ನಿರ್ದೇಶಕ ಶ್ರೀಶೈಲ ಕಂಕನವಾಡಿ, ಶಾಲಾ ಶಿಕ್ಷಣ ಇಲಾಖೆ ಉಪ ನಿರ್ದೇಶಕ ಅಜೀತ್ ಮನ್ನಿಕೇರಿ, ಸಮಾಜ ಕಲ್ಯಾಣ ಇಲಾಖೆ ಉಪ ನಿರ್ದೇಶಕ ಸದಾಶೀವ ಬಡಿಗೇರ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಜಿಲ್ಲಾ ಅಧಿಕಾರಿ ಪಂಕಜಾ ಜೋಶಿ ಸೇರಿದಂತೆ ಇತರರು ಇದ್ದರು.

ನೀರಿನ ತೊಂದರೆಯಾಗದಂತೆ ಕ್ರಮ ವಹಿಸಿ

ತೇರದಾಳ: ತೇರದಾಳ ಪಟ್ಟಣದ ಕಲೂತಿ ನಗರ, ಗೋಶಾಲೆ, ದೇವರಾಜನಗರ ಸೇರಿದಂತೆ ಕೆಲವು ವಾರ್ಡಗಳಲ್ಲಿನ ಜನರು ನೀರಿನ ಸಮಸ್ಯೆ ಎದುರಿಸುತ್ತಿದ್ದಾರೆ ಎಂದು ತಿಳಿದು ಬಂದಿದೆ. ಬೇಸಿಗೆ ಬಿಸಿ ಇನ್ನೂ ತಗ್ಗಿಲ್ಲ, ಯಾವುದೇ ಕಾರಣಕ್ಕೂ ಸಾರ್ವಜನಿಕರಿಗೆ ನೀರಿನ ತೊಂದರೆ ಆಗದಂತೆ ನೋಡಿಕೊಳ್ಳಬೇಕು ಎಂದು ಶಾಸಕ ಸಿದ್ದು ಸವದಿ ತಾಕೀತು ಮಾಡಿದರು.



ಮಂಗಳವಾರ ಖುದ್ದಾಗಿ ಪುರಸಭೆಗೆ ಭೇಟಿ ನೀಡಿದ ಸಂದರ್ಭ ದಲ್ಲಿ ಅಧಿಕಾರಿಗಳು ಇಲ್ಲದನ್ನು ಕಂಡು ಸಿಡಿಮಿಡಿ ಗೊಂಡರು. ನಾನು ಬರುತ್ತೇನೆಂದು ಹೇಳಿದ್ದರೂ ಸಹ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ಒಂದಿಷ್ಟೂ ಪೂರ್ವ ತಯಾರಿಲ್ಲದ್ದನ್ನು ಗಮನಿಸಿ ತಮ್ಮ ಬೇಜಾರು ವ್ಯಕ್ತಪಡಿಸಿದರು. ನಂತರ ಎಲ್ಲಾ ಸಿಬ್ಬಂದಿ ಕರೆದು ಮಾಹಿತಿ ಪಡೆದರು. ಅದರಲ್ಲೂ ಕುಡಿಯುವ ನೀರಿನ ಬಗ್ಗೆ ಸಮಗ್ರ ಮಾಹಿತಿ ಪಡೆದರಲ್ಲದೆ ಸಾರ್ವಜನಿಕರಿಗೆ ಎಲ್ಲಿಯೂ ನೀರಿನ ತೊಂದರೆ ಆಗದಂತೆ ನೋಡಿಕೊಳ್ಳಬೇಕೆಂದು ತಾಕಿತು ಮಾಡಿದರು. ಪಟ್ಟಣದಲ್ಲಿ ಈ ಹಿಂದೆಯೆ ಸಾರ್ವಜನಿಕರಿಗಾಗಿ ಸಾಕಷ್ಟು ಬೋರವೆಲ್‌ಗಳನ್ನು ಕೊರೆಯಿಸ ಲಾಗಿದೆ ಆದರೂ ನೀರಿನ ಸಮಸ್ಯೆ ಏಕೆ ಎಂದು ಪ್ರಶ್ನಿಸಿದರು. ಇದಕ್ಕೆ ಉತ್ತರಿಸಿದ ಸಿಬ್ಬಂದಿಗಳು ಕೆಲವು ನೀರಿನಮೋಟರಗಳು ರೀಪೇರಿಗೆ ಬಂದಿದ್ದು ರಿಪೇರಿ ಮಾಡುವವನ ಹಳೆ ಬಾಕಿ ಪೇಮೆಂಟ ಮಾಡದ ಕಾರಣ ಸಮಸ್ಯೆಯಾಗಿದೆ ಎಂದರು.

2026-2027ನೇ ಸಾಲಿನ ಎನ್ ಎಂಪಿಸಿಎಸ್ ಅನುದಾನದಡಿಯಲ್ಲಿ ಸುಮಾರು. 1.14ಕೋಟಿ ರೂಗಳು ಬಿಡುಗಡೆಯಾಗಿದ್ದು ಈ ಅನುದಾನ 'ವನ್ನು 3ನೇ ಕಿನಾಲ ಹಾಗೂ 4ನೇ ಕಿನಾಲದಲ್ಲಿ ವಾಸವಿರುವ ಸಾರ್ವಜನಿಕರಿಗೆ ಕುಡಿಯಲು ನೀರಿಗಾಗಿ ವಿವಿಧ ಸ್ಥಳಗಳಲ್ಲಿ ಸಿಸ್ಟರ್ನ ಟ್ಯಾಂಕ ಅಳವಡಿಸಲು ಬಳಸಿಕೊಳ್ಳಬೇಕು ಹಾಗೂ ಪಟ್ಟಣಕ್ಕೆ ಕುಡಿಯುವ ನೀರು ಸರಬರಾಜು ಮಾಡುತ್ತಿರುವ ಹಳಿಂಗಳಿ ಜಾಕವೆಲ್‌ದಲ್ಲಿಯ ಪಂಪಸೆಟ್ ತುಂಬಾ ಹಳೆಯದಾಗಿದ್ದು ಅದರ ಸಾಮರ್ಥ್ಯ ಕಡಿಮೆಯಾಗಿದೆ ಎಂದು ತಿಳಿದುಬಂದಿದೆ. ಕಾರಣ ಮುಂಜಾಗ್ರತೆ ಕ್ರಮವಾಗಿ ಇದೇ ಅನುದಾನದಲ್ಲಿ ಸುಮಾರು 55 ಲಕ್ಷ ರೂಗಳಷ್ಟು ಹಣವನ್ನು ಹೊಸ ಮೋಟರ ಖರೀದಿ ಮಾಡಲು ಮೀಸಲಿಡಬೇಕೆಂದು ಅಧಿಕಾರಿಗಳಿಗೆ ತಿಳಿಸಿದರು.

ಪಡಿತರ ಅಂಗಡಿಕಾರರಿಂದ ಮನವಿ

ರಬಕವಿ-ಬನಹಟ್ಟಿ: ತಾಲೂಕಿನಾದ್ಯಂತ ನ್ಯಾಯಬೆಲೆ ಅಂಗಡಿಗಳಲ್ಲಿ ಉಂಟಾಗಿರುವ ತೀವ್ರ ಸರ್ವರ್ ಸಮಸ್ಯೆಯಿಂದ ಪಡಿತರ ವಿತರಣೆ ಸಂಪೂರ್ಣ ಅಸ್ತವ್ಯಸ್ಥಗೊಂಡಿದ್ದು, ಬಡ ಹಾಗೂ ಮಧ್ಯಮ ವರ್ಗದ ಕುಟುಂಬಗಳು ದವಸ ಧಾನ್ಯಕ್ಕಾಗಿ ಬಿಸಿಲಿನಲ್ಲಿ ಪರದಾಡುವ ಸ್ಥಿತಿ ನಿರ್ಮಾಣವಾಗಿದೆ. ಕಳೆದ ಹಲವು ದಿನಗಳಿಂದ ಸರ್ವರ್ ಕೈಕೊಡುತ್ತಿರುವ ಹಿನ್ನಲೆ ಆಕ್ರೋಶಗೊಂಡ ನ್ಯಾಯಬೆಲೆ ಅಂಗಡಿಕಾರರು ಮಂಗಳವಾರ ತಹಶೀಲ್ದಾರರಿಗೆ ಮನವಿ ನೀಡಿ ಸರಿಪಡಿಸಲು ಒತ್ತಾಯಿಸಿದರು.

ಸಂಘದ ಜಿಲ್ಲಾಧ್ಯಕ್ಷ ಶೇಖರ ಅಂಗಡಿ ಮಾತನಾಡಿ ತಿಂಗಳ ಆರಂಭದಿಂದಲೇ ಸರ್ವರ್ ಸಮಸ್ಯೆ ತೀವ್ರವಾಗಿದೆ. ನ್ಯಾಯಬೆಲೆ ಅಂಗಡಿಗಳಲ್ಲಿ ಪಡಿತರ ವಿತರಣೆ ಸರಿಯಾಗಿ ನಡೆಯುತ್ತಿಲ್ಲ, ಸರ್ವರ್ ಸಮಸ್ಯೆಯಿಂದ ಸಾರ್ವಜನಿಕರು ನಮ್ಮ ಮೇಲೆಯೇ ಆಕ್ರೋಶ ಹೊರಹಾಕುತ್ತಿದ್ದಾರೆಂದು ಬೇಸರ ವ್ಯಕ್ತಪಡಿಸಿದರು. ತಹಶೀಲ್ದಾರ್ ಗಿರೀಶ ಸ್ವಾದಿ ಮನವಿ ಸ್ವೀಕರಿಸಿ ಸರ್ವರ್ ಸಮಸ್ಯೆ ಪರಿಹಾರಕ್ಕೆ ಅಗತ್ಯ ಕ್ರಮ ಕೈಗೊಳ್ಳಲಾಗುವದೆಂದು ಭರವಸೆ ನೀಡಿದರು. ಸಂಘದ ತಾಲೂಕಾಧ್ಯಕ್ಷ ಗಜು ನಾಗರಾಳ, ಮಹಾದೇವ ಗಿಡದಾನಪ್ಪಗೋಳ, ಹನುಮಂತ ಕುಂದಗೋಳ, ಶಂಕರ ಬಿಳ್ಳೂರ, ರೇಣುಕಾ ಮಡ್ಡಿಮನಿ, ಮಹಾದೇವ ಕಡಬಲ್ಲನವರ, ಆರೀಫ್ ಕೊಣ್ಣೂರ, ಪ್ರಕಾಶ ತೆರಣಿ, ಪರಪ್ಪ ಬರಗಲ್, ಲಕ್ಕಪ್ಪ ಲಮಾಣಿ, ಬಾಳು ಸಿದ್ದಪ್ಪಗೋಳ ಸೇರಿದಂತೆ ಅನೇಕರಿದ್ದರು.



ಬಕ್ರೀದ್: ಕುರಿ, ಟಗರು ವ್ಯಾಪಾರ ಜೋರು

ಮಾಂತೇಶ ಅಂಬಿಗೇರ

ಕೆರೂರ: ಮುಂಬರುವ ಬಕ್ರೀದ್ ಹಬ್ಬದ ಪ್ರಯುಕ್ತ ಪಟ್ಟಣದಲ್ಲಿ ಮಂಗಳವಾರ ನಡೆದ ಸಂತೆಯಲ್ಲಿ ಕುರಿ ಮತ್ತು ಟಗರು ವ್ಯಾಪರ ಜೋರಾಗಿತ್ತು.

ಪಟ್ಟಣದ ಎಪಿಎಂಸಿ ಮಾರುಕಟ್ಟೆ ಆವರಣದಲ್ಲಿ ನಡೆಯುವ ಜಾನುವಾರು ಸಂತೆಯಲ್ಲಿ ಕಳೆದ ಎರಡು-ಮೂರು ವಾರಕ್ಕಿಂತ ಈ ವಾರದ ಸಂತೆಯಲ್ಲಿ ಖರೀದಿದಾರು ಹಾಗೂ ಮಾರಾಟಗಾರರು ಹೆಚ್ಚಿನ ಸಂಖ್ಯೆಯಲ್ಲಿರುವ ದೃಶ ಕಂಡು ಬಂದಿತು. ತಮಿಳುನಾಡು,ಆಂದ್ರಪ್ರದೇಶದ,ಬೆಂಗಳೂರ,ದಾವಣಗೆರೆ ಹೀಗೆರಾಜ್ಯ ಹಾಗೂ ಹೋರರಾಜ್ಯದಿಂದ ಮಾರಾಟಗಾರರು ಆಗಮಿಸಿದ್ದರು,ಖರೀದಾರು ರಸ್ತೆ ಮಧ್ಯದಲ್ಲಿ ಗಾಡಿಯನ್ನು ಅಡ್ಡಿ ತಮ್ಮ ಇಚ್ಚೆಯ ಕುರಿ ಹಾಗೂ ಟಗರುಗಳನ್ನು ಖರೀದಿಸಿದರು.

ಮೇ 28ರಂದು ಬಕ್ರೀದ್ ಹಬ್ಬವಿದ್ದು,ಮುಸ್ಲಿಂ ಸಮುದಾಯದವರು ವ್ಯಾಪಾರಿಗಳೊಂದಿಗೆ ಚರ್ಚಿಸಿ,ಬೆಲೆಯನ್ನು ಚೌಕಾಶಿ ಮಾಡಿ ತಮ್ಮ ಇಷ್ಟದ ಕುರಿ ಮತ್ತು ಟಗರುಗಳನ್ನು ಪಡೆದುಕೊಂಡರು. ಹಬ್ಬದ ಹಿನ್ನೆಲೆಯಲ್ಲಿ ಸಂತೆಯಲ್ಲಿ ವ್ಯಾಪಾರ ಜೋರಾಗಿತ್ತು, ಕಳೆದ ಎರಡು ವಾರಗಳಿಂದ ಅಲ್ಪ ಕುಸಿತ ಕಂಡಿದ್ದ ಟಗರು ಮತ್ತು ಕುರಿ ವ್ಯಾಪಾರದಲ್ಲಿ ಈ ವಾರದ ಸಂತೆಯಲ್ಲಿ ಬೆಲೆ ಏರಿಕೆ ಖಂಡಿದೆ,ಉತ್ತಮ ಬೆಲೆಗೆ ಮರಿಗಳು ಮಾರಾಟವಾದರೆ ರೈತರು ಕೂಡಾ ಸಂತೋ?ವಾಗಿರುತ್ತಾರೆ ಎಂದು ದಾವಣಗೆರೆಯಿಂದ ಬಂದ ಕುರಿ ವ್ಯಾಪಾರಿಯೊಬ್ಬರು ವಿಜಯವಾಣಿಗೆ ತಿಳಿಸಿದರು.



ಸಣ್ಣ ಪ್ರಮಾಣದ ಕುರಿ ಮತ್ತು ಟಗರು ಮರಿಗಳು ಸುಮಾರು 5 ಸಾವಿರದಿಂದ 10 ಸಾವಿರದವರೆಗೆ ಮಾರಾಟವಾದವು,ಇನ್ನೂ ದೊಡ್ಡ ಕುರಿಗಳು ಒಂದಕ್ಕೆ ಕನಿಷ್ಠ 35 ಸಾವಿರದಿಂದ ಗರಿಷ್ಠ 70 ಸಾವಿರದವರೆಗೆ ಮಾರಾಟವಾಗಿದ್ದು ಖಂಡು ಬಂದಿತು.

ಎರಡೂ ವರ್ಷಗಳಿಂದ ಚನ್ನಾಗಿ ಸಾಕಿ ಬೆಳೆಸಿದ ಟಗರುಗಳನ್ನು ಇಂದು ಕೆರೂರ ಸಂತೆಯಲ್ಲಿ ಮಾರಾಟಕ್ಕೆ ತಂದಿದ್ದೆ ಒಂದಕ್ಕೆ 60 ಸಾವಿರವರೆಗೆ ಬೆಲೆ ಹೇಳಿದ್ದೆ,ಜೋಡಿಗೆ 1.10 ಲಕ್ಷಕ್ಕೆ ಮಾರಾಟವಾಗಿದೆ ಎಂದು ಹೆರಕಲ್ ಗ್ರಾಮದ ಕುರಿಗಾಹಿ ಬಸಪ್ಪ ಮಾದರ ಹೇಳಿದರು.

ಕಿರುಸುದ್ದಿ

ವೇತನ ಹೆಚ್ಚಳಕ್ಕೆ ಬೆಳೆ ಸಮೀಕ್ಷೆದಾರರು ಒತ್ತಾಯ

ವಿಜಯಪುರ: ಅಖಿಲ ಕರ್ನಾಟಕ ಬೆಳೆ ಸಮೀಕ್ಷೆದಾರರ ಸಂಘಟನೆಯ ತಿಕೋಟಾ ತಾಲೂಕು ಘಟಕದ ಪದಾಧಿಕಾರಿಗಳ ವತಿಯಿಂದ ಕೃಷಿ ಇಲಾಖೆಯ ಸಹಾಯಕ ನಿರ್ದೇಶಕರು ಹಾಗೂ ತಿಕೋಟಾ ತಾಲೂಕಿನ ತಹಶೀಲ್ದಾರ್‌ಗೆ ಮನವಿ ಸಲ್ಲಿಸಿದರು. ಬಳಿಕ ಮಾತನಾಡಿ, ಸರಿ ಸುಮಾರು 8-10 ವರ್ಷಗಳಿಂದ ತಿಕೋಟಾ ತಾಲೂಕಿನಲ್ಲಿ 56 ಜನ ಬೆಳೆ ಸಮೀಕ್ಷೆದಾರರಾಗಿ ಕೆಲಸ ಮಾಡುತ್ತಾ ಬಂದಿರುವ ನಮಗೆ ಹಂಗಾಮುವಾರು ನಮ್ಮನ್ನು ಕೆಲಸಕ್ಕೆ ನೇಮಕ ಮಾಡಿಕೊಳ್ಳದೇನೆ ಕನಿಷ್ಠ ವೇತನದ ನೀತಿ ಅಡಿಯಲ್ಲಿ ದಿನಗೂಲಿ ಕಾರ್ಮಿಕರನ್ನಾಗಿ ನೇಮಿಸಿಕೊಂಡು ವರ್ಷದ 12 ತಿಂಗಳುಗಳ ಕಾಲ ಕೆಲಸವನ್ನು ನೀಡುವಂತೆ ಆಗ್ರಹಿಸಲಾಯಿತು. ಈ ವೇಳೆ ತಾಲೂಕು ಅಧ್ಯಕ್ಷ ಭಾಗೇಶ ಮಲಕಪ್ಪ ರಾಮತೀರ್ಥ ಅವರು ಮನವಿ ಸಲ್ಲಿಸಿದರು. ಸಂಘಟನೆಯ ರಾಜ್ಯ ಅಧ್ಯಕ್ಷ ಭೀಮಪ್ಪ ಲಕ್ಷ್ಮಣ ತಳವಾರ ಮಾತನಾಡಿ, ಷಿ ಹಾಗೂ ಕಂದಾಯ ಇಲಾಖೆಯ ಅಧಿಕಾರಿಗಳ ಜೊತೆ ಮಾತನಾಡಿ, ಕರ್ನಾಟಕ ರಾಜ್ಯದಲ್ಲಿ ಬೆಳೆ ಸಮೀಕ್ಷೆದಾರರಾದ ನಾವು 23,720 ಜನ ಕೆಲಸಗಾರರು ಕಾರ್ಯ ನಿರ್ವಹಿಸುತ್ತಿದ್ದೇವೆ. ನಮ್ಮ ಕೆಲಸಕ್ಕೆ ಸರ್ಕಾರ ನೀಡುವ ಸಂಬಳ ಯಾವ ವಿಧದಲ್ಲೂ ಸರಿಯಾದುದಲ್ಲ, ಯಾಕೆಂದರೆ ದರ ಪರಿಷ್ಕರಣೆ ಅನ್ನೋದು ಎಲ್ಲದರಲ್ಲೂ ಮಾಡಿರುವಿರಿ. ಆದರೆ ನಮಗೇಕೆ ತಾರತಮ್ಯ ಧೋರಣೆ ಮಾಡುತ್ತಿರುವಿರಿ ಎಂದರು. ಮನವಿ ಸ್ವೀಕರಿಸಿದ ಕೃಷಿ ಅಧಿಕಾರಿ ಸಕಾರಾತ್ಮಕವಾಗಿ ಸ್ಪಂದಿಸಿದರು. ಅರುಣಕುಮಾರ ತಳವಾರ, ಬಂದೇ ನವಾಜ್ ಮುಲ್ಲಾ, ಚಂದನ ಕೋಳಿ, ನಾಗರಾಜ್ ಕೋರೆ,ಶಬ್ಬೀರ್ ಅತ್ತಾರ ಮತ್ತಿತರರು ಉಪಸ್ಥಿತರಿದ್ದರು.

ಮೇ 30ರಂದು ವಸತಿ ಶಾಲೆ ಪ್ರವೇಶಕ್ಕೆ ಕೌನ್ಸೆಲಿಂಗ್

ವಿಜಯಪುರ: ಅಲ್ಪ ಸಂಖ್ಯಾತರ ಕಲ್ಯಾಣಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ ವಸತಿ ಶಾಲೆಗಳ ಪ್ರವೇಶಕ್ಕೆ ಕೌನ್ಸೆಲಿಂಗ್ ಮೇ 30 ರಂದು ಬೆಳಗ್ಗೆ 8 ಗಂಟೆಗೆ ಅಫಜಲಪುರ ಟಕ್ಕೆಯಲ್ಲಿರುವ ಸರ್ಕಾರಿ ಮುಸ್ಲಿಂ ವಸತಿ ಶಾಲೆಯಲ್ಲಿ ನಡೆಯಲಿದೆ. ಅಲ್ಪ ಸಂಖ್ಯಾತರ ಡಾ.ಎ.ಪಿ.ಜೆ ಅಬ್ದುಲ್ ಕಲಾಂ ವಸತಿ ಕಾಲೇಜು, ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ, ಸರ್ಕಾರಿ ಮುಸ್ಲಿಂ ವಸತಿ ಶಾಲೆಗಳ 2026-27ನೇ ಶೈಕ್ಷಣಿಕ ವರ್ಷದ ಪ್ರಥಮ ಪಿಯುಸಿ ಪ್ರವೇಶಾತಿಗಾಗಿ ಆಯ್ಕೆಯಾದ ಅಲ್ಪಸಂಖ್ಯಾತರ ವರ್ಗದ ವಿದ್ಯಾರ್ಥಿಗಳು ಹಾಗೂ ಇತರೆ ಹಿಂದುಳಿದ ವರ್ಗದ ವಿದ್ಯಾರ್ಥಿಗಳು ಈ ಕೌನ್ಸೆಲಿಂಗ್‌ನಲ್ಲಿ ಭಾಗವಹಿಸಬಹುದಾಗಿದೆ. ವಿದ್ಯಾರ್ಥಿಗಳು ತಪ್ಪದೇ ಕೌನ್ಸೆಲಿಂಗ್‌ಗೆ ಹಾಜರಾಗಲು ಜಿಲ್ಲಾ ಅಧಿಕಾರಿಗಳು, ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆಯವರು ತಿಳಿಸಿದ್ದಾರೆ.

ಮರುಮೌಲ್ಯಮಾಪನ: ಸುಮನ್‌ಗೆ 606 ಅಂಕ

ವಿಜಯಪುರ: ನಗರದ ಸಿಕ್ಯಾಬ್ ಆಂಗ್ಲ ಮಾಧ್ಯಮ ಕೆ.ಜಿ.ಪ್ರಾಥಮಿಕ ಮತ್ತು ಪ್ರೌಢ ಶಾಲೆ ನವರಸಪುರ ಶಾಲೆಯ ವಿದ್ಯಾರ್ಥಿನಿಯಾದ ಸುಮನ್ ಎಸ್. ನಡುವಿನಮನಿ.



2025-26ನೇ ಸಾಲಿನ ಎಸ್ ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 625ಕ್ಕೆ 606 ಅಂಕ (ಶೇ 96.96) ಗಳಿಸಿದ್ದಾರೆ. ಈ ಹಿಂದೆ ಅವರು 596 ಅಂಕ ಪಡೆದಿದ್ದರು. ಮರುಮೌಲ್ಯಮಾಪನದ ನಂತರ 10 ಅಂಕ ಜಾಸ್ತಿಯಾಗಿದೆ. ಕನ್ನಡ - 100, ಇಂಗ್ಲಿಷ್-123, ಹಿಂದಿ-100, ಗಣಿತ-92, ವಿಜ್ಞಾನ- 93 ಮತ್ತು ಸಮಾಜ ವಿಜ್ಞಾನದಲ್ಲಿ 98 ಅಂಕಗಳನ್ನು ಪಡೆದಿದ್ದಾರೆ. ಇವರು ರಾಜಾಜಿ ನಗರದ ಶರಣ ಕುಮಾರ ಹಾಗೂ ಶಿಲ್ಪಾ ದಂಪತಿಗಳ ಮಗಳು ವಿದ್ಯಾರ್ಥಿನಿಯ ಮರು ಮೌಲ್ಯಮಾಪನದಿಂದ ಸಂತಸಗೊಂಡಿದ್ದು, ವಿದ್ಯಾರ್ಥಿನಿಗೆ ಶಾಲೆಯ ಮುಖ್ಯೋಪಾಧ್ಯಾಯರಾದ ಅನಿತಾ ನರೆಗಲ್ ಹಾಗೂ ಸಂಸ್ಥೆಯ ಅಧ್ಯಕ್ಷ ಸಲಾವುದ್ದಿನ್ ಪುಣೆಕರ್ ನಿರ್ದೇಶಕ ಡಾ. ಜಿಯಾ ಪುಣೆಕರ್ ಮತ್ತು ಸಂಸ್ಥೆಯ ಕಾರ್ಯದರ್ಶಿ ಎ.ಎಸ್.ಪಾಟೀಲ, ಶಿಕ್ಷಕರು ಹರ್ಷ ವ್ಯಕ್ತಪಡಿಸಿದ್ದಾರೆ.

ಮೇ 31ರಂದು ಪ್ರತಿಭಾ ಪುರಸ್ಕಾರ

ಬೀಳಗಿ: 2025-26ನೇ ಸಾಲಿನ ಎಸ್ಸೆಸ್ಸೆಲ್ಸಿ ಹಾಗೂ ಪಿಯುಸಿ ಪರೀಕ್ಷೆಯಲ್ಲಿ ಶೇ.90 ಕ್ಕಿಂತ ಹೆಚ್ಚು ಅಂಕ ಪಡೆದಿರುವ ತಾಲೂಕಿನ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಗೌರವಿಸಲು ಮೇ 31ರಂದು ಪ್ರತಿಭಾ ಪುರಸ್ಕಾರ ಹಮ್ಮಿಕೊಳ್ಳಲಾಗಿದೆ. ಪ್ರಗತಿಪರ ರೈತ ರಾಮಣ್ಣ ಕಾಳಪ್ಪಗೋಳ ಅವರ ನೇತೃತ್ವದಲ್ಲಿ ಬೀಳಗಿ ಕ್ರಾಸ್ ಸಮೀಪದಲ್ಲಿರುವ ಅವರ ತೋಟದಲ್ಲಿ ಬೆಳಗ್ಗೆ 11 ಗಂಟೆಗೆ ಕಾರ್ಯಕ್ರಮ ನಡೆಯಲಿದೆ. ಪ್ರತಿಭಾ ಪುರಸ್ಕಾರ ಸ್ವೀಕರಿಸಲು ಇಚ್ಛಿಸುವ ವಿದ್ಯಾರ್ಥಿಗಳು ಹೆಚ್ಚಿನ ಮಾಹಿತಿಗಾಗಿ ಹಾಗೂ ಹೆಸರು ನೋಂದಣಿಗೆ ಮೊಬೈಲ್ ಸಂಖ್ಯೆ 9448817136, 9353630490 ಸಂಪರ್ಕಿಸಲು ಪ್ರಕಟಣೆಯಲ್ಲಿ ತಿಳಿಸಲಾಗಿದೆ.



ವಿಜಯಪುರ: ಅಖಿಲ ಕರ್ನಾಟಕ ಬೆಳೆ ಸಮೀಕ್ಷೆದಾರರ ಸಂಘಟನೆಯ ತಿಕೋಟಾ ತಾಲೂಕು ಘಟಕದ ಪದಾಧಿಕಾರಿಗಳ ವತಿಯಿಂದ ಕೃಷಿ ಇಲಾಖೆಯ ಸಹಾಯಕ ನಿರ್ದೇಶಕರು ಹಾಗೂ ತಿಕೋಟಾ ತಾಲೂಕಿನ ತಹಶೀಲ್ದಾರ್‌ಗೆ ಮನವಿ ಸಲ್ಲಿಸಿದರು.

ನಮ್ಮೂರ ಶಾಲೆ; ನಮ್ಮೂರಲ್ಲೇ ಉಳಿಯಲಿ

ವಿಜಯಪುರ: ಕೆಪಿಎಸ್ ಮ್ಯಾಗ್ನೆಟ್ ಹೆಸರಲ್ಲಿ ಜಂಬಗಿ ಗ್ರಾಮದ ಕೆರೂರ ಮತ್ತು ಪೂಜಾರಿ ವಸ್ತಿ ಶಾಲೆ ಮುಚ್ಚದಿರಲು ಆಗ್ರಹಿಸಿ, ಶಾಲೆ ಮುಂದೆ ಬ್ಯಾನರ್ ಕಟ್ಟಿ ಪಾಲಕರ ಹಾಗೂ ವಿದ್ಯಾರ್ಥಿಗಳ ಪ್ರತಿಭಟನೆ ಕೆಪಿಎಸ್ ಮ್ಯಾಗ್ನೆಟ್ ಹೆಸರಲ್ಲಿ ಜಿಲ್ಲೆಯ ಜಂಬಗಿ ಗ್ರಾಮದ ಕೆರೂರ ಮತ್ತು ಪೂಜಾರಿ ವಸ್ತಿ ಶಾಲೆ ಮುಚ್ಚದಿರಲು ಆಗ್ರಹಿಸಿ ಪಾಲಕರು ಹಾಗೂ ವಿದ್ಯಾರ್ಥಿಗಳು ಸೇರಿ, ಎಐಡಿಎಸ್‌ಒ ಹಾಗೂ ಸಾರ್ವಜನಿಕ ಶಿಕ್ಷಣ ಉಳಿಸಿ ಸಮಿತಿಯ ನೇತೃತ್ವದಲ್ಲಿ ಶಾಲೆಯ ಮುಂದೆ ನಮ್ಮೂರ ಶಾಲೆ ನಮ್ಮದು, ನಮ್ಮೂರಲ್ಲೇ ಉಳಿಯಲಿ ಎಂಬ ಬ್ಯಾನರ್‌ಕಟ್ಟಿ ಪ್ರತಿಭಟನೆ ಮಾಡಿದರು. ಎಐಡಿಎಸ್ ಯುವಜನ ಸಂಘಟನೆಯ ರಾಜ್ಯ ಕಾರ್ಯದರ್ಶಿ ಸಿದ್ದಲಿಂಗ ಬಾಗೇವಾಡಿ ಮಾತನಾಡಿ, ಏಷಿಯನ್ ಡೆವಲಪ್ಮೆಂಟ್ ಬ್ಯಾಂಕ್‌ನಿಂದ ಬರುತ್ತಿರುವ ದುಡ್ಡಿಗೋಸ್ಕರ ಕೆಪಿಎಸ್ ಮ್ಯಾಗ್ನೆಟ್ ಹೆಸರಲ್ಲಿ ಸರ್ಕಾರ ಶಾಲೆ ಮುಚ್ಚಲು ಹೊರಟಿರುವುದು ಖಂಡನೀಯ. ಒಂದು ನಾಗರಿಕ ಸಮಾಜ ಸೃಷ್ಟಿಸಲು ಕಾರಣವಾಗುವ ಶಿಕ್ಷಣ ನೀಡಲು ಶಾಲೆಗಳು ಅವಶ್ಯಕ. ವಸ್ತಿ ಶಾಲೆಗಳು ಬಂದಾದರೆ ಶಿಕ್ಷಣಕ್ಕಾಗಿ ಮಕ್ಕಳು ಅದರಲ್ಲೂ ಹೆಣ್ಣು ಮಕ್ಕಳು ದೂರದ ಶಾಲೆಗೆ ಹೋಗುವುದು ಕಷ್ಟಕರದ ಸಂಗತಿ ಎಂಬುದು ಪ್ರತಿಯೊಬ್ಬ ಪಾಲಕರಿಗೂ ಗೊತ್ತು. ಪ್ರತಿಯೊಬ್ಬ ನಾಗರಿಕನಿಗೂ ಶಿಕ್ಷಣ ಅವಶ್ಯಕ ಎಂಬುದನ್ನು ಮನಗಂಡು ಸರ್ಕಾರ ಆ ನಿಟ್ಟಿನಲ್ಲಿ ಕಾರ್ಯ ಪ್ರವೃತ್ತವಾಗಬೇಕು ಎಂದರು. ಕೆರೂರ ವಸ್ತಿಯ ಎಸ್‌ಡಿಎಮ್‌ಸಿ ಅಧ್ಯಕ್ಷ ಚಂದ್ರಶೇಖರ ಹತ್ತಳ್ಳಿ, ಶ್ರೀಶೈಲ ಕೆರೂರ, ಸಂಜು ಕೆರೂರ, ಸಚಿನ ಕೆರೂರ, ನಾಗೇಶ ಕೆರೂರ, ರಮೇಶ ಕೆಂಬಾವಿ ಇದ್ದರು.



ವಿಜಯಪುರ: ಕೆಪಿಎಸ್ ಮ್ಯಾಗ್ನೆಟ್ ಹೆಸರಲ್ಲಿ ಜಂಬಗಿ ಗ್ರಾಮದ ಕೆರೂರ ಮತ್ತು ಪೂಜಾರಿ ವಸ್ತಿ ಶಾಲೆ ಮುಚ್ಚದಿರಲು ಆಗ್ರಹಿಸಿ ಎಐಡಿಎಸ್‌ಒ ಹಾಗೂ ಸಾರ್ವಜನಿಕ ಶಿಕ್ಷಣ ಉಳಿಸಿ ಸಮಿತಿಯ ನೇತೃತ್ವದಲ್ಲಿ ಶಾಲೆಯ ಮುಂದೆ ನಮ್ಮೂರ ಶಾಲೆ ನಮ್ಮದು, ನಮ್ಮೂರಲ್ಲೇ ಉಳಿಯಲಿ ಎಂಬ ಬ್ಯಾನರ್‌ಕಟ್ಟಿ ಪ್ರತಿಭಟನೆ ಮಾಡಿದರು. ನಿಂಗಣ್ಣ ಕೆರೂರ, ಶಿವಾನಂದ ಕೆರೂರ ಹಾಗೂ ಪೂಜಾರಿ ವಸ್ತಿಯ ಶಿವಪ್ಪ ಪೂಜಾರಿ, ಶ್ರೀಶೈಲ ಪೂಜಾರಿ, ಯಲ್ಲಪ್ಪ ಪೂಜಾರಿ ಹಾಗೂ ವಿದ್ಯಾರ್ಥಿಗಳು ಇದ್ದರು.

ರೈತರ ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಜಿಲ್ಲಾಧಿಕಾರಿಗೆ ಮನವಿ

ವಿಜಯಪುರ: ರಸಗೊಬ್ಬರ ದರ ಕಡಿಮೆ ಮಾಡುವುದು ಕೃಷಿ ಚಟುವಟಿಕೆಗಳಿಗೆ ಡಿಸೇಲ್ ಕೊರತೆಯಾಗದಂತೆ ನೋಡಿಕೊಂಡು ರೈತರಿಗೆ ಅಗತ್ಯವಿರುವಷ್ಟು ಡಿಸೇಲ್ ಅನ್ನು ಒದಗಿಸಲು ಕ್ರಮ ಕೈಗೊಳ್ಳುವುದು ಸೇರಿದಂತೆ ವಿವಿಧ ಬೇಡಿಕೆಗಳಿಗೆ ಆಗ್ರಹಿಸಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಅಖಂಡ ಕರ್ನಾಟಕ ರೈತ ಸಂಘ ಜಂಟಿಯಾಗಿ ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿ ಬೃಹತ್ ಪ್ರತಿಭಟನೆ ಹಮ್ಮಿಕೊಂಡು ಜಿಲ್ಲಾಧಿಕಾರಿ ಡಾ.ಆನಂದ ಕೆ. ಅವರಿಗೆ ಮನವಿ ಸಲ್ಲಿಸಲಾಯಿತು.

ಕರ್ನಾಟಕ ರಾಜ್ಯ ರೈತ ಸಂಘದ ರಾಜ್ಯ ಯುವ ಘಟಕದ ಸಂಚಾಲಕ ಸಿದ್ದನಗೌಡ ಜಲಪೂರ ಮಾತನಾಡಿ, ಕೇಂದ್ರ ಸರ್ಕಾರ ಪದೇ ಪದೇ ರೈತರಿಗೆ ಗಾಯದ ಮೇಲೆ ಬರೆ ಎಳೆಯುತ್ತಿದೆ. ಮೊದಲೇ ಬರಗಾಲದಿಂದ ತತ್ತರಿಸಿದ ರೈತರಿಗೆ ಡಿಸೇಲ್ ಮತ್ತು ಪೆಟ್ರೋಲ್ ದರ ಹೆಚ್ಚಿಸುವ ಮೂಲಕ ರೈತರು ತೀವ್ರ ಸಂಕಷ್ಟಕ್ಕೆ ಸಿಲುಕುವಂತೆ ಮಾಡಿದೆ. ಕೇಂದ್ರ ಸರ್ಕಾರ ತೈಲ ಬೆಲೆಯನ್ನು ತಕ್ಷಣ ಕಡಿಮೆ ಮಾಡಿ ಯಾವುದೇ ಕಾರಣಕ್ಕೆ ರೈತರಿಗೆ ಡಿಸೇಲ್ ಕೊರತೆಯಾಗದಂತೆ ನೋಡಿಕೊಳ್ಳಬೇಕೆಂದು ಆಗ್ರಹಿಸಿದರು.

ಅಖಂಡ ಕರ್ನಾಟಕ ರೈತ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಅರವಿಂದ ಕುಲಕರ್ಣಿ ಮಾತನಾಡಿ, ಇತ್ತೀಚೆಗೆ ರಸಗೊಬ್ಬರದ ದರವನ್ನು ಕೂಡಾ ದುಪ್ಪಟ್ಟುಮಾಡಿದ್ದು, ಮತ್ತು ಗೊಬ್ಬರ ಖರೀದಿ ಸಂದರ್ಭದಲ್ಲಿ ರೈತರಿಗೆ ಎಫ್‌ಐಡಿ



ಕಡ್ಡಾಯ ಮಾಡಿದ್ದಲ್ಲದೇ ಪ್ರತಿ ಎಕರೆಗೆ ಒಂದೇ ಚೀಲು ಗೊಬ್ಬರ ಕೊಡುವುದಾಗಿ ಸರ್ಕಾರ ನಿರ್ಣಯ ತಗೆದುಕೊಂಡಿರುವುದು ರೈತರಿಗೆ ತೊಂದರೆಯಾಗುತ್ತಿದೆ ರೈತರಿಗೆ ಹೆಚ್ಚಿಗೆ ಗೊಬ್ಬರ ನೀಡಿದರೆ ಕಾಳ ಸಂತೆಯಲ್ಲಿ ಮಾರಿಕೊಳ್ಳುತ್ತಿದ್ದಾರೆ ಎಂಬ ಕೇಂದ್ರ ಸರ್ಕಾರ ಹೇಳುತ್ತಿದ್ದು, ಇದು ರೈತರಿಗೆ ಅಪಮಾನ ಮಾಡಿದಂತಾಗಿದೆ. ರೈತರಿಗೆ ಅಗತ್ಯವಿರುವಷ್ಟು ಗೊಬ್ಬರವನ್ನು ಎಫ್‌ಐಡಿ ಇಲ್ಲದೇ ಒದಗಿಸಬೇಕು. ಯರಿಯಾ ಮತ್ತು ಡಿಎಪಿ ಗೊಬ್ಬರ ಖರೀದಿ ಸಂದರ್ಭದಲ್ಲಿ ಬೇರೆ ಬೇರೆ ವಸ್ತುಗಳನುನ ಖರೀದಿಸಲು ಗೊಬ್ಬರ ಅಂಗಡಿಯ ಮಾಲೀಕರು ಲಿಂಕ್ ಮಾಡುತ್ತಾರೆ. ಗೊಬ್ಬರ ಖರೀದಿ ಮಾಡಿದ ರೈತರಿಗೆ ಕಡ್ಡಾಯವಾಗಿ ಅಧಿಕೃತ ರಸೀದಿ ಕೊಡಬೇಕೆಂದು ಆಗ್ರಹಿಸಿದರು.

ವಿಜಯಪುರ ತಾಲೂಕಾಧ್ಯಕ್ಷ ಮಹಾದೇವಪ್ಪ ತೇಲಿ ಮಾತನಾಡಿ, ಬೇಸಿಗೆ ಸಂದರ್ಭದಲ್ಲಿ ಜನ ಹಾಗೂ ಜಾನವಾರುಗಳಿಗೆ ಕುಡಿಯಲು ನೀರಿಲ್ಲದೇ ತೊಂದರೆಯಾಗುತ್ತಿದ್ದು, ವಿಜಯಪುರ ತಾಲೂಕಿನ ಆಹೇರಿ, ಜಂಬಗಿ, ಹುಣಶ್ಯಾಳ, ಅಂಕಲಗಿ, ಅರನಾಳ, ಇಂಗಳಗಿ ಸೇರಿದಂತೆ ಇನ್ನಿತರ ಗ್ರಾಮಗಳಲ್ಲಿ ನೀರಿನ ಕೊರತೆವುಂಟಾಗಿದೆ. ವಿಜಯಪುರತಾಲೂಕಿನಲ್ಲಿರುವಬಹುತೇಕಕೆರೆಗಳು ಒತ್ತುವರಿಯಾಗಿದ್ದು, ಕೂಡಲೇ ತೆರವುಗೊಳಿಸಿ ಮೂಲ ಕೆರೆ ಅಳತೆ ಗುರುತು ಮಾಡಬೇಕೆಂದು ಆಗ್ರಹಿಸಿದರು. ಬಸನಗೌಡ ಧರ್ಮಗೊಂಡ, ಜಿಲ್ಲಾಧ್ಯಕ್ಷ ಉಮೇಶ ವಾಲೀಕಾರ, ಗುರುರಾಜ ಪಡಶೆಟ್ಟಿ ಹೊನಕೇರಪ್ಪ ತೆಲಗಿ, ಸಿದ್ದಪ್ಪ ಕೊಟ್ಯಾಳ, ಗುರಣಗೌಡ ಬಿರಾದಾರ, ಪ್ರಭುಲಿಂಗ ಕಾರಜೋಳ, ಸಂತೋಷ ಚೌರಿ, ಒಗೆಪ್ಪ ಬಿರಾದಾರ, ಸೋಮಯ್ಯ ನಂದಿಕೋಲ, ಅಮೋಗಿ ಉಕ್ಕಲಿ, ಮಲ್ಲಿಕಾರ್ಜುನ ಬಟಗಿ, ಬೋಗೇಶ ಸೊಲಾಪೂರ, ನೀಲಮ್ಮ ಕಟ್ಟಿಮನಿ, ಲಂಕೆಪ್ಪ ತಳವಾರ, ನಬಿರಸೂಲ ಬಿರಾದಾರ, ಗುರಪ್ಪ ತಳವಾರ, ಅಜೀಜ ಪಾಟೀಲ ಇದ್ದರು.

ಯಶವಂತರಾಯಗೌಡ ಬಗ್ಗೆ ಹೇಳಿಕೆ ಖಂಡನೀಯ

ಇಂಡಿ: ಶಾಸಕ ಯಶವಂತರಾಯಗೌಡ ಪಾಟೀಲ ಅವರ ಬಗ್ಗೆ ಜಿತೇಂದ್ರ ಕಾಂಬಳೆ ಅವರು ನಾಲಿಗೆ ಹರಿ ಬಿಟ್ಟು, ಅವಾಚ್ಯ ಶಬ್ದ ಬಳಕೆ ಮಾಡಿದ್ದು ಸರಿಯಲ್ಲ. ಡಾ. ಬಾಬಾಸಾಹೇಬ ಅಂಬೇಡ್ಕರ್, ಬುದ್ಧ, ಬಸವರ ಅನುಯಾಯಿಗಳಾದ ನಾವು ನಮ್ಮ ಬಾಯಿಯಿಂದ ಇಂತಹ ಶಬ್ದಗಳು ಬರಬಾರದು. ಶಾಸಕರುನಮ್ಮಸಮುದಾಯಕ್ಕೆ ಎಂದು ಅನ್ಯಾಯ ಮಾಡಿಲ್ಲ ಇಂತವರ ಬಗ್ಗೆ ಅವಹೇಳನಕಾರಿ ಶಬ್ದ ಬಳಕೆ ಮಾಡಿದನ್ನು ಛಲವಾದಿ ಸಮುದಾಯದ ಪರವಾಗಿ ನಾವು ಖಂಡಿಸುತ್ತೇವೆ ಎಂದು ಛಲವಾದಿ ಸಮಾಜದ ಮುಖಂಡ ಭೀಮಾಶಂಕರ ಮೂರಮನ ಹಾಗೂ ದಲಿತ ಮುಖಂಡ ಮುತ್ತಪ್ಪ ಪೋತೆ ಮತ್ತು ಗ್ಯಾರೆಂಟಿ ಅನುಷ್ಠಾನ ಸಮಿತಿ ತಾಲೂಕಾ ಅಧ್ಯಕ್ಷ ಪ್ರಶಾಂತ ಕಾಳೆ ಜಂಟಿಯಾಗಿ ಹೇಳಿದರು.

ಅವರು ನಗರದ ನೌಕರರ ಸಭಾಭವನದಲ್ಲಿ ಛಲವಾದಿ ಸಮುದಾಯದ ಮುಖಂಡರು ಹಮ್ಮಿಕೊಂಡ ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡಿ, ಅವರು ದಲಿತರ ಬಗ್ಗೆ ಕೀಳಾಗಿ ಕಂಡವರಲ್ಲ. ತಮ್ಮ ಜೊತೆಯಲ್ಲಿ ಕರೆದುಕೊಂಡು ಊಟ ಮಾಡಿದಂತ ಸರಳ ಸಜ್ಜನಿಕೆ ರಾಜಕಾರಣಿಗಳಾಗಿದ್ದಾರೆ. ಇತಂಹವರ ವಿರುದ್ಧ ಇಲ್ಲ ಸಲ್ಲದ ಆರೋಪ ಮಾಡಿ ನಮ್ಮ ಸಮುದಾಯಕ್ಕೆ ಕಪ್ಪು ಚುಕ್ಕೆ ಬಳಿಯುತ್ತಿರುವ ಜಿತೇಂದ್ರ ಕಾಂಬಳೆಯ ನಡೆ ನಾವು ಖಂಡಿಸುತ್ತೇವೆ ಎಂದು ಹೇಳಿದರು.

ನಮ್ಮ ಸಮುದಾಯಕ್ಕೆ ಶಾಸಕ ಯಶವಂತರಾಯಗೌಡ ಪಾಟೀಲ ಅವರ ಕೊಡುಗೆ ಅಪಾರವಾಗಿದೆ. ಗ್ರಾಮಿಣ ಭಾಗದಲ್ಲಿ ಅಂಬೇಡ್ಕರ ಭವನಗಳು, ಸಿಸಿ ರಸ್ತೆ, ಬುದ್ಧವಿಹಾರ, ಕ್ರೀಡಾಂಗಣಕ್ಕೆ ಡಾ ಬಾಬಾಸಾಹೇಬರ ಅಂಬೇಡ್ಕರ ನಾಮಕರಣ, ರಮಾಬಾಯಿ ಮಂಗಲ ಕಾರ್ಯಾಲಯ ಹೀಗೆ ಸಾಕಷ್ಟು ಅಭಿವೃದ್ಧಿ ಕೇಲಸಗಳನ್ನು ನಮ್ಮ ಸಮುದಾಯಕ್ಕೆ ಕೊಡುಗೆಯಾಗಿ ನೀಡಿದ್ದಾರೆ. ದಲಿತ ಸಮುದಾಯದ ಎಲ್ಲರನ್ನು ಗೌರವದಿಂದ ಕಂಡಿರುವ ಶಾಸಕರು ಯಾರಾದರು ಇದ್ದರೆ ಅದು ಯಶವಂತರಾಯ ಗೌಡರಾಗಿದ್ದಾರೆ. ಛಲವಾದಿ ಸಮುದಾಯಕ್ಕೆ ಕೆಟ್ಟ ಹೆಸರು ಬರುವಂತಾಗಿದೆ. ನಮ್ಮ ಸಮುದಾಯ ಹೇಸರು ಮುಂದೆ ಮಾಡಿ ಆರೋಪ ಮಾಡುವುದು ಬೀಡಬೇಕು ಎಂದರು.

ಗಣಪತಿ ಬಾಣಿಕೋಲ, ಪ್ರದೀಪ ಮೂರಮನ, ಮಲ್ಲು ಮಡ್ಡಿಮನಿ, ರವಿ, ಕಲ್ಲಪ್ಪ ಅಂಜುಟಗಿ, ಸಂತೋಷ ಪರಶನವರ, ಶೇಖರ ಶಿವಶರಣ ಸೇರಿದಂತೆ ಅನೇಕ ಮುಖಂಡರು ಇದ್ದರು.



ಆರೋಗ್ಯ ಕೇಂದ್ರಕ್ಕೆ ಅಧಿಕಾರಿಗಳ ಭೇಟಿ

ನಾಲತವಾಡ: ಸ್ಥಳಿಯ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಅವ್ಯವಹಾರಗಳು ನಡೆಯುತ್ತೀವೆ ಹಾಗೂ ಸಿಬ್ಬಂದಿಗಳು ಸಮಯ ಪಾಲನೆ ಮಾಡದೇ ಮನಬಂದಂತೆ ವರ್ತಿಸುತ್ತಾರೆ ಎನ್ನುವ ದೂರಿಗೆ ಸ್ಪಂದಿಸಿದ ತಾಲೂಕು ನೋಡಲ್ ಅಧಿಕಾರಿ ಡಾ.ಎಂ.ಬಿ.ಬಿರಾದಾರ, ತಾಲೂಕು ಆರೋಗ್ಯಾಧಿಕಾರಿ ಡಾ.ಸತೀಶ ತಿವಾರಿ ಅವರು ಕೇಂದ್ರದ ನಾಮನಿರ್ದೇಶಿತ ಯೂನುಷ್ ಮೂಲಿಮನಿ ಯವರೊಂದಿಗೆ ಭೇಟಿ ನೀಡಿದ ದೂರುದಾರರ ವಿಷಯಗಳ ಕುರಿತು ಗಂಭೀರ ಚರ್ಚೆ ನಡೆದ ಘಟನೆ ಮಂಗಳವಾರ ನಡೆದಿದೆ.

ಸುಮಾರು ವರ್ಷಗಳಿಂದಲೂ ಕೇಂದ್ರದ ಓಪಿಡಿ ಹಾಗೂ ಐಪಿಡಿ ಹಣದ ದುರಪಯೋಗವಾಗಿದೆ ಮತ್ತು ರೋಗಿಗಳೊಂದಿಗೆ ಹಲವು ಮಹಿಳಾ ಸಿಬ್ಬಂದಿಗಳು ಸರಿಯಾಗಿ ಸ್ಪಂದಿಸುತ್ತಿಲ್ಲ, ಹೆರಿಗೆ ವೇಳೆ ಹಣ ಪಡೆಯುತ್ತಾರೆ ಎಂದು ಕೇಂದ್ರದ ಅವ್ಯವಸ್ಥೆ ತನಿಖೆ ನಡೆಸುವಂತೆ ಸ್ಥಳಿಯ ಸಾಮಾಜೀಕ ಹೋರಾಟಗಾರ ವೀರೇಶ ಆಲಕೊಪ್ಪರ ಮಾನವ ಹಕ್ಕುಗಳ ಆಯೋಗಕ್ಕೆ ಪತ್ರ ಬರೆದಿದ್ದರು, ಸ್ಪಂದಿಸಿದ ಅಧಿಕಾರಿಗಳು ಭೇಟಿ ನೀಡಿ ಕೇಂದ್ರದ ರೋಗಿಗಳ ವಿಚಾರಣೆ, ಓಪಿಡಿ, ಲ್ಯಾಬ್, ಔಷಧಿ ವಿತರಣಾ ಕೇಂದ್ರ ಸೇರಿ ಮಾಹಿತಿ ಪಡೆದುಕೊಂಡು ನಂತರ ತನಿಖೆಯ ಸಭೆಯಲ್ಲಿ ಸಿಬ್ಬಂದಿಗಳಿಂದ ಮಾಹಿತಿ ಚರ್ಚಿಸಿದರು.

ಸುಮಾರು 39 ಸಿಬ್ಬಂದಿಗಳಿದ್ದರೂ ದೂರುಗಳು ಬರುತ್ತೀವೆ ಮೊದಲು ತಮ್ಮಲ್ಲಿ ಹೊಂದಾಣಿಕೆ ಬರಲಿ, ಸಕಾಲಕ್ಕೆ ಸೇವೆಗೆ ಬನ್ನಿ, ಕಡ್ಡಾಯವಾಗಿ ಐಡಿ, ಸಮಸವಸ್ತ್ರವಿರಲಿ ಇರಲಿ ಎಂದರು. ಹಲವರು ಕಿಟ್‌ಗಳನ್ನು ಕಳ್ಳತನ ಮಾಡುತ್ತಿದ್ದಾರೆ ಎನ್ನುವ ಗೊಂದಲವನ್ನು ಸರಿದೂಗಿಸಿದ ಅಧಿಕಾರಿಗಳು ಮುಂದಿನ ದಿನಗಳಲ್ಲಿ ಪೇಶ್ ಕ್ಯಾಪ್ಚರ್ ಅಳವಡಿಸುತ್ತೇವೆ ಶೀಘ್ರವೇ ಸಿಸಿ ಕ್ಯಾಮರಾಗಳನ್ನು ಅಳವಡಿಸಲಾಗುವುದು ಎಂದು ತಿಳಿಸಿದರು. ಸಣ್ಣ ಪುಟ್ಟ ದೂರುಗಳು ರಾಜ್ಯಮಟ್ಟದ ಗಮನ ಸೆಳೆಯುವಂತೆ ಕೈಕಟ್ಟಿ ಕೂಡ್ರಬಾರದು, ಸ್ಥಾನಿಕವಾಗಿ ದೂರುದಾರರಿಗೆ ವಾಸ್ತವ ಅಂಶಗಳೊಂದಿಗೆ ಸಮಸ್ಯೆಗಳನ್ನು ಸಭೆಗಳನ್ನು ಸುಪರಿಡೆಂಟೆಡ್ ಬಿರಾದಾರ ಸಭೆ ಕರೆಯುವ ಮೂಲಕ ಬಗೆಹರಿಸಿ ಎಂದರು.

ದಂತ ವೈದ್ಯೆ ಡಾ.ಸುಚಿತ್ರಾ, ಸದಸ್ಯರಾದ ಯೂನೂಷ್ ಮೂಲಿಮನಿ, ಸಂಘಟಕರಾದ ಮಲ್ಲು ಗಂಗನಗೌಡ್ರ, ಕಾಶೀಮ ಗಂಗೂರ, ರುದ್ರು ಇಲಕಲ್, ವೀರೇಶ ಆಲಕೊಪ್ಪರ ಇದ್ದರು.



ಜಿಲ್ಲೆಗೆ ಕೇಂದ್ರದಿಂದ 153 ಕೋಟಿ ರೂ.ಮಂಜೂರು: ಜಿಗಜಿಣಗಿ

ವಿಜಯಪುರ: ಕೇಂದ್ರ ಸರ್ಕಾರವು 2025-26ನೇ ಹಣಕಾಸು ವರ್ಷದಲ್ಲಿ ವಿಜಯಪುರಕ್ಕೆ ವಿವಿಧ ನಿರ್ಣಾಯಕ ಮೂಲಸೌಕರ್ಯ ಯೋಜನೆಗಳಿಗಾಗಿ ಆರ್ ಐಡಿ ನಬಾರ್ಡ್ ನಡಿ 153 ಕೋಟಿ ರೂ. ಮಂಜೂರು ಮಾಡಿದೆ ಎಂದು ಸಂಸದರಾರದ ರಮೇಶ ಜಿಗಜಿಣಗಿ ಅವರು ತಿಳಿಸಿದ್ದಾರೆ.



ಈ ಕುರಿತು ಪ್ರಕಟಣೆ ನೀಡಿರುವ ಅವರು, 2025-26ನೇ ಸಾಲಿನಲ್ಲಿ ವಿವಿಧ ಯೋಜನೆಗಳ ಅಭಿವೃದ್ಧಿಗಾಗಿ ಕಡಿಮೆ ವೆಚ್ಚದ ಸಾಲ ಸಹಾಯವಾಗಿ ರಾಷ್ಟ್ರೀಯ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ (ನಬಾರ್ಡ್) ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಧಿಯಡಿ ವಿಜಯಪುರ ಜಿಲ್ಲೆಗೆ 153.5 ಕೋಟಿ ರೂ.ಗಳನ್ನು ಮಂಜೂರು ಮಾಡಿದೆ ತಿಳಿಸಿದ್ದಾರೆ. ಇಂಡಿ ತಾಲ್ಲೂಕಿನಲ್ಲಿ ಕೈಗಾರಿಕಾ-ಆಧಾರಿತ ಡಿಪ್ಲೊಮಾ, ಪೋಸ್ಟ್-ಡಿಪ್ಲೊಮಾ ಮತ್ತು ಎಂ.ಟೆಕ್ ಕಾರ್ಯಕ್ರಮಗಳನ್ನು ನೀಡಲು ಜಿಲ್ಲಾ ಸರ್ಕಾರಿ ಉಪಕರಣ ಮತ್ತು ತರಬೇತಿ ಕೇಂದ್ರವನ್ನು ಸ್ಥಾಪಿಸಲು 70 ಕೋಟಿ ಮೌಲ್ಯದ ಯೋಜನೆಗಳನ್ನು ಮಂಜೂರು ಮಾಡಲಾಗಿದೆ. ಸಿಂದಗಿಯಲ್ಲಿ ಕೋಲ್ಡ್ ಸ್ಟೋರೇಜ್, ತೊರವಿಯಲ್ಲಿ ಹೊಸ ಎಪಿಎಂಸಿ ಯಾರ್ಡ್ ಮತ್ತು ಮೂಲಸೌಕರ್ಯ ಮತ್ತು ತಾಳಿಕೋಟೆ ಎಪಿಎಂಸಿಯಲ್ಲಿ ಸಿಸಿ ರಸ್ತೆಗಳಿಗಾಗಿ ಆರ್‌ಐಡಿಎಫ್‌ನಿಂದ ಎಪಿಎಂಸಿಗಳಿಗೆ 34.20 ಕೋಟಿ ಸಾಲ ನೆರವು ಮಂಜೂರು ಮಾಡಿದೆ ಎಂದವರು ತಿಳಿಸಿದ್ದಾರೆ.

ಮುದ್ದೇಬಿಹಾಳದ ಇಂಗಳೆರೆ ಮತ್ತು ಮಡಿಕೇಶ್ವರದಲ್ಲಿ ಎರಡು ಪಶು ಆಸ್ಪತ್ರೆಗಳನ್ನು ಮಂಜೂರು ಮಾಡಲಾಗಿದೆ. ತೋಟಗಾರಿಕಾ ಇಲಾಖೆಯಡಿ, ಆಲಮೇಲ್‌ನಲ್ಲಿ ತೋಟಗಾರಿಕಾ ಕಾಲೇಜು ಸ್ಥಾಪನೆ ಮತ್ತು ವಿಜಯಪುರದಲ್ಲಿ ಒಣದ್ರಾಕ್ಷಿ, ಒಣ ದ್ರಾಕ್ಷಿ ಸಾಮಾನ್ಯ ಸೌಲಭ್ಯ ಕೇಂದ್ರದ ತಂತ್ರಜ್ಞಾನ ಮೇಲ್ದರ್ಜೇರಿಸಲು 48.6 ಕೋಟಿ ಮಂಜೂರು ಮಾಡಲಾಗಿದೆ. ಇದು ಜಿಲ್ಲೆಯ ಸಾವಿರಾರು ರೈತರಿಗೆ ಪ್ರಯೋಜನವಾಗಲಿದೆ ಎಂದು ಸಂಸದರಾದ ರಮೇಶ ಜಿಗಜಿಣಗಿ ತಿಳಿಸಿದ್ದಾರೆ. ಮಾರ್ಚ್ 2026 ರ ಹೊತ್ತಿಗೆ, ಕೇಂದ್ರ ಸರ್ಕಾರವು ವಿಜಯಪುರದಲ್ಲಿ ನಬಾರ್ಡ್ ಮೂಲಕ ನಡೆಯುತ್ತಿರುವ 40 ಆರ್‌ಐಡಿಎಫ್ ಯೋಜನೆಗಳಿಗೆ ಸಹಾಯ ಮಾಡಿದೆ. ಜಿಲ್ಲೆಯ ವಿವಿಧ ಅಭಿಃ ಇಲಾಖೆಗಳಿಗೆ 280.4 ಕೋಟಿ ಆರ್ಥಿಕ ನೆರವು ನೀಡಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ದಸ್ತು ಬರಹಗಾರರ ಹಿತಕಾಯಲು ಆಗ್ರಹಸಿ ಮನವಿ

ಮುದ್ದೇಬಿಹಾಳ: ಸರ್ಕಾರ ನೊಂದಣಿ ಇಲಾಖೆಯಲ್ಲಿ ಕಾಗದ ರಹಿತ ವ್ಯವಸ್ಥೆಜಾರಿಗೊಳಿಸಿರುವದನ್ನು ಪ್ರತಿಭಟಿಸಿಹೊಸವ್ಯವಸ್ಥೆ ಹಿಂಪಡೆಯಲು ಆಗ್ರಹಿಸಿ ರಾಜ್ಯ ಸಂಘದ ಕರೆಯ ಮೇರೆಗೆ, ತಾಲೂಕು ದಸ್ತು ಬರಹಗಾರರ ಟ್ರಸ್ಟ ವತಿಯಿಂದ ಕೆಲಸ ಸ್ಥಗಿತ ಮಾಡುವ ಮೂಲಕ ಟ್ರಸ್ಟ ಮೂಲಕ ಮುಖ್ಯಮಂತ್ರಿಗಳಿಗೆ ಹೊಸ ನೊಂದಣಿ ಹಿಂಪಡೆಯಬೇಕೆಂದು ಆಗ್ರಹಿಸಿ ತಹಸೀಲ್ದಾರ್‌ಗೆ ಮನವಿ ಸಲ್ಲಿಸಲಾಯಿತು.

ತಾಲೂಕಾಧ್ಯಕ್ಷ ಎಚ್ಚಾರ್ ಬಾಗವಾನ ಪ್ರದಾನ ಕಾರ್ಯದರ್ಶಿ ಡಿ.ಎಚ್.ತೊಗರಿ ಮಾತನಾಡಿ, ಸರಕಾರ ಕಾಗದ ರಹಿತ ವ್ಯವಸ್ಥೆಯ ತರುತ್ತೇವೆ ಎಂದು ಗೊಂದಲಕಾರಿ ವ್ಯವಸ್ಥೆಯನ್ನು ಜಾರಿ ಮಾಡಿದ್ದಾರೆ, ಇದರಿಂದ ಸಾರ್ವಜನಿಕರಿಗೆ ಸುತ್ತು ಬಳಸಿ ನೊಂದಣಿ ವ್ಯವಸ್ಥೆಯನ್ನು ಜಾರಿಗೆ ತಂದು, ಅನುಕೂಲಕ್ಕಿಂತ, ಅನಾನುಕೂಲವೇ ಹೆಚ್ಚಾಗುತ್ತದೆ. ಜೊತೆಗೆ ಬಹಳ ಕಾಲದಿಂದ ಉದ್ಯೋಗ ಆಶ್ರಯಿಸಿ ಬದುಕುತ್ತಿರುವ ದಸ್ತು ಬರಹಗಾರರಿಗೆ ಆರ್ಥಿಕ ತೊಂದರೆಯನ್ನು ಮಾಡುತ್ತದೆ. ಅವರ ಉದ್ಯೋಗ ಕಡಿತ ಆಗುತ್ತದೆ ಆದ್ದರಿಂದ ಸರಕಾರ ಅಂತರ್ಜಾಲ ವ್ಯವಸ್ಥೆಯನ್ನು ರದ್ದು ಪಡಿಸಬೇಕು ಎಂದು ಸಂಘಟನೆಯ ಸದಸ್ಯರು ಆಗ್ರಹಿಸಿದ್ದಾರೆ. ಏಕಕಾಲದಲ್ಲಿ ವಿಜಯಪುರ ಜಿಲ್ಲೆದಾದ್ಯಂತ ಎಲ್ಲ ತಾಲೂಕು ಘಟಕದಿಂದ ಕೆಲಸ ಸ್ಥಗಿತ ಹೋರಾಟ ಕೈಗೊಳ್ಳಲಾಗಿದ್ದು, ನೊಂದಣಿಗೆ ಬರುವ ಸಾರ್ವಜನಿಕರು ಸಹಕರಿಸಬೇಕೆಂದು ಟ್ರಸ್ಟಿನ ಜಿಲ್ಲಾ ಸಂಘಟಕ ರಾಜು ಜೋಳದ ವಿನಂತಿಸಿದ್ದಾರೆ.



ಸಂಘದ ಉಪಾಧ್ಯಕ್ಷ ರಾಜು ಪಾವಲೆ, ಸಂಘದ ಸದಸ್ಯರಾದ ಎಚ್. ಎಸ್.ನಾಯ್ಕೋಡಿ, ಡಿ.ಎಸ್.ಹಿರೇಮಠ, ಎಸ್.ಬಿ.ಕಡಿ, ಸಲೀಮ ಮುಲ್ಲಾ, ಆರ್.ಎ.ನಾಡಗೌಡ, ಆರ್.ಎಸ್.ಶಂಕಿನ, ಎಂ.ಎಂ.ಕಟಗಿ ಉಪಸ್ಥಿತರಿದ್ದರು.

ಪೌರ ಕಾರ್ಮಿಕರ ಸಮಸ್ಯೆಗೆ ಸ್ಪಂದಿಸದ ಅಧಿಕಾರಿಗಳು: ಆಕ್ರೋಶ

ಸಿಂದಗಿ: ಹಲವು ದಿನಗಳಿಂದ ನಗರಸಭೆ ಮುಂಭಾಗದಲ್ಲಿ ಧರಣಿ ಮಾಡುತ್ತಾ ತಮ್ಮ ಬೇಡಿಕೆಗಳಿಗೆ ನ್ಯಾಯ ಕೋರುತ್ತಿರುವ ಹೊರಗುತ್ತಿಗೆ ಪೌರ ಕಾರ್ಮಿಕರ ಸಮಸ್ಯೆಗೆ ಅಧಿಕಾರಿಗಳು ಸ್ಪಂದಿಸದಿರುವುದಕ್ಕೆ ದಲಿತ ಮುಖಂಡ ರಾಜಶೇಖರ ಕೂಚಬಾಳ ತೀವ್ರ ಆಕ್ರೋಶ ವ್ಯಕ್ತಪಡಿಸಿದರು.

ನಗರದ ಅಂಬೇಡ್ಕರ್ ವೃತ್ತದಲ್ಲಿ ಸ್ವಚ್ಛತಾ ಅಭಿಯಾನದ ಕಾರ್ಯಕ್ರಮದಲ್ಲಿ ಅಧಿಕಾರಿಗಳ ವಿರುದ್ಧ ಆಕ್ರೋಶ ಹೊರ ಹಾಕಿ ಮಾತನಾಡಿದ ಅವರು, ಕಚೇರಿ ಎದುರಲ್ಲಿ ಅನೇಕ ದಿನಗಳಿಂದ ಪ್ರತಿಭಟನೆ ನಡೆಸುತ್ತಿರುವ ಪೌರ ಕಾರ್ಮಿಕರ ಪರವಾಗಿ ರಸ್ತೆ ಮಧ್ಯದಲ್ಲಿ ನಗರಸಭೆ ಪೌರಾಯುಕ್ತ ರವಿ ಶಿರಗುಪ್ಪಿ ಅವರನ್ನು ತರಾಟೆಗೆ ತೆಗೆದುಕೊಂಡ ಘಟನೆ ಗಮನ ಸೆಳೆಯಿತು.

ಹಲವು ದಿನಗಳಿಂದ ನಗರಸಭೆ ಎದುರು ಕುಳಿತು ತಮ್ಮ ನೋವು ಹೇಳಿಕೊಳ್ಳುತ್ತಿರುವ ಕಾರ್ಮಿಕರೊಂದಿಗೆ ಸೌಜನ್ಯಕ್ಕಾದರು ಮಾತನಾಡಿಸಿಲ್ಲ, ನಿಮ್ಮಲ್ಲಿ ಮಾನವೀಯ ಮೌಲ್ಯಗಳು ಇದ್ದರೆ ಮೊದಲು ಅವರ ಅಳಲಿಗೆ ಸ್ಪಂದಿಸಿ ಎಂದು ಅವರು ಅಧಿಕಾರಿಗಳ ವಿರುದ್ಧ ಕಿಡಿಕಾರಿದರು.

ನಗರದ ಸ್ವಚ್ಛತೆಗೆ ದಿನನಿತ್ಯ ದುಡಿಯುವ ಪೌರ ಕಾರ್ಮಿಕರ ಸ್ಥಿತಿಯನ್ನು ನಿರ್ಲಕ್ಷ್ಯ ಮಾಡುತ್ತಿರುವುದು ಸರಿಯಲ್ಲ ಎಂದು ಹೇಳಿದ ಅವರು, ಬೇಕಾದಾಗ ಅಶುಚಿತ್ವವಾದ ಊರನ್ನು ಸ್ವಚ್ಛ ಮಾಡಿಸಿಕೊಂಡಿರಿ. ಆದರೆ ಈಗ ಅದೇ ಕಾರ್ಮಿಕರಿಗೆ ಅನ್ಯಾಯ ಮಾಡುತ್ತಿರುವುದು ಖಂಡನೀಯ. ಜೀತದಾಳು ಪದ್ಧತಿ ಇನ್ನೂ ಜೀವಂತವಾಗಿರುವುದು ಎದ್ದು ಕಾಣುತ್ತಿದೆ ಎಂದು ಆರೋಪಿಸಿದರು.

ಹೊರಗುತ್ತಿಗೆ ಆಧಾರದ ಮೇಲೆ ಕಾರ್ಯ ನಿರ್ವಹಣೆ ಮಾಡುತ್ತಿರುವ ಪೌರ ಕಾರ್ಮಿಕರು ಬಹಳಷ್ಟು ಸಮಸ್ಯೆ ಎದುರಿಸುತ್ತಿದ್ದಾರೆ. ಸಂಬಳ, ಉದ್ಯೋಗ ಭದ್ರತೆ ಹಾಗೂ ಮಾನವೀಯ ಗೌರವದ ವಿಷಯದಲ್ಲಿ ಅಧಿಕಾರಿಗಳು ನಿರ್ಲಕ್ಷ್ಯ ತೋರುತ್ತಿದ್ದಾರೆ ಎಂಬ ಆಕ್ರೋಶ ಕಾರ್ಮಿಕರಲ್ಲಿ ಹೆಚ್ಚಾಗಿದೆ. ಇದರ



ಹಿನ್ನೆಲೆಯಲ್ಲಿ ಹಲವು ದಿನಗಳಿಂದ ನಗರಸಭೆ ಎದುರು ಧರಣಿ ನಡೆಸುತ್ತಿದ್ದರೂ ಅಧಿಕಾರಿಗಳು ಯಾವುದೇ ಸ್ಪಷ್ಟ ಭರವಸೆ ನೀಡಿಲ್ಲ, ಅವರಿಗೆ ಮೊದಲು ಕೆಲಸ ನೀಡಿ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ನಗರದ ಸ್ವಚ್ಛತೆಗೆ ದುಡಿಯುವ ಕಾರ್ಮಿಕರ ಬೆವರಿನ ಬೆಲೆ ಅರಿಯಬೇಕು. ಅವರ ಸಮಸ್ಯೆಗಳನ್ನು ಕಡೆಗಣಿಸುವ ಬದಲು ತಕ್ಷಣ ಸಭೆ ಕರೆದು ನ್ಯಾಯ ಒದಗಿಸಬೇಕು ಎಂದು ಒತ್ತಾಯಿಸಿದರು.

ಘಟನಾ ಸ್ಥಳದಲ್ಲಿ ಹಿರಿಯ ಆರೋಗ್ಯ ಅಧಿಕಾರಿ ನಬಿರಸೂಲ್ ಉಸ್ತಾದ, ಇಂದುಮತಿ ಮಣೂರ, ಪೌರ ಕಾರ್ಮಿಕರು, ಸಾರ್ವಜನಿಕರು ಹಾಗೂ ನಗರಸಭೆ ಸಿಬ್ಬಂದಿ ಇದ್ದರು.

ದಸ್ತಾವೇಜು ಬರಹಗಾರರ ಸಹಿ ಕಡ್ಡಾಯಗೊಳಿಸಲು ಆಗ್ರಹ

ಬಸವನಬಾಗೇವಾಡಿ: ನೋಂದಣಿ ಇಲಾಖೆಯಲ್ಲಿ ಪೇಪರಲೆಸ್ ವ್ಯವಸ್ಥೆ ಜಾರಿ ಹಾಗೂ ಆನ್‌ಲೈನ್ ವ್ಯವಸ್ಥೆಯಲ್ಲಿ ಸಾರ್ವಜನಿಕರಿಗೆ ಆಗುತ್ತಿರುವ ತೊಂದರೆ ಹಾಗೂ ದಸ್ತಾವೇಜು ಬರಹಗಾರರ ಸಹಿ ಕಡ್ಡಾಯಗೊಳ್ಳಿಸುವಂತೆ ಆಗ್ರಹಿಸಿ ಬಸವನಬಾಗೇವಾಡಿ, ನಿಡಗುಂದಿ, ಕೊಲ್ಹಾರ ತಾಲೂಕಿನ ಅಧಿಕೃತ ದಸ್ತು ಬರಹಗಾರರ ಕ್ಷೇಮಾಭಿವೃದ್ಧಿ ಟ್ರಸ್ಟ, ರೈತ ಸಂಘ, ಕರವೇ ನೇತೃತ್ವದಲ್ಲಿ ಪ್ರತಿಭಟನೆ ನಡೆಸಿ ನಂತರ ಗ್ರೇಡ್-2 ತಹಶೀಲ್ದಾರ್ ಎಚ್.ಎಸ್.ಅರಕೇರಿ ಹಾಗೂ ಉಪನೊಂದಣಾಧಿಕಾರಿ ಅವರಿಗೆ ಮನವಿ ಸಲ್ಲಿಸಿದರು.

ಕ್ಷೇಮಾಭಿವೃದ್ಧಿ ಟ್ರಸ್ಟನ ತಾಲೂಕಾಧ್ಯಕ್ಷ ಸುರೇಶ ಹಾರಿವಾಳ, ಕಾರ್ಯದರ್ಶಿ ಪಾರ್ಶ್ವನಾಥ ಹೊಸಮನಿ, ಅ.ಕ.ರೈತ ಸಂಘದ ಪ್ರ. ಕಾರ್ಯದರ್ಶಿ ಅರವಿಂದ ಕುಲಕರ್ಣಿ, ಕರವೇ ರಾ.ಸಂ.ಕಾರ್ಯದರ್ಶಿ ಅಶೋಕ ಹಾರಿವಾಳ ಮಾತನಾಡಿ ಕರ್ನಾಟಕ ಸರ್ಕಾರದ ನೋಂದಣಿ ಮತ್ತು ಮುದ್ರಾಂಕ ಇಲಾಖೆಯಿಂದಾ ಜಾರಿಗೆ ತರುತ್ತಿರುವ ಪೇಪರಲೆಸ್ ವ್ಯವಸ್ಥೆ ಮತ್ತು ಈಗೀನ ಆನ್‌ಲೈನ್ ನೋಂದಣಿಯಿಂದಾ ಸಾರ್ವಜನಿಕರಿಗೆ ಸಾಕಷ್ಟು ತೊಂದರೆಯಾಗುತ್ತೀವೆ, ಉಪನೋಂದಣಿ



ಕಚೇರಿಯಲ್ಲಿ ಅನಾದಿಕಾಲದಿಂದಲೂ ರೈತರು, ಸಾರ್ವಜನಿಕರು ವ್ಯಾಪಾರಸ್ಥರು ತಮ್ಮ ಆಸ್ತಿಗಳ ಖರೀದಿ ಪತ್ರ, ವಿಭಾಗ ಪತ್ರ, ಕುಟುಂಬ ವ್ಯವಸ್ಥೆ ಪತ್ರ, ಭಕ್ಷಿಸ ಪತ್ರ, ಮೃತ್ಯುಪತ್ರ ಸೇರಿದಂತೆ ಇನ್ನಿತರೆ ಪತ್ರಗಳನ್ನು ನೋಂದಣಿ ಮಾಡಿ ಸ್ಕ್ಯಾನ ಮಾಡಿದ ಪತ್ರಗಳನ್ನು ಭೌತಿಕವಾಗಿ ಪಡೆದುಕೊಂಡು ತಮ್ಮ ಭದ್ರತೆಗಾಗಿ ಇಟ್ಟುಕೊಳ್ಳುತ್ತಿದ್ದರು. ಪೇಪರ ಲೇಸ್ ನಿಂದ ಲಕ್ಷಾಂತರ ಜನರು ಡಿ. ಜಿ. ಲಾಕರ್, ಇ-ಮೇಲ್ ಹೊಂದಿದವರು ಗೌಪ್ಯವಾಗಿ ತಮ್ಮ ದಾಖಲೆ ಇಟ್ಟುಕೊಳ್ಳಲು ಸಾಧ್ಯವಿಲ್ಲ, ಡಿಜಿಟಲ್ ಸಹಿ ಮತ್ತು ಆಧಾರ ಒ.ಟಿ.ಪಿ ಮೂಲಕ ಧೃಡಿಕರಣ ಮಾಡುವುದ್ದರಿಂದ ಭೂಗಳ್ಳರು ಅನಕ್ಷರಸ್ಥರ ಒಟಿಪಿ ಪಡೆದು ಆಸ್ತಿ ಲಪಟಾಯಿಸುವುದು ಕಾರ್ಯ ಗ್ರಾಮೀಣ ಮಟ್ಟದಲ್ಲಿ ಶುರುವಾಗಿದೆ ಹೀಗೆ ಹತ್ತು ಹಲವಾರು ಕಾರ್ಯಗಳಿಗೆ ಪೇಪರ್ ಲೇಸ್ ನಿಂದ ತೊಂದೆರೆ ಉಂಟಾಗುತ್ತದೆ ಕೂಡಲೇ ಸರ್ಕಾರ ಇದರ ಸಾಧಕ ಭಾದಕ ತಿಳಿದುಕೊಂಡು ಜಾರಿಗೆ ತರುವುದು ಅವಶ್ಯಕವಾಗಿದೆ ಎಂದು ಒತ್ತಾಯಿಸಿದರು.

ಸಂಗಮೇಶ ಓಲೇಕಾರ, ಟ್ರಸ್ಟ್ ಸದಸ್ಯ ಶರಣು ಚೌರಿ ಮಾತನಾಡಿದರು. ಉಪಾಧ್ಯಕ್ಷರಾದ ದೇವನಗೌಡ ಬಿರಾದಾರ, ಸಹ ಕಾರ್ಯದರ್ಶಿ ಉಮೇಶ ಹಾರಿವಾಳ, ಸಲಹೆಗಾರ ಶಿವಾನಂದ ಸಜ್ಜನ, ಕಾನೂನು ಸಲಹೆಗಾರ ಚಿದಾನಂದ ಅಂಗಡಿ, ಸದಸ್ಯರಾದ ಸಂಗನಗೌಡ ಪಾಟೀಲ, ರಾಜು ಅಳ್ಳೊಳ್ಳಿ, ಶ್ರೀಶೈಲ ಬುಯ್ಯಾರ, ಶ್ರೀಕಾಂತ ಬಸರಕೋಡ, ಮಲ್ಲು ಅಂಬಳನೂರ, ಮಹಾಂತೇಶ ಹಾರಿವಾಳ, ರಾಜು ಹಡಪದ, ಬಸವರಾಜ ಹೂಗಾರ, ರವಿ ವಡ್ಡರ, ಮಡುಗೌಡ ಭಾವಿಕಟ್ಟಿ, ಸಿದ್ರಾಮಪ್ಪ ರಂಜಣಗಿ ಸೇರಿದಂತೆ ಇತರರು ಇದ್ದರು.

ಕಿರುಸುದ್ದಿ

ನ್ಯಾಯಬೆಲೆ ಅಂಗಡಿ ರದ್ದತಿಗೆ ಆಗ್ರಹ

ಕುಷ್ಟಗಿ: ತಾಲೂಕಿನ ಹುಲಿಯಾಪೂರು ಗ್ರಾಮದ ನ್ಯಾಯಬೆಲೆ ಅಂಗಡಿ ಮಾಲೀಕತ್ವ ತಗೆದು ಹಾಕುವಂತೆ ಒತ್ತಾಯಿಸಿ ಕರವೇ ಗ್ರಾಮ ಘಟಕದ ಪದಾಕಾರಿಗಳು ಪಟ್ಟಣದ ತಹಶೀಲ್ದಾರ್ ಕಚೇರಿ ತಹಶೀಲ್ದಾರ್ ಅಶೋಕ ಶಿಗ್ಗಾವಿಗೆ ಮನವಿ ಸಲ್ಲಿಸಲಾಯಿತು. ಸಂಘಟನೆ ಗ್ರಾಮ ಘಟಕದ ಅಧ್ಯಕ್ಷ ಯಮನೂರಸಾಬ್ ಮಾತನಾಡಿ, ಗ್ರಾಮದಲ್ಲಿ ಮೇ ಹಾಗೂ ಜೂನ್ ತಿಂಗಳಲ್ಲಿ ಅಕ್ಕಿ ಹಂಚುವುದರಲ್ಲಿ ವಿಳಂಬ ಅನುಸರಿಸುತ್ತಿದ್ದು, ಅಲ್ಲದೇ ಎಪಿಎಲ್ ಹಾಗೂ ಬಿಪಿಎಲ್ ಕಾರ್ಡ್‌ದಾರರಿಗೆ ತಲಾ 35 ಕೆಜಿ ಅಂತೆ 70 ಕೆಜಿ ಹಾಗೂ 25 ಕೆಜಿಯಂತೆ 50 ಕೆಜಿ ಅಕ್ಕಿ ವಿತರಣೆ ಮಾಡಬೇಕಾದ ನ್ಯಾಯಬೆಲೆ ಅಂಗಡಿ ಮಾಲೀಕರು ಫಲಾನುಭವಿಗಳಿಗೆ ಸರಿಯಾದ ನ್ಯಾಯ ನೀಡಿಲ್ಲ. ಗ್ರಾಮದಲ್ಲಿ 150ಕ್ಕೂ ಅಧಿಕ ಕಾರ್ಡ್‌ಗಳನ್ನು ಹೊಂದಿದ್ದಾರೆ. ನ್ಯಾಯಬೆಲೆ ಅಂಗಡಿಗೆ ಸರಿಯಾದ ಸಮಯಕ್ಕೆ ಬಾರದೇ ಇರವುದರಿಂದ ಜನರಿಗೆ ಸಮಸ್ಯೆಯಾಗಿದೆ. ಕೂಡಲೇ ಅಂಗಡಿ ಮಾಲೀಕರನ್ನು ಅಮಾನತುಗೊಳಿಸಬೇಕು ಎಂದು ಒತ್ತಾಯಿಸಿದ್ದಾರೆ. ಕರವೇ ಪದಾಕಾರಿ ತಾಲೂಕು ಘಟಕದ ಗೌರವಾಧ್ಯಕ್ಷ ಮರಿಯಪ್ಪ, ಉಪಾಧ್ಯಕ್ಷ ಬಾಲಪ್ಪ ಬೋವಿ ಶರಣಪ್ಪ ನವಲಹಳ್ಳಿ ಕರವೇ ಅಧ್ಯಕ್ಷ ಪ್ರಕಾಶ ಮನ್ನೇರಾಳ್, ಗ್ರಾಪಂ ಸದಸ್ಯ ಕರೀಂಸಾಬ್ ಕಂಬಾರ, ಪದಾಕಾರಿಗಳಾದ ಮಂಗಲಸಾಬ್, ಶ್ಯಾಮೀದಸಾಬ್ ನಿರಲೂಟಿ, ಶಿವಾನಂದ , ಗೋಪಾಲ ಚೌವ್ಹಾಣ ಇತರರಿದ್ದರು.

ರಾಷ್ಟ್ರಮಟ್ಟದ ಕ್ರೀಡಾಕೂಟಕ್ಕೆ ಆಯ್ಕೆ



ಹನುಮಸಾಗರ: ಪಟ್ಟಣದಲ್ಲಿನ ಕರ್ನಾಟಕ ಪಬ್ಲಿಕ್ ಸ್ಕೂಲ್ ಬಾಲಕರ ಪ್ರೌಢಶಾಲೆಯ ದೈಹಿಕ ಶಿಕ್ಷಣ ಶಿಕ್ಷಕ ತಿಪ್ಪಣ್ಣ ಪಾಲಕಾರ್ ಅವರು ರಾಷ್ಟ್ರಮಟ್ಟದ ಆಲ್ ಇಂಡಿಯಾ ಸಿವಿಲ್ ಸರ್ವಿಸ್ ಕ್ರೀಡಾಕೂಟಕ್ಕೆ ಆಯ್ಕೆಯಾಗಿದ್ದಾರೆ. ಬೆಂಗಳೂರಿನಲ್ಲಿ ನಡೆದ ರಾಜ್ಯ ಸರಕಾರಿ ನೌಕರರ ರಾಜ್ಯಮಟ್ಟದ ಕ್ರೀಡಾಕೂಟದಲ್ಲಿ ಅವರು 5,000 ಮೀಟರ್ ಹಾಗೂ 800 ಮೀಟರ್ ಓಟದ ಸ್ಪರ್ಧೆಯಲ್ಲಿ ಕ್ರಮವಾಗಿ 17.30 ನಿಮಿಷ ಹಾಗೂ 2.12 ಸೆಕೆಂಡ್‌ಗಳಲ್ಲಿ ಓಟ ಪೂರ್ಣಗೊಳಿಸುವ ಮೂಲಕ ಪ್ರಥಮ ಸ್ಥಾನ ಪಡೆದಿದ್ದಾರೆ. ಮುಂಬರುವ ದಿನಗಳಲ್ಲಿ ನಡೆಯಲಿರುವ ರಾಷ್ಟ್ರಮಟ್ಟದ ಸ್ಪರ್ಧೆಯಲ್ಲಿ ತಿಪ್ಪಣ್ಣ ಅವರು ರಾಜ್ಯವನ್ನು ಪ್ರತಿನಿಧಿಸಲಿದ್ದಾರೆ.

ಇಂದು ವಾರ್ಷಿಕೋತ್ಸವ

ಸಿಂಧನೂರು: ತಾಲೂಕಿನ ಅಖಂಡ ಭೂಮಿ ಫೌಂಡೇಶನ್‌ನ 5ನೇ ವಾರ್ಷಿಕೋತ್ಸವ ಮೇ 28ರಂದು ನಡೆಯಲಿದೆ ಎಂದು ಫೌಂಡೇಶನ್‌ನ ಅಧ್ಯಕ್ಷ ನೆಕ್ಕಂಟಿ ಸುರೇಶ ತಿಳಿಸಿದ್ದಾರೆ. ನಟ ನಂದಮೂರಿ ತಾರಕ ರಾಮರಾವ್ ಅವರ ಸ್ಮರಣಾರ್ಥವಾಗಿ ಗಾಂಧಿನಗರದ ಶಿವಾಲಯದಲ್ಲಿ ಪಂಚವಟಿ ಸಸಿಗಳ ಪ್ರತಿಷ್ಠಾಪನಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಅಷ್ಟೇ ಅಲ್ಲದೆ ಗಾಂಧಿನಗರದಿಂದ ಗೊರೆಬಾಳ ಕ್ಯಾಂಪ್ ಕ್ರಾಸ್‌ವರೆಗಿನ ಗಿಡಗಳ ರೆಂಬೆಗಳನ್ನು ಕತ್ತರಿಸುವುದು ಮತ್ತು ಸಸಿ ನೆಡಲಾಗುವುದು. ಪತ್ರಿಕೆ ವಿತರಣೆ ಮಾಡುವ ಯುವಕರಿಗೆ ಉಚಿತವಾಗಿ ಸೈಕಲ್ ವಿತರಣೆ ಮಾಡಲಾಗುವುದು ಎಂದಿದ್ದಾರೆ. ಅದೇ ದಿನ ಮದ್ದಿಪಾಟಿ ಧನಲಕ್ಷ್ಮಿ ಗಂಗಾಧರರಾವ್ ಕಲ್ಯಾಣ ಮಂಟಪದಲ್ಲಿ ರಕ್ತದಾನ ಶಿಬಿರ ಹಮ್ಮಿಕೊಳ್ಳಲಾಗಿದೆ.

ಹೊಲದಲ್ಲಿ ಹಾವು ಕಡಿದು ಬಾಲಕ ಸಾವು

ಯಲಬುರ್ಗಾ: ತಾಲೂಕಿನ ಮುಧೋಳ ಗ್ರಾಮದ ಹೊಲದಲ್ಲಿ ಮಂಗಳವಾರ ಸಂಜೆ 6 ಕ್ಕೆ ಎಡಗೈ ಬೆರಳಿಗೆ ಹಾವು ಕಡಿತದಿಂದ ಬಾಲಕ ಮೃತಪಟ್ಟಿದ್ದಾನೆ. ಅಜ್ಮೀರಸಾಬ ಮರ್ತುಜಸಾಬ ಚಳಗೇರಿ (16) ಮೃತ ಬಾಲಕ. ತಾಯಿಯೊಂದಿಗೆ ಹೊಲಕ್ಕೆ ತೆರಳಿದ್ದ ಸಂದರ್ಭದಲ್ಲಿ ಹಾವು ಕಚ್ಚಿದೆ ತಕ್ಷಣವೇ ಪಟ್ಟಣದ ಯಲಬುರ್ಗಾ ಆಸ್ಪತ್ರೆಗೆ ದಾಖಲಿಸಿದರು. ಹಾವು ಕಡಿತದಿಂದ ಬಾಲಕನ ಸ್ಥಿತಿ ಗಂಭೀರವಾಗಿತ್ತು ನಂತರ ಅಲ್ಲಿರುವ ವೈದ್ಯಧಿಕಾರಿಗಳು ಕೊಪ್ಪಳ ಜಿಲ್ಲಾಸ್ಪತ್ರೆಗೆ ರವಾನಿಸಿದರು ಮಾರ್ಗದ ಮಧ್ಯೆಯೇ ಆ ಬಾಲಕ ಕೊನೆಯುಸಿರೆಳೆದ ಎಂದು ಕುಟುಂಬ ಸದಸ್ಯರು ತಿಳಿಸಿದ್ದಾರೆ. ಚಿಕಿತ್ಸೆ ಫಲಕಾರಿಯಾಗದೇ ಮೃತಪಟ್ಟಿದ್ದಾನೆ. ಯಲಬುರ್ಗಾ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.





ಕುಷ್ಟಗಿ: ತಾಲೂಕಿನ ಹುಲಿಯಾಪೂರು ಗ್ರಾಮದ ನ್ಯಾಯಬೆಲೆ ಅಂಗಡಿ ಮಾಲೀಕತ್ವ ತಗೆದು ಹಾಕುವಂತೆ ಒತ್ತಾಯಿಸಿ ಕರವೇ ಗ್ರಾಮ ಘಟಕದ ಪದಾಕಾರಿಗಳು ಪಟ್ಟಣದ ತಹಶೀಲ್ದಾರ್ ಕಚೇರಿ ತಹಶೀಲ್ದಾರ್ ಅಶೋಕ ಶಿಗ್ಗಾವಿಗೆ ಮನವಿ ಸಲ್ಲಿಸಲಾಯಿತು. ಸಂಘಟನೆ ಗ್ರಾಮ ಘಟಕದ ಅಧ್ಯಕ್ಷ ಯಮನೂರಸಾಬ್, ಮರಿಯಪ್ಪ, ಉಪಾಧ್ಯಕ್ಷ ಬಾಲಪ್ಪ ಬೋವಿ ಶರಣಪ್ಪ ನವಲಹಳ್ಳಿ ಕರವೇ ಅಧ್ಯಕ್ಷ ಪ್ರಕಾಶ ಮನ್ನೇರಾಳ್ ಇತರರಿದ್ದರು.

ಕೃಷಿ ಇಲಾಖೆಯಿಂದ ಬಿತ್ತನೆ ಬೀಜ ವಿತರಣೆ

ಯಲಬುರ್ಗಾ: ಬಿತ್ತನೆ ಬೀಜಗಳಿಗೆ ಯಾವುದೇ ರೀತಿಯ ಕೊರತೆ ಇಲ್ಲ, ರೈತರ ಬೇಡಿಕೆ ಅನುಗುಣವಾಗಿ ಬಿತ್ತನೆ ಬೀಜಗಳನ್ನ ವಿತರಣೆ ಮಾಡಲಾಗುವುದು ಎಂದು ಕೃಷಿ ಅಧಿಕಾರಿ ಬಾಲಪ್ಪ ಜಲಗೇರಿ ಹೇಳಿದರು.

ತಾಲ್ಲೂಕಿನ ಹಿರೇವಂಕಲಕುಂಟಾ ಹೋಬಳಿಯ ರೈತ ಸಂಪರ್ಕ ಕೇಂದ್ರದಲ್ಲಿ ಸೋಮವಾರ ಮುಂಗಾರು ಹಂಗಾಮಿನಲ್ಲಿ ರಿಯಾಯಿತಿ ದರದಲ್ಲಿ ಬಿತ್ತನೆ ಬೀಜ ವಿತರಣಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು ರೈತರ ಭೂಮಿ ಸಿದ್ಧತೆ ಕಾರ್ಯ ಪ್ರಗತಿಯಲ್ಲಿದ್ದು, ಮುಂಗಾರು ಹಂಗಾಮಿನಲ್ಲಿ ಬಿತ್ತನೆಗಾಗಿ 59 ಕ್ವಿಂಟಾಲ್ ಮೆಕ್ಕೆಜೋಳ,19 ಕ್ವಿಂಟಲ್ ತೊಗರಿ,12 ಕ್ವಿಂಟಲ್ ಸಜ್ಜೆ,3 ಕ್ವಿಂಟಲ್ ಸೂರ್ಯಕಾಂತಿ ಬೀಜಗಳ ಸಂಗ್ರಹಿಸಲಾಗಿದೆ ರೈತರ ಬೇಡಿಕೆಗನುಗುಣವಾಗಿ ಬೀಜ ವಿತರಣೆ ಮಾಡಲಾಗುವುದು ಹಿರೇ ವಂಕಲಕುಂಟಾ ಹೋಬಳಿಯ ರೈತರು ಸದ್ಬಳಕೆ ಮಾಡಿಕೊಳ್ಳುವ ಜತೆಗೆ ನಮ್ಮ ಇಲಾಖೆಯ ಅವಶ್ಯಕ ಮಾಹಿತಿ ಪಡೆದು ಸಮಯಕ್ಕೆ ಸರಿಯಾಗಿ ಬಿತ್ತನೆ ಮಾಡಬೇಕು ಎಂದು ರೈತರಿಗೆ ಕಿವಿಮಾತು ಹೇಳಿದರು

ಕೃಷಿ ಇಲಾಖೆ ಸಿಬ್ಬಂದಿಗಳಾದ ದ್ಯಾಮನಗೌಡ ಕರಿಗೌಡ್ರ, ದ್ಯಾಮಣ್ಣ ಭಾವಿಕಟ್ಟಿ, ಕಿರಣ ಕೆಂಚಮ್ಮನವರು, ಕಾಸಿಮಸಾಬ ಕಲಕೇರಿ ಮಹಾಬಳೇಶ ಚಿಣಗಿ, ಅಪ್ಪಣ್ಣ ತೊಗರಿ, ರೈತರಾದ ಶಂಕ್ರಪ್ಪ ಹಳ್ಳಿ ಹನಮೇಶ ಚಿಣಗಿ ಮಂಜುನಾಥ ಗೌಡ್ರು ಇನ್ನು ಅನೇಕ ರೈತರು ಉಪಸ್ಥಿತರಿದ್ದರು.



ಯಲಬುರ್ಗಾ: ತಾಲೂಕಿನ ಹಿರೇವಂಕಲಕುಂಟಾ ಹೋಬಳಿಯ ರೈತ ಸಂಪರ್ಕ ಕೇಂದ್ರದಲ್ಲಿ ಸೋಮವಾರ ಮುಂಗಾರು ಹಂಗಾಮಿನಲ್ಲಿ ರಿಯಾಯಿತಿ ದರದಲ್ಲಿ ಬಿತ್ತನೆ ಬೀಜ ವಿತರಣಾ ಕಾರ್ಯಕ್ರಮ ನಡೆಯಿತು. ಈ ವೇಳೈಷಿ ಅಧಿಕಾರಿ ಬಾಲಪ್ಪ ಜಲಗೇರಿ, ಕೃಷಿ ಇಲಾಖೆ ಸಿಬ್ಬಂದಿಗಳಾದ ದ್ಯಾಮನಗೌಡ ಕರಿಗೌಡ್ರ,, ದ್ಯಾಮಣ್ಣ ಭಾವಿಕಟ್ಟಿ, ಕಿರಣ ಕೆಂಚಮ್ಮನವರು ಇತರರಿದ್ದರು.

ಹದ ಮಳೆ: ಬಿತ್ತನೆಗೆ ಸಕಲ ಸಿದ್ಧತೆ

ವಾಗೀಶ್ ವೀ.ಪಾಟೀಲ

ರಾಯಚೂರು: ಜಿಲ್ಲೆಯ ಕೆಲವೆಡೆ ಮುಂಗಾರು ಪೂರ್ವ ಮಳೆ ಆಗಿತ್ತು. ಇನ್ನೇನು ಒಂದೆರಡು ದಿನಗಳಲ್ಲಿ ಮುಂಗಾರು ಜಿಲ್ಲೆಯನ್ನು ಪ್ರವೇಶಿಸಲಿದೆ. ಕೆಲ ರೈತರು ಭೂಮಿಯನ್ನು ಬಿತ್ತನೆಗೆ ಜಮೀನು ಹದ ಮಾಡಿಟ್ಟುಕೊಂಡಿದ್ದಾರೆ. ಉತ್ತಮ ಹಸಿ ಮಳೆ ಬಿತ್ತೆಂದ್ದರೆ ಬಿತ್ತನೆಯನ್ನು ಪ್ರಾರಂಭಿಸುವುದಕ್ಕೆ ಸಿದ್ಧರಾಗಿದ್ದಾರೆ.

ಜಿಲ್ಲೆಯ ರೈತರ ಪಾಲಿಗೆ ವಾಣಿಜ್ಯಕ ಬೆಳೆಗಳೆಂದರೆ ಹತ್ತಿ, ಭತ್ತ ಹಾಗೂ ತೊಗರಿ ಬೆಳೆಗಳು. ಹೊಳೆಂಚಿನ ಗ್ರಾಮಗಳಲ್ಲಿ ನೀರಾವರಿ ಸೌಲಭ್ಯವಿರುವವರು ಹತ್ತಿ, ಭತ್ತ ಬಿತ್ತನೆ ಮಾಡುತ್ತಾರೆ. ಆದರೆ ಮಳೆಯಾಶ್ರಿತ ರೈತರು ಹತ್ತಿ ಹಾಗೂ ತೊಗರಿಯನ್ನು ಬಿತ್ತನೆ ಮಾಡುತ್ತಾರೆ. ಇದಕ್ಕಾಗಿ ಭೂಮಿ ತಳ ಹಸಿ ಆಗುವುದಕ್ಕೆ ಕಾಯುತ್ತಿದ್ದಾರೆ.

ದಿಗಂತ ವಿಶೇಷ

ಪ್ರಸಕ್ತ ಕೃಷಿಅವಲಂಬಿತವಾಗಿರುವುದೇ ರಸಾಯನಿಕ ಗೊಬ್ಬರದ ಮೇಲೆ. ವಿಶ್ವದಲ್ಲಿನ ಯುದ್ಧಗಳಿಂದಾಗಿ ರಸಾಯನಿಕ ಗೊಬ್ಬರದ ಉತ್ಪಾದನೆ ಕುಂಠಿತವಾಗಿದ್ದರಿಂದ ಇದರ ಕೊರತೆ ಭಾರತವನ್ನಷ್ಟೇ ಅಲ್ಲ ವಿಶ್ವಮಟ್ಟದಲ್ಲಿ ಕಾಡಲಾರಂಬಿಸಿದೆ ಇದರಲ್ಲಿ ಜಿಲ್ಲೆಯೂ ಹೊರತಾಗಿಲ್ಲ. ಜಿಲ್ಲೆಯ ಬೇಡಿಕೆಗೆ ಅನುಗುಣವಾಗಿ ರಸಾಯನಿಕ ಗೊಬ್ಬರದ ಪೂರೈಕೆ ಆಗಿಲ್ಲ. ಜಿಲ್ಲಾಡಳಿತ ಕಳೆದ ಎರಡು ದಿನಗಳಿಂದ ರಸಾಯನಿಕ ಗೊಬ್ಬರದ ವಿತರಣೆಯನ್ನು ಆರಂಭಿಸಿದೆ. ರೈತರ ಜಮೀನಿಗೆ ತಕ್ಕಂತೆ ಎಫ್‌ಡಿಐ ಪಡೆದುಕೊಂಡು ನೀಡಲು ನಿರ್ಧರಿಸಿದೆ. ಆದರೆ ಇದೇ ಪದ್ಧತಿ ಈಗ ರೈತರಿಗೆ ಮುಳುವಾಗುತ್ತಿದೆ.

ಪ್ರಮುಖವಾಗಿ ಜಿಲ್ಲೆಯಲ್ಲಿ ಅರ್ಧಕ್ಕೂ ಅಧಿಕ ಸಣ್ಣ ಹಿಡುವಳಿದಾರ ರೈತರು ತಮ್ಮ ಜಮೀನನ್ನು ಗೇಣಿಕೆ ಹಾಕಿದ್ದಾರೆ. ಗುತ್ತಿಗೆ ಪಡೆದುಕೊಂಡಿರುವ ರೈತರೀಗ ತಾವು ಮಾಡುತ್ತಿರುವ ಜಮೀನಿನ ಹಿಡುವಳಿಗೆ ತಕ್ಕಂತೆ ಗೊಬ್ಬರ ದೊರೆಯುತ್ತಿಲ್ಲ ಎಂಬ ಅಳಲು ಅವರದಾಗಿದೆ. ಇದು ಜಿಲ್ಲೆಯ ಒಟ್ಟಾರೆ ಇಳುವರಿ ಕುಂಠಿತವಾಗಿ ಮೇಲೆ ಉತ್ಪಾದನೆಯ ಮೇಲೆ ಪ್ರತಿಕೂಲ ಪರಿಣಾಮ ಬೀರುವ ಸಾಧ್ಯತೆ ಹೆಚ್ಚು.

ಬಿತ್ತನೆ ಆರಂಭದಲ್ಲಿ ಮೂಲ ಗೊಬ್ಬರವಾಗಿ ಎನ್‌ಪಿಕೆ ವಿಶ್ರಣವಿರುವ ಕಾಂಪ್ಲೆಕ್ಸ್ ಗೊಬ್ಬರವನ್ನು ನೀಡಲಾಗುತ್ತಿದೆ. ಪ್ರಸಕ್ತ ಸಾಲಿನ ಏಪ್ರೀಲದಲ್ಲಿ ಎಲ್ಲ ರೀತಿಯ ಗೊಬ್ಬರ ಸೇರಿ ಒಟ್ಟು 35081 ಮೆ.ಟ ಇತ್ತು ಆದರೆ ಸರಬರಾಜಾಗಿದ್ದು 25972 ಮೆ.ಟ, ಇಲ್ಲಿ ಒಂಬತ್ತು ಸಾವಿರ ಮೆ.ಟ ಕೊರತೆಯಿತ್ತು. ಮೇದಲ್ಲಿನ ಬೇಡಿಕೆ 39624ಮೆ.ಟ ಆದರೆ ಸರಬರಾಗಿದ್ದು 30071 ಮೆ.ಟ ಇಲ್ಲಿಯೂ ಅಂದಾಜು ಒಂಬತ್ತು ಸಾವಿರ ಮೆ.ಟ ಕೊರತೆಯಿದೆ.

ಏಪ್ರೀಲದಲ್ಲಿ ಎನ್‌ಪಿಕೆ 18232 ಮೆ.ಟ ಬೇಡಿಕೆಯಲ್ಲಿ 15045 ಮೆ.ಟ ಸರಬರಾಜಾಗಿ ಮೂರು ಸಾವಿರ ಮೆ.ಟ ಅಧಿಕ ಕೊರತೆಯಿದೆ. ಡಿಎಪಿ 6592 ಮೆ.ಟದಲ್ಲಿ 3926 ಸರಬರಾಜಾಗಿ 2666 ಕೊರತೆಯಿದೆ. ಯೂರಿಯಾ 7564 ಮೆ.ಟದಲ್ಲಿ 6160 ಮೆ.ಟ ಸರಬರಾಜಾಗಿ ಒಂದು ಸಾವಿರಕ್ಕೂ ಅಧಿಕ ಮೆ.ಟ ಕೊರತೆಯಿದೆ. ಉಳಿದಂತೆ ಎಸ್‌ಎಸ್‌ಪಿ, ಎಂಓಪಿ ಅಲ್ಪ ಮಟ್ಟಿಗೆ ಕೊರತೆಯಿದೆ.

ಮೇ ತಿಂಗಳಲ್ಲಿ ಎನ್‌ಪಿಕೆ 19110 ಮೆ.ಟ ಬೇಡಿಕೆಯಿತ್ತು ಆದರೆ 21323 ಮೆ.ಟ ಸರಬರಾಜಾಗಿದೆ. ಇಲ್ಲಿ ಎರಡುಸಾವಿರಕ್ಕೂ ಅಧಿಕ ಮೆ.ಟ ಹೆಚ್ಚಿಗೆ ಪೂರೈಕೆ ಆಗಿದೆ. ಡಿಎಪಿ 8720 ಮೆಟ ಬೇಡಿಕೆಯಲ್ಲಿ ಕೇವಲ 2606 ಮೆಟ ಪೂರೈಕೆ ಆಗಿದೆ ಹೀಗಾಗಿ ಆರು ಸಾವಿರ ಮೆ.ಟಗೂ ಅಧಿಕ ಕೊರತೆಯಿದೆ. ಯೂರಿಯಾದ 9098 ಬೇಡಿಕೆಯಲ್ಲಿ 5377 ಮೆ.ಟ ಅಭ್ಯವಿದೆ ಹೀಗಾಗಿ 3721 ಮೆಟ ಕೊರತೆಯಿದೆ. ಎಸ್‌ಎಸ್‌ಪಿ ಹಾಗೂ ಎಮ್‌ಓಪಿ ಗೊಬ್ಬರಗಳಲ್ಲಿ ಅಧಿಕ ಕೊರತೆಯಿದೆ.

ರಸಾಯನಿಕ ಗೊಬ್ಬರ ವಿತರಣೆ ಮಾಡುವವರು ಹಳೆ ಗೊಬ್ಬರವನ್ನು ನೂತನ ಬೆಲೆಯಲ್ಲಿ ಮಾರಾಟ ಮಾಡಿ ಅಧಿಕ ಲಾಭವನ್ನು ಪಡೆದುಕೊಳ್ಳುತ್ತಿದ್ದಾರೆ. ಕೆಲವಿತರಕರುಗೊಬ್ಬರಸಂಗ್ರಹಣೆಇದ್ದರೂಗೊಬ್ಬರ ಬಂದಿಲ್ಲ ಎಂದು ಹೇಳುತ್ತಿದ್ದಾರೆ. ಕೆಲ ವಿತರಕರು ಕೃತಕ ಅಭಾವ ಸೃಷ್ಟಿಸುವ ಪ್ರಯತ್ನವನ್ನು ಮಾಡುತ್ತಿದ್ದಾರೆ ಎಂಬ ದೂರುಗಳಿವೆ.



> ಯೂರಿಯಾ ಆಯಾ ಬೆಳೆಯ ಅಗತ್ಯಕ್ಕೆ ತಕ್ಕಂತೆ ಬಳಕೆ ಮಾಡಲೆಂಬ ಉದ್ದೇಶದಿಂದ ಎಫ್‌ಯಡಿ ಆಧಾರದಲ್ಲಿ ರೈತರಿಗೆ ನೀಡಲಾಗುತ್ತಿದೆ. ಮುಂಗಾರಿಗೆ ಅಗತ್ಯವಿರುವ ಗೊಬ್ಬರ ಸರಬರಾಜಿಗೆ ಕ್ರಮ ಕೈಗೊಳ್ಳಲಾಗುತ್ತಿದೆ.
>
> ■ ಜಯಪ್ರಕಾಶ ಚೌವ್ಹಾಣ, ಕೃಷಿ ಇಲಾಖೆಯ ಜೆಡಿ

ಬೆಳೆ ಹಾನಿ, ವಿಮೆ ಪರಿಹಾರ ನೀಡಿ: ಮತ್ತಿಮಡು

ಕಲಬುರಗಿ: ಗ್ರಾಮೀಣ ವಿಧಾನಸಭೆ ಕ್ಷೇತ್ರದ ವ್ಯಾಪ್ತಿಯ ಲಾಡಮುಗಳಿ, ಲೇಂಗಟಿ ಗ್ರಾಮದ ರೈತರು ಬೆಳೆ ವಿಮೆ ಹಣ ಕಟ್ಟಿದ್ದು, ವಿಮೆ ಕಂಪನಿ ನೀಡಬೇಕಿದ್ದ ಬೆಳೆ ವಿಮೆ ಪರಿಹಾರ ಶೂನ್ಯ ಬಂದಿದೆ. ಇದಕ್ಕೆ ಕಾರಣ ಬೆಳೆ ಹಾನಿ ಸಮೀಕ್ಷೆ ವೇಳೆ ಕೇವಲ ಶೇ.1.50 ಬೆಳೆ ಹಾನಿಯಾಗಿದೆ ಎಂದು ವರದಿಯಲ್ಲಿ ಉಲ್ಲೇಖಿಸಿದ್ದು, ಕಟ್ಟಿದ ಹಣವೂ ವಾಪಸ್ ಬಂದಿಲ್ಲ ಎಂದು ಲೇಂಗಟಿ, ಲಾಡಮುಗಳಿ ರೈತರು ಶಾಸಕ ಬಸವರಾಜ ಮತ್ತಿಮಡು ಬಳಿ ಅಳಲು ತೋಡಿಕೊಂಡರು.

ನಗರದ ಗೃಹ ಕಚೇರಿಯಲ್ಲಿ ತಕ್ಷಣ ಕಾರ್ಯಪ್ರವೃತ್ತರಾದ ಶಾಸಕ ಮತ್ತಿಮಡು, ಕೃಷಿ ಇಲಾಖೆ ಜಂಟಿ ನಿರ್ದೇಶಕ ಸಮದ್ ಪಟೇಲ್, ಜಿಲ್ಲಾ ಸಂಖ್ಯಾಸಂಗ್ರಹಣ ಅಧಿಕಾರಿ ಇಮ್ರಾನ್ ಅಲಿ, ಸಹಾಯಕ ಸಾಂಕಿಕ ಅಧಿಕಾರಿ ದಾದಾ ಗೌಡ ಅವರನ್ನು ಸ್ಥಳಕ್ಕೆ ಕರೆಸಿ, ರೈತರೆದುರೆ ಚರ್ಚಿಸಿದರು.

ಲೇಂಗಟಿ, ಲಾಡಮುಗಳಿ ಅಕ್ಕಪಕ್ಕದ ಗ್ರಾಮಗಳಲ್ಲಿ ಶೇ.80, 90 ಬೆಳೆ ಹಾನಿ ಎಂದು ಸಮೀಕ್ಷೆಯಲ್ಲಿ ತೋರಿಸಲಾಗಿದೆ. ಈ ಎರಡು ಗ್ರಾಮಗಳಲ್ಲಿ ಹೇಗೆ ಕೇವಲ ಶೇ.1.50 ಬೆಳೆ ಹಾನಿ ಆಗುತ್ತದೆ. ಕನಿಷ್ಠ ಪ್ರಜ್ಞೆ ಇಲ್ಲದಂತೆ ವರದಿ ತಯಾರಿಸಲಾಗಿದೆ ಎಂದರು.

ಶಾಸಕ ಬಸವರಾಜ ಮತ್ತಿಮಡು ಮಾತನಾಡಿ, ದಾಖಲೆ ಪ್ರಮಾಣದಲ್ಲಿ ಮಳೆ ಬಂದು ಬೆಳೆ ಹಾನಿಯಾಗಿದೆ. ಆದರೂ ಶೇ.1 ಮಾತ್ರ ಬೆಳೆ ಹಾನಿ ಎಂದು ತೋರಿಸಿದರೆ ಗತಿ ಏನು. ಬೇಕಾಬಿಟ್ಟಿ ವರದಿ ತಯಾರಿಸಲಾಗಿದೆ. ಕೂಡಲೇ ತಪ್ಪು ಸರಿಪಡಿಸಿ, ಬೆಳೆ ವಿಮೆ ಪರಿಹಾರ ಬರುವಂತೆ ಮಾಡಬೇಕು ಎಂದು ಸೂಚಿಸಿದರು.

ಬೆಳೆ ವಿಮೆ ಸಮೀಕ್ಷೆ ಉಲ್ಲೇಖದ ವೇಳೆ ಗೊಂದಲ ಆಗಿದ್ದು, ಎಲ್ಲಿ ತಪ್ಪಾಗಿದೆ ಎಂಬುದನ್ನು ಪರಿಶೀಲಿಸಿ ಪತ್ತೆ ಹಚ್ಚಿ, ಬೆಳೆ ವಿಮೆ ಪರಿಹಾರ ಒದಗಿಸಲು ಶ್ರಮಿಸಲಾಗುವುದು ಎಂದು ಕೃಷಿ ಇಲಾಖೆ ಅಧಿಕಾರಿಗಳು ಭರವಸೆ ನೀಡಿದರು.

ಮುಖಂಡರಾದ ಸತೀಶ ಸೊರಡೆ, ಬಸಯ್ಯ ಮಠಪತಿ, ಕಿರಣ ಖೇಮಶೆಟ್ಟಿ, ರಾಜಕುಮಾರ ಪೊಲೀಸ್ ಪಾಟೀಲ್, ನಿಜಾಮ ದೋಮಾ, ಅನಿಲ ಕುದಮುಡ, ಸಾಯಿಬಣ್ಣ ಪೂಜಾರಿ, ರಾಜು ಪೂಜಾರಿ ಇದ್ದರು.



ಮತದಾರರ ಪಟ್ಟಿಗಳ ವಿಶೇಷ ಸಮಗ್ರ ಪರಿಷ್ಕರಣೆ

ಕೊಪ್ಪಳ: ಚುನಾವಣಾ ಆಯೋಗವು 2026ರ ಮೇ 14ರಂದು ಹೊರಡಿಸಿದ ಪ್ರಕಟಣೆಯನ್ವಯ ಮತದಾರರ ಪಟ್ಟಿಗಳ ವಿಶೇಷ ಸಮಗ್ರ ಪರಿಷ್ಕರಣೆ 2026ರ ವೇಳಾಪಟ್ಟಿಯನ್ನು ನಿಗದಿಪಡಿಸಲಾಗಿರುತ್ತದೆ ಎಂದು ಜಿಲ್ಲಾ ಚುನಾವಣಾಧಿಕಾರಿಗಳು ಆಗಿರುವ ಜಿಲ್ಲಾಧಿಕಾರಿಗಳಾದ ಡಾ.ಸುರೇಶ ಬಿ. ಇಟ್ನಾಳ ಅವರು ಹೇಳಿದರು.

ಮತದಾರರ ಪಟ್ಟಿಗಳ ವಿಶೇಷ ಸಮಗ್ರ ಪರಿಷ್ಕರಣೆಗೆ ಸಂಬಂಧಿಸಿದಂತೆ ಕೊಪ್ಪಳ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಮೇ 27ರಂದು ಜಿಲ್ಲೆಯ ರಾಜಕೀಯ ಪಕ್ಷಗಳ ಪ್ರತಿನಿಧಿಗಳೊಂದಿಗೆ ಕರೆದ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಮತದಾರರ ಪಟ್ಟಿಗಳ ವಿಶೇಷ ಸಮಗ್ರ ಪರಿಷ್ಕರಣೆ-2026ಕ್ಕೆ ಸಂಬಂಧಿಸಿದಂತೆ 2026ರ ಜೂ.20 ರಿಂದ ಜೂನ್ 29 ರವರೆಗೆ ಪರಿಷ್ಕರಣೆಯ ಸಿದ್ಧತೆ, ತರಬೇತಿ ಮತ್ತು ಮುದ್ರಣಕ್ಕೆ ಅವಕಾಶ ಕಲ್ಪಿಸಲಾಗಿದೆ. ಜೂ.30ರಿಂದ ಜು.29ರವರೆಗೆ ಬಿ.ಎಲ್.ಓ.ಗಳಿಂದ ಮನೆ ಮನೆ ಭೇಟಿ ನಡೆಯುತ್ತದೆ. ಜು.29ರೊಳಗೆ ಮತಗಟ್ಟೆಗಳ ರ್‍ಯಾಷನಲೈಜೆಷನ್ ನಡೆಯಲಿದೆ. ಆ.5ರಂದು ಕರಡು ಮತದಾರರ ಪಟ್ಟಿ ಪ್ರಕಟಣೆ ಮಾಡಲಾಗುತ್ತದೆ. ಆಗಸ್ಟ್ 5 ರಿಂದ ಸೆ.4ರವರೆಗೆ ಹಕ್ಕು ಮತ್ತು ಆಕ್ಷೇಪಣೆಗಳನ್ನು ಸಲ್ಲಿಸಲು ಅವಕಾಶವಿರುತ್ತದೆ. ಆಗಸ್ಟ್ 5 ರಿಂದ ಅಕ್ಟೋಬರ್ 3 ರವರೆಗೆ ನೋಟೀಸ್ ಅವಧಿ, ಹಕ್ಕುಗಳು ಮತ್ತು ಆಕ್ಷೇಪಣೆಗಳ ವಿಲೇವಾರಿ ನಡೆಯಲಿದೆ. 2026ರ ಅಕ್ಟೋಬರ್ 7 ರಂದು ಅಂತಿಮ ಮತದಾರರ ಪಟ್ಟಿ ಪ್ರಕಟಣೆ ಮಾಡಲಾಗುತ್ತಿದೆ ಎಂದು ಅವರು ಮಾಹಿತಿ ನೀಡಿದರು. ಜಿಪಂ ಸಿಇಒ ವರ್ಣಿತ್ ನೇಗಿ ಮಾತನಾಡಿ, ಮತದಾರರ ಪಟ್ಟಿಗಳ ವಿಶೇಷ ಸಮಗ್ರ ಪರಿಷ್ಕರಣೆಯ ಬಗ್ಗೆ ಜನರಿಗೆ ಏನಾದರು ಗೊಂದಲಗಳಿದ್ದಲ್ಲಿ ತಿಳಿದುಕೊಳ್ಳಲು ಅನುಕೂಲವಾಗುವಂತೆ ಕೊಪ್ಪಳ ಜಿಲ್ಲೆಯ 152 ಗ್ರಾಪಂಗಳಲ್ಲಿ ಜೊತೆಗೆ ಪಟ್ಟಣ ಮತ್ತು ನಗರ ಪ್ರದೇಶಗಳ ಪ್ರತಿ ವಾರ್ಡನಲ್ಲಿ ವೋಟರ್ ಫೆಸಿಲಿಟೇಷನ್ ಸೆಂಟರ್ ತೆರೆದು ಅಲ್ಲಿ ಆಸನಗಳ, ಕುಡಿಯುವ ನೀರು, ಇಂಟರನೆಟ್, ಕಂಪ್ಯೂಟರ್ ವ್ಯವಸ್ಥೆ ಮಾಡಲಾಗುತ್ತದೆ. ಹೋರ್ಡಿಂಗ್ಸ್, ಪೋಸ್ಟರ್, ಕರಪತ್ರ ಮತ್ತು ಜಿಂಗಲ್ಸ್ ಮೂಲಕ ಜನತೆಗೆ ಮತದಾರರ ಪಟ್ಟಿಗಳ ವಿಶೇಷ ಸಮಗ್ರ ಪರಿಷ್ಕರಣೆಯ ಬಗ್ಗೆ ಮಾಹಿತಿ ನೀಡಲಾಗುತ್ತದೆ ಎಂದು ಅವರು ತಿಳಿಸಿದರು. ಮತದಾರರ ಪಟ್ಟಿಗಳ ವಿಶೇಷ ಸಮಗ್ರ ಪರಿಷ್ಕರಣೆಯ ಬಗ್ಗೆ ನಗರ ಮತ್ತು ಗ್ರಾಮೀಣ ಪ್ರದೇಶದಲ್ಲಿ ಕಸ ವಿಲೇವಾರಿ ವಾಹನಗಳಲ್ಲಿ ಜಿಂಗಲ್ಸ್ ಅಳವಡಿಸಿ ಮತ್ತು ಸಹಕಾರಿ ಸಂಘಗಳು ಹಾಗೂ ನ್ಯಾಯಬೆಲೆ ಅಂಗಡಿಗಳ ಮೂಲಕ ಪ್ರಚಾರ ನಡೆಸಬೇಕು ಎಂದು ರಾಜಕೀಯ ಪಕ್ಷಗಳ ಪ್ರತಿನಿಧಿಗಳು ಸಭೆಗೆ ಸಲಹೆ ಮಾಡಿದರು. ವಿವಿಧ ರಾಜಕೀಯ ಪಕ್ಷಗಳ ಪ್ರತಿನಿಧಿಗಳಾದ ಅಮರೇಗೌಡ ಪಾಟೀಲ್ ಬಯ್ಯಾಪೂರ, ನವೀನ್ ಗುಳಗಣ್ಣನವರ, ಕೃಷ್ಣ ಇಟ್ಟಂಗಿ, ಮಂಜುನಾಥ ಸೊರಟೂರ, ರಾಜು ಬಾಕ್ಳೆ, ಕಳಕನಗೌಡ, ಶರಣು ಶೆಟ್ಟರ್, ಸೋಮನಗೌಡ, ರಮೇಶ ಡಂಬ್ರಳ್ಳಿ, ಮೌನೇಶ್ ಕಿನ್ನಾಳ, ಶಿವಕುಮಾರ್ ಇ., ರಮೇಶ ಎಂ. ಹಾಗೂ ಮತ್ತಿತರರು ಮತ್ತು ಜಿಲ್ಲಾ ಚುನಾವಣಾ ಶಾಖೆಯ ಶಿರಸ್ತೇದಾರರಾದ ನಾಗರಾಜ್ ಇತರರಿದ್ದರು.

ಬೇಡಿಕೆಯಂತೆ ಜಿಲ್ಲೆಯಲ್ಲಿ ರಸಗೊಬ್ಬರ ದಾಸ್ತಾನು: ಕೃಷ್ಣಮೂರ್ತಿ

ಕೊಪ್ಪಳ: ರೈತರ ಬೇಡಿಕೆಯಂತೆ ಜಿಲ್ಲೆಯಲ್ಲಿ ರಸಗೊಬ್ಬರ ದಾಸ್ತಾನು ಮಾಡಲಾಗಿದ್ದು, ಕೊಪ್ಪಳ ಜಿಲ್ಲೆಯಲ್ಲಿ ಯಾವುದೇ ರೀತಿಯ ರಸಗೊಬ್ಬರದ ಕೊರತೆ ಇರುವುದಿಲ್ಲವೆಂದು ಕೊಪ್ಪಳ ಜಂಟಿ ಕೃಷಿ ನಿರ್ದೇಶಕರಾದ ಜಿ.ಡಿ ಕೃಷ್ಣಮೂರ್ತಿ ತಿಳಿಸಿದ್ದಾರೆ.

ಕೊಪ್ಪಳ ಜಿಲ್ಲೆಯಲ್ಲಿ ಏಪ್ರೀಲ್ ನಿಂದ ಮೇ ವರೆಗೆ ರಸಗೊಬ್ಬರ ಬೇಡಿಕೆಯು 33,187 ಟನ್ ಯಿದ್ದು, 43,282 ಟನ್ ರಸಗೊಬ್ಬರ ದಾಸ್ತಾನಿಕರಿಸಿದ್ದು 10,032 ಟನ್ ರಸಗೊಬ್ಬರ ವಿತರಣೆ ಮಾಡಲಾಗಿದೆ. ಬಾಕಿ ಉಳಿದಿರುವ ದಾಸ್ತಾನು 33,250 ಟನ್ ರಸಗೊಬ್ಬರ ವಿದ್ದು, ಇದರಲ್ಲಿ ಯೂರಿಯಾ 11,004 ಟನ್, ಡಿಎಪಿ 5002 ಟನ್, ಎಂಓಪಿ 1092 ಟನ್, ಕಾಂಪ್ಲೆಕ್ಸ್ 15,740 ಟನ್, ಎಸ್.ಎಸ್.ಪಿ 412 ಟನ್ ಮತ್ತು ಇದರ ಜೊತೆಗೆ 13,520 ಲೀಟರ್ ನ್ಯಾನೋ ಯೂರಿಯಾ, 1825 ಲೀಟರ್ ನ್ಯಾನೋ ಡಿಎಪಿ ಕೃಷಿ ಪರಿಕರ ಮಾರಾಟಗಾರ ಮಳಿಗೆಗಳಲ್ಲಿ ಲಭ್ಯವಿದ್ದು, ಜಿಲ್ಲೆಯಲ್ಲಿ ರಸಗೊಬ್ಬರದ ಕೊರತೆ ಇರುವುದಿಲ್ಲ.

ನ್ಯಾನೋ ಯೂರಿಯಾ ಹಾಗೂ ನ್ಯಾನೋ ಡಿಎಪಿ ಸ್ಪ್ರೇ ಮಾಡುವುದರಿಂದ ಗಿಡಗಳಿಗೆ ನೇರವಾಗಿ ಪೋಷಕಾಂಶ ದೊರೆಯುವುದದರಿಂದ ನೀರು ಹಾಗೂ ಮಣ್ಣನ್ನು ಸಂರಕ್ಷಿಸಬಹುದು. ಜಿಲ್ಲೆಯ ವಿವಿಧ ಗೋದಾಮುಗಳಿಗೆ ಕೃಷಿ ಇಲಾಖೆಯ ಜಂಟಿ ಕೃಷಿ ನಿರ್ದೇಶಕರ ಕಛೇರಿಯ ಅಧಿಕಾರಿಗಳ ತಂಡ ಭೇಟಿ ನೀಡಿ, ಯೂರಿಯಾ ದಾಸ್ತಾನು ಪರಿಶೀಲನೆ ನಡೆಸಲಾಗಿದೆ. ಪ್ರಸಕ್ತ ಸಾಲಿನ ಮುಂಗಾರು ಹಂಗಾಮಿನಲ್ಲಿ ರೈತರು ಯೂರಿಯಾ ರಸಗೊಬ್ಬರ ಖರೀದಿಸಲು ರೈತರ ಫ್ರೂಟ್ ಐಡಿ (ಎಫ್.ಐಡಿ) ಸಂಖ್ಯೆ ಕಡ್ಡಾಯಗೊಳಿಸಲಾಗಿದೆ. ರೈತರ ಎಫ್.ಐಡಿ ಸಂಖ್ಯೆ ಬಳಸಿಕೊಂಡು ಅವರು ಹೊಂದಿರುವ ಜಮೀನಿನ ವಿಸ್ತೀರ್ಣ ಮತ್ತು ಬೆಳೆದ ಬೆಳೆಗೆ ಅನುಗುಣವಾಗಿ ಎಷ್ಟು ಪ್ರಮಾಣದ ಯೂರಿಯಾ ಅಗತ್ಯವಿದೆಯೋ ಅಷ್ಟನ್ನು ಮಾತ್ರ ವಿತರಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಈ ಸಂಪೂರ್ಣ ಪ್ರಕ್ರಿಯೆಯು ಕೆ-ಕಿಸಾನ್ ಯೂರಿಯಾ ವಿತರಣೆ ತಂತ್ರಾಂಶದ ಮೂಲಕವೇ ನಡೆಯಲಿದೆ.

ನೊಂದವರಿಗೆ ನ್ಯಾಯ ಜಾಗೃತಿ ಅಭಿಯಾನಕ್ಕೆ ಚಾಲನೆ

ಹನುಮಸಾಗರ: ಜನರಲ್ಲಿ ಕಾನೂನು ಅರಿವು ಹೆಚ್ಚಿಸಿ, ನ್ಯಾಯದಿಂದ ಯಾರೂ ವಂಚಿತರಾಗದಂತೆ ಮಾಡುವ ಉದ್ದೇಶದಿಂದ ಹನುಮಸಾಗರ ಪೊಲೀಸ್ ಠಾಣೆಯಲ್ಲಿ 'ನೊಂದವರಿಗೆ ನ್ಯಾಯ ಜಾಗೃತಿ ಅಭಿಯಾನ' ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು.

ಮಾತನಾಡಿದ ಬಳ್ಳಾರಿ ವಲಯದ ಕಾನೂನು ಅಧಿಕಾರಿ ಬಿ.ಎಸ್. ಪಾಟೀಲ್, ಯುವಕರು ಸಮಾಜದ ಉತ್ತಮ ನಾಗರಿಕರಾಗಿ ರೂಪುಗೊಳ್ಳಲು ಹಿರಿಯರ ಮಾರ್ಗದರ್ಶನ ಅತ್ಯಗತ್ಯ ಎಂದು ಹೇಳಿದರು. ಸಮಾಜದಲ್ಲಿ ಕಾನೂನು ಜಾಗೃತಿ ಮೂಡಿಸುವುದು ಕಾಲದ ಅಗತ್ಯವಾಗಿದ್ದು, ಯುವಕರು ದುಶ್ಚಟಗಳಿಂದ ದೂರವಿದ್ದು ವ್ಯಸನಮುಕ್ತ ಜೀವನ ನಡೆಸಬೇಕು ಎಂದು ಸಲಹೆ ನೀಡಿದರು. ನ್ಯಾಯದಿಂದ ಯಾರೂ ವಂಚಿತರಾಗಬಾರದು ಎಂಬ ಉದ್ದೇಶದಿಂದ ಅಭಿಯೋಜನಾ ಇಲಾಖೆಯು ಹಲವು ಜನಪರ ಕಾರ್ಯಕ್ರಮಗಳನ್ನು ರೂಪಿಸಿದ್ದು, ನೊಂದವರಿಗೆ ಕಾನೂನು ನೆರವು ಹಾಗೂ ಅಗತ್ಯ ಮಾಹಿತಿಯನ್ನು ಒದಗಿಸುತ್ತಿದೆ ಎಂದು ತಿಳಿಸಿದರು. ಯಾವುದೇ ಪ್ರಕರಣ ದಾಖಲಾದ ಬಳಿಕ ಸಂತ್ರಸ್ತರಿಗೆ ಎಫ್‌ಐಆರ್ ಪ್ರತಿಯನ್ನು ಉಚಿತವಾಗಿ ನೀಡಲಾಗುತ್ತದೆ ಎಂದು ಹೇಳಿದರು. ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ (ಬಿಎನ್‌ಎಸ್‌ಎಸ್) ಅಡಿಯಲ್ಲಿ ಜಾರಿಗೆ ಬಂದಿರುವ ಹೊಸ ಕಾನೂನುಗಳ ಕುರಿತು ವಿವರಿಸಿದ ಅವರು, ನಿರ್ದಿಷ್ಟ ಅಪರಾಧಗಳ ಸಂತ್ರಸ್ತರಿಗೆ ಎಲ್ಲಾ ಆಸ್ಪತ್ರೆಗಳು ತಕ್ಷಣ ಉಚಿತ ಪ್ರಥಮ ಚಿಕಿತ್ಸೆ ನೀಡುವುದು ಹಾಗೂ ಪೊಲೀಸರಿಗೆ ಮಾಹಿತಿ ಒದಗಿಸುವುದು ಕಡ್ಡಾಯವಾಗಿದೆ ಎಂದು ಹೇಳಿದರು. ಈ ಹೊಸ ಕಾನೂನುಗಳು ಜನಸಾಮಾನ್ಯರಿಗೆ ಸುಲಭವಾಗಿ ನ್ಯಾಯ ದೊರಕುವಂತೆ ರೂಪುಗೊಂಡಿದ್ದು, ಸಂತ್ರಸ್ತರ ಹಕ್ಕುಗಳ ರಕ್ಷಣೆಗೆ ಹೆಚ್ಚಿನ ಆದ್ಯತೆ ನೀಡಿವೆ ಎಂದರು.

ಅಪರಾಧದಿಂದ ಸಂತ್ರಸ್ತರಿಗೆ ಉಂಟಾಗಿರುವ ನಷ್ಟಕ್ಕೆ ಪರಿಹಾರ ನೀಡುವಂತೆ ಆರೋಪಿಗಳಿಗೆ ನ್ಯಾಯಾಲಯ ನಿರ್ದೇಶನ ನೀಡುವ ಅವಕಾಶವನ್ನೂ ಹೊಸ ಕಾನೂನು ಕಲ್ಪಿಸಿದೆ. ಇದರಿಂದ ನೊಂದವರಿಗೆ ನ್ಯಾಯ ದೊರಕಿಸುವ ಪ್ರಕ್ರಿಯೆ ಮತ್ತಷ್ಟು ಪರಿಣಾಮಕಾರಿಯಾಗಲಿದೆ ಎಂದು ಅವರು ಅಭಿಪ್ರಾಯಪಟ್ಟರು. ಹೊಸಪೇಟೆಯ ಸಹಾಯಕ ಅಭಿಯೋಜಕ ರವೀಂದ್ರಸಾ ಮೆಹರವಾಡೆ, ಪಿಎಸ್‌ಐಗಳಾದ ಧನುಂಜಯ ಎಂ, ಬಸಪ್ಪ ಲಮಾಣಿ ಹಾಗೂ ಸಾರ್ವಜನಿಕರು ಭಾಗವಹಿಸಿದ್ದರು.



ಪ್ರಸಕ್ತ ಶೈಕ್ಷಣಿಕ ಸಾಲಿನಿಂದ 6 ಹೊಸ ಪಿ.ಜಿ. ಕೋರ್ಸ್ ಶುರು

ಸಿಯುಕೆ ಪಿಜಿ ಪ್ರವೇಶ ಆರಂಭ: ಪ್ರೊ.ಬಟ್ಟು ಸತ್ಯನಾರಾಯಣ

ಕಲಬುರಗಿ: ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದಲ್ಲಿ ಪ್ರಸಕ್ತ 2026-27ನೇ ಶೈಕ್ಷಣಿಕ ಸಾಲಿಗೆ ಆನ್‌ಲೈನ್ ಪ್ರವೇಶಾತಿ ಪ್ರಕ್ರಿಯೆ ಪ್ರಾರಂಭವಾಗಿದ್ದು, ಈಗಾಗಲೇ ಪ್ರವೇಶ ಪರೀಕ್ಷೆಯಲ್ಲಿ ಅಂಕ ಗಳಿಸಿದ ಅಭ್ಯರ್ಥಿಗಳು ವಿ.ವಿ.ಯಲ್ಲಿ ಅಭ್ಯಾಸಕ್ಕೆ ಆನ್‌ಲೈನ್ ಮೂಲಕ ಪ್ರವೇಶಾತಿ ನೋಂದಣಿ ಮಾಡಿಕೊಳ್ಳಬಹುದಾಗಿದೆ ಎಂದು ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಬಟ್ಟು ಸತ್ಯನಾರಾಯಣ ಹೇಳಿದರು.

ಬುಧವಾರ ಕಡಗಂಚಿಯ ವಿವಿಯ ಅತಿಥಿಗೃಹದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಸಿಯುಇಟಿ (ಪಿ.ಜಿ)-2026 ಅಥವಾ ಗೇಟ್ ಪರೀಕ್ಷೆಯಲ್ಲಿ ಅಂಕ ಪಡೆದ ಅಭ್ಯರ್ಥಿಗಳು ಮಾತ್ರ ಸಿಯುಕೆ ಸಮರ್ಥ್ ಪೋರ್ಟಲ್ ಮೂಲಕವೇ http://cukcuet.samarth.edu.in/pg/ ಪ್ರವೇಶ ನೋಂದಣಿ ಮಾಡಿಕೊಳ್ಳಬೇಕಾಗುತ್ತದೆ ಎಂದರು.



> ವಿಶ್ವವಿದ್ಯಾನಿಲಯವು ಇದೇ ಪ್ರಥಮ ಬಾರಿಗೆ ವಿದ್ಯಾರ್ಥಿಗಳ ಸರ್ವತೋಮುಖ ಅಭಿವೃದ್ಧಿಗಾಗಿ ಸ್ವಾವಲಂಬನೆ ಮತ್ತು ಕೌಶಲ್ಯ ಅಭಿವೃದ್ಧಿ ಹೆಸರಿನಲ್ಲಿ ಪ್ರಸಕ್ತ 2026-27ನೇ ಶೈಕ್ಷಣಿಕ ಸಾಲಿನಿಂದ ಕಾರ್ಯಕ್ರಮ ಪರಿಚಯಿಸುತ್ತಿದೆ. ಇದಕ್ಕಾಗಿ ಎನ್.ಬಿ.ಸಿ.ಸಿ. ಸಂಸ್ಥೆಯ ಸಿ.ಎಸ್.ಆರ್. ನಿಧಿ ಬಳಕೆ ಮಾಡಲಾಗುತ್ತಿದೆ. ಆರಂಭದಲ್ಲಿ ವಿಶ್ವವಿದ್ಯಾಲಯದ ಪಿ.ಜಿ. ಪ್ರಥಮ ವರ್ಷದ 100 ವಿದ್ಯಾರ್ಥಿಗಳನ್ನು ಆಯ್ಕೆ ಮಾಡಿ ಪ್ರತಿ ಸೆಮಿಸ್ಟರ್ ಗೆ 3 ತಿಂಗಳಂತೆ ಒಟ್ಟು 6 ತಿಂಗಳ ಕಾಲ ಮಾಸಿಕ 3,000 ರೂ. ಗೌರವ ಸಂಭಾವನೆ ನೀಡಲಾಗುತ್ತದೆ. ಇದಕ್ಕಾಗಿ ವಾರ್ಷಿಕ 10 ಲಕ್ಷ ರೂ. ಮತ್ತು ಐದು ವರ್ಷಕ್ಕೆ ಸಂಸ್ಥೆ 1 ಕೋಟಿ ರೂ. ಹಣ ಖರ್ಚು ಮಾಡಲಿದೆ.
>
> ■ ಪ್ರೊ.ಬಟ್ಟು ಸತ್ಯನಾರಾಯಣ, ಸಿಯುಕೆ ಕುಲಪತಿ

ಸಾಮಾನ್ಯ, ಓಬಿಸಿ, ಇ.ಡಬ್ಲ್ಯೂ.ಎಸ್. ವರ್ಗದ ವಿದ್ಯಾರ್ಥಿಗಳು 500 ರೂ., ಎಸ್.ಸಿ-ಎಸ್.ಟಿ-ಪಿ.ಡಬ್ಲ್ಯೂ.ಡಿ ಅಭ್ಯರ್ಥಿಗಳು 100 ರೂ. ಶುಲ್ಕ ಭರಿಸಿ ಜೂ.10ರ ಬೆಳಿಗ್ಗೆ 11 ಗಂಟೆ ವರೆಗೆ ನೋಂದಣಿ ಮಾಡಿಕೊಳ್ಳಬೇಕು. ಪ್ರತ್ಯೇಕ ಕಾರ್ಯಕ್ರಮಗಳಿಗೆ ಅರ್ಜಿ ಸಲ್ಲಿಸುವವರು ಪ್ರತ್ಯೇಕ ನೋಂದಣಿ ಶುಲ್ಕ ಭರಿಸಬೇಕಾಗುತ್ತದೆ. ಮೆರಿಟ್ ಮತ್ತು ಲಭ್ಯವಿರುವ ಮೀಸಲಾತಿಯನ್ವಯ ಜೂ.10ರಂದು ಬೆಳಿಗ್ಗೆ 11 ನೋಂದಾಯಿತ ಅಭ್ಯರ್ಥಿಗಳ ಪಟ್ಟಿಯನ್ನು ವಿವಿ ಅಂತರ್ಜಾಲದಲ್ಲಿ ಪ್ರಕಟಿಸಿ ಜೂ.11ರ ಬೆಳಿಗ್ಗೆ 11ಗಂಟೆ ವರೆಗೆ ಆಕ್ಷೇಪಣೆ ಆಹ್ವಾನಿಸಲಾಗುತ್ತದೆ ಎಂದರು.

ಕಲ್ಯಾಣ ಕರ್ನಾಟಕ ಭಾಗದ ವಿದ್ಯಾರ್ಥಿಗಳಿಗೆ 371ಜೆ ಅನ್ವಯ ಶೇ.8ರಷ್ಟು ಮೀಸಲಾತಿ ಇದ್ದು, ಪ್ರದೇಶದ ವಿದ್ಯಾರ್ಥಿಗಳು ಲಾಭ ಪಡೆಯಬೇಕೆಂದ ಅವರು, ಪ್ರವೇಶ ಪ್ರಕ್ರಿಯೆ ಹಾಗೂ ಕೋರ್ಸ್ ಗಳ ಕುರಿತು ಹೆಚ್ಚಿನ ವಿವರಗಳಿಗೆ www.cuk.ac.in ನೀಡಿ ಮಾಹಿತಿ ಪಡೆಯಬಹುದು ಎಂದಿದ್ದಾರೆ. ಪ್ರಭಾರಿ ಕುಲಸಚಿವ ಹಾಗೂ ಕಾನೂನು ನಿಕಾಯ ಡೀನ್ ಪ್ರೊ. ಬಸವರಾಜ್ ಕುಬಕಡ್ಡಿ, ಪರೀಕ್ಷಾ ನಿಯಂತ್ರಣಾಧಿಕಾರಿ ಡಾ.ಕೋಟ ಸಾಯಿ ಕೃಷ್ಣ, ಸಾರ್ವಜನಿಕ ಸಂಪರ್ಕಾಧಿಕಾರಿ ಡಾ.ಗಣಪತಿ ಸಿನ್ನೂರ, ಸಹಾಯಕ ಕುಲಸಚಿವ ಶ್ರೀಕಾಂತ್ ಕುಸೂರ ಇತರರಿದ್ದರು.

6 ಹೊಸ ಕೋರ್ಸ್ ಆರಂಭ

ಎನ್‌ಇಪಿ ಅಳವಡಿಸಿಕೊಂಡಿರುವ ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದಲ್ಲಿ ಪ್ರಸಕ್ತ 2026-27ನೇ ಶೈಕ್ಷಣಿಕ ಸಾಲಿನಿಂದ ವಿ.ವಿ.ಯಲ್ಲಿ ಎಂ.ಎಸ್ಸಿ ಇನ್ ಜೆನೆಟಿಕ್ಸ್ ಮತ್ತು ಜಿನೋಮಿಕ್ಸ್, ಎಂ.ಎಸ್ಸಿ (ಪ್ರಾಣಿಶಾಸ್ತ್ರ), ಎಂ.ಎಸ್ಸಿ (ಸಸ್ಯಶಾಸ್ತ್ರ), ಎಂ.ಎಸ್ಸಿ (ಸಂಖ್ಯಾಶಾಸ್ತ್ರ ಮತ್ತು ದತ್ತಾಂಶ ವಿಶ್ಲೇಷಣೆ), ಎಂ.ಟೆಕ್ ಇನ್ ಕೃತಕ ಬುದ್ಧಿಮತ್ತೆ ಮತ್ತು ಯಂತ್ರ ಅಧ್ಯಯನ ಹಾಗೂ ಮಾಸ್ಟರ್ ಆಫ್ ಲೈಬ್ರರಿ ಮತ್ತು ಮಾಹಿತಿ ವಿಜ್ಞಾನ ಕೋರ್ಸ್ ಆರಂಭಿಸಲಾಗುತ್ತಿದ್ದು, ಇದಕ್ಕೆ ಬೇಕಾದ ಬೋಧಕ ಸಿಬ್ಬಂದಿ ನೇಮಕ ಮಾಡಿಕೊಳ್ಳಲಾಗಿದೆ ತಿಳಿಸಿದರು.

ರೈಲ್ವೆ ನಿಲ್ದಾಣಕ್ಕೆ ಮೂಲ ಸೌಕರ್ಯ ಕಲ್ಪಿಸಿ

ಕುಷ್ಟಗಿ: ಪಟ್ಟಣದ ರೈಲ್ವೆ ಸ್ಟೇಶನ್‌ಗೆ ಅಗತ್ಯ ಮೂಲಭೂತ ಸವಲತ್ತು ಕಲ್ಪಿಸಬೇಕು ಎಂದು ರೈಲ್ವೆ ಹೋರಾಟ ಸಮಿತಿ ಪದಾಕಾರಿಗಳು ಹುಬ್ಬಳ್ಳಿ ವಿಭಾಗೀಯ ವ್ಯವಸ್ಥಾಪಕಿ ಭೇಲಾ ಮೀನಾಗೆ ಮಂಗಳವಾರ ಮನವಿ ಸಲ್ಲಿಸಿದರು. ಹೋರಾಟ ಸಮಿತಿ ಪ್ರಧಾನ ಕಾರ್ಯದರ್ಶಿ ವಿರೇಶ್ ಬಂಗಾರಶೆಟ್ಟರ್ ಮಾತನಾಡಿ, ಕುಷ್ಟಗಿ ಪಟ್ಟಣಕ್ಕೆ ಕಳೆದ ಒಂದು ವರ್ಷದಿಂದ ರೈಲ್ವೆ ಸಂಪರ್ಕ ಹೊಂದಿದ್ದು, ನಗರದಲ್ಲಿ ಈಗಾಗಲೇ ರೈಲ್ವೆ ಸ್ಟೇಶನ್ ಕಾರ್ಯ ನಿರ್ವಹಿಸುತ್ತಿದ್ದು, ಮೂಲಭೂತ ಸೌಕರ್ಯಗಳಿಲ್ಲದೇ ಪ್ರಯಾಣಿಕರಿಗೆ ತೀರಾ ತೊಂದರೆಯಾಗಿದೆ. ಪಟ್ಟಣವಲ್ಲದೇ ಸುತ್ತಮುತ್ತಲಿನ ಗ್ರಾಮಗಳ 180ಕ್ಕೂ ಅಕ ಹಳ್ಳಿಯಿಂದ ನಾನಾ ನಗರಗಳಿಗೆ ತೆರಳಿದ್ದು, ಪ್ರಯಾಣಿಕರಿಗೆ ಸೌಲಭ್ಯಗಳನ್ನು ಒದಗಿಸಬೇಕಿದೆ. ಈಗಾಗಲೇ ಹಲವು ಭಾರಿ ಸ್ಥಳೀಯ ರೆಲ್ವೆ ಸ್ಟೇಶನ್ ಅಕಾರಿಗಳ ಗಮನಕ್ಕೆ ತರಲಾಗಿದೆ. ತಾವುಗಳು ದಯಮಾಡಿ ಕುಷ್ಟಗಿಯಿಂದ ಗದಗ ಹುಬ್ಬಳ್ಳಿ ಮಾರ್ಗವಾಗಿ ಬೆಂಗಳೂರುಗೆ ಸಾರ್ವಜನಿಕರ ಓಡಾಟಕ್ಕೆ ರೈಲ್ವೆ ಸಂಪರ್ಕ ಅನುಕೂಲ ಒದಗಿಸಬೇಕು ಎಂದು ಮನವಿ ಮಾಡಿದರು. ಹೋರಾಟ ಸಮಿತಿ ಪದಾಕಾರಿಗಳಾದ ಮಂಜುನಾಥ ಮಹಾಲಿಂಗಪೂರ, ಶ್ರೀಧರ್ ಘೋರ್ಪಡೆ, ಬಸವರಾಜ್ ಸಾಲಿಮಠ ಇದ್ದರು.



ಆರ್‌ಟಿಐ ಕುರಿತು ಸಂವಾದ

ವಿಜಯನಗರ: ಜಿಲ್ಲಾಡಳಿತ ಹಾಗೂ ರಾಜ್ಯ ಮಾಹಿತಿ ಆಯೋಗದ ಸಹಯೋಗದಲ್ಲಿ ಹೊಸಪೇಟೆಯ ಜಿಲ್ಲಾ ಒಳಾಂಗಣ ಕ್ರೀಡಾಂಗಣದಲ್ಲಿ ಮೇ 30 ರಂದು ಬೆಳಗ್ಗೆ 9.30ಕ್ಕೆ ಮಾಹಿತಿ ಹಕ್ಕು ಅಧಿನಿಯಮ ಕುರಿತು ಬೃಹತ್ ಕಾರ್ಯಾಗಾರ ಹಾಗೂ ಸಂವಾದ ಕಾರ್ಯಕ್ರಮವನ್ನು ಏರ್ಪಡಿಸಿದೆ.

ಕರ್ನಾಟಕ ಮಾಹಿತಿ ಆಯೋಗದ ಕಲಬುರಗಿ ಪೀಠದ ರಾಜ್ಯ ಮಾಹಿತಿ ಆಯುಕ್ತ ಬಿ. ವೆಂಕಟ ಸಿಂಗ್, ಬೆಂಗಳೂರು ಪೀಠದ ರಾಜ್ಯ ಮಾಹಿತಿ ಆಯುಕ್ತ ಕೆ.ಬದ್ರುದ್ದೀನ ಹಾಗೂ ಡಾ. ಹರೀಶಕುಮಾರ ಅವರು ಭಾಗವಹಿಸಿ ಅಧಿಕಾರಿಗಳೊಂದಿಗೆ ನೇರ ಸಂವಾದ ನಡೆಸಲಿದ್ದಾರೆ ಎಂದು ಅಪರ ಜಿಲ್ಲಾಧಿಕಾರಿ ಪಿ.ಎನ್. ಲೋಕೇಶ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಿರುಸುದ್ದಿ

ಗುಜನೂರಿನಲ್ಲಿ ಹನುಮಾನ್ ಚಾಲಿಸ್ ಪಠಣ



ಹೂವಿನಹಡಗಲಿ: ತಾಲೂಕಿನ ಗುಜನೂರು ಗ್ರಾಮದ ಆಂಜನೇಯ ಸ್ವಾಮಿ ದೇವಸ್ಥಾನದಲ್ಲಿ ಹನುಮಾನ್ ಚಾಲಿಸ್ ಪಠಣ ಕಾರ್ಯಕ್ರಮ ನೆರವೇರಿತು. ಶ್ರೀರಾಮ ನಾಮ ಹಾಗೂ 108 ಬಾರಿ ಹನುಮಾನ್ ಚಾಲಿಸ್ ಪಠಣವು ನಿರಂತರವಾಗಿ ನಡೆಯಿತು. ಇದಕ್ಕೂ ಮುನ್ನ ಸ್ವಾಮಿಗೆ ಪಮಚಾಮೃತ ಅಭಿಷೇಕ ಹಾಗೂ ಸಹಸ್ರ ನಾಮದೊಂದಿಗೆ ಪುಷ್ಪಾರ್ಚನೆಯೊಂದಿಗೆ ಕಾರ್ಯಕ್ರಮ ನೆರವೇರಿತು. ನಂತರ ನಡೆದ ಭಜನ ಕಾರ್ಯಕ್ರಮದಲ್ಲಿ ಶ್ರೀರಾಮ ನಾಮ ಹಾಗೂ ಹನುಮಾನ್ ಚಾಲಿಸ್ ಬಳಗದ ಸದಸ್ಯರು ಪಾಲ್ಗೊಂಡಿದ್ದರು. ಹನುಮಾನ್ ಚಾಲೀಸ್ ಪಠಣ ತರಬೇತಿ ಪಡೆದು ಸುಲಲಿತವಾಗಿ ಹನುಮಾನ್ ಚಾಲೀಸ್ ಪಠಣ ಮಾಡಿದ ವಿದ್ಯಾರ್ಥಿಗಳಾದ ಶ್ರೇಷ್ಠ, ಸಹನ, ಪ್ರಿಯಾಂಕ, ಹುಲಿಗೆಮ್ಮ ಬಿ., ಲಕ್ಷ್ಮೀ, ಎಚ್.ಹುಲಿಗೆಮ್ಮ, ರಾಕೇಶ್, ಎಚ್.ಚಿದಾನಂದ, ಅಶೋಕ ಬಿ., ಹನುಮಂತ ಎಚ್., ಮಹಂತೇಶ್ ಎಚ್., ಉಮೇಶ್ ಎಚ್. ಹಾಗೂ ಅಭಿಷೇಕ ಬಿ. ಅವರಿಗೆ ಗುರುರಕ್ಷೆ ನೀಡಲಾಯಿತು. ಈ ಪಠಣದ ಗುಜನೂರು ಹಾಗೂ ಸುತ್ತಮುತ್ತಲಿನ ಗ್ರಾಮಗಳ ಭಕ್ತಾದಿಗಳು ಪಾಲ್ಗೊಂಡು ತಮ್ಮ ಭಕ್ತಿ ಸೇವೆಯನ್ನ ಸಲ್ಲಿಸಿದ್ದು ವಿಶೇಷವಾಗಿತ್ತು.

ಆಧಾರ್ ಸೇವಾ ಕೇಂದ್ರ ಉದ್ಘಾಟನೆ



ಬಳ್ಳಾರಿ: ನಗರದಲ್ಲಿ ನಿವಾಸಿ ಕೇಂದ್ರಿತ ಆಧಾರ್ ಸೇವೆಗಳನ್ನು ಮತ್ತಷ್ಟು ಬಲಪಡಿಸುವ ನಿಟ್ಟಿನಲ್ಲಿ ಸುಲಭ ಸೌಲಭ್ಯಗಳೊಂದಿಗೆ ಸಾರ್ವಜನಿಕ ಸೇವೆ ಒದಗಿಸಲು ಭಾರತೀಯ ವಿಶಿಷ್ಟ ಗುರುತಿನ ಚೀಟಿ ಪ್ರಾಧಿಕಾರದಿಂದ ನೂತನ ಆಧಾರ್ ಕೇಂದ್ರ ಆರಂಭಿಸಲಾಗಿದೆ ಎಂದು ಅಪರ ಜಿಲ್ಲಾಧಿಕಾರಿ ಮಹಮ್ಮದ್ ಝುಬೇರ್ ಎನ್. ಹೇಳಿದರು. ನಗರದ ನೇತಾಜಿ ನಗರದಲ್ಲಿ ಬೆಂಗಳೂರಿನ ಯುಐಡಿಎಐ ಪ್ರಾದೇಶಿಕ ಕಚೇರಿ ವತಿಯಿಂದ ಬುಧವಾರ ನೂತನ ಯುಐಡಿಎಐ ಆಧಾರ್ ಸೇವಾ ಕೇಂದ್ರ ಅಧಿಕೃತವಾಗಿ ಉದ್ಘಾಟಿಸಿ ಮಾತನಾಡಿದರು. ಬಳ್ಳಾರಿಯ ಈ ನೂತನ ಕೇಂದ್ರವು ಆಧುನಿಕ ಸೌಕರ್ಯಗಳನ್ನು ಹೊಂದಿದ್ದು, ಸಾರ್ವಜನಿಕರಿಗೆ ಒಂದೇ ಸೂರಿನಡಿ ಹಲವು ಸೇವೆಗಳನ್ನು ಒದಗಿಸಲಿದೆ. ಈ ಕೇಂದ್ರವು ಸಾರ್ವಜನಿಕರಿಗೆ ಸುಲಭವಾಗಿ ಸೇವೆಗಳನ್ನು ಒದಗಿಸಲು 4 ಕಾರ್ಯಾಚರಣಾ ಕಿಟ್‌ಗಳನ್ನು ಹೊಂದಿರುವ 'ಮಾದರಿ-ಸಿ' ಮಾದರಿಯ ಕೇಂದ್ರವಾಗಿದೆ. ಇಲ್ಲಿ ಹೊಸ ಆಧಾರ್ ದಾಖಲಾತಿ, ಜನಸಂಖ್ಯಾ ವಿವರಗಳ (ಹೆಸರು, ವಿಳಾಸ ಇತ್ಯಾದಿ) ನವೀಕರಣ, ಬಯೋಮೆಟ್ರಿಕ್ ನವೀಕರಣಗಳು, ದೋಷ ತಿದ್ದುಪಡಿ ಹಾಗೂ ಆಧಾರ್‌ಗೆ ಸಂಬಂಧಿಸಿದ ಕುಂದುಕೊರತೆಗಳ ಪರಿಹಾರ ಸೇವೆಗಳು ಲಭ್ಯವಿರಲಿವೆ ಎಂದರು. ಯುಐಡಿಎಐ ಬೆಂಗಳೂರು ಪ್ರಾದೇಶಿಕ ಕಚೇರಿಯ ಉಪನಿರ್ದೇಶಕ ಗುಲ್ಷನ್ ಕುಮಾರ್ ಸಿಂಗ್ ಅವರು ಮಾತನಾಡಿದರು. ಈ ವೇಳೆ ಯುಐಡಿಎಐ ಪ್ರಾದೇಶಿಕ ಕಚೇರಿಯ ಸಹಾಯಕ ವ್ಯವಸ್ಥಾಪಕ ಪ್ರಸಾದ್ ಬಾಬು, ಆಧಾರ್ ಕೇಂದ್ರದ ಸಿಬ್ಬಂದಿ ಉಪಸ್ಥಿತರಿದ್ದರು.

ನಿಧನ ಸುದ್ದಿ

ಭಲವಾದಿ ಅಂಜಿನಪ್ಪ



ಕುರುಗೋಡು: ಸಮೀಪದ ಭೈರಾಪುರ ಗ್ರಾಮದ ನಿವಾಸಿ ಭಲವಾದಿ ಅಂಜಿನಪ್ಪ (48) ಮಂಗಳವಾರ ಸಂಜೆ ನಿಧನರಾಗಿದ್ದಾರೆ. ಅವರಿಗೆ ಪತ್ನಿ, ಓರ್ವ ಪುತ್ರ, ಪುತ್ರಿ ಹಾಗೂ ಅಪಾರ ಬಂಧುಗಳನ್ನು ಅಗಲಿದ್ದಾರೆ. ಬುಧವಾರ ಭೈರಾಪುರ ಗ್ರಾಮದ ಸಾರ್ವಜನಿಕರ ರುದ್ರ ಭೂಮಿಯಲ್ಲಿ ಅಂತ್ಯಕ್ರಿಯೆ ಜರುಗಿತು.



ಕುರುಗೋಡು: ಸಮೀಪದ ಎಮ್ಮಿಗನೂರು ಗ್ರಾಮದ ಸರ್ಕಾರಿ ಶತಮಾನ ಶಾಲೆಯ ಅತಿಥಿ ಶಿಕ್ಷಕ ರಾಮಪ್ಪ ಎಸ್.ಅವರ ಮಗಳು ಎಸ್.ಆರ್.ಪ್ರಕೃತಿ 10ನೇ ವರ್ಷದ ಜನ್ಮದಿನದ ಅಂಗವಾಗಿ ಮಕ್ಕಳಿಗೆ ಉಚಿತ ಕಲಿಕಾ ಸಾಮಗ್ರಿಗಳನ್ನು ವಿತರಿಸಲಾಯಿತು. ಸಂಪನ್ಮೂಲ ವ್ಯಕ್ತಿ ಶಿವನೆಗೌಡ್ರು, ರಾಮಪ್ಪ, ಶಿಕ್ಷಕಿ ಚೈತ್ರಾ, ವಿದ್ಯಾರ್ಥಿಗಳಾದ ಜಡಿಮೂರ್ತಿ, ಶ್ರೇಯ, ಪಲ್ಲವಿ, ಉಷಾ, ರಂಜಿತಾ ಇತರರಿದ್ದರು.

ಮಹಿಳೆಯರು ಆರೋಗ್ಯದ ಕಡೆ ಗಮನಹರಿಸಲಿ

ಬಳ್ಳಾರಿ: ಮಹಿಳೆಯರು ಆರೋಗ್ಯದ ಕಡೆ ಗಮನಹರಿಸಬೇಕು. ಯಾವುದೇ ಕಾರಣಕ್ಕೂ ನಿರ್ಲಕ್ಷ್ಯ ವಹಿಸಕೂಡದು. ಅವಳ ಆರೋಗ್ಯ, ಅವಳ ಶಕ್ತಿ ಎಂದು ಎಫ್‌ಪಿಎಐ ಬಳ್ಳಾರಿ ಶಾಖೆಯ ಶಾಖಾ ವ್ಯವಸ್ಥಾಪಕೀ ಎಸ್. ವಿಜಯಲಕ್ಷ್ಮೀ ಹೇಳಿದರು. ಸಮೀಪದ ಕಿಷ್ಕಿಂದಾ ವಿಶ್ವ ವಿದ್ಯಾಲಯದಲ್ಲಿ ಅಂತಾರಾಷ್ಟ್ರೀಯ ಮುಟ್ಟಿನ ನೈರ್ಮಲ್ಯ ದಿನಾಚಾರಣೆ ನಿಮಿತ್ತ ಕಿಷ್ಕಿಂದಾ ವಿಶ್ವವಿದ್ಯಾಲಯ ಸಿಂದಿಗೇರಿ ಹಾಗೂ ಫ್ಯಾಮಿಲಿ ಪ್ಲಾನಿಂಗ್ ಅಸೋಸಿಯೇಷನ್ ಆಫ್ ಇಂಡಿಯಾ ಬಳ್ಳಾರಿ ಶಾಖೆ ಆಶ್ರಯದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ಮಹಿಳೆಯರ ಆರೋಗ್ಯ ಕುರಿತು ಅರಿವು ಕಾರ್ಯಕ್ರಮದಲ್ಲಿ ಮಾತನಾಡಿದರು. ಮಹಿಳೆಯರ ಆರೋಗ್ಯ, ತಿಂಗಳ ಮುಟ್ಟಿನ ಸ್ವಚ್ಛತೆ ಹಾಗೂ ಆರೈಕೆಯ ಮಹತ್ವದ ಕುರಿತು ಮಾಹಿತಿ ನೀಡಿದರು. ವಿವಿಯ ಕಾಮರ್ಸ್ ವಿಭಾಗದ ಡೀನ್ ಡಾ.ಅರುಣ್ ಮುದೋಳ ಮಾತನಾಡಿ, ಇಂತಹ ಕಾರ್ಯಕ್ರಮಗಳ ಸದುಪಯೋಗವನ್ನು ಮಹಿಳೆಯರು ಮತ್ತು ವಿದ್ಯಾರ್ಥಿನಿಯರು ಪಡೆದುಕೊಳ್ಳಬೇಕು. ಜೊತೆಗೆ ಸಮಾಜದಲ್ಲಿ ಆರೋಗ್ಯ ಜಾಗೃತಿ ಮೂಡಿಸುವ ಕಾರ್ಯವನ್ನು ಮಾಡುತ್ತಿರುವ ಎಫ್ ಪಿಎಐ ಸಂಸ್ಥೆಗೆ ಅಭಿನಂದನೆಗಳನ್ನು ಸಲ್ಲಿಸುವೆ ಎಂದರು. ಮಹಿಳೆಯರ ಆರೋಗ್ಯ, ತಿಂಗಳ ಮುಟ್ಟಿನ ಸಮಯದಲ್ಲಿ ಪಾಲಿಸಬೇಕಾದ ಸ್ವಚ್ಛತೆ, ಪೌಷ್ಟಿಕ ಆಹಾರ ಹಾಗೂ ಆರೋಗ್ಯಕರ ಜೀವನಶೈಲಿಯ ಕುರಿತು ಅರಿವು ಮೂಡಿಸಲಾಯಿತು. ವಿವಿಯ ಕೋ ಆರ್ಡಿನೇಟರ್ ಸಾವಿತ್ರಿ ಹಾಗೂ ಕಾಮರ್ಸ್ ವಿಭಾಗದ ಮುಖ್ಯಸ್ಥ ವಿಜಯ ಭಾಸ್ಕರ್ ಸೇರಿದಂತೆ ಇತರರು ಉಪಸ್ಥಿತರಿದ್ದರು.



ಬಳ್ಳಾರಿ: ಸಮೀಪದ ಕಿಷ್ಕಿಂದಾ ವಿಶ್ವವಿದ್ಯಾಲಯದಲ್ಲಿ ಅಂತಾರಾಷ್ಟ್ರೀಯ ಮುಟ್ಟಿನ ನೈರ್ಮಲ್ಯ ದಿನಾಚಾರಣೆ ನಿಮಿತ್ತ ಕಿಷ್ಕಿಂದಾ ವಿಶ್ವವಿದ್ಯಾಲಯ ಸಿಂದಿಗೇರಿ ಹಾಗೂ ಫ್ಯಾಮಿಲಿ ಪ್ಲಾನಿಂಗ್ ಅಸೋಸಿಯೇಷನ್ ಆಫ್ ಇಂಡಿಯಾ ಬಳ್ಳಾರಿ ಶಾಖೆ ಆಶ್ರಯದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ಮಹಿಳೆಯರ ಆರೋಗ್ಯ ಕುರಿತು ಅರಿವು ಕಾರ್ಯಕ್ರಮ ನಡೆಯಿತು.

ಮೀನುಗಾರಿಕೆ ಕಚೇರಿ ಉದ್ಘಾಟನೆ | ಶಾಸಕ ಗವಿಯಪ್ಪ ಭರವಸೆ

ಸುಸಜ್ಜಿತ ಮೀನು ಮಾರುಕಟ್ಟೆ ನಿರ್ಮಾಣ

ವಿಜಯನಗರ: ಮೀನುಗಾರರ ಆರ್ಥಿಕ ಸುಧಾರಣೆ ಹಾಗೂ ಮೂಲಸೌಕರ್ಯ ಕಲ್ಪಿಸುವ ನಿಟ್ಟಿನಲ್ಲಿ ತರಕಾರಿ ಮಾರುಕಟ್ಟೆಯ ಮಾದರಿಯಲ್ಲೇ ಕೆಎಂಇಆರ್‌ಸಿ ಅನುದಾನದಡಿ 2 ರೂ. ಕೋಟಿ ವೆಚ್ಚದಲ್ಲಿ ಸುಸಜ್ಜಿತ ಹಾಗೂ ಪ್ರತ್ಯೇಕ ಮೀನು ಮಾರುಕಟ್ಟೆ ನಿರ್ಮಿಸಲಾಗುವುದು ಎಂದು ಶಾಸಕ ಎಚ್.ಆರ್. ಗವಿಯಪ್ಪ ಭರವಸೆ ನೀಡಿದರು.

ಹೊಸಪೇಟೆ ನಗರದ ಹೊರವಲಯದಲ್ಲಿನ ಕೊಂಡನಾಯಕನಹಳ್ಳಿಯಲ್ಲಿ ಬುಧವಾರ ಸುಮಾರು 35 ಲಕ್ಷ ರೂ. ವೆಚ್ಚದಲ್ಲಿ ನಿರ್ಮಿಸಲಾದ ನೂತನ ಮೀನುಗಾರರ ಕಚೇರಿ ಕಟ್ಟಡ ಉದ್ಘಾಟಿಸಿ ಅವರು ಮಾತನಾಡಿದರು.

ರಸ್ತೆ ಬದಿಯಲ್ಲಿ ಕುಳಿತು ಮೀನು ಮಾರಾಟ ಮಾಡುವುದನ್ನು ತಪ್ಪಿಸಿ, ಮೀನುಗಾರರಿಗೆ ಗೌರವಯುತ ಸ್ಥಾನ ನೀಡಲು ನಾನೇ ಖುದ್ದಾಗಿ ಮಾರುಕಟ್ಟೆ ನಿರ್ಮಾಣಕ್ಕೆ ಬೇಕಾದ ಸ್ಥಳ ಹುಡುಕಿ ಕೊಡುತ್ತೇನೆ. ಮುಂದಿನ ಎರಡು ವರ್ಷಗಳಲ್ಲಿ ಕಟ್ಟಡ ಕಾಮಗಾರಿ ಪೂರ್ಣಗೊಳಿಸಬೇಕು ಎಂದು ತಿಳಿಸಿದರು. ಬಡ ಮೀನುಗಾರರು ಮತ್ತು ರೈತರು ಬದುಕಬೇಕಾದರೆ ಹಳೆಯ ಮಾದರಿಯ ಲೈಸೆನ್ಸ್ ಸಿಸ್ಟಮ್ ಮರುಜಾರಿಗೆ ಬರಬೇಕು. ಇದಕ್ಕಾಗಿ ಮುಂದಿನ ದಿನಗಳಲ್ಲಿ ರಾಜ್ಯ ಮತ್ತು ಆಂಧ್ರ ಸರ್ಕಾರಗಳನ್ನು ಒಗ್ಗೂಡಿಸಿ, ಬೋರ್ಡ್ ಅಧಿಕಾರಿಗಳಿಗೆ ಮತ್ತೊಮ್ಮೆ ಮನವಿ ಸಲ್ಲಿಸಿ ಪ್ರಾಮಾಣಿಕ ಪ್ರಯತ್ನ ಮಾಡಲಾಗುವುದು ಎಂದರು.

ತಾಲೂಕಿನಲ್ಲಿ ಪ್ರಸ್ತುತ 7 ಕೆರೆಗಳನ್ನು ಇಲಾಖೆ ವ್ಯಾಪ್ತಿಗೆ ಪಡೆಯಲಾಗಿದ್ದು, ಮುಂದಿನ ದಿನಗಳಲ್ಲಿ ಇನ್ನೂ 15 ರಿಂದ 17 ಕೆರೆಗಳನ್ನು ವಶಕ್ಕೆ ಪಡೆದು ಸ್ಥಳೀಯ ಮೀನುಗಾರರಿಗೆ ಹಂಚಿಕೆ ಮಾಡಲಾಗುವುದು. ಇದರಿಂದ ಸ್ಥಳೀಯರಿಗೆ ಉದ್ಯೋಗ ಮತ್ತು ಆದಾಯ ದೊರೆಯುತ್ತದೆ. ಇದರೊಂದಿಗೆ, ಈ ವರ್ಷ ಅಥವಾ



> ಆಂಧ್ರ ಪ್ರದೇಶ, ಪಶ್ಚಿಮ ಬಂಗಾಳ ಅಥವಾ ತಮಿಳುನಾಡಿನ ದೊಡ್ಡ ಗುತ್ತಿಗೆದಾರನಿಗೆ ಇಡೀ ವ್ಯವಸ್ಥೆಯ ಲಾಭ ಸಿಗಬಾರದು. ದುಡಿಯುವ ಸ್ಥಳೀಯ ಬಡ ಮೀನುಗಾರರ ಶ್ರಮಕ್ಕೆ ತಕ್ಕ ಪ್ರತಿಫಲ ಸಿಗಬೇಕು. ಕನಿಷ್ಠ ಶುಲ್ಕದೊಂದಿಗೆ ಲೈಸೆನ್ಸ್ ನೀಡಿ, ಅವರು ಸ್ವತಂತ್ರವಾಗಿ ಮೀನು ಹಿಡಿದು ಬದುಕಲು ಅವಕಾಶ ಕಲ್ಪಿಸಿಕೊಡಬೇಕು. ಅಧಿಕಾರಿಗಳು ಯಾವುದೇ ದೊಡ್ಡ ಕಾಂಟ್ರಾಕ್ಟರ್‌ಗಳಿಗೆ ಪ್ರೋತ್ಸಾಹ ನೀಡದೆ, ನಿಜವಾದ ಸ್ಥಳೀಯ ಫಲಾನುಭವಿಗಳಿಗೆ ಮಾತ್ರ ಮೀನು ಹಿಡಿಯುವ ಹಕ್ಕನ್ನು ನೀಡಬೇಕು.
>
> ■ ಎಚ್.ಆರ್.ಗವಿಯಪ್ಪ, ಶಾಸಕ

ಬರುವ ವರ್ಷದೊಳಗೆ ಜಲಪ್ರದೇಶದಲ್ಲಿ 'ಫಿಶ್ ಫಾರ್ಮ್' ಯೋಜನೆಗಳನ್ನು ಆರಂಭಿಸಲು ಚಿಂತನೆ ನಡೆಸಲಾಗುವುದು ಎಂದು ತಿಳಿಸಿದ ಅವರು, ಇಲಾಖೆಯಿಂದ ನೀಡಲಾಗುವ ನೆಟ್, ಕಿಟ್ ಸೇರಿದಂತೆ ಯಾವುದೇ ಸೌಲಭ್ಯವನ್ನು ಸದ್ಬಳಕೆ ಮಾಡಿಕೊಳ್ಳಬೇಕು ಎಂದು ಕಿವಿ ಮಾತು ಹೇಳಿದರು. ಟಿ.ಬಿ. ಡ್ಯಾಂ ಆವರಣದಲ್ಲಿ ಲಭ್ಯವಿರುವ ಪ್ಯಾಕೇಜಿಂಗ್ ಯೂನಿಟ್ ಮತ್ತು ಕೋಲ್ಡ್ ಸ್ಟೋರೇಜ್ ಯೂನಿಟ್ ಸರ್ಕಾರಿ ಸ್ವಾಮ್ಯದಲ್ಲೇ ಸೂಕ್ತ ಶುಲ್ಕದೊಂದಿಗೆ ಸಾರ್ವಜನಿಕವಾಗಿ ನಡೆಸಿ, ಮೀನುಗಾರಿಕಾ ಉದ್ಯಮಕ್ಕೆ ಹೆಚ್ಚಿನ ಉತ್ತೇಜನ ನೀಡಲು ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು. ಅಲ್ಲದೆ, ಟಿಬಿ ಡ್ಯಾಂ, ಕಮಲಾಪುರ, ಮಲಪನಗುಡಿ ಮುಂತಾದ ಪ್ರದೇಶಗಳಲ್ಲಿ ಮೂರು ಸಾವಿರಕ್ಕೂ ಅಧಿಕ ಮೀನುಗಾರರ ಕುಟುಂಬ ವಾಸಿಸುತ್ತಿವೆ ಎಂದರು.

ಇದೇ ವೇಳೆ ಫಲಾನುಭವಿಗಳಿಗೆ ಮೀನು ಹಿಡಿಯುವ ಉಚಿತ ಕಿಟ್ ವಿತರಿಸಲಾಯಿತು.

ಮೀನುಗಾರಿಕೆ ಇಲಾಖೆ ಉಪನಿರ್ದೇಶಕ ಬಿ.ಮಲ್ಲೇಶ್, ಮೀನುಗಾರರ ಸಹಕಾರ ಸಂಘದ ಪದಾಧಿಕಾರಿಗಳಾದ ಮಾಧವರಾವ್, ಎರ್ರಿಸ್ವಾಮಿ, ಬಸವರಾಜ್, ಕೊಟ್ರಪ್ಪ ಇದ್ದರು.

ಸಬ್ಸಿಡಿ ವಿಷಯದಲ್ಲಿ ತಾರತಮ್ಯ ಬೇಡ: ಶಾಸಕ

ಹಗರಿಬೊಮ್ಮನಹಳ್ಳಿ: ರೈತರೆಂದರೆ ಎಲ್ಲರೂ ಒಂದೇ ಬಿತ್ತನೆ ಬೀಜ ಹಾಗೂ ರಸಗೊಬ್ಬರ ಸಬ್ಸಿಡಿ ನೀಡುವ ವಿಷಯದಲ್ಲಿ ಎಸ್ಸಿ, ಎಸ್ಟಿಗೆ ಹಾಗೂ ಸಾಮಾನ್ಯ ವರ್ಗಕ್ಕೆ ತಾರತಮ್ಯ ಬೇಡ. ಸರ್ಕಾರ ಯಾವುದೇ ಇರಲಿ ಎಲ್ಲ ರೈತರಿಗೂ ಸಮಾನವಾಗಿ ಸಬ್ಸಿಡಿ ನೀಡುವಂತಾಗಬೇಕು ಎಂದು ಶಾಸಕ ಕೆ.ನೇಮಿರಾಜ್ ನಾಯ್ಕ್ ತಿಳಿಸಿದರು.

ಬುಧವಾರ ಪಟ್ಟಣದ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಆವರಣದಲ್ಲಿ ಕೃಷಿ ಇಲಾಖೆ ಹಗರಿಬೊಮ್ಮನಹಳ್ಳಿ ಆಯೋಜಿಸಿದ್ದ ಮುಂಗಾರು ಹಂಗಾಮಿನ ರೈತರಿಗೆ ರಿಯಾಯಿತಿ ದರದಲ್ಲಿ ಬಿತ್ತನೆ ಬೀಜ ರಸಗೊಬ್ಬರ ವಿತರಣಾ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.

ಹೆಚ್ಚಾಗಿ ಉಪಯೋಗಿಸುತ್ತಿದ್ದು ಇದು ರೈತರ ಹೊಲಗಳ ಮಣ್ಣಿನ ಫಲವತ್ತತೆಯನ್ನು ಹಾಳು ಮಾಡುತ್ತದೆ. ಆಹಾರ ವಿಷಕಾರಿ ಯಾಗಿರುತ್ತದೆ. ಆದ್ದರಿಂದ ರೈತರು ಕೊಟ್ಟಿಗೆ ಗೊಬ್ಬರವನ್ನು ಹೆಚ್ಚಾಗಿ ಉಪಯೋಗಿಸಬೇಕು ಎಂದರು.

ತಾಲೂಕಿನ ಹಂಪಸಾಗರ ತಂಬ್ರಹಳ್ಳಿ ಕೋಗಳಿ ಹಾಗೂ ಹಗರಿಬೊಮ್ಮನಹಳ್ಳಿ ಮತ್ತು ಹೆಚ್ಚುವರಿಯಾಗಿ ಹಗರಿಬೊಮ್ಮನಹಳ್ಳಿಯ ಎಪಿಎಂಸಿಯಲ್ಲಿ ಬಿತ್ತನೆ ಬೀಜ ಕೇಂದ್ರ ತೆರೆದಿದ್ದು ತಾಲೂಕಿನ 5 ಕಡೆ ಬಿತ್ತನೆ ಬೀಜ ವಿತರಣೆ ಕೇಂದ್ರಗಳಿದ್ದು ರೈತರು ಸದುಪಯೋಗಪಡಿಸಿಕೊಳ್ಳಬೇಕೆಂದರು.

ಕೃಷಿ ಇಲಾಖೆಯ ಸಹಾಯಕ ನಿರ್ದೇಶಕ ಎಸ್.ಬಿ.ಪಾಟೀಲ ಮಾತನಾಡಿ, ಈ ಭಾಗದ ರೈತರಿಗೆ ಅಗತ್ಯವಿರುವ ಬಿತ್ತನೆ ಬೀಜ ವಿತರಣೆ ಮಾಡಲಾಗುತ್ತಿದ್ದು 270 ಕ್ವಿಂಟಲ್ ನಷ್ಟು ಬಿತ್ತನೆ ಬೀಜ ಸಂಗ್ರಹವಿದ್ದು ರೈತರು ಪಹಣಿ, ಆಧಾರ್ ಕಾರ್ಡ್ ಜೆರಾಕ್ಸ್ ಪ್ರತಿ ನೀಡಿ ಬಿತ್ತನೆ ಬೀಜವನ್ನು ಖರೀದಿಸಬಹುದು. ಬಿತ್ತನೆ ಬೀಜ ಪ್ರತಿ ಪಾಕೆಟ್ 2 ಕೆಜಿ, 3 ಕೆಜಿ, 4 ಕೆಜಿ, 5 ಕೆಜಿ ಇದ್ದು ಅದರ ಅನ್ವಯ ಎಫ್‌ಐಡಿ ಅನುಸಾರವಾಗಿ ಎಸ್ಸಿ, ಎಸ್ಟಿ ವರ್ಗಕ್ಕೆ 30 ರೂ. ಸಾಮಾನ್ಯ ವರ್ಗಕ್ಕೆ 20 ರೂ. ಸಬ್ಸಿಡಿ ಸಿಗಲಿದೆ ಎಂದರು.

ಕೃಷಿಕ ಸಮಾಜದ ಹನಸಿ ದೇವರಾಜ, ಜೆಡಿಎಸ್ ಅಧ್ಯಕ್ಷ ವೈ.ಮಲ್ಲಿಕಾರ್ಜುನ, ಜಿಲ್ಲಾ ಉಪಾಧ್ಯಕ್ಷ ಕೃಷ್ಣಮೂರ್ತಿ ಶೆಟ್ರು, ಕಾರ್ಯದರ್ಶಿ ಪಾಂಡುರಂಗ ನಾಯಕ್, ಮುಖಂಡರಾದ ಕೋಗಳಿ ಹನುಮಂತಪ್ಪ ಸಿದ್ದರಾಜು, ಕೃಷಿ ಇಲಾಖೆಯ ಭೋಜ ನಾಯಕ್ ನಾಗಾರ್ಜುನ, ಶಶಿಕುಮಾರ ಇತರರಿದ್ದರು.



ಹೊಳಗುಂದಿಯಲ್ಲಿ ಬಿತ್ತನೆ ಬೀಜಗಳ ವಿತರಣೆ

ಹೂವಿನಹಡಗಲಿ: ತಾಲೂಕಿನಾದ್ಯಂತ ಮುಂಗಾರು ಹಂಗಾಮಿನ ಕೃಷಿ ಚಟುವಟಿಕೆಗಳು ಚುರುಕುಗೊಂಡಿದ್ದು, ರೈತರ ಅನುಕೂಲಕ್ಕಾಗಿ ಸ್ಥಳೀಯ ರೈತ ಸಂಪರ್ಕ ಕೇಂದ್ರದಲ್ಲಿ ರಿಯಾಯಿತಿ ದರದಲ್ಲಿ ಗುಣಮಟ್ಟದ ಬಿತ್ತನೆ ಬೀಜಗಳ ವಿತರಣೆ ಪ್ರಾರಂಭಿಸಲಾಗಿದೆ ಎಂದು ಕೃಷಿ ಅಧಿಕಾರಿ ಕೆ.ಹನುಮಂತಪ್ಪ ತಿಳಿಸಿದರು.

ತಾಲೂಕಿನ ಹೊಳಗುಂದಿ ಗ್ರಾಮದಲ್ಲಿ ಬುಧವಾರ ರೈತ ಸಂಪರ್ಕ ಉಪ ಕೇಂದ್ರದಲ್ಲಿ ರೈತರಿಗೆ ಸಬ್ಸಿಡಿ ಅಡಿಯಲ್ಲಿ ವಿವಿಧ ಬಿತ್ತನೆ ಬೀಜ ವಿತರಿಸಿ ಮಾತನಾಡಿದರು.

ಮುಂಗಾರು ಹಂಗಾಮಿಗೆ ಸೂಕ್ತವಾದ, ತೊಗರಿ, ಮೆಕ್ಕೆಜೋಳ, ಹೈಬ್ರೀಡ್ ಜೋಳ, ಸಿರಿಧಾನ್ಯ ಸಜ್ಜೆ ಸೇರಿದಂತೆ ಬಿತ್ತನೆ ಬೀಜಗಳನ್ನು ರಿಯಾಯಿತಿ ದರದಲ್ಲಿ ವಿತರಿಸಲಾಗುತ್ತಿದೆ. ಬಿತ್ತನೆ ಬೀಜಗಳನ್ನು ಪಡೆಯಲು ಬಯಸುವ ರೈತರು ತಮ್ಮ ಆಧಾರ್ ಕಾರ್ಡ್ ಪ್ರತಿ, ಇತ್ತೀಚಿನ ಪಹಣಿ ತರಬೇಕು ಎಂದರು.

ರೈತರು ಮಾರುಕಟ್ಟೆಯಲ್ಲಿ ಹೆಚ್ಚಿನ ಬೆಲೆ ಕೊಟ್ಟು ಬೀಜಗಳನ್ನು ಖರೀದಿಸುವ ಬದಲು ಸರ್ಕಾರದ ಈ ಸೌಲಭ್ಯವನ್ನು ಬಳಸಿಕೊಳ್ಳಬೇಕು ಎಂದು ಮಾಹಿತಿ ನೀಡಿದರು.

ರೈತರಿಗೆ ಬಿತ್ತನೆ ಬೀಜ ವಿತರಣೆ ಚಾಲನೆ ನೀಡಿದ ರಾಜ್ಯ ರೈತ ಸಂಘದ ತಾಲೂಕು ಅಧ್ಯಕ್ಷ ಸಿದ್ದಪ್ಪ ಹೊಸಮನಿ ಮಾತನಾಡಿ, ಖಾಸಗಿ ಕಂಪನಿಗಳಿಂದ ಕಡಿಮೆ ದರದಲ್ಲಿ ಕಳಪೆ ಬಿತ್ತನೆ ಬೀಜಗಳನ್ನು ಖರೀದಿಸದೇ , ರೈತ ಸಂಪರ್ಕ ಕೇಂದ್ರಗಳಲ್ಲಿ ಗುಣಮಟ್ಟದ ಬಿತ್ತನೆ ಬೀಜಗಳನ್ನು ಖರೀದಿಸಿ ಬಿತ್ತನೆ ಮಾಡಿ ಎಂದು ರೈತರಿಗೆ ಸಲಹೆ ನೀಡಿದರು.

ಇದೇ ವೇಳೆ ರೈತ ಸಂಘದ ತಾ.ಕಾರ್ಯದರ್ಶಿ ಶಿವರಾಜ ಎಂ.ಹೊಳಗುಂದಿ, ಪತ್ರಕರ್ತ ಎಂ.ಅಶೋಕ, ರೈತ ಮುಖಂಡರು ವಿ.ಬಿ.ಗನಿಸಾಬ್, ಚನ್ನಬಸಪ್ಪ ಫಕೀರಪ್ಪ ಸಂಘಟನಾ ಸಹ ಕಾರ್ಯದರ್ಶಿ ದುರುಗಪ್ಪ, ಗ್ರಾಪಂ ಮಾಜಿ ಅಧ್ಯಕ್ಷ ದಡರಪ್ಪ, ವ್ಯವಸಾಯ ಸಹಕಾರ ಸಂಘದ ಅಧ್ಯಕ್ಷ ಕರಿಬಸವರಾಜ ಇದ್ದರು.



ಭಾರೀ ಮಳೆ: ಪಹಣಿ, ಆಧಾರ್ ಕೇಂದ್ರ ಸಂಪೂರ್ಣ ಜಲಾವೃತ

ಸಿರುಗುಪ್ಪ: ನಗರ ಸೇರಿದಂತೆ ತಾಲೂಕಾದ್ಯಂತ ಮಂಗಳವಾರ ರಾತ್ರಿ ಭಾರೀ ಗಾಳಿ, ಗುಡುಗು, ಸಿಡಿಲು ಮಿಶ್ರಿತ ಮಳೆಯಾಗಿದ್ದು, ದೇಶಕ್ಕೆ ಅನ್ನ ನೀಡುವ ರೈತರ ಮೊಗದಲ್ಲಿ ಮಂದಹಾಸ ಮನೆಮಾಡಿದೆ.

ಮಂಗಳವಾರ ಸಂಜೆ ಸುರಿದ ಭಾರೀ ಮಳೆಗೆ ತಾಲೂಕು ಕಚೇರಿಯ ಆವರಣದ ಪಹಣಿ ಕೇಂದ್ರ, ಆಧಾರ್ ಕೇಂದ್ರ ಸಂಪೂರ್ಣ ಜಲಾವೃತವಾಗಿವೆ. ಕೇಂದ್ರಕ್ಕೆ ದಾರಿಯಾವುದಯ್ಯ ಎನ್ನುವಂತಾಗಿದೆ. ನಗರದ ವಿವಿಧ ಪ್ರಮುಖ ರಸ್ತೆಗಳು ಜಲಾವೃತಗೊಂಡು ಸುಗಮ ಸಂಚಾರಕ್ಕೆ ಕೆಲಕಾಲ ಅಡ್ಡಿಯಾಯಿತು. ನಗರದ ವಿವಿಧ ಬಡಾವಣೆಗಳಲ್ಲಿ ಅಲ್ಲಲ್ಲಿ ನೀರು ನಿಂತ ಹಿನ್ನೆಲೆಯಲ್ಲಿ ಬಡಾವಣೆಯ ನಿವಾಸಿಗಳು, ವಾಹನ ಸವಾರರು ಪರದಾಡಿದರು. ಕೆಲ ಬಡಾವಣೆಗಳಲ್ಲಿ ಚರಂಡಿ ನೀರು ಮನೆಗಳಿಗೆ ನುಗ್ಗಿ ಅವಾಂತರ ಸೃಷ್ಟಿಯಾಗಿತ್ತು. ತಾಲೂಕು ಕಚೇರಿ ಆವರಣದ ಪಹಣಿ ಹಾಗೂ ಆಧಾರ್ ಕೇಂದ್ರ ಸಂಪೂರ್ಣ ಜಲಾವೃತಗೊಂಡ ಹಿನ್ನೆಲೆ ಕಚೇರಿ ಸಿಬ್ಬಂದಿ, ವಿವಿಧ ಕೆಲಸಕ್ಕೆಂದು ಆಗಮಿಸುವ ನಾಗರಿಕರು ಬೆಳ್ಳಂ ಬೆಳಿಗ್ಗೆ ಪರದಾಡಿದರು. ಸಿಬ್ಬಂದಿ ಹರಸಾಹಸ ಪಟ್ಟು ತಮ್ಮ ಕೊಠಡಿಗೆ ಸೇರಿಕೊಂಡರೆ, ಸರ್ಕಾರದ ವಿವಿಧ ಸೌಲಭ್ಯಗಳಿಗೆ ಅರ್ಜಿ ಸಲ್ಲಿಸಿದವರು,



ಸಲ್ಲಿಸುವವರು, ಪಹಣಿ ಪಡೆಯುವವರು, ಆಧಾರ್ ತಿದ್ದುಪಡಿ, ಹೊಸ ಕಾರ್ಡ್ ಪಡೆಯಲು ಅರ್ಜಿ ಸಲ್ಲಿಸಲು ಬರುವ ಜನರು ಕಚೇರಿಗೆ ತೆರಳಲು ಪರದಾಡಿದರು. ಈ ಕುರಿತು ಸ್ಥಳೀಯ ವಿವಿಧ ಸಂಘಟನೆ ಪದಾಧಿಕಾರಿಗಳು ಸಂಬಂಧಿಸಿದ ಮೇಲಧಿಕಾರಿಗಳ ಗಮನಕ್ಕೆ ತಂದರೂ ಕ್ರಮ ವಹಿಸದ ಹಿನ್ನೆಲೆ, ಅಧಿಕಾರಿಗಳ ವಿರುದ್ಧ ಸ್ಥಳೀಯರು ಬೇಸರ ವ್ಯಕ್ತಪಡಿಸಿದರು.

ಅಕ್ರಮ ಗೋ ಸಾಗಾಟ, ಗೋವಧೆ ನಿಲ್ಲಲಿ: ಶಾಸಕ ಪ್ರಭು ಚವ್ಹಾಣ

ಬೀದರ: ಬಕ್ರೀದ್ ಹಬ್ಬದ ಹಿನ್ನೆಲೆಯಲ್ಲಿ ಜಿಲ್ಲೆಯಲ್ಲಿ ಅಕ್ರಮವಾಗಿ ಗೋಹತ್ಯೆ ಹಾಗೂ ಜಾನುವಾರುಗಳ ಅಕ್ರಮ ಸಾಗಣೆ ಕೆಲಸಕ್ಕೆ ಕಡಿವಾಣ ಬೀಳಲಿ ಎಂದು ಮಾಜಿ ಸಚಿವರು ಹಾಗೂ ಶಾಸಕರಾದ ಪ್ರಭು ಬಿ.ಚವ್ಹಾಣ ಸರ್ಕಾರವನ್ನು ಆಗ್ರಹಿಸಿದ್ದಾರೆ.

ಈ ಕುರಿತು ಪ್ರಕಟಣೆ ನೀಡಿರುವ ಅವರು, ಭಾರತೀಯ ಸಂಸ್ಕೃತಿ, ಪರಂಪರೆ ಮತ್ತು ಸನಾತನ ಧರ್ಮದಲ್ಲಿ ಗೋಮಾತೆಗೆ ಅತ್ಯಂತ ಪೂಜನೀಯ ಸ್ಥಾನವಿದೆ. ಗೋವು ಕೇವಲ ಪ್ರಾಣಿಯಲ್ಲ, ಕೋಟ್ಯಂತರ ಹಿಂದೂಗಳ ಭಾವನೆಗಳ ಪ್ರತೀಕ. ಗೋವಿನ ಹಾಲು ಅಮೃತಕ್ಕೆ ಸಮಾನವೆಂದು ಪರಿಗಣಿಸಲಾಗುತ್ತದೆ. ಗೋಮೂತ್ರದಲ್ಲಿ ಔಷಧೀಯ ಗುಣಗಳಿರುತ್ತವೆ. ಗ್ರಾಮೀಣ ಆರ್ಥಿಕ ವ್ಯವಸ್ಥೆ, ಕೃಷಿ ಚಟುವಟಿಕೆ ಮತ್ತು ಜೀವನದೊಂದಿಗೆ ಅವಿನಾಭಾವ ಸಂಬಂಧವಿದೆ. ಆದ್ದರಿಂದ ಗೋಸಂರಕ್ಷಣೆ ನಮ್ಮೆಲ್ಲರ ಜವಾಬ್ದಾರಿಯಾಗಿದೆ ಎಂದು ಹೇಳಿದ್ದಾರೆ.

ಗೋವುಗಳ ಸಂರಕ್ಷಣೆಗಾಗಿ ಹಿಂದೆ ನಮ್ಮ ಸರ್ಕಾರ ರಾಜ್ಯದಲ್ಲಿ ಕರ್ನಾಟಕ ಜಾನುವಾರು ಹತ್ಯೆ ಪ್ರತಿಬಂಧಕ ಮತ್ತು ಸಂರಕ್ಷಣಾ ವಿಧೇಯಕ-ಗೋಹತ್ಯೆ ನಿಷೇಧ ಕಾಯ್ದೆ ಜಾರಿಗೊಳಿಸಿದೆ. ಆದರೂ ಸಹ ರಾಜ್ಯದಲ್ಲಿ ರಾಜಾರೋಷವಾಗಿ ಅಕ್ರಮ ಗೋ ಸಾಗಾಣಿಕೆ ಮತ್ತು ಗೋವಧೆ ಎಗ್ಗಿಲ್ಲದೆ ನಡೆಯುತ್ತಿರುವುದು ದುಃಖಕರ ಮತ್ತು ಖಂಡನೀಯ ಎಂದು ಆಕ್ರೋಶ ಹೊರ ಹಾಕಿದ್ದಾರೆ.

ಜಿಲ್ಲೆಯ ವಿವಿಧ ಭಾಗಗಳಿಂದ ಗೋವುಗಳನ್ನು ಅಕ್ರಮವಾಗಿ ಹೈದ್ರಾಬಾದ್, ಮುಂಬೈ ಹಾಗೂ ಪುಣೆ ನಗರಗಳಿಗೆ ಸಾಗಿಸಲಾಗುತ್ತಿದೆ. ಈ ಅಕ್ರಮ ಚಟುವಟಿಕೆಗಳನ್ನು ತಡೆಯಲು ಪೊಲೀಸ್ ಇಲಾಖೆ ಮತ್ತು ಪಶು ಸಂಗೋಪನೆ ಅಧಿಕಾರಿಗಳು ವಿಶೇಷ ಕಾರ್ಯಾಚರಣೆ ನಡೆಸಿ, ತಪ್ಪಿತಸ್ಥರ ವಿರುದ್ಧ ಕಠಿಣ ಕಾನೂನು ಕ್ರಮ ಜರುಗಿಸಬೇಕೆಂದು ಒತ್ತಾಯಿಸಿದ್ದಾರೆ.

ಜಿಲ್ಲೆಯ ಗಡಿಭಾಗಗಳಲ್ಲಿ ವಿಶೇಷ ಚೆಕ್ ಪೋಸ್ಟ್ ಗಳನ್ನು ಸ್ಥಾಪಿಸಿ, ಜಾನುವಾರುಗಳನ್ನು ಅಕ್ರಮವಾಗಿ ಸಾಗಿಸುವ ವಾಹನಗಳ ಮೇಲೆ ನಿಗಾ ವಹಿಸಬೇಕು. ಅಕ್ರಮ ಗೋಸಾಗಣೆ ಹಾಗೂ ಗೋಹತ್ಯೆಯಲ್ಲಿ ತೊಡಗುವವರ ವಿರುದ್ಧ ಯಾವುದೇ ರಾಜಕೀಯ ಅಥವಾ ಇತರ ಒತ್ತಡಗಳಿಗೆ ಮಣಿಯದೆ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದ್ದಾರೆ.

ಪೆಟ್ರೋಲ್, ಡೀಸೆಲ್ ಅಭಾವ: ಸಾರ್ವಜನಿಕರ ಪರದಾಟ

▸ ಮಲ್ಲಿಕಾರ್ಜುನ ಗುತ್ತೇದಾರ

ದಿಗಂತ ವಿಶೇಷ

ಹುಣಸಗಿ: ಇತ್ತೀಚಿನ ದಿನಗಳಲ್ಲಿ ಯಾದಗಿರಿ ಜಿಲ್ಲಾದ್ಯಂತ ಉಂಟಾಗಿರುವ ಪೆಟ್ರೋಲ್ ಮತ್ತು ಡೀಸೆಲ್ ಅಭಾವ ಸಾರ್ವಜನಿಕರನ್ನು ತೀವ್ರ ಸಂಕಷ್ಟಕ್ಕೆ ತಳ್ಳಿದೆ. ವಿಶೇಷವಾಗಿ ರೈತರು ಹಾಗೂ ವಾಹನ ಸವಾರರು ಇಂಧನಕ್ಕಾಗಿ ದಿನವಿಡೀ ಪೆಟ್ರೋಲ್ ಬಂಕ್‌ಗಳ ಮುಂದೆ ಪಾಳಿ ಹಚ್ಚಿಕೊಂಡು ಕಾಯುವಂತಾಗಿದ್ದು, ಜಿಲ್ಲೆಯಾದ್ಯಂತ ಆತಂಕದ ವಾತಾವರಣ ನಿರ್ಮಾಣವಾಗಿದೆ.

ತಾಲೂಕಿನಲ್ಲಿಯೂ ಬಹುತೇಕ ಎಲ್ಲ ಪೆಟ್ರೋಲ್ ಬಂಕ್‌ಗಳ ಮುಂದೆ ಬೈಕ್‌ಗಳು, ಕಾರುಗಳು, ಟ್ರಾಕ್ಟರ್‌ಗಳು, ಲಾರಿಗಳು ಹಾಗೂ ಇತರೆ ವಾಹನಗಳ ದೀರ್ಘ ಸಾಲುಗಳು ಕಂಡು ಬರುತ್ತಿವೆ. ಕೆಲವರು ತಮ್ಮ ವಾಹನಗಳ ಜೊತೆಗೆ ಬ್ಯಾರಲ್‌ಗಳು, ಕ್ಯಾನುಗಳನ್ನು ಬಂಕ್ ಮುಂದೆ ಇಟ್ಟುಕೊಂಡು ರಾತ್ರಿ ಇಡೀ ಕಾಯುವ ಪರಿಸ್ಥಿತಿ ಎದುರಾಗಿದೆ. ಡೀಸೆಲ್ ಲಭ್ಯವಾಗುತ್ತದೆ ಎಂಬ ಮಾಹಿತಿ ಸಿಕ್ಕ ತಕ್ಷಣ ಸಾರ್ವಜನಿಕರು ಬಂಕ್‌ಗಳಿಗೆ ಧಾವಿಸುತ್ತಿದ್ದು, ಕೆಲವೆಡೆ ನೂಕುನುಗ್ಗಲು ಪರಿಸ್ಥಿತಿಯೂ ಉಂಟಾಗುತ್ತಿದೆ.

ಇಂಧನ ಕೊರತೆಯಿಂದ ಕೃಷಿ ಚಟುವಟಿಕೆಗಳು ಸಂಪೂರ್ಣ ಹಿನ್ನಡೆಯಾಗುತ್ತಿವೆ. ಜಮೀನು ಒರೆಹಾಕುವುದು, ಬಿತ್ತನೆ, ನೀರಾವರಿ ಕಾರ್ಯಗಳು ಹಾಗೂ ಟ್ರಾಕ್ಟರ್‌ಗಳ ಬಳಕೆಯ ಕೃಷಿ ಕೆಲಸಗಳು



ವಿಳಂಬವಾಗುತ್ತಿದ್ದು ರೈತರು ಆತಂಕ ವ್ಯಕ್ತಪಡಿಸಿದ್ದಾರೆ. ''ಡೀಸೆಲ್ ಸಿಗದೆ ಕೃಷಿ ಕೆಲಸಗಳು ನಿಂತು ಹೋಗುತ್ತಿವೆ. ಒಂದು ದಿನ ಕೆಲಸ ನಿಂತರೂ ನಮಗೆ ದೊಡ್ಡ ನಷ್ಟವಾಗುತ್ತದೆ'' ಎಂದು ರೈತರು ಅಳಲು ತೋಡಿಕೊಂಡಿದ್ದಾರೆ.

ಇನ್ನೊಂದೆಡೆ ಸರಕು ಸಾಗಾಣಿಕೆ ವಾಹನಗಳ ಸಂಚಾರಕ್ಕೂ ತೀವ್ರ ಸಮಸ್ಯೆ ಎದುರಾಗಿದ್ದು, ವ್ಯಾಪಾರ ವಹಿವಾಟಿನ ಮೇಲೂ ಪರಿಣಾಮ ಬೀರುತ್ತಿದೆ. ಶಾಲೆ, ಉದ್ಯೋಗ ಹಾಗೂ ತುರ್ತು ಪ್ರಯಾಣಕ್ಕಾಗಿ ತೆರಳುವ ಸಾರ್ವಜನಿಕರು ಕೂಡ ಡೀಸೆಲ್ ಸಿಗದೆ ಪರದಾಡುವಂತಾಗಿದೆ. ಅನೇಕ ವಾಹನ ಸವಾರರು ಒಂದು ಬಂಕ್‌ನಿಂದ ಮತ್ತೊಂದು ಬಂಕ್‌ಗೆ ಅಲೆದಾಡುವ ಸ್ಥಿತಿ ನಿರ್ಮಾಣವಾಗಿದೆ.

ಜಿಲ್ಲೆಯಾದ್ಯಂತ ಇಂಧನ ಅಭಾವ ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಸಾರ್ವಜನಿಕರು ಸರ್ಕಾರ ಹಾಗೂ ತೈಲ ಕಂಪನಿಗಳ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಕೂಡಲೇ ಪೆಟ್ರೋಲ್ ಮತ್ತು ಡೀಸೆಲ್ ಸರಬರಾಜು ವ್ಯವಸ್ಥೆಯನ್ನು ಸಮರ್ಪಕವಾಗಿ ನಿರ್ವಹಿಸಿ ಸಾರ್ವಜನಿಕರ ಸಂಕಷ್ಟ ನಿವಾರಿಸಬೇಕು ಎಂದು ಜನರು ಆಗ್ರಹಿಸಿದ್ದಾರೆ.

ರೈತರಿಗೆ ಬಿತ್ತನೆ ಬೀಜ, ಸವಲತ್ತುಗಳ ವಿತರಣೆ

ವಿಜಯನಗರ: ತಾಲೂಕಿನ ಕೃಷಿ ಇಲಾಖೆ ವತಿಯಿಂದ ಬುಧವಾರ ಎಪಿಎಂಸಿ ಮಾರುಕಟ್ಟೆ ಆವರಣದಲ್ಲಿನ ರೈತ ಸಂಪರ್ಕ ಕೇಂದ್ರದಲ್ಲಿ ಹಮ್ಮಿಕೊಳ್ಳಲಾಗಿದ್ದ ರೈತರ ವಿವಿಧ ಕೃಷಿ ಪರಿಕರಗಳು ಹಾಗೂ ಬಿತ್ತನೆ ಬೀಜಗಳ ವಿತರಣಾ ಕಾರ್ಯಕ್ರಮಕ್ಕೆ ಅರ್ಹ ಫಲಾನುಭವಿ ರೈತರಿಗೆ ಸಾಂಕೇತಿಕವಾಗಿ ಬಿತ್ತನೆ ಬೀಜ ಹಾಗೂ ಪರಿಕರಗಳನ್ನು ವಿತರಣೆಗೆ ಶಾಸಕ ಹೆಚ್.ಆರ್.ಗವಿಯಪ್ಪ ಚಾಲನೆ ನೀಡಿದರು.

ಬಳಿಕ ಶಾಸಕ ಎಚ್.ಆರ್.ಗವಿಯಪ್ಪ ರೈತರನ್ನು ಉದ್ದೇಶಿಸಿ ಮಾತನಾಡಿ, ಕೃಷಿ ಇಲಾಖೆಯ ಅಧಿಕಾರಿಗಳು, ಪ್ರಸಕ್ತ ಸಾಲಿನ ಮುಂಗಾರು ಹಂಗಾಮಿಗೆ ರೈತರಿಗೆ ಅಗತ್ಯವಿರುವ ಗುಣಮಟ್ಟದ ಮೆಕ್ಕೆಜೋಳ, ಭತ್ತ ಮತ್ತು ಸಜ್ಜೆ ಬಿತ್ತನೆ ಬೀಜ ಹಾಗೂ ಕೃಷಿ ಪರಿಕರ ಪಿವಿಸಿ ಪೈಪ್‌ಗಳ ಸಕಾಲದಲ್ಲಿ ತಲುಪಿಸುವ ನಿಟ್ಟಿನಲ್ಲಿ ಇಲಾಖೆ ಸಂಪೂರ್ಣ ಸಜ್ಜಾಗಿದೆ ಎಂದು ತಿಳಿಸಿದರು. ಈ ವೇಳೆ ರೈತರ ಬೇಡಿಕೆಯಂತೆ ರೈತರ ಬೆಳೆ ದಾಸ್ತಾನು ಮಾಡಲು ಸ್ಟೋರೇಜ್ ಘಟಕ ಅವಶ್ಯಕತೆಯಿದ್ದು, ಅಧಿಕಾರಿಗಳು ಈ ಬಗ್ಗೆ ಡಿಪಿಆರ್ ಸಿದ್ಧಪಡಿಸಿ 2 ಸ್ಟೋರೇಜ್ ಘಟಕ ನಿರ್ಮಾಣಕ್ಕೆ ಪ್ರಸ್ತಾವನೆ ಸಲ್ಲಿಸುವಂತೆ ತಿಳಿಸಿದರು. ಈ ಕೋಲ್ಡ್ ಸ್ಟೋರೇಜ್ ಘಟಕ ನಿರ್ಮಾಣದಿಂದ ಜಿಲ್ಲೆಯ ರೈತರಿಗೆ ಸಾಕಷ್ಟು ಅನುಕೂಲವಾಗಲಿದೆ ಎಂದರು. ಕೃಷಿ ಇಲಾಖೆಯ ಉಪನಿರ್ದೇಶಕ ವಾಮದೇವ ಕೊಳ್ಳಿ, ಸಹಾಯಕ ನಿರ್ದೇಶಕ ಮನೋಹರ್ ಗೌಡ, ಪರಮೇಶ್ವರ್, ಇಲಾಖೆ ಸಿಬ್ಬಂದಿ, ಸ್ಥಳೀಯ ಜನಪ್ರತಿನಿಧಿಗಳು ಹಾಗೂ ತಾಲೂಕಿನ ರೈತರು ಉಪಸ್ಥಿತರಿದ್ದರು.



ಗುಣಮಟ್ಟದ ಕಾಮಗಾರಿ ನಿರ್ವಹಿಸಿ: ಕಂದಕೂರ

ಯಾದಗಿರಿ: ಸರ್ಕಾರದಿಂದ ಬಿಡುಗಡೆಗೊಳಿಸುವ ಅನುದಾನವನ್ನ ಸದ್ಬಳಕೆ ಮಾಡಿಕೊಳ್ಳುವ ಮೂಲಕ ಅಧಿಕಾರಿಗಳು ಗ್ರಾಮೀಣ ಭಾಗದ ಜನರ ಸಮಸ್ಯೆಗಳಿಗೆ ಸ್ಪಂದಿಸುವ ಕೆಲಸ ಮಾಡುವಂತೆ ಶಾಸಕ ಶರಣಗೌಡ ಕಂದಕೂರ ಸಂಬಂಧಿಸಿದ ಅಧಿಕಾರಿಗಳಿಗೆ ಖಡಕ್ ಸೂಚನೆ ನೀಡಿದರು.

ಬುಧವಾರ ಗುರಮಠಕಲ್ ಕ್ಷೇತ್ರದ ಚಿನ್ನಾಕಾರ್ ಕ್ರಾಸ್ ಬಳಿ ಕೆಕೆಆರ್ಡಿಬಿ ಮೈಕ್ರೋ ಸಾಮಾನ್ಯ ಯೋಜನೆ ಅಡಿಯಲ್ಲಿ 9.90 ಕೋಟಿ ರೂ.ವೆಚ್ಚದಲ್ಲಿ ಮತಕ್ಷೇತ್ರದ ಸಿಂದಗಿ-ಕೊಡಂಗಲ್ ರಾಜ್ಯ ಹೆದ್ದಾರಿ 16 ಮುಖ್ಯ ರಸ್ತೆ ಆಯ್ದ ಭಾಗಗಳಲ್ಲಿ ಮರು ಡಾಂಬರಕರಣ ಹಾಗೂ ಗುರುಮಠಕಲ್ ಪಟ್ಟಣದ ರಸ್ತೆ ಅಗಲೀಕರಣ ಮತ್ತು ಬ್ರಿಡ್ಜ್ ನಿರ್ಮಾಣ ಹಾಗೂ ಗುರುಮಠಕಲ್ ಪಟ್ಟಣದಲ್ಲಿ ಸೌಂದರ್ಯೀಕರಣ ಮತ್ತು ಆಧುನಿಕ ಬಸ್ ಸ್ಟ್ಯಾಂಡ್ ನಿರ್ಮಾಣ ಕಾಮಗಾರಿಗಳಿಗೆ ಶಿಲಾನ್ಯಾಸ ನೆರವೇರಿಸಿ ಮಾತನಾಡಿದರು.

ಕ್ಷೇತ್ರದ ಅಭಿವೃದ್ಧಿಗೆ ನಾವು ಸರ್ಕಾರದ ಹಂತದಲ್ಲಿ ಸಾಕಷ್ಟು ಶ್ರಮಪಟ್ಟು ಅನುದಾನ ತರುತ್ತೇವೆ. ಅದು ಸದ್ಬಳಕೆಯಾದಾಗ ಮಾತ್ರ ಜನತೆಗೆ ಅನುಕೂಲವಾಗುವದಲ್ಲದೆ, ನಾವು ಪಟ್ಟ ಶ್ರಮ ಸಾರ್ಥಕವಾಗುತ್ತದೆ. ಇದು ಅಂತರರಾಜ್ಯ ಸಂಪರ್ಕಿಸುವ ಪ್ರಮುಖ ರಸ್ತೆ, ಗಡಿಭಾಗದ ಜನರು ತಮ್ಮ ದೈನಂದಿನ ಕಾರ್ಯಕ್ರಗಳಿಗಾಗಿ ಗುರುಮಿಠಕಲ್, ತೆಲಂಗಾಣದ ನಾರಾಯಣಪೇಟಗೆ ಹೆಚ್ಚಾಗಿ ತೆರಳುತ್ತಾರೆ ಎಂದರು.



ಅಲ್ಲದೇ ಹೈದ್ರಾಬಾದ್ ಸಂಪರ್ಕಿಸುವ ರಸ್ತೆಯಾಗಿರುವುದರಿಂದ ಭಾರಿ ವಾಹನಗಳ ಓಡಾಟ ಹೆಚ್ಚಾಗಿದೆ, ಅದಕ್ಕಾಗಿ ರಸ್ತೆಯನ್ನು ದುರಸ್ಥಿಗೊಳಿಸಲಾಗುತ್ತಿದೆ. ಗುತ್ತಿಗೆದಾರರು ಹಾಗೂ ನಿರ್ವಹಣೆ ಮಾಡುವ ಲೋಕೋಪಯೋಗಿ ಅಧಿಕಾರಿಗಳು ಗುಣಮಟ್ಟದಿಂದ ಕಾಮಗಾರಿ ಕೈಗೊಂಡು ನಿಗಧಿತ ಅವಧಿಯೊಳಗೆ ಮುಗಿಸಬೇಕೆಂದು ನಿರ್ದೇಶನ ನೀಡಿದರು.

ಇನ್ನೂ ಗುರಮಠಕಲ್ ಪಟ್ಟಣದಲ್ಲಿ ಬೀದಿ ದೀಪಗಳು ಅಳವಡಿಸಿದ ಮೇಲೆ ಅವುಗಳ ನಿರ್ವಹಣೆ ಮಾಡುವ ಜವಾಬ್ದಾರಿ ಪುರಸಭೆ ಅಧಿಕಾರಿಗಳದ್ದು. ಪಟ್ಟಣದ ಉದ್ಯಾನವನ ಸೌಂದರ್ಯೀಕರಣಕ್ಕೆ 50 ಲಕ್ಷ ನೀಡಲಾಗಿದೆ. ಅಲ್ಲದೆ, ಕಾಲವಾರ ಮತ್ತು ಅಂಬಿಗರ ಚೌಡಯ್ಯನವರ ವೃತ್ತದ ಅಭಿವೃದ್ಧಿಗೆ ಆದ್ಯತೆ ನೀಡಲಾಗಿದೆ. ಸಾರ್ವಜನಿಕ ಶೌಚಾಲಯ ನಿರ್ಮಾಣಕ್ಕೂ ಅಗತ್ಯ ಕ್ರಮಕೈಗೊಳ್ಳಲಾಗಿದೆ ಎಂದು ಹೇಳಿದರು.